ಪ್ರಬುದ್ಧ ಕರ್ಣಾಟಕ

ಸಂಪುಟ ೩೫—ಸಂಚಿಕೆ ೩

೧೩೭

ವಿಜಯ ಸಂವತ್ಸರ


ಆಶ್ವಯುಜ ಸಂಚಿಕೆ

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

೧೯೫೩

...ತಿಕೆ



ಅನುಭಾವಿ ಕಬೀರ್

ಪ್ರಬುದ್ಧ ಕರ್ಣಾಟಕ

ವಿಜಯ ಸಂವತ್ಸರ	೧೩೨	ಆಶ್ವಯುಜ ಸಂಚಿಕೆ

ಚಕ್ರಚರಣೆಗೆ ಸ್ವಾಗತಂ* !

ಸ್ವಾಗತಂ ಸುಸ್ವಾಗತಂ,
ಚಕ್ರಚರಣೆಗೆ ಸ್ವಾಗತಂ !
ಗೆಲ್ಗೆ ಕವಿ ಮನೋರಥಂ
ಬಾಳ್ಗೆ ನಮ್ಮ ನವರಥಂ !

ಬಂದಳಿಂದು ಮನೆಗೆ ಶಕ್ತಿ,
ಸೂತ್ನ ಯಂತ್ರ ರೂಪಿಣಿ :
ಲೋಹಕಾಯೆ, ವೇಗತಂತ್ರೆ,
ಅಗ್ನಿ ತೈಲ ವಾಹಿನಿ !

ಆವ ದೇವಿ ರವಿಯ ಸುತ್ತ
ಭೂಗೋಲವ ತಿರುಗಿಸುತ್ತ
ತನ್ನ ರುಂದ್ರ ಲೀಲೆಯತ್ತ
ಸಾಗುತಿರುವಳೋ,
ಖನಿಜ ಸಸ್ಯ ಪ್ರಾಣಿವರ್ಗ
ಮನುಜ ದನುಜ ಸುರ ನಿಸರ್ಗ
ಯಂತ್ರ ತಂತ್ರ ಮಂತ್ರವಾಗಿ
ನಿಯಂತ್ರಿಸಿರುವಳೋ,

ಅವಳೆ ಇಂದು ಮನೆಗೆ ಬಂದು
ಇಂತು ನಮ್ಮ ಮುಂದೆ ನಿಂದು
ಹರಸುತಿಹಳು ಭಕ್ತಬಂಧು,
ಈ ವಾಹನ ವೇಷದಿ !

ನಮಸ್ಕರಿಸಿ ಸಮರ್ಪಿಪೆನ್,
ಚಕ್ರ ಚರಣೆ, ಜನನಿ, ಇದೆಕೊ
ತವ ಪವಿತ್ರ ಚತುಷ್ಪದಕೆ
ಪ್ರಾಕ್ ಮಂತ್ರ ಘೋಷದೀ
ವಾಕ್ ಪವಿತ್ರ ಪುಷ್ಪಮಂ !

" ಓಂ

ಯಾ ದೇವೀ ಸರ್ವಭೂತೇಷು ಶಕ್ತಿರೂಪೇಣ ಸಂಸ್ಥಿತಾ
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋನಮಃ !

ಯಾ ದೇವೀ ಸರ್ವಭೂತೇಷು ಮಾತೃರೂಪೇಣ ಸಂಸ್ಥಿತಾ
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋನಮಃ

ಚಿತಿರೂಪೇಣ ಯಾ ಕೃತ್ಸ್ನಮೇತದ್ ವ್ಯಾಪ್ಯಸ್ಥಿತಾ ಜಗತ್
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋನಮಃ

ಸರ್ವಮಂಗಳ ಮಾಂಗಲ್ಯೇ ಶಿವೇ ಸರ್ವಾರ್ಥಸಾಧಿಕೇ
ಶರಣ್ಯೇ ತ್ರ್ಯಂಬಕೇ ಗೌರಿ ನಾರಾಯಣಿ ನಮೋಸ್ತುತೇ !

ಸರ್ವಸ್ವರೂಪೇ ಸರ್ವೇಶೇ ಸರ್ವಶಕ್ತಿ ಸಮನ್ವಿತೇ
ಭಯೇಭ್ಯಸ್ತ್ರಾಹಿ ನೋ ದೇವಿ ದುರ್ಗೇ ದೇವಿ ನಮೋಸ್ತುತೇ !

ಓಂ ಶಾಂತಿಃ ಶಾಂತಿಃ ಶಾಂತಿಃ

—ಕುವೆಂಪು

* ತಾ. ೧೪-೧-೫೧ ಸಂಕ್ರಾಂತಿಯ ದಿನ ಭಾನುವಾರ ಹೊಸಕಾರು ಬಂದಾಗ ಬಯಸಿದ ಸ್ವಾಗತಪೂಜೆಯ ಸಂದರ್ಭದಲ್ಲಿ.

ಗುರುಪಾತ್ರದಲ್ಲಿ ಪರಮಹಂಸರು

ಸಂಜೆ ಗಂಗಾನದಿಯ ತೀರದ ದಕ್ಷಿಣೇಶ್ವರ ದೇವಾಲಯದಲ್ಲಿ ಭವತಾರಿಣಿಗೆ ಮಂಗಳಾರತಿಯಾಗುವುದು. ಗಂಟೆ, ಜಾಗಟೆ, ಶಂಖಗಳ ಮಂಗಳಧ್ವನಿಯ ತಾನ ಬರಬರುತ್ತ ಲಯವಾಗುತ್ತಿದೆ. ಭಗವಂತನ ಲೀಲೆಗೆ ಅಣಿಮಾಡಿದಂತಿರುವ ಪರಮ ಪಾವನ ದಕ್ಷಿಣೇಶ್ವರದ ರಂಗಭೂಮಿಯ ಮೇಲಿರುವ ನೀಲಾಕಾಶದಲ್ಲಿ ಅನಂತ ತಾರೆಗಳ ಸೊಡರು ಕ್ರಮೇಣ ಮಿನುಗುತ್ತಿವೆ. ದೂರದಲ್ಲಿ ಜನಬಾಹುಳ್ಯದಿಂದ ತುಂಬಿ ತುಳುಕಾಡುತ್ತಿರುವ ಕಲ್ಕತ್ತಾ ನಗರದಲ್ಲಿಯೂ ದೀಪಗಳು ರಂಜಿಸುತ್ತಿವೆ. ಶ್ರೀರಾಮ ಕೃಷ್ಣ ಪರಮಹಂಸರು ತಮ್ಮ ಕೋಣೆಯ ಮಹಡಿಯ ಮೇಲೆ ಹೋಗುವರು. ಕಲ್ಕತ್ತಾ ನಗರವನ್ನು ನಿಟ್ಟಿಸಿ ನೋಡುವರು. "ಎಲ್ಲಿ, ನನ್ನ ಮಕ್ಕಳಿನ್ನೂ ಬರಲಿಲ್ಲವಲ್ಲ. ಇನ್ನೂ ಹೆಚ್ಚು ಕಾಲ ಅವರನ್ನು ಅಗಲಿರಲಾರೆ" ಎಂದು ಕಂಬನಿದುಂಬಿ ಮುಂದೆ ಬರಲಿರುವ ಶಿಷ್ಯರಿಗಾಗಿ ಪ್ರಾರ್ಥಿಸುವರು. ಯಾವ ತಾಯಿಯೂ ತನ್ನ ಮಕ್ಕಳನ್ನು ಇಷ್ಟು ಪ್ರೀತಿಸಿರಲಾರಳು; ಪ್ರೇಯಕ ತನ್ನ ಪ್ರೇಯಸಿಯನ್ನು ಪ್ರೀತಿಸಿರಲಾರನು; ಸ್ನೇಹಿತ ತನ್ನ ಸ್ನೇಹಿತನನ್ನು ಪ್ರೀತಿಸಿರಲಾರನು! ಮುಂದೆ ಬರಲಿರುವ ಶಿಷ್ಯರಿಗಾಗಿ ಇಷ್ಟು ತವಕ ಪಡುತ್ತಿದ್ದರು ಶ್ರೀ ರಾಮಕೃಷ್ಣರು.

ಆಧ್ಯಾತ್ಮಿಕ ಜೀವನದಲ್ಲಿ ಭಗವಂತನನ್ನು ಯಾವ ಯಾವ ದಾರಿಯ ಮೂಲಕ ಸೇರಬಹುದೋ, ಯಾವ ಯಾವ ಮೂಲೆಯಿಂದ ಅವನನ್ನು ನೋಡಬಹುದೋ, ಯಾವ ಯಾವ ಭಾವಗಳ ಮೂಲಕ ಅವನನ್ನು ಪ್ರೀತಿಸಬಹುದೋ, ಅವುಗಳೆಲ್ಲದರ ಮೂಲಕ ದೇವರನ್ನು ಪರಮಹಂಸರು ಕಂಡರು, ಪ್ರೀತಿಸಿದರು, ಅವನಲ್ಲಿ ಐಕ್ಯವಾದರು. ಆದರೆ ಪುನಃ ಭವರಂಗಕ್ಕೆ ಬಂದರು. ಆಟದಲ್ಲಿ ಮರೆತ ಮಕ್ಕಳನ್ನು ಕರೆದರು. ಅಜ್ಞಾನದಲ್ಲಿ ಸಿಕ್ಕಿ ತೊಳಲುತ್ತಿರುವವರಿಗೆ ದಾರಿ ಬೆಳಕಾದರು. ಹಲವಾರು ಸಾಧನೆ ಯಿಂದ ಪಡೆದ ಅಮೃತವನ್ನೆಲ್ಲ ಇನ್ನೊಬ್ಬರಿಗೆ ಧಾರೆ ಎರೆಯಲು ಅವರ ಹೃದಯ ತವಕಪಡುತ್ತಿತ್ತು. ತಾಯಿ ತನ್ನ ಎದೆಯಲ್ಲಿ ಕಟ್ಟಿದ ಹಾಲನ್ನು ಉಣಿಸಲು ಇನ್ನೂ ತನ್ನ ಹತ್ತಿರ ಬರದಿರುವ ಮಗುವಿಗಾಗಿ ಕಾದು ಕುಳಿತಂತೆ ಕುಳಿತಿದ್ದರು. ಇವರ ಮೌನಕರೆ ದಿಕ್ಕುದಿಕ್ಕಿಗೆ ಮುಟ್ಟಿತು. ಹಲವಾರು ದಿವ್ಯಾತ್ಮರ ಎದೆಗೆ ತಟ್ಟಿತು. ಕಬ್ಬಿಣದ ಅದುರು ಅಯಸ್ಕಾಂತ ಶಿಲೆಯೆಡೆಗೆ ಪ್ರಯಾಣಮಾಡುವಂತೆ ಶಿಷ್ಯರು ಬಂದು ಇವರ ಪಾದದಡಿಯನ್ನು ಸೇರಿದರು. ಬಂದ ಜೀವಿಗಳಿಗೆ ಆಧ್ಯಾತ್ಮಿಕ ತೃಪ್ತಿಯನ್ನು

ಕೊಟ್ಟರು. ಇತರ ಭವಜೀವಿಗಳ ಉದ್ಧಾರಕ್ಕಾಗಿ ದುಡಿಯುವಂತೆ ಅವರನ್ನು ತರಬೇತು ಮಾಡಿದರು.

ದಕ್ಷಿಣೇಶ್ವರ ಒಂದು ಪ್ರಚಂಡ ಆಧ್ಯಾತ್ಮಿಕರ ಗರಡಿ. ಅಲ್ಲಿಯ ಮೂಲದೇವತೆ ಅನಂತ ಶಕ್ತಿ, ಜ್ಞಾನಗಳ ಗಣಿಯಾದ ಮಹಾಕಾಳಿ. ಅಲ್ಲಿಯ ಆಚಾರ್ಯ ಹಲವು ಭಾವಗಳು, ಹಲವು ತತ್ತ್ವಗಳು ಮತ್ತು ಹಲವು ಸಾಧನೆಗಳೆಂಬ ಮಹಾನದಿಯಿಂದ ಪೋಷಿತವಾಗಿರುವ, ಅಸೀಮ ಅನಂತ ಸಾಗರದಂತಿರುವ ಶ್ರೀ ರಾಮಕೃಷ್ಣ ಪರಮ ಹಂಸರು. ಅಲ್ಲಿಗೆ ಬಂದ ಶಿಷ್ಯರಲ್ಲಿ ಕೆಲವರು ವಜ್ರದಂತೆ ಕಠೋರರು; ಕೆಲವರು ಕುಸುಮದಂತೆ ಕೋಮಲರು; ಪಾಶ್ಚಾತ್ಯ ವೈಜ್ಞಾನಿಕ ದೃಷ್ಟಿಯಲ್ಲಿ ಬೆಳೆದ ಆಧುನಿಕ ವ್ಯಕ್ತಿಗಳು ಕೆಲವರು; ಮತ್ತೆ ಕೆಲವರು ನಿರಕ್ಷರ ಕುಕ್ಷಿಗಳು; ಕೆಲವರು ಪಾಪವಿನ್ನೂ ಸೋಂಕದ ಎಳೆಯ ಹಸುಳೆಯ ಮನಸ್ಸಿನಂತಿರುವ ತರುಣರು; ಕೆಲವರು ನಾಸು ಕುಡಿದ ಸಾರಾಯಿ ಬುಡ್ಡಿಯನ್ನೆಲ್ಲ ಒಂದರ ಮೇಲೆ ಒಂದನ್ನು ಇಟ್ಟರೆ ಅದು ಗೌರೀ ಶಂಕರವನ್ನು ಮೀರುವುದು ಎಂದು ಹೇಳಿಕೊಳ್ಳುವಂತಹ ಭಂಡರು; ದೇವರ ಹೆಸರನ್ನು ಕೇಳಿದರೆ ಸಾಕು, ಭಕ್ತಿಗಂಗೆ ಕಣ್ಣಿನಿಂದ ಧುಮುಕುವಂತಹ ಭಾವಜೀವಿಗಳು ಕೆಲವರು; ದೇವರನ್ನು ಹೊಗಳಿ ಹೊಗಳಿ ಕಾಲಹರಣ ಮಾಡುವುದಕ್ಕಿಂತ ನಮ್ಮ ಜೀವವನ್ನು ಸೇವೆಯಲ್ಲಿ ಸವೆಸೋಣ ಎನ್ನುವಂತಹ ಕರ್ಮಯೋಗಿಗಳು ಕೆಲವರು; ಯಾವ ಪುರಾಣ ಶಾಸ್ತ್ರಗಳಿಂದ ಏನನ್ನು ಓದಿದರೂ, ಯಾವ ಮಹಾತ್ಮರ ಬಾಯಿಂದ ಏನನ್ನು ಕೇಳಿದರೂ, ಯಾವ ಅದ್ಭುತ ಆಧ್ಯಾತ್ಮಿಕ ಘಟನೆಯನ್ನು ಕಂಡರೂ ತಮ್ಮ ವಿಚಾರದ ಒರೆಗಲ್ಲಿಗೆ ತಿಕ್ಕಿ ತಿಕ್ಕಿ ನೋಡಿ ತಮಗೆ ತೃಪ್ತಿಯಾಗದಿದ್ದರೆ ಸ್ವೀಕರಿಸದಂತಹ ಜ್ಞಾನಿಗಳು ಕೆಲವರು; ಸೃಷ್ಟಿ ಎಲ್ಲ ಒಂದು ಭ್ರಾಂತಿ ಎಂದು ನಿರ್ವಿಕಲ್ಪ ಸಮಾಧಿಯಲ್ಲಿ ನಿರತರಾಗಲು ಬಯಸುವ ಯೋಗಿಗಳು ಕೆಲವರು. ಇಂತಹ ವೈವಿಧ್ಯತೆಯಿಂದ ಕೂಡಿದ ಶಿಷ್ಯರನ್ನು ಒಟ್ಟಿಗೆ ಸೇರಿಸಿ, ಅವರ ವೈಶಿಷ್ಟ್ಯಕ್ಕೆ ಭಂಗ ತಾರದೆ, ಅವರು ತಮ್ಮದೇ ಹಾದಿಯಲ್ಲಿ ಪುಷ್ಟರಾಗಿ ಬೆಳೆದು, ಅನ್ಯರನ್ನು ಕಂಡಾಗ ಅವರಲ್ಲಿ ಸಹಾನುಭೂತಿಯುಂಟಾಗುವಂತೆ ಮಾಡಬೇಕಾದರೆ ಇದೊಂದು ಗುರುತರದ ಕಾರ್ಯ; ಅತ್ಯಂತ ಜವಾಬ್ದಾರಿಯುತ ಕಾರ್ಯ. ಪರಮಹಂಸರು ತಮ್ಮ ಶಿಷ್ಯರನ್ನು ತರಪೇತು ಮಾಡುತ್ತಿದ್ದುದೇ ಒಂದು ಅಮೋಘವಾದ ರೀತಿ.

ಯಾವುದಾದರೂ ಒಂದು ಮಾರ್ಗದಲ್ಲಿ ಮುಂದುವರಿದು ಒಬ್ಬನು ಮುಕ್ತಿಯನ್ನು ಗಳಿಸಬಹುದು. ಆದರೆ ಮುಕ್ತಾತ್ಮರೆಲ್ಲರೂ ಗುರುವಿನ ಕಾರ್ಯವನ್ನು ಮಾಡಲಾರರು. ಏಕೆಂದರೆ ಶಿಷ್ಯರಲ್ಲಿ ಎಲ್ಲರೂ ಒಂದೇ ಭಾವದವರಲ್ಲ. ಎಲ್ಲರಿಗೂ ಒಂದೇ ಸಂಸ್ಕಾರವಿಲ್ಲ. ಒಬ್ಬೊಬ್ಬರು ಒಂದೊಂದು ದಾರಿಯಲ್ಲಿ ನಡೆಯಲಿಚ್ಛಿಸುವರು.

ಅಂತಹ ಶಿಷ್ಯರಿಗೆ ಸರಿಯಾದ ಸಹಾಯವನ್ನು ಕೊಡದೆ ಎಲ್ಲರಿಗೂ ಒಂದೇ ಉಪದೇಶವನ್ನು "ವ್ಯಾಧಿಗೆಲ್ಲಾ ಒಂದೇ ಮದ್ದು" ಎಂಬಂತೆ ಕೊಟ್ಟರೆ ಉಪಕಾರಕ್ಕಿಂತಲೂ ಅಪಕಾರವೇ ಹೆಚ್ಚಾಗುವುದು. ಅವರ ಉಪದೇಶದಿಂದ ಕೆಲವರಿಗೆ ಸಹಾಯವಾಗಬಹುದು. ಆದರೆ ಕೆಲವರಿಗೆ ಹಾನಿಯೂ ಆಗುವುದು. ಎಲ್ಲರಿಗೂ ಬರಿಯ ವಿಚಾರ ಸಹಾಯಮಾಡುವುದಿಲ್ಲ. ಕೆಲವರು ಭಾವಜೀವಿಗಳು. ಅವರಿಗೆ ನಿರಾಕಾರ ರುಚಿಸದು. ಪ್ರೀತಿಯನ್ನು ಅರ್ಪಿಸಲು ಅವರಿಗೆ ಒಂದು ವ್ಯಕ್ತಿ ಬೇಕು. ಪ್ರಪಂಚದ ಕಷ್ಟನಷ್ಟಗಳ ಕೋಟಲೆಯಲ್ಲಿ ಬೆಂದು ನೊಂದಾಗ, ತಮ್ಮ ದುಃಖವನ್ನು ಹೇಳಿಕೊಂಡು ಅದರ ಉದ್ವೇಗವನ್ನು ಕಡಿಮೆಮಾಡಿಕೊಳ್ಳಲು ಒಂದು ಸಾಕಾರ ದೇವರು ಬೇಕು. ಅಂತಹವರಿಗೆ "ನೀನು ಯಾರು ಎಂದು ವಿಚಾರಮಾಡು. ನಿನ್ನ ನಿಜಸ್ಥಿತಿ ಅರಿಯುವುದು" ಎಂದು ಹೇಳಿದರೆ ಅವನಿಗೆ ನಾವು ಸಹಾಯಮಾಡಿದಂತೆ ಆಗುವುದಿಲ್ಲ. ಅವನನ್ನು ಅಣಕಿಸಿದಂತಾಗುವುದು. ಅವನ ಹೃದಯಕ್ಕೆ ನಿಲುಕುವ ಆದರ್ಶವನ್ನು ಕೊಡಬೇಕು. ಮೆಟ್ಟಲುಮೆಟ್ಟಲಾಗಿ ಅವನನ್ನು ಮೇಲಕ್ಕೆ ಕರೆದುಕೊಂಡು ಹೋಗಬೇಕು. ಪರಮಹಂಸರು ಸರ್ವವಿಧದಿಂದಲೂ ಆದರ್ಶ ಗುರುಗಳಾಗಲು ಅಧಿಕಾರಿಗಳಾಗಿದ್ದರು. ಅವರ ಮನಸ್ಸಿಗೆ ನಿಲುಕದ ಭಾವವಿರಲಿಲ್ಲ, ವಿಚಾರಮಾಡದ ತತ್ತ್ವವಿರಲಿಲ್ಲ. ಅನುಷ್ಠಾನಕ್ಕೆ ತರದ ಧರ್ಮವಿರಲಿಲ್ಲ. ಹೇಗೆ ನುರಿತ ವೈಣಿಕನು ತನ್ನ ಬೆರಳನ್ನು ಕೆಳಗಿನ ಮೆಟ್ಟಲಿನಿಂದ ಕೊನೆಯ ವರೆಗೆ ನುಡಿಸುವನೋ ಹಾಗೆ ಪರಮಹಂಸರ ಮನಸ್ಸು, ಈಗ ತಾನೆ ನಡೆಯಲು ಕಲಿತು ಎಡವುತ್ತಿರುವ ಬದ್ಧ ಜೀವಿಯಿಂದ ಹಿಡಿದು ಮುಕ್ತಾತ್ಮನ ವರೆಗೂ ಹೋಗುತ್ತಿದ್ದಿತು. ಅವರವರಿಗೆ ಯೋಗ್ಯವಾದ ಸಹಾಯವನ್ನು ಕೊಡುತ್ತಿದ್ದರು.

ಗುರುವಾಗಬೇಕಾದರೆ ಮೊದಲು ಅವನಿಗೆ ಶಾಸ್ತ್ರಗಳ ಸಾರ ಗೊತ್ತಿರಬೇಕು. ಶಾಸ್ತ್ರಗಳ ಸಾರವೆಂದರೆ ಶಾಸ್ತ್ರಪಾಂಡಿತ್ಯವಲ್ಲ. ಅದು ಗಿಳಿಯೋದು. ಒಂದು ದೇಶದ ವಿಷಯವನ್ನು ಪುಸ್ತಕಗಳ ಮೂಲಕ ಓದಿ ತಿಳಿದಂತೆ. ಅದು ಪ್ರತ್ಯಕ್ಷ ಜ್ಞಾನವಲ್ಲ. ಶಾಸ್ತ್ರ ಯಾವುದನ್ನು ಉದ್ದೇಶಿಸಿ ಹೇಳುವುದೋ ಅದರ ದರ್ಶನವಾಗಿರಬೇಕು. ಪರಮಹಂಸರಿಗೆ ಅಂತಹ ಶಾಸ್ತ್ರಗಳ ತೀರ್ಥ ದೊರಕಿತ್ತು. ಗ್ರಂಥಗಳಲ್ಲಿ ಮುದ್ರಿತವಾಗಿರುವ ಶ್ಲೋಕಗಳ ಮೂಲಕವಲ್ಲ, ಭಗವಂತನ ಸಾಕ್ಷಾತ್ಕಾರದ ಮೂಲಕ. ಇವರು ಘನ ಪಂಡಿತರ ಗುಂಪಿಗೆ ಸೇರಿದವರಲ್ಲ; ನಿಜ. ಸ್ವಾಮಿ ವಿವೇಕಾನಂದರು ಹೇಳಿದಂತೆ ಪರಮಹಂಸರ ಜೀವನ ವೇದವೇದಾಂತಗಳಿಗೆ ಬರೆದಿರುವ ಸಚೇತನ ಭಾಷ್ಯ. ಮೂವತ್ತು ಕೋಟಿ ಭಾರತೀಯರ ಎರಡು ಸಾವಿರ ವರುಷಗಳ ಜೀವನವನ್ನು ಇವರು ತಮ್ಮ ಒಂದು ಜೀವನದಲ್ಲಿ ಅಳವಡಿಸಿಕೊಂಡಿರುವರು.

ಗುರುವಿಗೆ ಬ್ರಹ್ಮ ಸಾಕ್ಷಾತ್ಕಾರವಾಗಿರಬೇಕು. ಆಡುವ ಮಾತಿನ ಹಿಂದುಗಡೆ ಭಗವಂತನ ಸಾಕ್ಷಾತ್ಕಾರದ ಶಕ್ತಿ ಇರಬೇಕು. ಮಾತು ಸರಳವಾಗಿದ್ದರೂ ಅದು ಸಾಕ್ಷಾತ್ಕಾರದ ಅಗ್ನಿಕುಂಡದಿಂದ ಬಂದಿದ್ದರೆ, ಕೇಳುವವರ ಎದೆಗೆ ಅದು ಕೆಚ್ಚನ್ನು ಕೊಡಬಲ್ಲದು. ಮಾತೆತ್ತಿದರೆ ಶ್ಲೋಕಗಳನ್ನು ಉದಾಹರಿಸುವ ಪಂಡಿತರ ಗುಂಪಿಗೆ ಸೇರಿದವರಲ್ಲ ಪರಮಹಂಸರು. ಬ್ರಹ್ಮಾನಂದದ ಕಡಲಾಳಕ್ಕೆ ಮುಳುಗಿ ತಂದ ಅನರ್ಘ್ಯ ರತ್ನದಂತಿದೆ, ಇವರು ಆಡಿದ ಒಂದೊಂದು ಮಾತು.

ಗುರು ಪಾಪದೂರನಾಗಿರಬೇಕು. ಪವಿತ್ರಾತ್ಮನ ಪುತ್ಥಳಿಯಂತೆ ಇರಬೇಕು. ಗುರು ದಕ್ಷಿಣೆಗಾಗಲೀ, ಶಿಷ್ಯನ ಮೂಲಕ ತನ್ನ ಕೀರ್ತಿ ಹಬ್ಬಲಿ ಎಂಬ ಹೀನ ಆಸೆಗಾಗಲೀ ದಾಸನಾಗಿರಬಾರದು. ಶಿಷ್ಯನ ಅಭ್ಯುದಯವೊಂದೇ ಗುರುವಿನ ಮುಖ್ಯ ಗುರಿಯಾಗಿರಬೇಕು. ಶಿಷ್ಯನ ಮೇಲ್ಮೆಗಾಗಿ ಅವನ ಪಾಪವನ್ನೆಲ್ಲಾ ಶಿವನು ಹಾಲಾಹಲವನ್ನುಂಡಂತೆ ಸ್ವೀಕರಿಸಲು ಸಿದ್ಧನಾಗಿರಬೇಕು. ಅವನ ಏಳ್ಗೆಗೆ ತನ್ನ ತಪಶ್ಶಕ್ತಿಯನ್ನೆಲ್ಲಾ ಧಾರೆ ಎರೆಯಲು ಸಿದ್ಧನಾಗಿರಬೇಕು. ಪರಮಹಂಸರು ಇವನ್ನೆಲ್ಲ ಹೊಂದಿದ್ದರು. ಶಿಷ್ಯರ ಏಳ್ಗೆಗಾಗಿ ಹಗಲು ರಾತ್ರಿ ಎನ್ನದೆ, ಕಷ್ಟಸುಖಗಳನ್ನು ಗಮನಿಸದೆ, ಇನ್ನೇನು ಮೃತ್ಯು ಸನ್ನಿಹಿತವಾಗುತ್ತಿದೆ ಎಂಬುದನ್ನು ಕೂಡ ಕಡೆಗಣಿಸಿ, "ನನ್ನ ಒಂದು ಮಾತಿನಿಂದ ಜೀವಿಗೆ ಶಾಂತಿ ಸಿಕ್ಕಿದರೆ ಎಷ್ಟು ನೋವನ್ನಾದರೂ ಸಹಿಸಲು ಸಿದ್ಧನಾಗಿರುವೆ" ಎನ್ನುತ್ತಿದ್ದರು. ಹೇಗೆ ವಿದ್ಯುತ್‌ಶಕ್ತಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗಬೇಕಾದರೆ ತಂತಿಯ ಮಧ್ಯವರ್ತಿಯು ಬೇಕೋ ಹಾಗೆ ಬೋಧನೆ ಒಂದು ಹೃದಯದಿಂದ ಮತ್ತೊಂದು ಹೃದಯಕ್ಕೆ ಹೋಗಬೇಕಾದರೆ ಪ್ರೀತಿ ಎಂಬ ತಂತಿ ಅತ್ಯಾವಶ್ಯಕ. ಅದಿಲ್ಲದೇ ಇದ್ದರೆ ಎಷ್ಟು ಜ್ಞಾನಭಂಡಾರ ಗುರುವಿನಲ್ಲಿದ್ದರೂ ಅದನ್ನು ಮತ್ತೊಬ್ಬರಿಗೆ ದಾನಮಾಡಲಾರ. ಪರಮಹಂಸರಲ್ಲಿ ಅಂತಹ ಪ್ರೀತಿ ಎಷ್ಟು ತುಂಬಿತುಳುಕಾಡುತ್ತಿತ್ತು ಎಂಬುದನ್ನು ನಾವು ಮೊದಲೇ ನೋಡಿದೆವು. ಪರಮಹಂಸರ ಪ್ರತ್ಯಕ್ಷ ಶಿಷ್ಯರಲ್ಲಿ ಒಬ್ಬರಾದ ಸ್ವಾಮಿ ವಿಜ್ಞಾನಾನಂದರನ್ನು ಒಂದು ಸಲ ನೋಡಿದಾಗ, "ಪರಮಹಂಸರಲ್ಲಿ ಯಾವುದು ನಿಮ್ಮ ಮನಸ್ಸನ್ನು ಆಕರ್ಷಿಸಿತು" ಎಂದು ಕೇಳಿದೆ. ಅದಕ್ಕೆ ಅವರು ಹೀಗೆ ಉತ್ತರ ಕೊಟ್ಟರು; "ಅವರು ಸಮಾಧಿಸ್ಥರಾಗುವುದು, ದೇವದೇವಿಯರನ್ನು ಕಂಡಿರುವುದು ಇವಾವುದೂ, ನನಗೆ ಆಗ ಅರ್ಥವಾಗಲಿಲ್ಲ. ಆದರೆ ಅವರು ನನ್ನನ್ನು ಪ್ರೀತಿಸಿದ ರೀತಿಯಲ್ಲಿ ಅಲೌಕಿಕತೆ ಇತ್ತು. ನಾನು ಕಂಡದ್ದು ಮೊದಲನೆ ಬಾರಿ ಅವರನ್ನು. ಆದರೂ ಅವರಿಗೆ ನಾನು ಚಿರಪರಿಚಿತನೆಂಬಂತೆ ವ್ಯವಹರಿಸಿದರು. ನನ್ನ ತಾಯಿತಂದೆ, ಅಣ್ಣತಮ್ಮಂದಿರು ಯಾರೂ ನನ್ನನ್ನು ಅಷ್ಟು ಪ್ರೀತಿಸಿರಲಿಲ್ಲ. ಅವರ ಪ್ರೇಮದ ದಾಸ ನಾನು" ಎಂದರು.

ಆಧ್ಯಾತ್ಮಿಕ ಜೀವನದಲ್ಲಿ ಮುಂದುವರಿಯಬೇಕಾದರೆ ಸಾಧಕನಿಗೆ ಸ್ವಾತಂತ್ರ್ಯ ಅತ್ಯಾವಶ್ಯಕ. ಶ್ರೀ ರಾಮಕೃಷ್ಣರು ಶಿಷ್ಯರನ್ನು ತರಬೇತು ಮಾಡುತ್ತಿದ್ದಾಗ ಬೇಕಾದಷ್ಟು ಸ್ವತಂತ್ರ ವಾತಾವರಣವನ್ನು ಕಲ್ಪಿಸಿಕೊಡುತ್ತಿದ್ದರು. ಒಂದು ಕಾರ್ಖಾನೆಯಲ್ಲಿ ಸಾಮಾನುಗಳನ್ನು ತಯಾರುಮಾಡುವಂತೆ ಎಲ್ಲ ಜೀವಿಗಳನ್ನೂ ಒಂದೇ ಎರಕದಲ್ಲಿ ಹಾಕಲಾಗುವುದಿಲ್ಲ. ವೈವಿಧ್ಯತೆಯು ಸೃಷ್ಟಿಯ ನಿಯಮ. ಪ್ರತಿಯೊಂದು ವ್ಯಕ್ತಿಯಲ್ಲಿಯೂ ಒಂದೊಂದು ವೈಶಿಷ್ಟ್ಯವಿದೆ. ಅದನ್ನು ಅಳಿಸದೆ ಅವನ ಭಾವಕ್ಕೆ ಕುಂದು ತರದೆ ಮುಂದುವರಿಯುವುದಕ್ಕೆ ಅವರಿಗೆ ಸಹಾಯಮಾಡುತ್ತಿದ್ದರು. ಗುರುವಿನ ಕೆಲಸ ಹೂದೋಟದಲ್ಲಿ ಕೆಲಸಮಾಡುವ ಒಬ್ಬ ತೋಟಗಾರನಂತೆ. ಅವನು ಒಂದೊಂದು ಗಿಡವನ್ನು ಒಂದೊಂದು ತರಹ ನೆಡುವನು. ಅದಕ್ಕೆ ತಕ್ಕ ಪಾತಿಮಾಡುವನು. ಆಯಾ ಗಿಡಕ್ಕೆ ತಕ್ಕ ಗೊಬ್ಬರವನ್ನು ಹಾಕುವನು. ಪ್ರತಿಯೊಂದು ಗಿಡದಿಂದಲೂ ಉತ್ತಮವಾಗಿರುವ ಬೇರೆ ಬೇರೆ ಹೂವನ್ನು ನಿರೀಕ್ಷಿಸುವನು. ಪರಮಹಂಸರ ಸಮೀಪಕ್ಕೆ ಬಂದವರಲ್ಲಿ ಕೆಲವರು ನಾಸ್ತಿಕರು. ಕೆಲವರಿಗೆ ನಿರಾಕಾರದಲ್ಲಿ ಆಸೆ. ಮತ್ತೆ ಕೆಲವರಿಗೆ ಸಾಕಾರದಲ್ಲಿ ಆಸೆ. ಕೆಲವರು ಭಕ್ತರು, ಕೆಲವರು ಜ್ಞಾನಿಗಳು ಮತ್ತೆ, ಕೆಲವರು ಕರ್ಮಯೋಗಿಗಳು. ಎಲ್ಲರಿಗೂ ಅವರವರಿಗೆ ತಕ್ಕ ಉಪದೇಶವನ್ನು ಕೊಡುತ್ತಿದ್ದರು. ಶಿಷ್ಯರಲ್ಲಿರುವ ವೈಚಿತ್ರ್ಯವನ್ನು ಕಂಡು, ಸಹನೆ ಮೀರಿ ಕೋಪತಾಳುವ ಬದಲು ನೋಡಿ ಆನಂದಿಸುತ್ತಿದ್ದರು.

ಒಬ್ಬ ಶಿಷ್ಯನಿಗೆ "ದೇವರನ್ನು ಪ್ರಾರ್ಥಿಸು. ದುಃಖದಿಂದ ಪಾರಾಗುವೆ" ಎಂದರು. ಶಿಷ್ಯನು, "ದೇವರು ಇರುವನೋ ಇಲ್ಲವೋ ಎನ್ನುವುದೇ ನನಗೆ ಸಂದೇಹ. ಹೀಗಿರುವಾಗ ನಾನು ಹೇಗೆ ಅವನನ್ನು ಪ್ರಾರ್ಥಿಸಲಿ?" ಎಂದನು. "ದೇವರೆ, ನೀನು ಇದ್ದರೆ ನನ್ನನ್ನು ದುಃಖದಿಂದ ಪಾರುಮಾಡು ಎಂದು ಏತಕ್ಕೆ ಪ್ರಾರ್ಥಿಸಬಾರದು?" ಎಂದರು.

ಶಶಿಭೂಷಣನೆಂಬ ಶಿಷ್ಯನಿಗೆ "ನಿನಗೆ ಸಾಕಾರದಲ್ಲಿ ಇಷ್ಟವೋ ನಿರಾಕಾರದಲ್ಲಿ ಇಷ್ಟವೋ" ಎಂದು ಪ್ರಶ್ನಿಸಿದರು. "ದೇವರಿರುವುದರಲ್ಲೇ ನನಗೆ ನಂಬಿಕೆ ಇಲ್ಲ. ಹೀಗಿರುವಾಗ ಸಾಕಾರ ನಿರಾಕಾರಗಳ ಮಾತು ಹೇಗೆ ಏಳುವುದು?" ಎಂದನು. ಪರಮಹಂಸರು ನಗುತ್ತಾ "ನರೇಂದ್ರನೂ ಮೊದಲು ಹಾಗೆಯೇ ಹೇಳುತ್ತಿದ್ದನು. ಈಗ ದೇವರ ಹೆಸರನ್ನು ಕೇಳಿದರೆ ಅಳುವನು" ಎಂದರು.

ಶರತ್‌ಚಂದ್ರನನ್ನು ಕುರಿತು "ನಿನ್ನ ಇಷ್ಟ ಯಾವುದು?" ಎಂದು ಪ್ರಶ್ನಿಸಿದರು. "ನನಗೆ ಇಷ್ಟ ಮುಂತಾದುವುಗಳಲ್ಲಿ ನಂಬಿಕೆ ಇಲ್ಲ. ಎಲ್ಲರಲ್ಲಿಯೂ, ಎಲ್ಲಾ ಕಾಲದಲ್ಲಿಯೂ ಸರ್ವಾಂತರ್ಯಾಮಿಯಲ್ಲಿ ನನ್ನ ಮನಸ್ಸು ಮುಳುಗಿರಬೇಕೆಂಬುದೇ

ನನ್ನ ಆಶಯ" ಎಂದನು. ಪರಮಹಂಸರು, "ಅದು ಆಧ್ಯಾತ್ಮಿಕ ಜೀವನದ ಕೊನೆಯ ಮೆಟ್ಟಲು. ಅದು ಹೇಗೆ ಮೊದಲೇ ದೊರಕುವುದು?" ಎಂದರು. "ಅದು ಬರುವ ತನಕ ತೃಪ್ತಿ ಇಲ್ಲ. ಆದಕ್ಕಾಗಿ ಯತ್ನಿಸುವೆನು" ಎಂದನು. ಪರಮಹಂಸರು ಪ್ರೀತಿಯಿಂದ "ಜಗನ್ಮಯಿ, ನಿನ್ನ ಅಭೀಷ್ಟವನ್ನು ನೆರವೇರಿಸಲಿ" ಎಂದರು.

ಪರಮಹಂಸರು ಶಿಷ್ಯರಿಗೆ ಸ್ವಾತಂತ್ರ್ಯವನ್ನೇನೋ ಕೊಡುತ್ತಿದ್ದರು. ಆದರೆ ಯಾವಾಗಲಾದರೂ ಅದು ಅಡ್ಡಹಾದಿಗೆ ತಿರುಗಿದರೆ ಆಗ ತಿದ್ದದೆ ಇರುತ್ತಿರಲಿಲ್ಲ. ತಮ್ಮ ಶಿಷ್ಯರಲ್ಲಿ ಯಾರಲ್ಲಿ ಯಾವ ಗುಣ ಪ್ರಕಾಶಕ್ಕೆ ಬರಬೇಕೆಂಬುದು ಅವರಿಗೆ ತಿಳಿದಿತ್ತು.

ಒಂದು ಸಲ ನಿರಂಜನನೆಂಬ ಶಿಷ್ಯನು ದಕ್ಷಿಣೇಶ್ವರಕ್ಕೆ ದೋಣಿಯಲ್ಲಿ ಬರುತ್ತಿದ್ದನು. ದೋಣಿಯಲ್ಲಿದ್ದ ಕೆಲವು ಜನರು ಪರಮಹಂಸರನ್ನು ಹಾಸ್ಯಮಾಡುತ್ತಿದ್ದರು. ನಿರಂಜನನ ಸ್ವಭಾವ ಸ್ವಲ್ಪ ಮುಂಗೋಪ. ದೋಣಿಯ ಒಂದು ಮೂಲೆಗೆ ಹೋಗಿ ಅದನ್ನು ಅಲ್ಲಾಡಿಸುತ್ತಾ "ನೀವು ನನ್ನ ಗುರುನಿಂದೆ ಮಾಡುವುದನ್ನು ನಿಲ್ಲಿಸದಿದ್ದರೆ ದೋಣಿಯನ್ನು ಮುಳುಗಿಸುತ್ತೇನೆ" ಎಂದು ಅಂಜಿಸಿದರು. ಅನಂತರ ಈ ಪ್ರಸಂಗವನ್ನು ಪರಮಹಂಸರಿಗೆ ಹೇಳಿದನು. ಪರಮಹಂಸರು ಅದನ್ನು ಕೇಳಿ ಕೋಪದಿಂದ "ಎಂತಹ ಅನಾಹುತವನ್ನು ಮಾಡುತ್ತಿದ್ದೆ! ಅವರು ನಿಂದಿಸಿದರೆ ನನಗೇನಾಗುತ್ತಿತ್ತು. ಕೋಪವೇ ಅನರ್ಥಕ್ಕೆ ಮೂಲ" ಎಂದು ಬುದ್ಧಿ ಹೇಳಿದರು.

ಯೋಗಿನ್ ಎಂಬ ಮತ್ತೊಬ್ಬ ಶಿಷ್ಯನ ಸ್ವಭಾವ ಬಹಳ ಮೃದು. ಆತನು ಒಂದು ದಿನ ದೋಣಿಯಲ್ಲಿ ಬರುತ್ತಿದ್ದಾಗ ಹಿಂದಿನಂತೆಯೇ ಕೆಲವರು ಪರಮಹಂಸರನ್ನು ನಿಂದಿಸುತ್ತಿದ್ದರು. ಈತನು ಸುಮ್ಮನಿದ್ದನು. ಪರಮಹಂಸರಿಗೆ ಈ ಸುದ್ದಿಯನ್ನು ಹೇಳಿದನು. ಪರಮಹಂಸರು ಇವನನ್ನು ನೋಡಿ "ಅವರು ನನ್ನನ್ನು ನಿಂದಿಸುತ್ತಿದ್ದಾಗ ನೀನು ಸುಮ್ಮನಿದ್ದೆಯಾ! ಗುರುನಿಂದೆ ಮಾಡುವವರನ್ನು ದಂಡಿಸಬೇಕು ಇಲ್ಲವೇ ಆ ಸ್ಥಳವನ್ನು ಬಿಟ್ಟು ಹೋಗಬೇಕು ಎಂದು ಶಾಸ್ತ್ರಗಳು ಹೇಳುತ್ತವೆ" ಎಂದರು. ಆ ಹುಡುಗನ ಹೃದಯದಲ್ಲಿ ಸ್ವಲ್ಪ ಶಕ್ತಿಯನ್ನು ತುಂಬುವುದಕ್ಕಾಗಿ ಹೀಗೆ ಹೇಳಿದರು.

ಒಂದು ದಿನ ಬ್ರಹ್ಮಸಮಾಜಕ್ಕೆ ಸೇರಿದ ನರೇಂದ್ರ ಮತ್ತು ರಾಖಾಲ ಇಬ್ಬರೂ ದಕ್ಷಿಣೇಶ್ವರವನ್ನು ನೋಡುವುದಕ್ಕೆ ಬಂದರು. ರಾಖಾಲನು ಕಾಳಿಕಾ ದೇವಾಲಯಕ್ಕೆ ಹೋದಾಗ ದೇವರಿಗೆ ನಮಸ್ಕಾರ ಮಾಡಿದನು. ನರೇಂದ್ರನು ಇದನ್ನು ನೋಡಿ, "ಬ್ರಹ್ಮಸಮಾಜಕ್ಕೆ ಸೇರಿದವರು ವಿಗ್ರಹಪೂಜೆ ಮಾಡುವುದಿಲ್ಲವೆಂದು ಶಪಥಮಾಡಿರುವರು. ನೀನು ಏತಕ್ಕೆ ನಮಸ್ಕಾರಮಾಡಿದೆ?" ಎಂದು

ಗದರಿಸಿದನು. ಪರಮಹಂಸರು "ಅವನು ದೇವಿಗೆ ನಮಸ್ಕಾರಮಾಡಿದರೆ ಬೇಡ ವೆನ್ನುವುದಕ್ಕೆ ನೀನು ಯಾರು? ಸರ್ವಾಂತರ್ಯಾಮಿಯಾದ ದೇವರು ಎಲ್ಲಾ ಕಡೆಯಲ್ಲಿಯೂ ಇದ್ದು ಈ ವಿಗ್ರಹದಲ್ಲಿ ಮಾತ್ರವಿಲ್ಲವೇ? ಇನ್ನೊಬ್ಬರ ಭಾವಕ್ಕೆ ಎಂದಿಗೂ ನಷ್ಟತರಬಾರದು" ಎಂದು ಬುದ್ಧಿ ಕಲಿಸಿದರು.

ವಿಮರ್ಶಾತ್ಮಕ ಬುದ್ಧಿಯನ್ನು ಚೆನ್ನಾಗಿ ಬೆಳೆಸಬೇಕೆಂದು ಶಿಷ್ಯರಲ್ಲಿ ಒತ್ತಿ ಒತ್ತಿ ಹೇಳುತ್ತಿದ್ದರು. ಜೀವನದ ಎಲ್ಲಾ ಕಾರ್ಯಕ್ಷೇತ್ರಗಳಲ್ಲಿಯೂ ಒಂದು ಒಳ್ಳೆಯ ದಿದ್ದರೆ ಅದನ್ನು ಹೋಲುವ ಹಲವಾರು ಕೃತಕ ವಸ್ತುಗಳಿರುತ್ತವೆ. ಯಾವುದು ಸಾಚಾನಾಣ್ಯ, ಯಾವುದು ಖೋಟಾನಾಣ್ಯವೆಂಬುದನ್ನು ಪರೀಕ್ಷಿಸಬೇಕಾದರೆ ವಿಮರ್ಶಾತ್ಮಕ ಬುದ್ಧಿಯ ಒರೆಗಲ್ಲು ಇಲ್ಲದಿದ್ದರೆ ಸಾಧ್ಯವಿಲ್ಲ. ಆಧ್ಯಾತ್ಮಿಕ ಜೀವನ ದಲ್ಲಿಯಂತೂ ಅದು ಯಥೇಚ್ಛವಾಗಿರುವುದು. ಒಂದು ಅವತಾರವಿದ್ದರೆ ನೂರಾರು ಅವತಾರದ ವೇಷಗಳಿರುತ್ತವೆ. ಒಬ್ಬ ಸತ್ಯ ಮಹಾತ್ಮನಿದ್ದರೆ ನೂರಾರು ನಟನೆಯ ಮಹಾತ್ಮರು ಇರುವರು. ವಿಮರ್ಶಾತ್ಮಕ ಬುದ್ಧಿ ಇಲ್ಲದೇ ಇದ್ದರೆ ಹೆಜ್ಜೆಹೆಜ್ಜೆಗೂ ಹಳ್ಳಕ್ಕೆ ಬೀಳಬೇಕಾಗುವುದು.

ಕಾಮಕಾಂಚನಗಳ ತ್ಯಾಗವೇ ಪರಮಹಂಸರ ಬೋಧನೆಯ ಪಲ್ಲವಿಯಾಗಿತ್ತು. ಒಂದು ದಿನ ನರೇಂದ್ರನು ಪರಮಹಂಸರು ಎಷ್ಟುಮಟ್ಟಿಗೆ ಕಾಂಚನವನ್ನು ಬಿಟ್ಟಿರುವರು ಎಂಬುದನ್ನು ಪರೀಕ್ಷಿಸುವುದಕ್ಕಾಗಿ ಅವರು ಹೊರಗೆ ಹೋಗಿದ್ದಾಗ ಒಂದು ರೂಪಾಯಿಯನ್ನು ಅವರ ಹಾಸಿಗೆಯ ಕೆಳಗೆ ಇಟ್ಟನು. ಪರಮಹಂಸರು ಬಂದು ಹಾಸಿಗೆಯ ಮೇಲೆ ಕುಳಿತೊಡನೆಯೇ ಅವರ ದೇಹಕ್ಕೆ ಚೇಳು ಕುಟುಕಿದಂತೆ ಬಾಧೆ ಯಾಯಿತು. ಇದನ್ನು ನೋಡಿ "ಹಾಸಿಗೆಯನ್ನು ಕೊಡವಿ. ಅದರಡಿಯಲ್ಲಿ ಏನಾದರೂ ಇರುವುದೆ ನೋಡಿ" ಎಂದರು. ಹಾಸಿಗೆ ಕೊಡವಿ ನೋಡಿದಾಗ ಒಂದು ರೂಪಾಯಿ ಕೆಳಗೆ ಬಿತ್ತು. ಪರಮಹಂಸರು ಯಾವುದನ್ನು ಬಾಯಿಯಲ್ಲಿ "ಬಿಟ್ಟೆ" ಎನ್ನು ತ್ತಿದ್ದರೋ ಅದನ್ನು ಅವರ ದೇಹಾದ್ಯಂತವೂ ಬಿಟ್ಟಿತ್ತು. ಒಂದು ವೇಳೆ ತಿಳಿಯದೆ ಅವರ ದೇಹಕ್ಕೆ ಸೋಕಿದರೂ ಶರೀರದ ರಕ್ತ ಮಾಂಸಗಳು ಅದನ್ನು ಧಿಕ್ಕರಿಸು ತ್ತಿದ್ದವು. ಅವರ ಬೋಧನೆ ಅವರ ಜೀವನದಲ್ಲಿ ಎಷ್ಟು ಆಳಕ್ಕೆ ಹೋಗಿತ್ತು ಎನ್ನುವು ದನ್ನು ನೋಡುವೆವು. ನರೇಂದ್ರನೇ ಇದನ್ನು ಮಾಡಿದವನೆಂದು ಗೊತ್ತಾದ ಮೇಲೆ ಅವರು ಕೋಪಗೊಳ್ಳದೆ "ವರ್ತಕನು ಗಿರಾಕಿಗಳು ಕೊಡುವ ದುಡ್ಡನ್ನು ಹೇಗೆ ಶಬ್ದ ಮಾಡಿ ನೋಡಿ ತೆಗೆದುಕೊಳ್ಳುತ್ತಾನೆಯೋ ಹಾಗೆಯೇ ನೀವು ನಾನು ಹೇಳುವುದನ್ನು ಚೆನ್ನಾಗಿ ವಿಮರ್ಶೆಮಾಡಿ ನೋಡಿ ಅನಂತರ ಸ್ವೀಕರಿಸಿ" ಎಂದರು.

ಸಾಧನೆಯ ಕಾಲದಲ್ಲಿ ಬಂದ ದಿವ್ಯ ದರ್ಶನಗಳನ್ನು ಅವು ಬುದ್ಧಿ ಭ್ರಮಣೆ

ಯಿಂದ ಆಗಿರುವುದೆ ಅಥವಾ ನಿಜವಾದ ದೃಶ್ಯಗಳೆ ಎಂದು ಬೇಕಾದಷ್ಟು ಇವರೇ ವಿಮರ್ಶಿಸುತ್ತಿದ್ದರು.

ಒಂದುಸಲ ಪರಮಹಂಸರು ದಕ್ಷಿಣೇಶ್ವರದಲ್ಲಿ ರಾತ್ರಿ ಮಲಗಿದ್ದಾಗ ಒಬ್ಬ ಶಿಷ್ಯನೂ ಇದ್ದನು. ಸುಮಾರು ಅರ್ಧರಾತ್ರಿ ಸಮಯದಲ್ಲಿ ಪರಮಹಂಸರು ಎದ್ದು ಹೊರಗೆಹೋದರು. ಶಿಷ್ಯನು ನೋಡೋಣ, ಇವರು ಶಾರದಾದೇವಿಯವರ ಕೋಣೆಯ ಹತ್ತಿರ ಹೋಗಿರುವರೆ ಎಂದು ಅವರ ಕೋಣೆಯ ಹತ್ತಿರ ಕಾಯುತ್ತಿದ್ದನು. ಪರಮಹಂಸರು ದೂರದಿಂದ ಬಂದು ನೇರವಾಗಿ ತಮ್ಮ ಕೋಣೆಗೆ ಹೋಗುವುದರಲ್ಲಿದ್ದರು. ಶಿಷ್ಯನು ತಾನು ಇವರ ವಿಷಯವಾಗಿ ಅನುಮಾನಪಟ್ಟಿದ್ದಕ್ಕೆ ತಾನೆ ನಾಚಿ, ಇವರಿಗೆ ನಮಸ್ಕರಿಸಿ ಕ್ಷಮಿಸಬೇಕೆಂದು ಕೇಳಿಕೊಂಡನು. ಪರಮಹಂಸರು "ಸಾಧುವನ್ನು ಹಗಲುಮಾತ್ರ ಪರೀಕ್ಷೆಮಾಡಿದರೆ ಸಾಲದು. ರಾತ್ರಿಯೂ ಪರೀಕ್ಷೆ ಮಾಡಬೇಕು" ಎಂದರು.

ಸಾಧಾರಣ ಗುರುಗಳಾಗಿದ್ದರೆ ಶಿಷ್ಯನು ತನ್ನಲ್ಲಿ ಇಷ್ಟು ಸಂದೇಹಪಡುತ್ತಾನೆ. ಸ್ವಲ್ಪವೂ ಗುರುಭಕ್ತಿ ಇಲ್ಲ ಎಂದು ಎಷ್ಟು ಕೋಪಿಷ್ಟರಾಗುತ್ತಿದ್ದರೊ! ಯಾವ ಶಾಪಗಳನ್ನು ಕೊಡುತ್ತಿದ್ದರೊ! ಆದರೆ ಪರಮಹಂಸರು ಶಿಷ್ಯರಲ್ಲಿ ಇಂತಹ ಚಾಳಿಯನ್ನು ನೋಡಿದಂತೆಲ್ಲ ಅವರನ್ನು ಹೆಚ್ಚು ಹೆಚ್ಚು ಪ್ರೀತಿಸುತ್ತಿದ್ದರು.

ಪರಮಹಂಸರು ಯಾವಾಗಲೂ ತಮ್ಮ ಶಿಷ್ಯರನ್ನು ಸ್ವಂತ ಪ್ರಯತ್ನದ ಮೇಲೆ ನಿಲ್ಲುವಂತೆ ಮಾಡುತ್ತಿದ್ದರು. ಯಾವ ಗುರುವಿನ ಕಟಾಕ್ಷವಾಗಲೀ ದೇವರ ಅನುಗ್ರಹವಾಗಲೀ ನಮ್ಮ ಸ್ವಪ್ರಯತ್ನದ ಬೆವರು ಬೀಳದೆ ಇದ್ದರೆ ಫಲಕಾರಿಯಾಗಲಾರದು. ಸುಮ್ಮನೆ ಗುರುಕೊಟ್ಟ ಜೋಳಿಗೆ ಎಂದು ಗೂಟಕ್ಕೆ ನೇತುಹಾಕಿದರೆ ಭಿಕ್ಷೆ ಸಿಕ್ಕುವುದಿಲ್ಲ. ಹೊಟ್ಟೆ ತುಂಬುವುದಿಲ್ಲ. ಅದನ್ನು ತೆಗೆದುಕೊಂಡು ಮನೆಮನೆಗೆ ಹೋಗಬೇಕು. ಅಂತೆಯೇ ಗುರುವಿನ ಉಪದೇಶವೆಂಬ ಕಡೆಗೋಲಿನಿಂದ ನಮ್ಮ ಮಾನಸಿಕ ಪ್ರಪಂಚವನ್ನು ಎಡಬಿಡದೆ ಕಡೆಯಬೇಕು. ಆಗಮಾತ್ರ ಮನಸ್ಸಿನಲ್ಲಿ ಹುದುಗಿದ ಆತ್ಮಜ್ಞಾನವೆಂಬ ನವನೀತ ಸಿಕ್ಕುವುದು. ಶ್ರೀ ರಾಮಕೃಷ್ಣರು ಸಂದೇಹದಲ್ಲಿ ನರಳಾಡುತ್ತಿದ್ದ ಶಿಷ್ಯರು ಬಂದು ದೇವರಿರುವನೆ ಎಂಬ ಪ್ರಶ್ನೆ ಕೇಳಿದಾಗ, ಅಂತಹ ಅತೀಂದ್ರಿಯ ಅನುಭವ ಒಂದಿದೆ ಎಂಬುದನ್ನು ತೋರುವುದಕ್ಕಾಗಿ ಅದರ ಸವಿಯನ್ನು ಸ್ವಲ್ಪ ಹಂಚಿದರು. ಇದರಿಂದ ಅವರಿಗೆ ಸ್ವಲ್ಪ ತೃಪ್ತಿಯುಂಟುಮಾಡುವುದಕ್ಕಲ್ಲ; ಅತೃಪ್ತಿಯನ್ನು ಹೆಚ್ಚುಮಾಡುವುದಕ್ಕೆ. ಇಂತಹ ಅತೀಂದ್ರಿಯ ಸವಿಯ ಆಸ್ವಾದನೆಯಿಂದ ಅವರಿಗೆ ಇದರಲ್ಲಿ ನಿಸ್ಸಂಶಯವಾಗಿ ನಂಬಿಕೆ ಹುಟ್ಟುವುದು, ಮತ್ತು ಪ್ರಾಪಂಚಿಕ ಸುಖಭೋಗಗಳೊಂದಿಗೆ ಹೋಲಿಸಿ

ನೋಡಿದರೆ ಭಗವಂತನ ಸಾನ್ನಿಧ್ಯದಿಂದ ಬರುವ ಆನಂದವೆಂತಹುದೆಂಬುದನ್ನು ಅವರು ತಿಳಿದು ಅದನ್ನು ಪಡೆಯುವುದಕ್ಕಾಗಿ ಅವಿಶ್ರಾಂತರಾಗಿ ದುಡಿಯುವಂತೆ ಮಾಡಿಸು ತ್ತಿದ್ದರು. ನಿಜವಾದ ಗುರುವು "ಮೋಕ್ಷ ಸುಲಭ, ಕಷ್ಟವಿಲ್ಲದೆ ಸಿಕ್ಕುವುದು. ನನ್ನ ಹತ್ತಿರ ಒಂದು ಮಂತ್ರೋಪದೇಶ ಪಡೆದರೆ ಸಾಕು; ಕೆಲವು ಪ್ರಾಣಾಯಾಮ ಮುಂತಾದ ಕಸರತ್ತನ್ನು ಮಾಡಿದರೆ ಸಾಕು; ದೇವರು ನಮ್ಮ ಬಲೆಗೆ ಬೀಳುತ್ತಾನೆ" ಎಂದು ಹೇಳುವುದಿಲ್ಲ. ಪರಮಹಂಸರ ಶಿಷ್ಯರೆಲ್ಲ ಯಾವ ಅನುಭವವನ್ನು ಅವರ ಕೃಪೆಯಿಂದ ಕ್ಷಣಕಾಲ ಪಡೆದರೋ ಅದನ್ನು ಇಡೀ ಜೀವನದ ಅನುಭವವನ್ನಾಗಿ ಮಾಡಿಕೊಳ್ಳಲು ಹಗಲಿರುಳೂ ಸಾಧನೆಮಾಡುತ್ತಿದ್ದರು. ಅವರು ಕೇವಲ ಗುರುಕೃಪೆ ಯಿಂದ ಮಾತ್ರ ಸಿದ್ಧರಾದವರಲ್ಲ. ಜೊತೆಗೆ ತ್ಯಾಗ, ವೈರಾಗ್ಯ, ತಪಸ್ಸುಗಳ ಬೆಲೆ ಕೊಟ್ಟು ಪೂರ್ಣರಾದ ಮಹಾವ್ಯಕ್ತಿಗಳು.

ಭಕ್ತಿ ವೈರಾಗ್ಯ ಇವುಗಳ ನೆಪದಲ್ಲಿ ಅಜಾಗರೂಕತೆ, ಅಸಡ್ಡೆ ಅಥವಾ ಅವಿಚಾರ ಬಂದರೆ ಅವನ್ನು ಖಂಡಿಸದೆ ಬಿಡುತ್ತಿರಲಿಲ್ಲ. ಭಗವಂತನ ಮೇಲೆ ನಮಗೆ ಇರುವ ಭಕ್ತಿಯ ಲಕ್ಷಣ ವ್ಯಾವಹಾರಿಕ ಜಗತ್ತಿನಲ್ಲಿ ನಾವು ತೋರುವ ಅಸಡ್ಡೆಯಲ್ಲ. ಪರಮಹಂಸರು ಒಂದು ಕ್ಷಣದಲ್ಲಿ ನಿರ್ವಿಕಲ್ಪ ಸಮಾಧಿಗೆ ಹೋಗುತ್ತಿದ್ದರು. ಆದರೂ ತಮ್ಮ ಕೋಣೆಗೆ ಬೀಗಹಾಕಿದ ಮೇಲೆ ಮೂರುಬಾರಿ ಎಳೆದು ಅದು ಸರಿಯಾಗಿ ತಗಲಿದೆಯೇ ಇಲ್ಲವೇ ಎಂದು ನೋಡುತ್ತಿದ್ದರು. ಯಾವುದಾದರೂ ಒಂದು ವಸ್ತುವನ್ನು ಒಂದು ಸ್ಥಳದಿಂದ ತೆಗೆದರೆ ಅದನ್ನು ಪುನಃ ಅಲ್ಲೇ ಇಡುತ್ತಿ ದ್ದರು. ಅವರ ಬಟ್ಟೆಯ ವಿಷಯದಲ್ಲಿ ಸ್ವಲ್ಪವಾದರೂ ಕಶ್ಮಲವನ್ನು ಸಹಿಸುತ್ತಿರಲಿಲ್ಲ. ಒಂದು ಸಲ ಒಬ್ಬ ಶಿಷ್ಯನನ್ನು ಒಂದು ಕಾವಲಿ ತರುವುದಕ್ಕೆ ಕಳುಹಿಸಿದರು. ಅವನು ಸರಿಯಾಗಿ ನೋಡದೆ ಬಿರುಕುಬಿಟ್ಟಿದ್ದ ಕಾವಲಿಯನ್ನು ತಂದನು. ಪರಮಹಂಸರು ಇದನ್ನು ನೋಡಿ "ಭಕ್ತನಾದರೆ ಮೂಢನಂತೆ ವರ್ತಿಸುವುದೆ? ವ್ಯಾಪಾರಿ, ಧರ್ಮ ಕ್ಕಾಗಿ ಇಲ್ಲ. ಅವನು ಕೊಡುವುದನ್ನು ಪರೀಕ್ಷೆಮಾಡಿ ತೆಗೆದುಕೊಂಡು ಬರಬೇಕು. ಏನಾದರೂ ಪದಾರ್ಥವನ್ನು ಕೊಂಡರೆ ಮೇಲೆ ಕೊಸರನ್ನೂ ಕೇಳಬೇಕು!" ಎಂದರು.

ಪವಾಡದ ಮೇಲೆ ಸ್ವಲ್ಪವೂ ಮನಸ್ಸು ಹೋಗಕೂಡದೆಂದು ತಮ್ಮ ಶಿಷ್ಯರನ್ನು ಪದೇಪದೇ ಎಚ್ಚರಿಸುತ್ತಿದ್ದರು. ಸಾಧಾರಣ ಮನುಷ್ಯರು ಒಬ್ಬನ ಮಾಹಾತ್ಮ್ಯವನ್ನು ಅಳೆಯುವುದು ಅವನು ಮಾಡುವ ಪವಾಡಗಳಿಂದ. ಎಷ್ಟು ಜನರ ರೋಗವನ್ನು ಅವನು ಗುಣಮಾಡಿರುವನು? ಆತನ ಅನುಗ್ರಹದಿಂದ ಎಷ್ಟು ಜನರಿಗೆ ಮಕ್ಕಳಾಗಿವೆ, ಹಣಸಿಕ್ಕಿದೆ, ಪರೀಕ್ಷೆಯಲ್ಲಿ ತೇರ್ಗಡೆಯಾಗಿದೆ. ಮೇಲಿನ ಅಧಿಕಾರ ಸಿಕ್ಕಿದೆ ಇತ್ಯಾದಿ." ಇದು ಒಬ್ಬನ ಮಾಹಾತ್ಮ್ಯದ ಗುರುತಲ್ಲ. ಅಡ್ಡಹಾದಿ ಹಿಡಿದ

ಯೋಗಭ್ರಷ್ಟನ ಚಿಹ್ನೆ. ಇಂತಹ ವಿದ್ಯೆಯನ್ನು ಎಷ್ಟೋಜನ ಡೊಂಬರು ಮಾಡು ವರು, ವೈದ್ಯರೂ ಮಾಡುವರು. ಅಣಿಮಾದಿ ಅಷ್ಟಸಿದ್ಧಿಗಳಲ್ಲಿ ಒಂದರ ಬಲೆಗೆ ಬಿದ್ದರೂ ಆತ ಆಧ್ಯಾತ್ಮಿಕ ಜೀವನದಲ್ಲಿ ಮುಂದುವರಿಯಲಾರ ಎನ್ನುತ್ತಿದ್ದರು. ಯಾವ ಅಹಂಕಾರವನ್ನು ಅಳಿಸುವುದಕ್ಕೆ ನಾವು ಪ್ರಯತ್ನಿಸುವೆವೋ ಅಂತಹ ಅಹಂಕಾರದ ಬೊಜ್ಜನ್ನು ಬೆಳಿಸುವ ಇಂತಹ ಐಂದ್ರಜಾಲಿಕ ಶಕ್ತಿ ಮಾಯೆಯ ಬಲೆ. ಅದರಲ್ಲಿ ಬಿದ್ದರೆ ನಾವು ಪುನಃ ಹೆಸರು, ಕೀರ್ತಿಗಳಿಗೆ ದಾಸರಾಗಿ ಪ್ರಪಂಚಕ್ಕೆ ಬಂದಿಗಳಾಗುವೆವು.

ಪರಮಹಂಸರು ಇದನ್ನು ವಿವರಿಸುತ್ತಾ ಒಂದು ಕಥೆ ಹೇಳಿದರು. ಒಬ್ಬ ಮನುಷ್ಯನು ಹನ್ನೆರಡು ವರುಷಗಳು ತಪಸ್ಸುಮಾಡಿ ದೇವರಿಂದ ನೀರಿನ ಮೇಲೆ ನಡೆಯುವ ವರವನ್ನು ಪಡೆದುಕೊಂಡನು. ಒಂದು ದಿನ ಒಬ್ಬ ಋಷಿಯು ಒಂದು ನದಿಯನ್ನು ದಾಟುವುದಕ್ಕೆ ತೀರದಲ್ಲಿ ದೋಣಿಗಾಗಿ ಕಾಯುತ್ತಿದ್ದನು. ಈತನೆದುರಿಗೆ ಆ ಸಿದ್ಧನು ನೀರಿನ ಮೇಲೆ ನಡೆದುಕೊಂಡು ಹೋದನು. ಈ ವಿದ್ಯೆಯನ್ನು ಹೇಗೆ ಪಡೆದೆ ಎಂದು ಪ್ರಶ್ನಿಸಿದಾಗ ಹನ್ನೆರಡು ವರುಷಗಳ ತಪಸ್ಸಿನ ಪರಿಣಾಮ ಇದು ಎಂದನು. ಆ ಋಷಿಯು ನಗುತ್ತಾ "ಅಯ್ಯೋ! ಇದಕ್ಕೆ ಹನ್ನೆರಡು ವರುಷ ತಪಸ್ಸು ವ್ಯರ್ಥಮಾಡಬೇಕೆ? ಮೂರುಕಾಸಿಗೆ ದೋಣಿಯವನು ಈ ದಡದಿಂದ ಆ ದಡಕ್ಕೆ ಕರೆದೊಯ್ಯುವನು" ಎಂದನು.

ಮನುಷ್ಯನು ದುರ್ಬಲತೆಯೊಂದಿಗೆ ನೇರವಾಗಿ ಹೋರಾಡುವುದು ಯಾವಾಗಲೂ ಕಷ್ಟ ಮತ್ತು ಅಪಾಯಕರ. ಪರಮಹಂಸರು ಕೆಲವು ವೇಳೆ ಶಿಷ್ಯರಲ್ಲಿ ಕಾಣುತ್ತಿದ್ದ ದುರ್ಬಲತೆಯನ್ನೇ ದೇವರ ಕಡೆಗೆ ತಿರುಗಿಸುತ್ತಿದ್ದರು.

ಗಿರೀಶಚಂದ್ರಘೋಷ ಎಂಬ ವಂಗ ನಾಟಕ ಕರ್ತ ಪ್ರಚಂಡ ಕುಡುಕ. ಎಷ್ಟೋ ವೇಳೆ ಅದರ ಅಭ್ಯಾಸಬಲದಿಂದ ಪಾರಾಗಬೇಕೆಂದು ಪ್ರಯತ್ನಿಸುತ್ತಿದ್ದನು. ಆದರೂ ಜಯಶೀಲನಾಗಿರಲಿಲ್ಲ. ಪರಮಹಂಸರು ಒಂದು ದಿನ ಗಿರೀಶನಿಗೆ "ನೀನು ಹೇಗಿದ್ದರೂ ಸಾರಾಯಿ ಕುಡಿಯುವೆ. ಅದನ್ನು ದೇವರಿಗೆ ಏತಕ್ಕೆ ನೈವೇದ್ಯಮಾಡಿ ಪ್ರಸಾದವೆಂದು ಭಾವಿಸಕೂಡದು? ದೇವರೂ ಒಬ್ಬ ಕುಡುಕನಿರಬಹುದು" ಎಂದರು. ಗಿರೀಶನು "ಅವನು ಕುಡುಕನೆಂದು ನಿಮಗೆ ಹೇಗೆ ಗೊತ್ತು?" ಎಂದನು. ಪರಮಹಂಸರು "ಮಾದಕದ್ರವ್ಯದ ಅಮಲು ನೆತ್ತಿಗೆ ಏರದೇ ಇದ್ದರೆ ಇಂತಹ ವಿಚಿತ್ರ ಜಗತ್ತನ್ನು ಸೃಷ್ಟಿಸುತ್ತಿದ್ದನೆ?" ಎಂದು ನಕ್ಕರು.

ಪರಮಹಂಸರ ಬುದ್ಧಿವಾದವನ್ನು ಅನುಸರಿಸಿ ಗಿರೀಶನು ಕುಡುಕತನದಿಂದ ಪಾರಾದನು.

ಶ್ರೀ ರಾಮಕೃಷ್ಣ ಪರಮಹಂಸರು ತಮ್ಮ ಶಿಷ್ಯರ ಎದೆಯಲ್ಲಿ "ಇತರರ ಕಷ್ಟವೇ ನಮ್ಮ ಕಷ್ಟ, ಇತರರ ದುಃಖವೇ ನಮ್ಮ ದುಃಖ, ಇತರರ ಬಂಧನವೇ ನಮ್ಮ ಬಂಧನ" ಎಂದು ಸರ್ವರಿಗೂ ಮರುಗುವ ವಿಶ್ವಕಾರುಣ್ಯದ ಹಣತೆಯನ್ನು ಹತ್ತಿಸಿದರು. "ಪ್ರತಿಯೊಬ್ಬ ಜೀವಿಯಲ್ಲಿಯೂ ಶಿವನು ಇರುವನು. ಅವನಿಗೆ ನಾವು ಮಾಡುವುದು ಉಪಕಾರವಲ್ಲ, ಸೇವೆ. ನಾವು ಮಾಡುವ ಸೇವೆಯಿಂದ ಜಗತ್ತು ಉದ್ಧಾರವಾಗುವುದೆಂದು ಹೆಮ್ಮೆ ತಾಳಬೇಡಿ. ಅದು ನಮ್ಮ ಉದ್ಧಾರಕ್ಕೆ ದಾರಿ. ಸೇವೆಯಿಂದ ನಮ್ಮ ಮನಸ್ಸಿನ ಕಶ್ಮಲ ಜಾರುವುದು. ನಮ್ಮ ಆತ್ಮನ ಕನ್ನಡಿಯಲ್ಲಿ ಪರಂಜ್ಯೋತಿಯ ಪ್ರಭೆ ಹೊಳೆಯುವುದು" ಎಂದು ಬೋಧಿಸಿದರು.

ತಾಯಿ ತನ್ನ ಮಕ್ಕಳನ್ನು ಪ್ರೀತಿಯಿಂದ ಪೋಷಿಸಿ ಕಾರ್ಯರಂಗಕ್ಕೆ ಹರಸಿ ಕಳುಹಿಸುವಂತೆ, ಪರಮಹಂಸರು ತಮ್ಮ ಶಿಷ್ಯರನ್ನು ಸರ್ವತೋಮುಖವಾಗಿ ಬೆಳೆಸಿ, ಜ್ಞಾನ, ಭಕ್ತಿ, ವೈರಾಗ್ಯದಲ್ಲಿ ಪರಿಪುಷ್ಟರಾಗುವಂತೆ ಮಾಡಿ ಬಹುಜನರ ಹಿತಕ್ಕೆ, ಬಹುಜನರ ಸುಖಕ್ಕೆ, ದುಡಿಯುವಂತೆ ಹರಸಿ ಭವರಂಗಕ್ಕೆ ಕಳುಹಿಸಿದರು.

ಸೋಮನಾಥಾನಂದ.

ಗಾಥಾಸಪ್ತಶತಿಯಿಂದ

೧

ಸಂತತ ಸುರಿಯುವ ನೀರಿನ ಧಾರೆಯ
ಹಗ್ಗದೊಳೆಳೆಯುನು ಬಿಗಿದು
ಮೇಲಕೆ ತಮ್ಮಿಂದಲೆತ್ತುವುದಾಗದೆ
ಮೋಡಗಳಳುತಿವೆ ನೊಂದು.

೨

ಬೆಟ್ಟದ ಮೇಗಡೆಗೇರಿದ ಬೇಡರು
ಬಿಲ್ಲ ಮೇಲಾನಿಸಿ ಮೈಯ
ನೋಡುವರಾನೆವೊಲೋಳಿಯ ಮೋಡಗ
ಳಡರುವ ಏಂಧ್ಯದ ಗಿರಿಯ.

೩

ಭಾರಕೆ ಬಾಗಿದ ಮರಗಳ ಹರೆಯೊಳು
ಕಾಲೂರಿ ಜಾರಲು ಹಕ್ಕಿ
ಪಟಪಟನೆ ರೆಕ್ಕೆಯ ಬಡಿಯುತಲೆಂತೆಂತೊ
ತಂಗುವುದಾಸರೆ ಸಿಕ್ಕಿ.

೪

ಪಚ್ಚೆಯ ಸೂಜಿಯು ಚುಚ್ಚಿದ ಮುತ್ತನು
ಹೋಲುವ ಹುಲ್ಲಿನ ತುದಿಯ
ಹನಿಯನು ; ನವಿಲೊಂದು ಚಾಚುತ ಕತ್ತನು
ಕುಡಿವಂದು ಸೆಳೆವುದು ಬಗೆಯ.

—ಎಸ್. ವಿ. ಪರಮೇಶ್ವರಭಟ್ಟ.

"ನನ್ನ ನೆನಪಿನ ವೀರ"

"ಋಣಭಾರಕ್ಕೆ ಣೆಯಾವುದೈ
ಹರಹರಾ ಶ್ರೀ ಚನ್ನ ಸೋಮೇಶ್ವರಾ"

ಪಾಪಯ್ಯಶೆಟ್ಟಿ !

ಆಹಾ! ನೆನೆದ ಮಾತ್ರಕ್ಕೆ ನನ್ನ ಮನೋನಯನಗಳ ಮುಂದೆ ಸಾಕ್ಷಾತ್ಕಾರ ವಾಗುವ ಪಾಪಯ್ಯಶೆಟ್ಟಿ! ಯಾರ ಕಂಠವಾಣಿ ನಲವತ್ತು ವರ್ಷಗಳ ಆಚೆನಿಂದ ನನ್ನ ಕರ್ಣಾಂತರಾಳದಲ್ಲಿ ಮಾರ್ದನಿಯಾಗುವುದೋ ಆ ಪಾಪಯ್ಯಶೆಟ್ಟಿ!! ಯಾರ ಕಥೆ, ಇಂದಿಗೂ ಅರಿವಾಗದಂತೆಯೇ ಮೆಚ್ಚಿಕೆಯಿಂದ ನನ್ನ ಅರೆನರೆಗೂದಲ ತಲೆಯನ್ನು ತೂಗಿಸುವುದೋ ಆ ಸಹನಾಮೂರ್ತಿ—ವ್ರತವೀರ ಪಾಪಯ್ಯಶೆಟ್ಟಿ!!!

ಆಗ ನನಗೆ ಹತ್ತೋ ಹನ್ನೆರಡೋ ವರ್ಷ ವಯಸ್ಸು—ಅಂದರೆ ಸುಮಾರು ನಲವತ್ತು—ನಲವತ್ತೆರಡು ವರ್ಷಗಳ ಹಿಂದಿನ ಮಾತು ಅನ್ನಿ. ಶಿವಮೊಗ್ಗಾದಲ್ಲಿ ಪುರಭವನದ ಬಳಿ ಇರುವ ಸರ್ಕಾರೀ "ಎ.ವಿ. ಸ್ಕೂಲ್"ನಲ್ಲಿ (ಆ ಕಾಲಕ್ಕೆ ಈಗಿನ ಮಿಡ್ಲ್‌ಸ್ಕೂಲುಗಳನ್ನು "ಆಂಗ್ಲೋವರ್ನಾಕ್ಯುಲರ್ ಸ್ಕೂಲ್" ಎಂದು ಕರೆಯುತ್ತಿದ್ದರು. "ಎ.ವಿ." ಎನ್ನುವುದು "ಆಂಗ್ಲೋ"—"ವರ್ನಾಕ್ಯುಲರ್" ಎಂಬ ಶಬ್ದಗಳ ಆಂಗ್ಲ ಸಂಕೇತಾಕ್ಷರಗಳು) ಓದುತ್ತಿದ್ದ ನಮಗೆ ಬಹಳ ಪ್ರಿಯನಾಗಿದ್ದ ವ್ಯಕ್ತಿ ಎಂದರೆ, ನಮ್ಮ ಕಥಾನಾಯಕ ಪಾಪಯ್ಯಶೆಟ್ಟಿ.

ಆಕೃತಿಯಲ್ಲಿ—ಎಂದರೆ—ಎತ್ತರ ಗಾತ್ರಗಳಲ್ಲಿ, ಪಾಪಯ್ಯಶೆಟ್ಟಿ ಮಧ್ಯಮನಾಗಿದ್ದ. ನಮಗಿಂತ ಅವನು ಎಷ್ಟೋ ದೊಡ್ಡವನಾಗಿ ಕಾಣುತ್ತಿದ್ದ. ಆದರೆ ಆಗ ಅವನಿಗೆ ಮೂವತ್ತು—ಮೂವತ್ತೈದು ವರ್ಷ—ಅಷ್ಟೆ. ವೈವರ್ಣದಲ್ಲಿ ಸಾಲಿಗ್ರಾಮ ಮೂರ್ತಿ! ಅವನು ಅರ್ಧ ಕುಸುಮಲೋಚನ! ಏಕೆಂದರೆ, ಅವನ ಬಲಗಣ್ಣಿನಲ್ಲಿ ಹೂ ಕೂತು ಗಂಜಿ ಗಂಜಿಯಾಗಿ ಕಾಣುತ್ತಿತ್ತು. ತನ್ನ ಜೊತೆಯನ್ನೇ ಸದಾ ನೋಡಲೆಳಸುತ್ತಿರುವಂತೆ, ಅವನ ಎಡಗಣ್ಣಿನ ಕರೀಗುಡ್ಡೆ ಮೂಗಿನ ಮೂಲೆಗೆ ಬಂದು ನಿಲ್ಲುತ್ತಿತ್ತು. ಆದ್ದರಿಂದ ಅವನ ಮುಖ ಅಫ್ಘಾನೀಸ್ಥಾನದ ಕಡೆ ತಿರುಗಿದ್ದರೆ, ಅವನ ಒಕ್ಕಣ್ಣಿನ ದೃಷ್ಟಿ ಅಸ್ಸಾಂ ಪ್ರಾಂತದ ಮೇಲೆ ಬೀಳುತ್ತಿತ್ತು. ಮುಖದ ತುಂಬ ಸಿಡುಬಿನ ಕಲೆಯ ಗುಳಿಗಳು! ಹರಕು ಹರಕಾದ ಮೀಸೆ, ಸದಾ ತೆರೆದಿರುತ್ತಿದ್ದ ಅವನ ಬಾಯಿಬಾಗಿಲಿಗೆ ಚೆಜ್ಜದಂತೆ ಶೋಭಿಸುತ್ತಿತ್ತು. ಅವನು ಕ್ಷೌರಮಾಡಿಸಿ

ಕೊಳ್ಳುವುದೆಂದರೆ ಸೂರ್ಯಗ್ರಹಣದಂತೆ ಅಪರೂಪವಾದ ಪ್ರಸಂಗವಾಗಿತ್ತು. ನೆತ್ತಿಯಿಂದ ಸ್ವಲ್ಪ ಹಿಂದಕ್ಕೆ ಒಂದು ಹಿಡಿಯಷ್ಟು—ನೀಳವಾದ—ಒಂದೇ ಜಟೆಯಾದ ಕೂದಲು ವಿನಹ—ಉಳಿದ ತಲೆ—ಮತ್ತು ಗಡ್ಡದ ಕೂದಲು "ಅಪರೂಪ ಪ್ರಸಂಗ"ದ ದಿನ ನಯನಜಕ್ಷತ್ರಿಯನ ಕೂರಸಿಗೆ ತುತ್ತಾಗುತ್ತಿತ್ತು. ಜಟೆಯನ್ನು ಅವನು ಗಂಟುಹಾಕುತ್ತಿರಲಿಲ್ಲ. ಅದು ಅವನ ಕುತ್ತಿಗೆ ಬೆನ್ನುಗಳ ಮೇಲೆ ಸ್ವತಂತ್ರವಾಗಿ ಓಲಾಡುತ್ತಿತ್ತು. ಇನ್ನು ಅವನ ದಂತಪಂಜ್ತಿ! ಬೇರೆ ಬೇರೆ ಅಳತೆಯ ಅವುಗಳ ವರ್ಣ ಅವರ್ಣನೀಯ! ಘೋಷಾದಲ್ಲಿದ್ದ ಅವನ ದಾಡೆ ಹಲ್ಲುಗಳು ಹೇಗಿದ್ದವೋ ಯಾರೂ ಕಾಣರು. ಆದರೆ, ಲೋಕಕ್ಕೆ ಸದಾ ಪ್ರಕಟವಾಗಿರುತ್ತಿದ್ದ ಅವನ ಮುಂದಿನ ಹಲ್ಲುಗಳು ಒಂದೊಂದೂ ಒಂದೊಂದು ಬಾಚಿಯಂತೆ ಇದ್ದವು. ಅಷ್ಟೇ ಅಲ್ಲ; ಅಪರೂಪಕ್ಕೆ (ಉದಾಹರಣೆಗೆ, ಮಹಾರಾಜರ ವರ್ಧಂತಿಯ ದಿನ) ಡ್ರಿಲ್ಲಿಗೆ ನಿಂತ ನಮ್ಮ ಹಳ್ಳಿ ಪೋಲೀಸಿನವರ ಸಾಲಿನಂತೆ—ಒಂದು ಹಿಂದು, ಒಂದು ಮುಂದು; ಒಂದು ಉದ್ದ, ಒಂದು ಮೋಟು; ಇವುಗಳ ಹಿಂದೆ—ಯಾವಾಗಲೂ ತಲೆಬಾಗಿಲಲ್ಲೇ ನಿಂತು ಇಣುಕುತ್ತಿದ್ದ ನಾಲಗೆ. ಅದು ಸ್ವಲ್ಪ ಮಂದವಾಗಿತ್ತು. ಅವನ ಬಾಯಲ್ಲಿ ಜೊಲ್ಲು ಜಾಸ್ತಿಯಾಗಿ ಉತ್ಪತ್ತಿಯಾಗುತ್ತಿತ್ತೆಂದು ಕಾಣುತ್ತದೆ; ಪದೇ ಪದೇ—ಉಸಿರೆಳೆದು ಅದನ್ನು ಒಳಕ್ಕೆ ಸೇದಿಕೊಳ್ಳುತ್ತಿದ್ದ. ಆದರೂ ಒಂದೊಂದು ವೇಳೆ ಅದು ಹೆಚ್ಚಾಗಿ ಬಾಯ ಎರಡು ಮೂಲೆಗಳಲ್ಲೂ ಸೋರುತ್ತಿತ್ತು. ಆಗ ಅವನು ಅದನ್ನು ತನ್ನ ಅಂಗಿಯ ತೋಳುಗಳಿಂದ ಒರೆಸಿಕೊಳ್ಳುತ್ತಿದ್ದ. ಬಲಗಡೆ ಸೊಂಟದ ಬಳಿ ಏನೋ ಐಬು ಇದ್ದದ್ದರಿಂದ ಅವನ ನಡಗೆಯಲ್ಲಿ ಒಂದು ವಿಚಿತ್ರ ಚಲನೆಯಿತ್ತು. ಬಲಗಾಲು ಹಿಂದಾದಾಗ, ಅದನ್ನು ಚಕ್—ಎಂದು ಕಿತ್ತು—ಎತ್ತಿ, ಮುಂದೆ ಧೊಪ್—ಎಂದು ಇಡುತ್ತಿದ್ದ; ಎಡಗಾಲು ಹಿಂದಾದಾಗ, ಅದನ್ನು ಎತ್ತಿ—ಸ್ವಲ್ಪ ಪಕ್ಕಕ್ಕೆ ಚಾಚಿ ಮುಂದಕ್ಕೆ ತಂದು ಊರುತ್ತಿದ್ದ. ತಲೆ—ಗಡ್ಡದ ಕೂದಲುಗಳಂತೆಯೇ ಅವನ ಕೈಬೆರಳುಗಳ ಉಗುರುಗಳೂ ದೀಕ್ಷಾವ್ರತವನ್ನಾಚರಿಸುತ್ತಿದ್ದವು.

ಆ ಕಾಲಕ್ಕೆ ಕೆಂಪು ಉಲ್ಲನ್ ದಾರದಲ್ಲಿ ಹೆಣೆದ "ಹಾಸನದ ತೋಪಿ" ಎನ್ನುವ ಶಿರೋಭೂಷಣ ಬಹಳ ಪ್ರಚಾರದಲ್ಲಿತ್ತು. ಪಾಪಯ್ಯಶೆಟ್ಟಿಯ ತಲೆಯನ್ನು ಇಂತಹ ಒಂದು ತೋಪಿ ಯಾವಾಗಲೂ ಮುಚ್ಚಿರುತ್ತಿತ್ತು. ಆ ತೋಪಿಗೆ ಬಹುಶಃ ಅವನ ಅರ್ಧ ವಯಸ್ಸಾದರೂ ಆಗಿದ್ದಿರಬೇಕು: ಏಕೆಂದರೆ, ಅದರ ಜನ್ಮವರ್ಣ ಪೂರ್ತಿ ಮಾಯವಾಗಿ ಗಮಟು ಹಿಡಿದು, ಜೇಡಿಮಣ್ಣಿನ ಬಣ್ಣಕ್ಕೆ ತಿರುಗಿತ್ತು. ಅವನು ಷರಟು ಧರಿಸುತ್ತಿರಲಿಲ್ಲ. ದೊಡ್ಡ ಜೇಬುಗಳ ದೊಗಲೆ ಅಂಗಿ ಮಾತ್ರ ಹಾಕಿಕೊಳ್ಳುತ್ತಿದ್ದ. ಇದು ಹುಟ್ಟುತ್ತ ಕಾಕಿಬಣ್ಣದ್ದಾದರೂ ಕಾಲಕ್ರಮೇಣ ತೋಪಿ ಬಣ್ಣಕ್ಕೇ

"ಮತಾಂತರ" ಹೊಂದಿತ್ತು. ವೈರಾಗ್ಯ ವರ್ಣಕ್ಕೆ ತಿರುಗಿದ್ದ—ಅಳತೆ ಸಾಲದ ಒಂದು ಗೀರಂಚಿನ ಪಂಚೆಯನ್ನು ಪಂಚಗಚ್ಚೆ ಹಾಕಿ ಉಟ್ಟುಕೊಳ್ಳುತ್ತಿದ್ದ. ಒಟ್ಟಿನಲ್ಲಿ ಹೇಳುವುದಾದರೆ—"ನೈನಂಛಿಂದತಿ ಶಸ್ತ್ರಾಣಿ—ನೈನಂದಹತಿ ಪಾವಕ:" ಇತ್ಯಾದಿ ಶ್ಲೋಕವನ್ನು ಹೇಳಿ ವರ್ಣಿಸಿಕೊಳ್ಳುವ ಅಧಿಕಾರ ಇದ್ದದ್ದು ಶ್ರೀ ಕೃಷ್ಣ ಪರಮಾತ್ಮ ನಿಗೊಬ್ಬನಿಗೇ ಅಲ್ಲ—ನಮ್ಮ ಕೃಷ್ಣಾಂಗ ಪಾಪಯ್ಯಶೆಟ್ಟಿಯ—ತೋಪಿ—ಅಂಗಿ—ಪಂಚೆಗಳಿಗೂ ಧಾರಳವಾಗಿ ಇತ್ತು!

ಪಾಪಯ್ಯಶೆಟ್ಟಿ ಸಂಪ್ರದಾಯವಂತ. ವೈಶ್ಯರಲ್ಲಿ ಕೆಲವರು ಹಣೆಯಲ್ಲಿ ಗಂಧಾಕ್ಷತೆ ಇಟ್ಟುಕೊಳ್ಳುತ್ತಾರೆ. ಕೆಲವರು ಬಿಳಿ—ಕೆಂಪು ನಾಮ ಹಾಕಿಕೊಳ್ಳುತ್ತಾರೆ. ನಮ್ಮ ಮಿತ್ರ ನಾಮ ಹಾಕಿಕೊಳ್ಳುವ ಸಂಪ್ರದಾಯಕ್ಕೆ ಸೇರಿದವನಾಗಿದ್ದ. ಹಣೆಯ ಮೇಲೆ ನಾಮವಿಲ್ಲದ ಅವನ ಮುಖವನ್ನು ನಾವು ಎಂದೂ ಕಂಡಿದ್ದಿಲ್ಲ. ಒಂದೊಂದೂ ಎರಡು ಬೆರಳಗಲದ ಬಿಳೀನಾಮಗಳು ಎರಡು; ಅವುಗಳ ನಡುವೆ ಒಂದು ಬೆರಳಗಲದ ಕೆಂಪುನಾಮ! ಅವುಗಳನ್ನು ಯಾರು ಮರೆಯುಬಹುದು! ಮುಖ್ಯವಾಗಿ, ನಮ್ಮೂರ ತಾಯಂದಿರಿಗೆ, ಅವರ ಹಟಮಾರಿ ಮಕ್ಕಳ ಅಳುವನ್ನು ನಿಲ್ಲಿಸಲು ಬಹಳ ಸಹಾಯಕನಾಗಿದ್ದ—ಪಾಪಯ್ಯಶೆಟ್ಟಿ! ಏಕೆಂದರೆ, ಅವನ ಧ್ವನಿ ಭೇರಿಯಂತೆ ದೊಡ್ಡದಾಗಿ ಬಹು ದೂರಕ್ಕೆ ಕೇಳಿಸುತ್ತಿದ್ದರೂ, ನಾಲಗೆ ಮಂದವಾಗಿದ್ದದ್ದರಿಂದಲೂ—ಸಿಡುಬು ಎದ್ದಾಗ ಯಾವುದೋ ರೀತಿಯಲ್ಲಿ ಊನವಾಗಿದ್ದದ್ದರಿಂದಲೂ—ಅವನ ಬಾಯಲ್ಲಿ ಮಾತುಗಳು ಸ್ವಚ್ಛವಾಗಿ ಸರಾಗವಾಗಿ ಹೊರಡುತ್ತಿರಲಿಲ್ಲ. ಕೆಲವು ಅಕ್ಷರಗಳಿಗೂ ಅವನ ನಾಲಗೆಗೂ ಬದ್ಧವೈರವೇ ಇತ್ತು. ಪ್ರತಿ ಶಬ್ದದ ಮೊದಲನೇ ಅಕ್ಷರ ಈಚೆಗೆ ಬರುವುದಕ್ಕೆ ಬಹಳ "ತ-ತ-ತ-ತ ತಕರಾರು" ಮಾಡುತ್ತಿತ್ತು! ಹೀಗಾಗಿ ಪಾಪಯ್ಯಶೆಟ್ಟಿ—ಎಳೇ ಮಕ್ಕಳಿಗೆ ರೂಪ-ಧ್ವನಿ ಭಯಂಕರನಾಗಿದ್ದುದು ಆಶ್ಚರ್ಯವೇನಲ್ಲ.

ಪಾಪಯ್ಯಶೆಟ್ಟಿ ವ್ಯಾಪಾರಿ. ಅವನ ಅಂಗಡಿ, ಅವನ ಕೊರಳಿನಿಂದ ತೂಗಿಬಿದ್ದು ಹೊಟ್ಟೆಯ ನೇರಕ್ಕೆ ರಾರಾಜಿಸುತ್ತಿತ್ತು! ಒಂದು ಸೀಮೇಎಣ್ಣೆ ಡಬ್ಬ; ಅದಕ್ಕೆ ಟ್ರಂಕಿನಂತೆ ಕೀಲು ಮುಚ್ಚಳ. ಮುಚ್ಚಳದ ಚಿಲಕ ಅವನ ಹೊಟ್ಟೆಯ ಕಡೆಗೆ; ಚಿಲಕದ ಎದುರುಮುಖದ ತಗಡು ತೆಗೆಸಿ, ಅಲ್ಲಿಗೆ ಪೂರ್ತಿ ಗಾಜು ಹಾಕಿಸಿದ್ದ. ಡಬ್ಬದ ಎರಡು ಪಕ್ಕಗಳಲ್ಲೂ ಕೊಂಡಿಗಳನ್ನು ಬೆಸಿಗೆಹಾಕಿಸಿ, ಅವುಗಳಿಗೆ ಉದ್ದವಾದ ಚರ್ಮದ ಪಟ್ಟಿಕಟ್ಟಿ, ಪಟ್ಟಿಯಿಂದ ಅಂಗಡಿಯನ್ನು ಕೊರಳಿಗೆ ತೂಗಿಹಾಕಿಕೊಳ್ಳುತ್ತಿದ್ದ. ಡಬ್ಬದ ಒಳಗಡೆ ನಾಲ್ಕೋ ಆರೋ ಖಾನೆಗಳು. ಇವುಗಳಲ್ಲಿ ಬೆಲ್ಲದ ಪಾಕಹಾಕಿ ಕಟ್ಟಿದ ಅವಲಕ್ಕಿ ಪುರಿ ಉಂಡೆ—ಕಡಲೇಕಾಯಿ ಉಂಡೆ—ಹುರಿಗಡಲೆ ಉಂಡೆ—ಪುರಿ ಉಂಡೆ—ಕೊಬ್ರಿ ಬರ್ಫಿ ಇತ್ಯಾದಿ. ಕೈಯಲ್ಲಿ, ಹಿಡಿದುಕೊಳ್ಳುವ—ಮುಚ್ಚಳವಿರುವ—ಸಣ್ಣ

ಬಿದುರಿನ ಬುಟ್ಟಿ. ಅದರಲ್ಲಿ ಬೆಣ್ಣೆ ಬಿಸ್ಕತ್ತು. ಇವೆಲ್ಲ ಅವನ ಗೃಹಕೈಗಾರಿಕಾ ವಸ್ತುಗಳೇ ಆಗಿದ್ದವು. ಇವಲ್ಲದೆ—ಅವನ ದೊಗಲೆ ಅಂಗಿಯ ಎರಡು ಜೇಬುಗಳಲ್ಲೂ ಅಗಲವಾದ ಬಾಯಿನ—ತಿರುಪು ಮುಚ್ಚಳದ—ಗಾಜಿನ ಸೀಸಗಳು ಇರುತ್ತಿದ್ದವು. ಇವುಗಳ ತುಂಬ—ಆಗ ವಿಶೇಷವಾಗಿ ಚಾಲ್ತಿಯಲ್ಲಿದ್ದ ಕಿತ್ಲೇತೊಳೆ ಪೆಪ್ಪರುಮೆಂಟುಗಳು. ಇವುಗಳನ್ನು ಒಟ್ಟಾಗಿ ಕೊಂಡುತಂದು ಚಿಲ್ಲರೆಯಾಗಿ ಮಾರುತ್ತಿದ್ದ.

ಬೆಳಿಗ್ಗೆ ಎಂಟುಗಂಟೆಗೆ ಪ್ರಾರಂಭವಾಗುತ್ತಿದ್ದ ಪಾಪಯ್ಯಶೆಟ್ಟಿಯ ವ್ಯಾಪಾರ ರಾತ್ರಿ ಎಂಟುಗಂಟೆಯ ವರೆಗೂ—ಅಂದರೆ ಮಧ್ಯಾಹ್ನ ಊಟಕ್ಕೆ ಒಂದು ಗಂಟೆ ಹೊರತಾಗಿ—ಅವಿಚ್ಛಿನ್ನವಾಗಿ ಸಾಗುತ್ತಿತ್ತು. ಆಗ್ಗೆ ನಮ್ಮ ಊರಿನ ಹತ್ತು ಹನ್ನೆರಡು ಸಾವಿರ ಸ್ತ್ರೀಪುರುಷ-ಆಬಾಲವೃದ್ಧರಿಗೂ ಬಹು ಪರಿಚಿತನಾದ ವ್ಯಕ್ತಿ ಎಂದರೆ "ಓಡಾಡೋ ಅಂಗಡಿಯ" ನಮ್ಮ ಪಾಪಯ್ಯಶೆಟ್ಟಿ! ಏಕೆಂದರೆ, ನಮ್ಮೂರಿನ ದೊಡ್ಡಬೀದಿ, ಅಡ್ಡಬೀದಿ, ಓಣಿ, ಗಲ್ಲಿ ಎಲ್ಲವನ್ನೂ ನಿಷ್ಪಕ್ಷಪಾತವಾಗಿ ಸುತ್ತುತ್ತಿದ್ದ. ರಸ್ತೆಯನ್ನು ಸವೆಸುವ ಗಾಡಿ—ಮೋಟಾರು—ಬಸ್ಸು—ಲಾರಿ—ಬೈಸಿಕಲ್ಲು ಇತ್ಯಾದಿ ವಾಹನಗಳಿಗೆ ಮುನಿಸಿಪಾಲಟಿಯವರು ತೆರಿಗೆ ವಿಧಿಸುತ್ತಿದ್ದಂತೆ ಇವನಿಗೂ ವಿಧಿಸಿದ್ದಿದ್ದರೆ, ಬಹುಶಃ ಇವನ ಸಂಪಾದನೆಯೆಲ್ಲ ತೆರಿಗೆಗೇ ಆಗುತ್ತಿತ್ತೋ ಏನೋ! ಆದರೆ ಆ ಕಾಲ, ಧರ್ಮಯುಗಕ್ಕೆ, ಈಗಿಗಿಂತ ನಲವತ್ತು ವರ್ಷಗಳು ಹತ್ತಿರವಾಗಿದ್ದ ಹೊಂಗಾಲ! ಆದಕಾರಣ ಅವನು, ಅಂಗಡಿ ಲೈಸೆನ್ಸು—ಮಾರಾಟದ ತೆರಿಗೆ—ಆರೋಗ್ಯ ಇಲಾಖೆ ಸಿಬ್ಬಂದಿಯ ಕಿರುಕುಳ—ಪೋಲೀಸರ "ಕೈತುತ್ತು"—ಈ ಉಪದ್ರವಗಳಿಂದ ನಿರ್ಬಾಧಿತನಾಗಿ, ತನ್ನ ವ್ಯಾಪಾರವ್ರತವನ್ನು ನಿಷ್ಠೆಯಿಂದ ನಡಿಸಿಕೊಂಡು ಹೋಗುತ್ತಿದ್ದ.

ಪಾಪಯ್ಯಶೆಟ್ಟಿಯ ವ್ಯಾಪಾರ ಹೆಚ್ಚಾಗಿ ನಡೆಯುತ್ತಿದ್ದದ್ದು ನಮ್ಮೂರ ಬಾಲಕರ ಪಾಠಶಾಲೆಗಳ ಬಳಿ. ಅದರಲ್ಲೂ ಅವನು ನಮ್ಮ ಶಾಲೆಯ ಬಳಿ ದಿನಕ್ಕೆ ಮೂರುಸಲ ಹಾಜರಿ ಹಾಕುವುದನ್ನು ಎಂದಿಗೂ ತಪ್ಪಿಸುತ್ತಿರಲಿಲ್ಲ. ಇದಕ್ಕೆ ಕಾರಣವಿತ್ತು. ಆ ಕಾಲದಲ್ಲಿ ನಮ್ಮೂರಿನ ಬೇರೆಬೇರೇ ಭಾಗಗಳಲ್ಲಿ ಮೂರು ನಾಲ್ಕು ಪ್ರಾಥಮಿಕಶಾಲೆಗಳೂ—ಒಂದು ಕ್ರಿಸ್ತ—ಮಿಶನ್ನಿನವರ ಮಧ್ಯಮಶಾಲೆಯೂ—ಜೊತೆಗೆ ನಮ್ಮ ಶಾಲೆಯೂ ಇತ್ತು. ಆದರೆ ಇವುಗಳಲ್ಲೆಲ್ಲ ನಮ್ಮ ಶಾಲೆಯೇ ದೊಡ್ಡದು. ನಮ್ಮ ಶಾಲೆಯಲ್ಲಿ ಪ್ರಾಥಮಿಕ—ಮಾಧ್ಯಮಿಕ ತರಗತಿಗಳು ಕೂಡಿ ಇರುತ್ತ—ಎರಡು ಭಾಗಗಳಿಗೂ ಒಬ್ಬರೇ ಹೆಡ್ಮಾಸ್ಟರಿರುತ್ತಿದ್ದರು. ಇದಲ್ಲದೆ—ಇಲ್ಲಿ ಡಿಸ್ಟ್ರಿಕ್ಟ್ ನಾರ್ಮಲ್ ಸ್ಕೂಲು ಸಹ ನಡೆಯುತ್ತಿತ್ತು. ನಮ್ಮ ಶಾಲೆಯ ಸಮೀಪದಲ್ಲೇ—ಒಂದು ಹಳೇ ಬಾಡಿಗೆ ಕಟ್ಟಡದಲ್ಲಿ ಉರ್ದು ಪ್ರಾಥಮಿಕಶಾಲೆಯೂ

ನಡೆಯುತ್ತಿತ್ತು. ಆದ್ದರಿಂದ ಉಳಿದ ಶಾಲೆಗಳಿಗಿಂತ ನಮ್ಮ ಶಾಲೆಯ ಬಳಿ ಅವನಿಗೆ ಗಿರಾಕಿಗಳು ವಿಶೇಷವಾಗಿ ಇರುತ್ತಿದ್ದರು.

ಪಾಪಯ್ಯಶೆಟ್ಟಿ ನಮ್ಮೂರಿನ ಶಿಶುಭಯಂಕರನಾಗಿದ್ದರೂ ನಮ್ಮೂರಿನ ಶಾಲಾ ಬಾಲಕರ ಕಣ್ಣಿಗೆ ಒಂದು ರೀತಿಯ "ನಕಲಿಶ್ಯಾಮ"ನಾಗಿದ್ದ. ಆದರೆ ಕಥೆಯ "ನಕಲಿಶ್ಯಾಮ"ನಂತೆ ಇವನು ಸ್ವಯಂ ಹಾಸ್ಯಪ್ರಿಯನಾಗಲಿ—ಕುಚೋದ್ಯಗಾರನಾಗಲಿ ಆಗಿರಲಿಲ್ಲ. ಆದರೂ—ಇವನ ರೂಪ—ವೇಷಭೂಷಣ—ಗಮನ, ಹುಡುಗರ ಕುಚೋದ್ಯಕ್ಕೂ—ಹಾಸ್ಯಕ್ಕೂ—ಅನುಕರಣೆಗೂ ಗುರಿಯಾದ ವಿಷಯಗಳಾಗಿದ್ದವು. ಇವೆಲ್ಲಕ್ಕೂ ಹೆಚ್ಚಾಗಿ ಹುಡುಗರನ್ನು ನಗಿಸುತ್ತಿದ್ದುದು, ಅವನ ವ್ಯಾಪಾರ ಘೋಷಣೆ! ಮೊದಲೇ ತಿಳಿಸಿರುವ ಕಾರಣದಿಂದ, ಅವನ ಮಾರಾಟದ ಸಾಮಾನುಗಳ ಹೆಸರುಗಳೆಲ್ಲ ವ್ಯಾಕರಣ ಪಲ್ಲಟವೋ ತದ್ಭವವೋ ಅಪಭ್ರಂಶವೋ—"ಖರಾಬೋ" ಆಗಿಬಿಡುತ್ತಿದ್ದವು. ಉದಾಹರಣೆಗೆ—ಅವಲಕ್ಕಿ ಪುರಿ ಉಂಡೆ—"ಅಬಡಕ್ಕಿ ಬುಡಿ ಹೊಂಡೆ" ಆಗುತ್ತಿತ್ತು. "ಗಡಡೇಗಾಯಿ" ಕಡಲೇಕಾಯಿನ ತದ್ಭವ; "ಹೊಡಿ ಗಡಡೆ" "ಬುಡಿ" "ಗೊಬ್ಬಡಿ" ಇವು ಕ್ರಮವಾಗಿ ಹುರಿಗಡಲೆ—ಪುರಿ—ಕೊಬ್ಬರಿ—ಇವುಗಳ ಅಪಭ್ರಂಶ; "ಡಿಬ್ಬಡ್ಲು" ನಿಪ್ಪಟ್ಲಿನ "ಖರಾಬು" ರೂಪ; ಅವನು ಎಷ್ಟು ತಿಣಿಕಿದರೂ "ಗಿಡ್ಲೆಡೊಳೆಬೆಬ್ಬಡ್‌ಬೆಂಡು" "ಬೆಡ್ಡೆ ಬಿದ್ದದ್ದು" ಕಿತ್ಲೆತೊಳೆ ಪೆಪ್ಪರ್‌ಮೆಂಟು—ಬೆಣ್ಣೆಬಿಸ್ಕತ್ತು—ಆಗುತ್ತಿರಲಿಲ್ಲ. ಜೊತೆಗೆ, ಪ್ರತಿಶಬ್ದದ ಪ್ರಥಮಾಕ್ಷರವೂ, ಟಾಂಗಾಕ್ಕೆ ಹೂಡಿದ ಹೊಸ ಕುದುರೆಯಂತೆ, ವೈಯ್ಯುಕ್ತಿಕ ಅಸಹಕಾರ ಹೂಡಿದರೆ, ಆಗುವ ಫಲಿತಾಂಶವನ್ನು ನೀವೇ ಊಹಿಸಿಕೊಳ್ಳಿ!

ಆಹಾ! ಈ ಮಾತು ಬರೆಯುವಾಗ ಪಾಪಯ್ಯಶೆಟ್ಟಿ ನನ್ನ ಚಿತ್ತಭಿತ್ತಿಯ ಮೇಲೆ ಬಹು ಸ್ಫುಟವಾಗಿ ಆವಿರ್ಭವಿಸಿದ್ದಾನೆ! ಮಾರುವ ಸಾಮಾನುಗಳ ಹೆಸರುಗಳಲ್ಲಿ ಒಂದನ್ನೂ ಬಿಡದೆ—ಒಂದು ಸಲವೂ ಕ್ರಮತಪ್ಪದೆ—ವಿಚಿತ್ರವಾದ ಗುರುಲಘುಗಳಿಂದಲೂ, ವಿಲಕ್ಷಣವಾದ ಆರೋಹಣ—ಅವರೋಹಣಗಳಿಂದಲೂ, ಅಪೂರ್ವವಾದ ಯತಿ—ಗತಿಗಳಿಂದಲೂ ಕೂಡಿ, ರಾಗರಾಗವಾಗಿ ಕೂಗುತ್ತಿರುವ ಅವನ ವ್ಯಾಪಾರ ಘೋಷಣೆ ನನ್ನ ಕಿವಿಗಳಲ್ಲಿ ಅನುರಣಿತವಾಗುತ್ತಿದೆ! ಹಾಗೆ ಕೂಗುವಾಗ ಅಗತ್ಯವಾದ ಅವನ ಮುಖ ಭಂಗಿ—ಮೀಸೆ ಕುಣಿತ—ದಂತಪ್ರದರ್ಶನ—ನಾಲಗೆ ಒದ್ದಾಟ—ಇವು ಕಣ್ಣಿಗೆ ಕಟ್ಟುತ್ತಿವೆ! . . . ಈಗಿನ ನವ್ಯಕವಿತೆ ಎಂಬ ಸಾಹಿತ್ಯ ರೂಪರತ್ನದ ಅಪ್ಪನೋ—ಅಜ್ಜನೋ ಎಂಬಂತಿದ್ದ ಅವನ ಘೋಷಣೆಯಲ್ಲಿ "ಗಿಡ್ಲೆಡೊಡೆಬೆಬ್ಬಡ್‌ಬೆಂಡು—ಬೆಡ್ಡೆ ಬಿದ್ದದ್ದೋ!" (ಅಂದರೆ, ಅವನ ಜೇಬಿನ ಮತ್ತು ಬುಟ್ಟಿಯ ಸರಕುಗಳು) ಇವೆರಡೂ ಸೇರಿ ಕೊನೆಯ ಸಾಲು. ಈ ಸಾಲನ್ನು

ಉಚ್ಚರಿಸುವಾಗ ಅವನ ಮುಖ ಸ್ವರ್ಗಾಭಿಮುಖವಾಗುತ್ತಿತ್ತು—ಕೆಳದವಡೆ ಎಡ ಕ್ಕೊಮ್ಮೆ—ಬಲಕ್ಕೊಮ್ಮೆ ಹೊರಳಾಡುತ್ತಿತ್ತು—ಹೂಗಣ್ಣೂ ಅದರ ಸಹಪಾಠಿಯೂ ಎಳೇ ಮೊಗ್ಗಿನಂತೆ ಮುಚ್ಚಿಯೇ ಹೋಗುತ್ತಿದ್ದವು! ಎತ್ತಿದ ತಲೆಯನ್ನು ಸರ್ರನೆ ಇಳಿಸಿ, "ಭಿದ್ಧದ್ದೊ—ೀ" ಎಂದು ಕೊನೆಯ ಮಾತನ್ನು ಝಾಡಿಸಿ ಒದ್ದು ಹೊರಹಾಕುವ ವೇಳೆಗೆ ಅವನ ಶ್ವಾಸಕೋಶಗಳೆರಡೂ ಶೂನ್ಯವಾಗಿಬಿಡುತ್ತಿದ್ದವು. ಅವನಿಗೆ ನಡಗೆಯೇ ಒಂದು ಸಾಹಸ; ವ್ಯಾಪಾರ ಘೋಷಣೆ ಅದಕ್ಕೂ ಹೆಚ್ಚಿನ ಸಾಹಸ! ತಕ್ಕ ಮಟ್ಟಿಗೆ ಭಾರವಾಗಿದ್ದ ಅಂಗಡಿಯನ್ನು ಹೊತ್ತು, ಒಂದು ಕಾಲನ್ನು ಎತ್ತಿ, ಇನ್ನೊಂದು ಕಾಲನ್ನು ಸುತ್ತಿ ಹೆಜ್ಜೆ ಹಾಕುತ್ತ, ತನ್ನ ವ್ಯಾಪಾರ ಘೋಷಣಾ ಕವಿತೆಯ ವಾಚನವನ್ನೂ ಮಾಡುವುದೆಂದರೆ ಅವನಿಗೆ ಅಸಾಧ್ಯದ ಮಾತಾಗಿತ್ತು. ಆದ್ದರಿಂದ ಅವನು ನಡೆಯುವಾಗ ಕೂಗುತ್ತಿರಲಿಲ್ಲ; ಕೂಗುವಾಗ ನಡೆಯುತ್ತಿರಲಿಲ್ಲ. ಹತ್ತೋ ಹನ್ನೆರಡೋ ಹೆಜ್ಜೆ ನಡೆಯುವನು; ನಿಲ್ಲುವನು; ತನ್ನ ಸರಕಿನ ನಾಮಾವಳಿಯನ್ನು ಒಮ್ಮೆ ಲೋಕಕ್ಕೆ ಸಾರುವನು; ಅರೆನಿಮಿಷ "ಸುದರಾಯಿಸಿ"ಕೊಂಡು, ಅಂಗಿಯ ತೋಳಿನಿಂದ ಒಮ್ಮೆ ಬಾಯಿ ಒರೆಸಿಕೊಂಡು, ಪುನಃ ಹೆಜ್ಜೆ ಹಾಕುವನು.

ತನ್ನ ರೂಪ—ಉಡಿಗೆ ತೊಡಿಗೆ—ನಡಿಗೆ—ವ್ಯಾಪಾರ ಘೋಷಣೆ ಇವೆಲ್ಲ ಹುಡುಗರ ಆಮೋದಕ್ಕೆ ಕಾರಣವೆಂದು ಶೆಟ್ಟಿಗೆ ತಿಳಿಯದೆ ಇರಲಿಲ್ಲ. ಆದರೆ ಅವನು ಏನು ಮಾಡಿಯಾನು? ಇವುಗಳಲ್ಲಿ ರೂಪ—ನಡೆ—ನುಡಿ ಇವು ತಿದ್ದುಪಡಿಗೆ ಒಳಗಾಗತಕ್ಕವಾಗಿರಲಿಲ್ಲ. ಇನ್ನು ವೇಷಭೂಷಣ. ನಾಮ, ಸಂಪ್ರದಾಯಕ್ಕೆ ಸಂಬಂಧಪಟ್ಟಿತ್ತು. ಉಳಿದದ್ದು ತೋಪಿ—ಅಂಗಿ—ಪಂಚೆ—ಇಷ್ಟೇ ತಾನೆ? ಜರತಾರಿ ತೋಪಿಹಾಕಿ, ಮಕಮಲ್ಲು ಅಂಗಿ ತೊಟ್ಟು, ಪಟ್ಟೆ ಪೀತಾಂಬರ ಉಟ್ಟರೆ ತಾನೆ ಅವನ ಮೂಲ ವ್ಯಕ್ತಿತ್ವ ಬೇರೆಯಾದೀತೇನು? ಆದ್ದರಿಂದ—ಅವನು ತನ್ನ ಪಾಲಿಗೆ ಬಂದದ್ದನ್ನು ಪ್ರತಿಭಟನೆಯಿಲ್ಲದೆ ಒಪ್ಪಿಕೊಂಡು—ಒಂದು ತೆರನ ನಿರ್ಲಿಪ್ತತೆಯಿಂದ ತನ್ನ ವ್ಯಾಪಾರವನ್ನು ನಡೆಸುತ್ತಿದ್ದ.

ಶಾಲೆಯ ಹುಡುಗರಿಗೆಲ್ಲ ಅವನು "ಪಾಪರ್‌ಚೆಟ್ಟಿ". ಕೆಲವು ಹುಡುಗರಂತೂ ಪಾಠದ ಪದ್ಯಕ್ಕಿಂತ ಚೆನ್ನಾಗಿ ಅವನ ಕೂಗಿನ ಮಾತುಗಳನ್ನು ಪದಶಃ—ಕ್ರಮಶಃ ರಾಗಶಃ ಕಂಠಪಾಠ ಮಾಡಿಕೊಂಡು, ಅವನಂತೆಯೇ ನಡೆಯುವುದನ್ನೂ ಅಭ್ಯಾಸ ಮಾಡಿದ್ದರು. ಪಾಪಯ್ಯಶೆಟ್ಟಿ ಪ್ರತ್ಯಕ್ಷವಾಗುವುದೇ ತಡ, ಅವನ ಪಕ್ಕದಲ್ಲೋ ಹಿಂದುಗಡೆಯೋ ಅವನನ್ನು ಅನುಕರಿಸುತ್ತಿದ್ದರು. ಒಂದೊಂದು ವೇಳೆ ಹುಡುಗರೆಲ್ಲ ಅವನಸುತ್ತ ಗುಂಪುಕಟ್ಟಿ ನಿಂತು, ಅವರಲ್ಲಿ ಒಬ್ಬ "ಲೋ ಪಾಪರ್‌ಚೆಟ್ಟಿ, 'ರಾಮಲಿಂಗರೆಡ್ಡಿ' ಅನ್ನೋ ನೋಡೋಣ" ಎಂದು ಕಾಡುತ್ತಿದ್ದ. ಅವನು ದೈನ್ಯದಿಂದ

" ಯು-ಯು-ಯು-ಯಾ—ಗ್ರೋ ಬಿ-ಬಿ-ಬಿ-ಭೀಡಿಸ್ತೀಡೀ ? " (ಅಂದರೆ, ಯಾಕರೋ ಪೀಡಿಸ್ತೀರೀ) ಎಂದು ಉದ್ಗಾರ ತೆಗೆಯುತ್ತಿದ್ದ. " ಒ-ಒ-ಒಂದ್ಸಲ ಅ-ಅ-ಅನ್ನು ಬಿ-ಬಿ-ಬಿ-ಬಿಡ್ತೀವಿ " ಎಂದು ಬಲಾತ್ಕಾರ ಮಾಡುತ್ತಿದ್ದ—ತುಂಟರ ಸಲಗ. ಆಗ ಅವನ ತೆರೆದ ಬಾಯಿ, ಎರಡು ಕಿವಿಗಳನ್ನೂ ಏಕಮಾಡುವುದೇನೋ ಅನ್ನುವಂತೆ ಇನ್ನೂ ಅಗಲವಾಗಿ ತೆರೆಯುತ್ತಿತ್ತು. ಕೂಡಲೆ ಇನ್ನು ಎಂಟು ಹಲ್ಲುಗಳು ಘೋಷಾ ವನ್ನು ಬಿಟ್ಟು ಪ್ರಕಟವಾಗುತ್ತಿದ್ದವು. ಕೆನ್ನೆ ಮೇಲಿನ ಮಾಂಸಖಂಡಗಳು ಮುದುರಿ ಕಣ್ಣುಗಳನ್ನು ಮುಚ್ಚಿಬಿಡುತ್ತಿದ್ದವು. ಒಂದುಸಲ ಈ ಸಾಹಸಕಾರ್ಯಕ್ಕೆ ಬೇಕಾದಷ್ಟು ದಂ—ಎಳೆದುಕೊಂಡು, ಮುಖವನ್ನು ಹುಂಜದಂತೆ ಮೇಲಕ್ಕೆತ್ತಿ " ಡ-ಡ-ಡ-ಡ-ಢಾಭ ಢಿಂಘ ಡೆ-ಡೆ-ಡೆ-ಢೆಡ್ಡಿ—ೀ ! " ಎಂದು, ಕೊನೇ ಅಕ್ಷರಕ್ಕೆ ಸರಿಯಾಗಿ ಮುಖವನ್ನು ಚಕ್ಕನೆ ಕೆಳಗೆಮಾಡುತ್ತಿದ್ದ. ಆಗ ಹುಡುಗರೆಲ್ಲ ಅವನ ಉಚ್ಚಾರಣೆಯನ್ನು ಅನುಕರಿಸಿ ಕೇಕೆ ಹಾಕುತ್ತಿದ್ದರು. ಇದರಲ್ಲಿ ಆಶ್ಚರ್ಯವೇನೆಂದರೆ, ಅವರ ನಗುವಿನಲ್ಲಿ ಅವನೂ ಭಾಗಿಯಾಗಿಬಿಡುತ್ತಿದ್ದ ! ಶಾಲೆ ಹುಡುಗರಷ್ಟೇ ಅಲ್ಲ—ಚೆನ್ನಾಗಿ ವಯಸ್ಸಾದ ಧಾಂಡಿಗರಿಗೂ ಇವನನ್ನು ಕಂಡರೆ ಲೇವಡಿ. ಇವನು ಪೇಟೆಯಲ್ಲಿ ಹೋಗುತ್ತಿದ್ದರೆ ಉದ್ದಕ್ಕೂ ಅಂತಹ ಜನ ಕೀಟಲೆ ಮಾಡುವುದಕ್ಕೋಸ್ಕರ " ಲೋ ನಿನ್ನ ಹೆಸ ರೇನೋ ? " ಎಂದು ಕೇಳುತ್ತಿದ್ದರು—ಇವನು ಬೇಸರಗೊಳ್ಳದೆ ಪ್ರತಿಸಲವೂ " ಬ-ಬ-ಬ-ಬಾ ಬಯ್ಯಜೆಡ್ಡಿ " ಎಂದು ಉತ್ತರ ಕೊಡುತ್ತಿದ್ದ. ಇನ್ನು ಕೆಲವರು " ಕಾಮಣ್ಣಾ, ಒಂದು ಹೆಣ್ಣೈತೆ ಮದ್ವೇಮಾಡ್ಕೊಳ್ತೀಯೇನೋ ? " ಎಂದು ಕೇಳುವರು. ಇದಕ್ಕೆ ಕಾರಣ ಅವನು " ಓಹೋ ! " ಎನ್ನುವ ವೈಖರಿಯನ್ನು ನೋಡಿ ನಗುವ ಅಗ್ಗದ ಆಸೆ. ಅವನು ಒಂದು ಪಕ್ಕಕ್ಕೆ ತಲೆ ಓರೆಮಾಡಿ—ಹೂಗಣ್ಣಿನ ಹುಬ್ಬೆತ್ತಿ—ಎಡಗಣ್ಣನ್ನು ಮುಚ್ಚಿಕೊಂಡು—ಕೆಳದವಡೆಯನ್ನು ಇನ್ನೊಂದುಪಕ್ಕಕ್ಕೆ ಒತ್ತರಿಸಿ, " ವ್ಹೋ ! ವ್ಹೋ " ಅನ್ನುವ ವರಿಸೆಯಲ್ಲಿ, ಒಂದಲ್ಲ ಹತ್ತು ಹೆಣ್ಣುಗಳನ್ನು ಏಕಕಾಲ ದಲ್ಲಿ ಮದುವೆಯಾಗುವ ಎದೆಗಾರಿಕೆ ಇರುತ್ತಿತ್ತು !!

ಇದು ಇಂದಿಗೂ ನನ್ನ ನೆನಪಿನ ಮಿತ್ರನಾಗಿರುವ ನಮ್ಮ ಪಾಪಯ್ಯಶೆಟ್ಟಿಯ ಸ್ಥೂಲ ವ್ಯಕ್ತಿಚಿತ್ರ : ಲೋಕಕ್ಕೆ ಎದ್ದುಕಾಣುತ್ತಿದ್ದ—ತುಂಟ ಹುಡುಗರ ಲೇವಡಿ—ಅಣಕುಗಳಿಗೂ, ಎಳೇಮಕ್ಕಳ ಭೀತಿಗೂ, ವಯಸ್ಕರ ಪರಿಪರಿಯ ಪರಿಹಾಸ್ಯಗಳಿಗೂ ಗುರಿಯಾಗಿದ್ದ—ಅವನ ಬಾಹ್ಯರೂಪ. ಆದರೆ ಅವನಿಗೆ ಇನ್ನೊಂದು ರೂಪವಿತ್ತು ; ಅದು ಸಹಾನುಭೂತಿಯಿಂದ ಸ್ವಲ್ಪ ಪ್ರಯತ್ನಪಟ್ಟ ಹೊರತು ಯಾರಿಗೂ ಗೋಚರಿಸದೆ ಇರುತ್ತಿದ್ದ—ಅವನ ಸೂಕ್ಷ್ಮ ಮಾನಸಿಕ ವ್ಯಕ್ತಿತ್ವ.

ದೈವವೋ—ವಿಧಿಯೋ ಪಾಪಯ್ಯಶೆಟ್ಟಿಯ ಅನ್ನಮಯ ಶರೀರವನ್ನು ಎಷ್ಟು

ಹದಗೆಡಿಸಿ ವಿರೂಪಗೊಳಿಸಿತ್ತೋ—ಅಷ್ಟೇ ಸುಂದರತಮವಾಗಿ ರಚಿಸಿತ್ತು, ಅವನ ಮನೋಮಯ ಶರೀರವನ್ನು. ಕೊಳಕಾದ ಹರಕುಚಿಂದಿಯಲ್ಲಿ ಸುತ್ತಿಟ್ಟ "ಕೋಹಿನೂರ್" ವಜ್ರದಂತಿತ್ತು ಅವನ ಅಂತರಂಗ ವ್ಯಕ್ತಿತ್ವ. "ಕತ್ತುರಿ ಕಪ್ಪಾದೊಡೇಂ ಕಂಪಿಗೆ ಕೊರತೆಯೇ?—ಕಬ್ಬು ಡೊಂಕಾದೊಡೇಂ ರಸದ ಸಿಹಿ ಡೊಂಕೇ?" ಎಂದು ಕೇಳಿದಂತೆ, ಪಾಪಯ್ಯಶೆಟ್ಟಿಯ ವಿಚಾರದಲ್ಲೂ "ರೂಪವಕ್ರನಾದೊಡೇಂ—ಗುಣವಕ್ರನೇ?" ಎಂದು ಕೇಳಬಹುದಾಗಿತ್ತು.

ನಿಜವಾಗಿಯೂ, ಪಾಪಯ್ಯಶೆಟ್ಟಿಯದು ಅದೆಷ್ಟು ಅಪಾರವಾದ—ಅಕ್ಷಯವಾದ ತಾಳ್ಮೆ!—ಅದೆಂತಹ ಸಹನೆ! ಯಾರ ಎಂತಹ ಕಟು ಟೀಕೆಗಳಿಗೂ—ಹಾಸ್ಯ, ಲೇವಡಿ ಅಣಕುಗಳಿಗೂ ಅವನು ತಾಳ್ಮೆ ತಪ್ಪಿ ರೇಗಿದುದನ್ನು ಕಂಡವರು ಯಾರೂ ಇರಲಿಲ್ಲ. ಅವನ ಗಿರಾಕಿಗಳೆಲ್ಲ ಶಾಲಾ ಬಾಲಕರೇ ಆಗಿದ್ದುದರಿಂದ—ಅವರ ಕಾಟವೇ ಅವನಿಗೆ ವಿಶೇಷವಾಗಿ ಇರುತ್ತಿದ್ದದ್ದು. ಆದರೂ ಅವರ ವಿಷಯದಲ್ಲಿ ಅವನು, ಧರಿತ್ರೀ ಸಮನಾದ ಸಹನೆಯನ್ನೂ ಕ್ಷಮೆಯನ್ನೂ ತೋರುತ್ತಿದ್ದ. ಹುಡುಗರೇ ಹಾಗೆ!—ತಾನು ರೇಗಿದರೆ, ಕೋತಿಗೆ ಹೆಂಡಕುಡಿಸಿದ ಹಾಗಾಗಿ—ಅವರು ತಮ್ಮ ತುಂಟತನವನ್ನು ಇನ್ನೂ ಹೆಚ್ಚಿಸುತ್ತಾರೆ; ಅದರ ಬದಲು ಅವರೊಡನೆ ತಾನೂ ನಕ್ಕರೆ, ಅವರು ತೃಪ್ತರಾಗಿ ಸುಮ್ಮನಾಗುತ್ತಾರೆ—ಎಂದು ಅವನ ಭಾವನೆ. ಮುಖ್ಯವಾಗಿ ಅವರಿಗೆ ಅವನನ್ನು ಕುರಿತು ಸ್ವಲ್ಪ ಹಾಸ್ಯ—ಚೇಷ್ಟೆ ಬೇಕು; ಅವನಿಗೆ ಅವರಿಂದ ವ್ಯಾಪಾರ ಆಗಬೇಕು; ಅವರ ವ್ಯಾಪಾರದಿಂದ ತಾನೆ ಅವನ ಅನ್ನ? ಅನ್ನದಾತರ ಮೇಲೆ ರೇಗಿದರೆ ದೇವರು ಒಪ್ಪಿಯಾನೆ? ಎಂದು ಅವನ ತರ್ಕ. ಗಿರಾಕಿಗಳ ಮೇಲೆ ಸಿಡುಕಿಬಿದ್ದು ವ್ಯಾಪಾರ ಕೆಡಿಸಿಕೊಳ್ಳುವಂತಹ ತಿಳಿಗೇಡಿಯಾಗಿರಲಿಲ್ಲ—ಪಾಪಯ್ಯಶೆಟ್ಟಿ. ಒಂದು ರೀತಿಯಲ್ಲಿ, ಅವನ ಅಂಗವಿಕಲತೆ—ಕುರೂಪ—ತೊದಲು—ಇತ್ಯಾದಿಗಳು, ಅವನ ವ್ಯಾಪಾರಕ್ಕೆ ಬಹುಮಟ್ಟಿಗೆ ಸಹಾಯಕವಾಗಿದ್ದವು. ನಮ್ಮೂರಿನಲ್ಲಿ, ಹುಡುಗರು ಮಕ್ಕಳ ಮನಸ್ಸನ್ನು ಸೆಳೆಯುವ ಸಾಮಗ್ರಿಗಳನ್ನು ಹೊತ್ತು ಬೀದಿಮಾರಾಟದಲ್ಲಿ ತೊಡಗಿದ್ದ ಇನ್ನೂ ಎಷ್ಟೋ ಮಂದಿ ಇದ್ದರು. ಆದರೆ ನಮ್ಮ ಪಾಪಯ್ಯಶೆಟ್ಟಿ ಬಳಿ ಹುಡುಗರು ಮುತ್ತುತ್ತಿದ್ದ ಹಾಗೆ ಇನ್ಯಾವ ವ್ಯಾಪಾರಿಯ ಬಳಿಯೂ ಮುತ್ತುತ್ತಿರಲಿಲ್ಲ. ಈ ಗುಟ್ಟನ್ನು ಚೆನ್ನಾಗಿ ಅರಿತಿದ್ದ ಪಾಪಯ್ಯ, ಅವರ ಮನರಂಜನೆಗಾಗಿ, ತನ್ನ ದೈಹಿಕ ಕುಂದುಕೊರತೆಗಳನ್ನು ಇನ್ನೂ ಚೆನ್ನಾಗಿ ಪ್ರದರ್ಶಿಸುತ್ತಿದ್ದ! ಒಟ್ಟಿನಲ್ಲಿ ಅವನ ಅಂತರಂಗದ ದುಃಖ—ಯಾತನೆ ಏನಿತ್ತೋ—ಅವುಗಳನ್ನು ಕೊಟ್ಟ ಕರ್ಮದೇವತೆಯೇ ಬಲ್ಲುದು! ಆದರೆ ಅವನು ಮಾತ್ರ, ಅವುಗಳ ಗುರುತೂ ಕಾಣದಂತೆ ಮುಚ್ಚಿಕೊಂಡು, ಊರಿನ ಬೀದಿಗಳನ್ನು ಸವೆಸುತ್ತ, ಜೊತೆಗೆ ತನ್ನ ಕರ್ಮವನ್ನು ಸವೆಸುತ್ತ, ಹೊರನೋಟಕ್ಕೆ ಸದಾ ಹರ್ಷಚಿತ್ತನಾಗಿ, ತನ್ನ ಜೀವನಯಾತ್ರೆಯನ್ನು ಸಾಗಿಸುತ್ತಿದ್ದ.

ಪಾಪಯ್ಯಶೆಟ್ಟಿ ಬಹು ದೊಡ್ಡ ದೈವಭಕ್ತ. ಭಕ್ತ ತುಕಾರಾಂ—ಭಕ್ತ ರಾಮದಾಸ್, ಭಕ್ತ—ಅವನು, ಭಕ್ತ—ಇವನು ಎಂದಂತೆ, ಇವನನ್ನೂ ಭಕ್ತ ಪಾಪಯ್ಯಶೆಟ್ಟಿ ಎಂದು ಧಾರಾಳವಾಗಿ ಕರೆಯಬಹುದಾಗಿತ್ತು. ನಮ್ಮ ಮನೆಗೆ ಸಮೀಪದಲ್ಲೇ ಇದ್ದ ಕೋಟೆ ಆಂಜನೇಯಸ್ವಾಮಿ ಅವನ ಇಷ್ಟದೇವತೆ. ನಿತ್ಯವೂ, ಅಂಗಡಿ ತೂಗುಹಾಕಿಕೊಂಡು ಮನೆಬಿಟ್ಟು ಹೊರಟವನು, ನೇರವಾಗಿ ಆಂಜನೇಯಸ್ವಾಮಿಯ ಗುಡಿಗೆ ಬರುತ್ತಿದ್ದ. ಅಲ್ಲಿ ಮೂರುಸಲ ಗುಡಿ ಪ್ರದಕ್ಷಿಣೆಮಾಡಿ—ಗುಡಿಹೊಕ್ಕು ದೇವರಿಗೆ ಪ್ರಾರ್ಥನೆ ಸಲ್ಲಿಸಿ—ಕೈಮುಗಿದು—ಹುಬ್ಬಿನ ನಡುವೆ ಕಪ್ಪು ಹಚ್ಚಿಕೊಂಡು, ಏನೋ ಪಿಟುಗುಟ್ಟುತ್ತ ಈಚೆಗೆ ಬರುತ್ತಿದ್ದ. ಸಾಧಾರಣವಾಗಿ ದೇವಸ್ಥಾನದ ಮುಂದಿನ ಅರಳೀ ಮರದಲ್ಲಿ ಆಂಜನೇಯಸ್ವಾಮಿಯ ಕೋಮಿಗೆ ಸೇರಿದ ಒಂದು ಸಂಸಾರ ಇದ್ದೇ ಇರುತ್ತಿತ್ತು. ಅವುಗಳಿಗೆ ತನ್ನ ಡಬ್ಬದಿಂದ ಎರಡು ಉಂಡೆಗಳನ್ನು ತೆಗೆದು, ಪುಡಿಮಾಡಿ—ಮರದ ಕಟ್ಟೆಯಮೇಲೆ ಎರಚುತ್ತಿದ್ದ. ಈ ರೀತಿ ಪ್ರಕಾರಾಂತರವಾಗಿ ಸ್ವಾಮಿಗೆ ನೈವೇದ್ಯವನ್ನರ್ಪಿಸಿದ ಮೇಲೆಯೇ ಅವನು ದಿನದ ವ್ಯಾಪಾರವನ್ನು ಪ್ರಾರಂಭಿಸುತ್ತಿದ್ದ. ರಾತ್ರಿವೇಳೆಗೆ ವ್ಯಾಪಾರ ಮುಗಿಸಿಕೊಂಡು ಮನೆಗೆ ಹಿಂತಿರುಗುವಾಗಲೂ ಸ್ವಾಮಿಯ ದರ್ಶನ ತೆಗೆದುಕೊಂಡು, ಅಲ್ಲಿದ್ದ ಗೋಲಕಕ್ಕೆ ಮೂರುಕಾಸಿನ ಬಿಲ್ಲೆಯೊಂದನ್ನು ಹಾಕಿ ಮನೆಗೆ ಹೋಗುತ್ತಿದ್ದ. ಶನಿವಾರ ಆಂಜನೇಯನ ದಿನವಷ್ಟೆ; ಆ ದಿನ—ಅದರಲ್ಲೂ ಸಂಜೆಯ ಪೂಜೆಗೆ—ಎಂದಿನಂತೆ ಹೆಚ್ಚಾಗಿ ಜನ ಬರುತ್ತಿದ್ದರು. ದೇವಸ್ಥಾನದ ಹೊರಗೆ ಎಂಟು ಹತ್ತು ಭಿಕ್ಷುಕರ ಸಾಲೊಂದು ಇರುತ್ತಿತ್ತು. ಆ ದಿನ ಪಾಪಯ್ಯಶೆಟ್ಟಿ—ಭಿಕ್ಷುಕರಿಗೆ ಒಂದಾಣೆಯಷ್ಟು ಬಿಡಿಕಾಸುಗಳನ್ನು ಹಂಚುತ್ತಿದ್ದ. ಆ ದಿನಕ್ಕೋಸ್ಕರ ಪ್ರತ್ಯೇಕವಾಗಿ ತಯಾರಿಸಿ ತಂದ—ಮಾರಾಟದ ಉಂಡೆಗಳಿಗಿಂತ ಸಣ್ಣಗಾತ್ರದ—ಹನ್ನೆರಡು ಉಂಡೆಗಳನ್ನು ಭಿಕ್ಷುಕರ ಮಕ್ಕಳಿಗೆ ಹಂಚುತ್ತಿದ್ದ; ಅಥವಾ, ಮೂರು ಮೂರು ಕಿತ್ತಲೆತೊಳೆ ಪೆಪ್ಪರುಮೆಂಟುಗಳನ್ನು ಹಂಚುತ್ತಿದ್ದ. ಅವನ ಈ ಕಾರ್ಯಕ್ರಮವನ್ನು ನಾನು ಎಷ್ಟೋಸಲ ನೋಡಿದ್ದೆ.

ನನ್ನ ಮಿಡ್ಲ್ (ಅಥವಾ ಎ.ವಿ.) ಸ್ಕೂಲ್ ಯುಗದಲ್ಲಿ—ಪಾಪಯ್ಯಶೆಟ್ಟಿಗೆ ಹುಡುಗರು ಮಾಡುತ್ತಿದ್ದ—ಹಾಸ್ಯ—ಲೇವಡಿಗಳಲ್ಲಿ ನಾನೂ ಯಥಾಶಕ್ತಿ ಭಾಗವಹಿಸಿ ಕೈಂಕರ್ಯ ಸಲ್ಲಿಸುತ್ತಿದ್ದೆ—ನಿಜ. ಆದರೆ ಇಷ್ಟು ಹೇಳಬಲ್ಲೆ; ನಮ್ಮಲ್ಲಿ ಯಾರೂ ಅವನ ಮೇಲೆ ಯಾವ ರೀತಿಯಲ್ಲಾದರೂ ಕೈಮಾಡಿ ದೈಹಿಕವಾದ ಹಿಂಸೆಕೊಟ್ಟವರಲ್ಲ—ಕಾಸುಕೊಡದೆ—ಉಂಡೆ ಬರ್ಫಿ ಇತ್ಯಾದಿಗಳನ್ನು ಕೊಂಡವರಲ್ಲ. ಬಹುಶಃ, ತುಂಟ ಹುಡುಗರ ಅಧಿಷ್ಠಾತ್ರಿಯಾದ ಅವನ ಇಷ್ಟದೇವತೆ—ಅವನ ಬಳಿ ನಮ್ಮ ಚೇಷ್ಟೆಗಳು ಮಿತಿಮೀರದ ಹಾಗೆ ನಮ್ಮ ಚೈತನ್ಯಗಳನ್ನು ತಡೆಯುತ್ತಿದ್ದನೋ ಏನೋ!

ಮೂರು ನಾಲ್ಕು ವರ್ಷಗಳ ಮೇಲೆ, ಅಂದರೆ ನಾನು ಹೈಸ್ಕೂಲ್ ವಿದ್ಯಾರ್ಥಿಯಾಗಿದ್ದಾಗ, ನನಗೆ ಪಾಪಯ್ಯಶೆಟ್ಟಿಯ ಅಂತರಂಗ ವ್ಯಕ್ತಿತ್ವದ ನಿಕಟಪರಿಚಯವಾಗತೊಡಗಿತು.

ಒಂದು ದಿನ, ಎಂದಿನಂತೆ—ಕೆಲವು ಚಿಕ್ಕ ಹುಡುಗರು ಅವನ ಸುತ್ತ ಗೇರಾಯಿಸಿಕೊಂಡು ತಮಾಷೆಮಾಡುತ್ತ—ಕೇಕೆಹಾಕಿ ನಗುತ್ತಿದ್ದರು. ಅವರಿಗಿಂತ ನಾಲ್ಕು ವರ್ಷ ಬೆಳೆದು ದೊಡ್ಡವನಾಗಿದ್ದ ನನಗೆ—ಅವರ ವರ್ತನೆ ಬಹಳ ತಪ್ಪಾಗಿ ಕಂಡಿತು. ನಾನು ಆ ಹುಡುಗರ ಮೇಲೆ ರೇಗಿ ಅವರನ್ನು ಅಟ್ಟತೊಡಗಿದೆ. ಆಗ ಅವನು ಹಸುಳೆಯಂತೆ ನಗುತ್ತ—ನನ್ನನ್ನು ನೋಡಿ (ಅವನ ಉಚ್ಚಾರಣೆಯನ್ನು ತಿದ್ದಿ ಹೇಳುತ್ತೇನೆ) "ಬಿಡಿ, ಯಾಕೆ ರೇಗ್ತೀರಿ—ಬೆದರಿಸ್ತೀರಿ—ಅವರನ್ನ ? ನೀವೂ ಹೀಗೇ ಮಾಡ್ತಿದ್ದಿರಿ—ಮರೆತುಬಿಟ್ಟಿರಾ ? ನೀವು ಸಂತೋಷಪಟ್ಟದ್ದು ಅವರಿಗೂ ಬೇಡವಾ ? ನಾಳೆ ಅವರೂ ನಿಮ್ಮ ಹಾಗೇ ಬೆಳೀತಾರೆ—ಬುದ್ಧಿ ಕಲಿತುಕೋತಾರೆ!"—ಎಂದು ನನಗೇ ಸಮಾಧಾನ ಹೇಳಿದ—ಸಹನಾಮೂರ್ತಿ ಪಾಪಯ್ಯಶೆಟ್ಟಿ !

ಪಾಪಯ್ಯಶೆಟ್ಟಿಯ ಭಕ್ತಿ—ತಾಳ್ಮೆ—ಸಹನೆಗಳಿಗೆ ಸರಿದೂಗುವ ಇನ್ನೊಂದು ಗುಣ ಎಂದರೆ, ಅವನ ಅಪ್ರತಿಮ ದೃಢಸಂಕಲ್ಪ ; ತನ್ನ, ಅಷ್ಟೇನು ಹಿತವಲ್ಲದ, ಬದುಕಿನಲ್ಲಿ—ಸೂಜಿಮೊನೆಯಷ್ಟೂ ಹಿಮ್ಮೆಟ್ಟದೆ—ಹೋರಾಡುವ ವೀರ ಹಟ! ಇದು ಮುಂದೆ ಕೆಲವು ದಿನಗಳಲ್ಲೇ ನನಗೆ ಗೊತ್ತಾಯ್ತು.

ಈ ಮನುಷ್ಯ ಬೆಳಗಿನಿಂದ ರಾತ್ರಿಯ ವರೆಗೆ ಊರೆಲ್ಲ ಸುತ್ತುತ್ತಾನೆ! ಇವನ ಒಟ್ಟು ಸುತ್ತಾಟ ದಿನಕ್ಕೆ ಕನಿಷ್ಟಪಕ್ಷ ಹತ್ತು ಮೈಲಿಗಳಾದರೂ ಆಗುತ್ತಿರಬೇಕು! ಇವನ ವ್ಯಾಪಾರದ ಸರಕೋ, ಕೇವಲ ಹುಡುಗರು ಮಕ್ಕಳಿಗೆ ಪ್ರಿಯವಾದ ಉಂಡೆ—ಬರ್ಫಿ—ಬಿಸ್ಕತ್ತು—ಪೆಪ್ಪರ್‌ಮೆಂಟ್—ಇತ್ಯಾದಿಗಳು !—ಎಂದು ಆಶ್ಚರ್ಯಪಡುತ್ತಿದ್ದೆ. ದಿನಕ್ಕೆ ಹತ್ತು ಮೈಲಿ, ಮಳೆ—ಗಾಳಿ—ಚಳಿ—ಬಿಸಿಲು ಎನ್ನದೆ ಊರೆಲ್ಲ ಸುತ್ತಾಡಿದರೂ ಇವನಿಗೆ ಆಗುವ ವ್ಯಾಪಾರ ಎಷ್ಟಿದ್ದೀತು?—ಏನು ಲಾಭಪಡೆಯುತ್ತಿದ್ದಾನು?—ಎಷ್ಟು ವರ್ಷಗಳಿಂದ ಈ ವ್ಯಾಪಾರದಲ್ಲಿದ್ದಾನೆ ? ಹೆಜ್ಜೆ ಇಡುವುದೇ ಕಷ್ಟವಾಗಿರುವಾಗ—ಎಲ್ಲಾದರೂ ಒಂದು ಕಡೆ ಕುಳಿತು ವ್ಯಾಪಾರಮಾಡದೆ, ಅಂಗಡಿಯನ್ನು ಹೊತ್ತುಕೊಂಡು ಸುತ್ತುತ್ತಾನೆ ಏಕೆ ?—ಇವೇ ಮೊದಲಾದ ಹಲವು ಪ್ರಶ್ನೆಗಳು ನನ್ನ ಮನಸ್ಸಿನಲ್ಲಿ ಮೂಡಿ, ಅವನ ವಿಷಯವಾಗಿ ನನ್ನ ಕುತೂಹಲವನ್ನು ಆಗಾಗ ಕೆರಳಿಸುತ್ತಿದ್ದವು. ಇಷ್ಟು ದಿನಕ್ಕೆ ನನಗೂ ಅವನಿಗೂ ತಕ್ಕಮಟ್ಟಿಗೆ ಪರಿಚಯವಾಗಿತ್ತು. ಯಾವಾಗಲಾದರೂ ಅವಕಾಶ ಸಿಕ್ಕಾಗ—ಅವನನ್ನೇ ಪ್ರಶ್ನಿಸಿ ನನ್ನ ಕುತೂಹಲವನ್ನು ತೃಪ್ತಿಪಡಿಸಿಕೊಳ್ಳಬೇಕೆಂದು ಯೋಚಿಸುತ್ತಲೇ ಇದ್ದೆ. ಒಂದು ದಿನ

ಅವಕಾಶಸಿಕ್ಕಿತು. ಅಂದು ಶನಿವಾರ—ಮಧ್ಯಾಹ್ನ ಸುಮಾರು ಮೂರುಗಂಟೆ. ಪಾಪಯ್ಯಶೆಟ್ಟಿ ತನ್ನ ವ್ಯಾಪಾರದ ಘೋಷಣೆ ಮಾಡುತ್ತ ನಮ್ಮ ಮನೆ ಮುಂದಿನ ರಸ್ತೆಯಲ್ಲೇ ಬಂದ. ಅವನನ್ನು ಕಂಡಕೂಡಲೆ ಕೂಗಿ ಕರೆದು—ನಮ್ಮ ಮನೆ ವರಾಂಡಾದಲ್ಲಿದ್ದ ಬೆಂಚಿನ ಮೇಲೆ ಕೂರಿಸಿಕೊಂಡು ಮಾತನಾಡಿಸತೊಡಗಿದೆ. ಅವನ ಮಾತುಗಳನ್ನು ಅವನು ಉಚ್ಚರಿಸಿದ ರೀತಿಯೇ ಬರೆಯಲು ಬಡಗನ್ನಡದ ಮಾತು ಹಾಗಿರಲಿ, ಬಹುಶಃ, ಪ್ರಪಂಚದ ಯಾವ ಭಾಷೆಯ ಅಕ್ಷರಮಾಲೆಯಲ್ಲೂ ತಕ್ಕ ಸ್ವರವ್ಯಂಜನಾದಿಗಳಿಲ್ಲ! ಆದ್ದರಿಂದ ಅವನ ಮಾತುಗಳನ್ನು ಬಹುಮಟ್ಟಿಗೆ " ಎಡಿಟ್ " ಮಾಡಬೇಕು. ಅಲ್ಲದೆ ಅವನ ಉಚ್ಚಾರಣೆ—ಅವನ ಸ್ಥೂಲವ್ಯಕ್ತಿತ್ವದ ಅನಿವಾರ್ಯ ಅಂಶ. ಅದನ್ನು (ಸ್ಥೂಲವ್ಯಕ್ತಿತ್ವವನ್ನು) ನೋಡಿದಕಣ್ಣು—ವರ್ಣಿಸಿದ ಬಾಯಿ—ಹುಡುಗಾಟಿಕೆಯದು. ಅವನ ಅಂತರಂಗ ವ್ಯಕ್ತಿತ್ವವನ್ನು ಚಿತ್ರಿಸುವಾಗ ಅವನ ಮಾತಿನ ಅರ್ಥ ಮುಖ್ಯ—ಉಚ್ಚಾರಣೆಯಲ್ಲ. ನನಗೂ ಅವನಿಗೂ ನಡೆದ ಸಂಭಾಷಣೆ ಈರೀತಿಯಾಗಿತ್ತು :

ನಾನು—ಅಯ್ಯಾ ಶೆಟ್ಟಿ, ದಿನಕ್ಕೆ ಎಷ್ಟು ಮೈಲಿ ಆಗುತ್ತೆ, ನೀನು ಸುತ್ತೋದು ?

ಅವನು—ಹೆಚ್ಚುಕಡಿಮೆ ಹತ್ತು ಮೈಲಿ ಆಗುತ್ತೆ ಸ್ವಾಮಿ.

ನಾನು—ಓ, ನಾನು ಲೆಕ್ಕ ಹಾಕಿದ್ದು ಸರಿ ಹಾಗಾದರೆ! ಇರಲಿ, ಎಷ್ಟು ದಿನಗಳಿಂದ ಈ ವ್ಯಾಪಾರ ಮಾಡುತ್ತಿದ್ದಿ ?

ಅವನು—ನೋಡಿ ಸ್ವಾಮಿ, ಈಗ ನನಗೆ ನಲವತ್ತು ವರ್ಷ ವಯಸ್ಸು. ನನ್ನ ಹದಿನಾರನೇ ವಯಸ್ಸಿನಿಂದ ಇದೇ ಕೆಲಸ ಸ್ವಾಮಿ, ನನಗೆ.

ನಾನು—ಅಂದರೆ, ಇಪ್ಪತ್ತೈದು ವರ್ಷಗಳು!

ಅವನು—ಹ್ಞೂ—ಅಷ್ಟಾಗಿದೆ.

ನಾನು—ಪ್ರತಿದಿನವೂ ವ್ಯಾಪಾರ ಮಾಡ್ತೀಯೇನು ?

ಅವನು—ಹ್ಞೂ.

ನಾನು—ವರ್ಷದ ಮುನ್ನೂರರವತ್ತೈದು ದಿನಗಳೂ ?

ಅವನು—ವರ್ಷಕ್ಕೆ ಒಂದು ಐದಾರು ದಿನ ತಪ್ಪಬಹುದು—ಅಷ್ಟೆ.

ನಾನು ಲೆಕ್ಕಹಾಕಿದೆ. ವರ್ಷಕ್ಕೆ ಮುನ್ನೂರ ಅರವತ್ತು ವ್ಯಾಪಾರ ದಿನಗಳಾದರೂ—ದಿನಕ್ಕೆ ಸರಾಸರಿ ಹತ್ತು ಮೈಲಿಗಳಂತೆ ವರ್ಷಕ್ಕೆ ಮೂರು ಸಾವಿರದ ಆರನೂರು ಮೈಲಿಗಳು! ಇಪ್ಪತ್ತೈದು ವರ್ಷಕ್ಕೆ, ತೊಂಭತ್ತು ಸಾವಿರ ಮೈಲಿಗಳು !! ಆ ಭಾರವನ್ನು ಹೊತ್ತು—ಒಂದು ಕಾಲು ಊನವಾಗಿರುತ್ತ, ತೊಂಭತ್ತು ಸಾವಿರ ಮೈಲಿ ನಡೆದಿದ್ದ ಆ ಪರಿವ್ರಾಜಕನ ಶಕ್ತಿ—ಕಷ್ಟಸಹಿಷ್ಣುತೆ ನನ್ನ ಲೆಕ್ಕಕ್ಕೆ ಸಿಕ್ಕುವಂತಿರಲಿಲ್ಲ.

ನಾನು—ಇದು ನಿನಗೆ ಬಹಳ ಕಷ್ಟದ ಕೆಲಸ ಅಲ್ಲವೇನಯ್ಯಾ ?

ಅವನು—ಹೌದು ಹೌದು,—ಕಷ್ಟ; ಆದರೆ ಹಸಿದುಕೊಂಡಿರೋದು ಇನ್ನೂ ಕಷ್ಟ! ನನ್ನ ಸ್ವಾಮಿ ಆಂಜನೇಯ ಹೇಗೋ ನಡೆಸಿಕೊಂಡುಬರ್‍ತಾ ಇದಾನೆ. ನೋಡಿ, ನನ್ನ ಕೊರಳಲ್ಲೇ ಇದ್ದಾನೆ!

ಹೀಗೆಂದು ಹೇಳಿ ತನ್ನ ಅಂಗಿಯ ಗುಂಡಿ ಬಿಚ್ಚಿ—ಕೊರಳ ಸುತ್ತ ಕಟ್ಟಿಕೊಂಡಿದ್ದ ಒಂದು ತಾಮ್ರದ ತಗಡಿನ ಬಿಲ್ಲೆ ತೋರಿಸಿದ. ಅದರಲ್ಲಿ ಆಂಜನೇಯ ಮೂರ್ತಿಯು ಮುದ್ರೆಯಿತ್ತು.

ನಾನು ಒಂದೆರಡು ನಿಮಿಷ ಮೌನವಾಗಿ ಅವನನ್ನೇ ನೋಡುತ್ತ ಕುಳಿತೆ. ನನಗೆ ಕ್ರಮೇಣ ಖಚಿತವಾಗುತ್ತಿದ್ದ ಅವನ ಅಂತರಂಗ ವ್ಯಕ್ತಿತ್ವದ ಸೌಂದರ್ಯಕ್ಕೆ ಮನಸೋತು ನೋಡುತ್ತಿದ್ದೆ. ಅನಂತರ,

ನಾನು—ನಿನ್ನ ಕಾಲು, ಹುಟ್ಟುತ್ತಲೇ . . .

ಅವನು—ಇಲ್ಲ—ಇಲ್ಲ ಸ್ವಾಮಿ, ನನಗೆ ಏಳೋ ಎಂಟೋ ವರ್ಷವಾಗಿದ್ದಾಗ ದೊಡ್ಡ ಸಿಡುಬು ಎದ್ದು ಒಂದು ಕಣ್ಣು ಹೋಯ್ತು; ನಾಲಗೆ ಸರ ಎಳೆದುಬಿಡ್ತು. ಹನ್ನೆರಡು ವಯಸ್ಸಾಗಿದ್ದಾಗ ಮರಕೋತಿ ಆಟಕ್ಕೆ ಹೋಗಿ ಮರದಿಂದ ಬಿದ್ದು—ಸೊಂಟದ ಹತ್ತಿರ ತೊಡೆ ಮುರಿದುಕೊಂಡೆ. ಆರು ತಿಂಗಳು ಹಾಸಿಗೆ ಹಿಡಿದು ಮಲಗಿದ್ದೆ—ಎದ್ದಾಗ ಕಾಲು ಕೆಟ್ಟುಹೋಗಿತ್ತು, ಇದೆಲ್ಲ—ಕರ್ಮಾ ಸ್ವಾಮೀ ಕರ್ಮ! ಪಡೆದದ್ದು ಉಣ್ಣದೆ—ಉಹು—ಎಂದರೆ ಆದೀತೇ ?

ನಾನು—ಸರಿ, ಆದರೆ ಇಷ್ಟು ಕಷ್ಟಪಟ್ಟುಕೊಂಡು ಊರೆಲ್ಲ ಏಕೆ ಸುತ್ತುತ್ತಿ ? ಎಲ್ಲಾದರೂ ಒಂದು ಕಡೆ ಕುಳಿತು ವ್ಯಾಪಾರ ಮಾಡಬಾರದೇ ಶೆಟ್ಟಿ ?

ಅವನು—ನೋಡಿ ಸ್ವಾಮೀ, ನನ್ನ ಗಿರಾಕಿಗಳೆಲ್ಲ ಸಣ್ಣಪುಟ್ಟ ಹುಡುಗರು. ನಾನು ಎಲ್ಲೋ ಒಂದು ಕಡೆ ಕುಳಿತು ವ್ಯಾಪಾರ ಮಾಡಿದರೆ—ಅವರೆಲ್ಲ ನನ್ನ ಬಳಿ ಬಂದಾರೇ ? ನಾನು ಒಂದೊಂದು ಶಾಲೆ ಬಳಿ ಹೋದರೆ, ನೂರು—ಇನ್ನೂರು ಹುಡುಗರು ಒಟ್ಟಿಗೆ ಸಿಕ್ಕುತ್ತಾರೆ. ಅವರಲ್ಲಿ ಹತ್ತಿಪ್ಪತ್ತು ಹುಡುಗರಾದರೂ ನನ್ನ ಗಿರಾಕಿಗಳಾಗುತ್ತಾರೆ.

ನಾನು—ಹಾಗಾದರೆ—ಶಾಲೆಗಳ ಬಳಿ ವ್ಯಾಪಾರಮಾಡಿದರೆ ಸಾಕು; ಊರೆಲ್ಲ ಯಾಕೆ ಅಲೆಯುತ್ತಿ ?

ಅವನು—ಸ್ವಾಮೀ, ಶಾಲೆಗೆ ಹೋಗೋ ಹುಡುಗರಿಗಿಂತ ಹೋಗದೇ ಇರೋ ಹುಡುಗರೇ ಜಾಸ್ತಿ; ಅಲ್ಲದೆ—ರಜ ಪಜ ಬಂತೂ ಅಂದ್ರೆ—ಹುಡುಗರು ಅವರವರ ಮನೆಲೇ ಇರ್‍ತಾರೆ; ಇಲ್ಲ ಸ್ವಾಮೀ, ಸುತ್ತದೆ ಇದ್ದರೆ ನನಗೆ ವ್ಯಾಪಾರವೇ ಇಲ್ಲ.

ನಾನು—ಒಳ್ಳೇದು, ದಿನಾ ಇಷ್ಟು ಕಷ್ಟಬೀಳ್ತೀಯಲ್ಲಾ—ಇದಕ್ಕೆ ತಕ್ಕ ವ್ಯಾಪಾರ ಆಗುತ್ತೆಯೇ—ಲಾಭ ಸಿಕ್ಕುತ್ತೆಯೇ?

ಅವನು ಸ್ವಲ್ಪ ನಕ್ಕ. ತಕ್ಕಷ್ಟು ವ್ಯಾಪಾರವಾಗದೆ—ಲಾಭ ಸಿಕ್ಕದೆ—ಅವನು ಈ ವ್ಯಾಪಾರದಲ್ಲಿ ಕಾಲುಶತಮಾನ ಕಳೆಯುತ್ತಿದ್ದನೇ? ನನ್ನ ಪ್ರಶ್ನೆಯಲ್ಲಿ ಅಂತಹ ಬುದ್ಧಿವಂತಿಕೆಯೇನು ಇರಲಿಲ್ಲ! ನನ್ನ ಪ್ರಶ್ನೆಗೆ ಉತ್ತರವಾಗಿ—

ಅವನು—ನೀವು ಕೇಳಿಲ್ಲವೇ ಗಾದೇನ—ಹನಿಗೂಡಿದರೆ ಹಳ್ಳ—ತೆನೆಗೂಡಿದರೆ ಭತ್ತ—ಅಂತ? ಕೇಳಿ ಸ್ವಾಮೀ, ನಾನು ಕಾಲು ಮುರಿದುಕೊಂಡ ಮೂರು ವರ್ಷಕ್ಕೆ ನನ್ನ ತಂದೆ ತೀರಿಕೊಂಡರು. ಈಗ ಇರೋರು ನಾನು ನನ್ನ ತಾಯಿ ಇಬ್ಬರೇ. ನನ್ನ ತಂದೆ ಸತ್ತಾಗ ಅವರಿಗೆ ಮೂರು ಸಾವಿರ ರೂಪಾಯಿ ಸಾಲ ಇತ್ತು. ಇದ್ದಕ್ಕಿದ್ದಹಾಗೇ ಒಂದುದಿನ ಲಕ್ವ ಹೊಡೆದು ಮಾರನೇ ದಿನವೇ ಅವರು ತೀರಿಕೊಂಡರು. ಆಗ ನಮಗೆ ಒಂದು ಚಿಕ್ಕ ಕುಂಬಾರಹೆಂಚಿನ ಮನೆ—ಒಂದೂವರೆ ಅಂಕಣದ್ದು—ಹೊರತು ಇನ್ನೇನೂ ಇರಲಿಲ್ಲ. ನನ್ನ ತಂದೆ ಮೆಣಸಿನಕಾಯಿ ವ್ಯಾಪಾರ ಮಾಡ್ತೀನೀಂತ ಸಾಲ ತೆಗೆದರು. ಸಾಲ ಕೊಟ್ಟವರು ಲಕ್ಷ್ಮಯ್ಯಶೆಟ್ಟರು—ಅಂತ—ಬಹಳ ಪುಣ್ಯಾತ್ಮರು ಸ್ವಾಮಿ! ಈಗಲೂ ಇದ್ದಾರೆ—ಎಂಭತ್ತೋ ಎಂಭತ್ತೈದೋ ವರ್ಷ ಅವರಿಗೆ. ನಮ್ಮ ತಂದೆ ಸರಕು ತುಂಬಿ ಬೆಲೆ ಏರಲಿ ಅಂತ ಸಮಯ ಕಾಯ್ತಿದ್ದರು—ಆಗ ಪೇಟೇಲಿದ್ದ ನಮ್ಮ ಗಡಂಗಿನ ಹಿಂದುಗಡೆ ಮನೆಗೆ ಬೆಂಕಿಬಿತ್ತು—ಆಗ ರಾತ್ರೆ ಬಹಳ ಹೊತ್ತಾಗಿತ್ತು—ನಮ್ಮ ತಂದೆಗೆ ಸುದ್ದಿಬಂದು—ಅಲ್ಲಿಗೆ ಹೋಗಿ ನೋಡೋ ಹೊತ್ತಿಗೆ—ಅವರ ಗಡಂಗಿಗೂ ಬೆಂಕಿ ತಗುಲಿ ಉರಿಯುತ್ತಿತ್ತು. ಮೂರು ಸಾವಿರ ರೂಪಾಯಿ ಮೆಣಸಿನಕಾಯಿ—ಗಡಂಗು ಎಲ್ಲ ಸುಟ್ಟು ಬೂದಿಯಾಯ್ತು. ನನ್ನ ತಂದೆ—ಧೈರ್ಯಗೆಟ್ಟು ಕುಗ್ಗಿಹೋದರು—ಮುಂದೇನುಗತಿ—ಅಂತ ಯೋಚಿಸ್ತಿರೋವಾಗ—ಲಕ್ವ ಹೊಡೀತು.

ನಾನು ಹೋಗಿ—ಲಕ್ಷ್ಮಯ್ಯಶೆಟ್ಟರ ಕಾಲಮೇಲೆ ಬಿದ್ದೆ. ಆಹಾ! ನನ್ನ ತಂದೆ ಸಾಯಲಿಲ್ಲ—ಅನ್ನಿಸೋಹಾಗೆ ಮಾತಾಡಿದರು—ಸ್ವಾಮಿ, ಅವರು! "ಬಿಡ್ತಾ—ಹೋಗು—ನಿಮ್ಮ ಅಪ್ಪನ ಸಾಲ ಮರೆತುಬಿಡು—ಬೆಂಕಿಬಿದ್ದರೆ ಅವನೇನು ಮಾಡಿಯಾನು?—ಯಾರುತಾನೇ ಏನುಮಾಡಿಯಾರು? ಬದುಕಿದ್ದಿದ್ದರೆ—ತೀರಿಸುತ್ತಿದ್ದ—ನನಗೆ ಗೊತ್ತು. ಹೆದರಬೇಡ ಹೋಗು—ದಿನಾ-ಕಾಲಕ್ಕೆ ಏನುಮಾಡ್ತೀ?—ತಗೋ ಈ ನೂರು ರೂಪಾಯಿನಲ್ಲಿ ಉತ್ತರಕ್ರಿಯೆ ನಡೆಸು—ಆಮೇಲೆ ಬಾ" ಎಂದು—ತಲೆಸವರಿ—ನೂರು ರೂಪಾಯಿ ನಗದು ಕೊಟ್ಟು ಕಳಿಸಿದರು. ಉತ್ತರಕ್ರಿಯೆ ಮುಗಿದಮೇಲೆ ಪುನಃ ಅವರನ್ನು ಕಂಡೆ. ನನಗೆ ಬಹಳ ಬುದ್ಧಿವಾದ ಹೇಳಿದರು—

ಧೈರ್ಯಹೇಳಿದರು—"ಏನಾದರೂ ವ್ಯಾಪಾರಮಾಡು—ಸ್ವಲ್ಪ ಬಂಡವಾಳ ಬೇಕಾದರೆ ಕೊಡ್ತೀನಿ"—ಎಂದರು. ಈ ಮಾತನ್ನು ನನ್ನ ತಾಯಿಗೆ ತಿಳಿಸಿದೆ. ಆಕೆ ಬಹಳ ಗಟ್ಟಿಗಿತ್ತಿ ಸ್ವಾಮೀ! ಏನಂದಳು ಗೊತ್ತೇ? "ಬಿಡ್ಡಾ, ಹೌದು—ವ್ಯಾಪಾರ ನಮ್ಮ ಕುಲಕ್ಕೆ ಬಂದದ್ದು; ನೀನೂ ಅದನ್ನೇ ಮಾಡಬೇಕು. ಆದರೆ ಸಾವುಕಾರರಿಂದ ಇನ್ನೇನೂ ಬಂಡವಾಳ ಬೇಡ. ನಿನ್ನ ತಂದೆ ಉತ್ತರಕ್ರಿಯೆ ಮುಗಿದಿಲ್ಲ ಇನ್ನೂ, ಗೊತ್ತೇನು? ಅವರು ಮಾಡಿದ ಸಾಲ—ಅವರ ಮಗನಾದ ನೀನು ತೀರಿಸದ ಹೊರತು—ಅವರ ಉತ್ತರಕ್ರಿಯೆ ಮುಗಿದಹಾಗಾಗೋಲ್ಲ! ಕೊಟ್ಟ ಕೈ ಮರೆಯಬಹುದು—ತೆಗೆದುಕೊಂಡ ಕೈ ಮರೆಯಬಾರದು. ಮರೆತುಬಿಡು ಅನ್ನೋದು ಅವರಿಗೆ ಸುಲಭ—ಆದರೆ ಮರೆತುಬಿಡೋದು ಅಷ್ಟು ಸುಲಭವಲ್ಲ. ಅವರು ಕೊಟ್ಟ ನೂರು ರೂಪಾಯಿಗಳಲ್ಲಿ ಇನ್ನೂ ನಾಲ್ಕೈದು ರೂಪಾಯಿಗಳು ಮಿಕ್ಕಿವೆ. ಅವರು ಉತ್ತರ ಕ್ರಿಯೆಗಾಗಿ ಕೊಟ್ಟದ್ದು ತಾನೆ? ಈ ಮಿಕ್ಕಿರುವ ಹಣ ಇಷ್ಟೇ ಸಾಕು—ಬಂಡ ವಾಳಕ್ಕೆ. ನಾನು ಹೇಳಿದಂತೆ ವ್ಯಾಪಾರಮಾಡು; ಇದೂ ತಂದೆಯ ಉತ್ತರಕ್ರಿಯೆ—ಅಂತ ಶ್ರದ್ಧೆಯಿಂದ ಮಾಡು—"—ಎಂದಳು. ಈ ವ್ಯಾಪಾರದ ಯೋಚನೆ ಮಾಡಿದವಳು ಅವಳೇ ಸ್ವಾಮೀ. ನಮ್ಮದು ದಿನಕ್ಕೆ ಒಂದೂವರೆ ರೂಪಾಯಿ ಬಂಡವಾಳ—ಬೇಕಾದ ಸಾಮಾನುಗಳನ್ನೆಲ್ಲ ತಂದು—ಅವಳೇ ಉಂಡೆಗಳು—ಬರ್ಫಿ—ಬಿಸ್ಕತ್ತು ನಿಪ್ಪಟ್ಟು ಎಲ್ಲಾ ತಯಾರುಮಾಡುತ್ತಾಳೆ. ಪೆಪ್ಪರ್‌ಮೆಂಟು ಒಂದೇ ನಾನು ಕೊಂಡು ಮಾರೋದು. ದಿನಕ್ಕೆ ಒಂದು-ಒಂದೂವರೆ ರೂಪಾಯಿನಹಾಗೆ ನಫೆ ಸಿಕ್ಕುತ್ತೆ. ನಾನು ವ್ಯಾಪಾರಮಾಡಿ ಬಂದದ್ದನ್ನೆಲ್ಲ ಅವಳ ಕೈಗೆ ಕೊಟ್ಟುಬಿಡ್ತೀನಿ. ಲೆಕ್ಕಪಕ್ಕ ಇಡೋದೆಲ್ಲ ಅವಳದ್ದೇ. ಈಗ ಒಂದು ತಿಂಗಳ ಹಿಂದೆ—ನಮ್ಮ ತಂದೆ ಶ್ರಾದ್ಧದ ಹಿಂದಿನ ದಿನ—ರಾತ್ರೆ ನಾನು ವ್ಯಾಪಾರ ಮುಗಿಸಿಕೊಂಡು ಮನೆಗೆ ಹೋದೆ. ರಾತ್ರೆ ಫಲಾಹಾರ ಆದಮೇಲೆ—ನನ್ನ ತಾಯಿ ನನ್ನನ್ನು ದೇವರಮನೆಗೆ ಕರೆದೊಯ್ದು ಒಂದು ಮರದ ಪೆಟ್ಟಿಗೆ ಬೀಗ ತೆರೆದು ತೋರಿಸಿದಳು. ಅದರ ತುಂಬ ಬೆಳ್ಳಿ ರೂಪಾಯಿಗಳಿದ್ದವು. ರಾತ್ರಿಯೇ ಎಣಿಸಿದೆವು. ನಾಲ್ಕು ಸಾವಿರದ ಐನೂರು ಚಿಲ್ಲರೆ—ರೂಪಾಯಿಗಳಿದ್ದವು. ಮಾರನೇದಿನ ಕಾರ್ಯ ಮುಗಿದ ಮೇಲೆ—ಸಂಜೆಯಲ್ಲಿ—ಹೆಚ್ಚು ಕಡಿಮೆ ಒಂದಾಳು ತೂಕವಿದ್ದ ಆ ಪೆಟ್ಟಿಗೇನ ತಲೆಮೇಲೆ ಹೊತ್ತುಕೊಂಡು ಸಾವುಕಾರರ ಮನೆಗೆ ಹೋದೆ. ಪೆಟ್ಟಿಗೇನ ಅವರ ಮುಂದಿಟ್ಟು "ಅಯ್ಯಾ, ನನ್ನ ತಾಯಿ ಇದನ್ನ ತಮಗೆ ಕಳಿಸಿದ್ದಾಳೆ" ಎಂದೆ—"ಏನಯ್ಯಾ ಇದು?" ಎಂದರು ಅವರು—"ಸ್ವಾಮೀ, ಇಲ್ಲಿ—ತಾವು ಹೇಳಿದಂತೆ ನಾನು ವ್ಯಾಪಾರಮಾಡಿ ಸಂಪಾದಿಸಿದ್ದು—ನಾಲ್ಕು ಸಾವಿರದ ಐನೂರ ತೊಂಬತ್ತೆರಡು ರೂಪಾಯಿಗಳಿವೆ—

ಇದರಲ್ಲಿ ಅಸಲನ್ನು ತೆಗೆದುಕೊಂಡು—ಮಿಕ್ಕದ್ದನ್ನು ಬಡ್ಡಿಗೆ ಕಟ್ಟಿಕೊಳ್ಳಿ—ಬಡ್ಡಿದರ ನನಗೂ ತಿಳೀದು—ನನ್ನ ತಾಯಿಗೂ ತಿಳೀದು—ಸಾಲದೆ ಬಂದರೆ ಅದನ್ನು ಸಂಪಾದಿಸಿ ತೀರಿಸುತ್ತೇನೆ—ನಿಮ್ಮ ಅಶೀರ್ವಾದದಿಂದ " —ಎಂದೆ. ಅವರು ಹಣ ತೆಗೆದುಕೊಳ್ಳಲು ಒಪ್ಪಲಿಲ್ಲ. ಆಗ ನಾನು—ತಂದೆ ಮಾಡಿದ ಸಾಲದ ವಿಷಯದಲ್ಲಿ—ನನ್ನ ತಾಯಿ ಹೇಳಿದ್ದನ್ನು ತಿಳಿಸಿದೆ. ಆಗ ಅವರು ಒಪ್ಪಿಕೋಬೇಕಾಯಿತು. ಆದರೆ ಅವರು " ನೋಡು, ನಾನು ನಿನ್ನ ತಂದೆಗೆ ಕೊಟ್ಟದ್ದು ಮೂರು ತಿಂಗಳಿಗೆ ಕೈಗಡ ಅಷ್ಟೆ—ಶೇಕಡ ನಾಲ್ಕರಂತೆ. ಅಷ್ಟಕ್ಕೆ ಮಾತ್ರ ಬಡ್ಡಿ ತೆಗೆದುಕೊಳ್ತೇನೆ " ಎಂದರು. ಮೂರು ಸಾವಿರದ ಮೂವತ್ತು ರೂಪಾಯಿಗಳನ್ನು ಎಣಿಸಿ, ಹಿರಿಯರ ಕಾಲು ಮುಟ್ಟಿ ನಮಸ್ಕಾರ ಮಾಡಿ, ನನ್ನ ತಂದೆಯ ಉತ್ತರಕ್ರಿಯೆ ಮುಗಿಸಿದೆ ಸ್ವಾಮೀ, ಇಷ್ಟೆ ನನ್ನ ಕಥೆ. ಇನ್ನು ಹೊತ್ತಾಯ್ತು ಹೊರಡಲೇ ?

ನಾನು—ಶೆಟ್ಟಿ, ಇಷ್ಟು ಹೊತ್ತಿಗೆ ಎಷ್ಟು ವ್ಯಾಪಾರಮಾಡುತ್ತಿದ್ದೆಯೋ—ನಾನು ಮಾತನಾಡಿಸುತ್ತ ಕೂರಿಸಿಕೊಂಡು ಅದನ್ನ ತಪ್ಪಿಸಿದೆ—ಅಲ್ಲವೇ ?

ಅವನು—ಸ್ವಾಮಿ, ಇರಲಿ ಬಿಡಿ—ಕೊಡೋ ಸ್ವಾಮಿ ಹೇಗಾದರೂ ಕೊಡ್ತಾನೆ. ಆದರೆ ಹೀಗೆ—ನನ್ನನ್ನು ಹತ್ತಿರ ಕೂರಿಸಿಕೊಂಡು ವಿಶ್ವಾಸವಾಗಿ ಮಾತಾಡೋರು ಯಾರಿದ್ದಾರೆ ಸ್ವಾಮೀ, ಈ ಲೋಕದಲ್ಲಿ ? ನನ್ನ ಕಥೇನ ಇದುವರೆಗೆ ಯಾರಿಗೂ ಹೇಳಿದ್ದಿಲ್ಲ—ಇವತ್ತೇ—ನಿಮ್ಮ ಮುಂದೆ ಬಾಯಿಬಿಟ್ಟಿರೋದು. ಇನ್ನೇನು ಪರವಾ ಗಿಲ್ಲ—ಆಗಾಗ ಬರ್‍ತಿರ್‍ತೀನಿ.

ಹೀಗೆಂದು ಹೇಳಿ—ಎದ್ದು—ಕೈಮುಗಿದು ಹೊರಟ. ನಾನು ವರಂಡಾದಲ್ಲಿ ಅವನು ಕಣ್ಮರೆಯಾಗುವ ವರೆಗೂ ನೋಡುತ್ತಾ ನಿಂತೆ; ಅಷ್ಟೇ ಅಲ್ಲ—ಅವನ ಚಿರ ಪರಿಚಿತವಾದ ಭೇರಿಕಂಠದ ವ್ಯಾಪಾರ ಘೋಷಣೆ ಕಿವಿಗೆ ಕೇಳಿಸುವ ವರೆಗೂ ನಿಂತಿದ್ದೆ.

ನನ್ನ ತಾಯಿ ಏತಕ್ಕೋ ಒಳಗಿನಿಂದ ಬಂದವರು ನನ್ನ ಮುಖ ನೋಡಿ—ಸ್ವಲ್ಪ ಆಶ್ಚರ‍್ಯದಿಂದ—" ಏನೋ ಆನಂದು ! ಯಾಕೋ ಕಣ್ಣು ನೀರಾಗಿದೆ ? " ಎಂದು ಕೇಳಿದರು. ನಾನು ಕಣ್ಣು ಉಜ್ಜಿಕೊಳ್ಳುತ್ತ,

" ಯಾಕೂ—ಇಲ್ಲಮ್ಮ—ಗಾಳಿಗೆ ಏನೋ ಕಸವೋ—ಹುಳುವೋ ಬಿತ್ತು ಅದಕ್ಕೆ "—ಎಂದು—ಒಳಕ್ಕೆ ಹೋದೆ.

ಆನಂದ.

ಒಂದು ಬೆಳಗು

ಉದಯಗಿರಿ ಶಿವಕರುಣೆ ಮೋಡಗಳ ಕೊತ್ತಳಕೆ
ಮೊದಲ ಬೆಳಕಿನ ಚೆಲುವ ಧ್ವಜವ ನಟ್ಟು
ಗಿರಿಶಿರದ ಮರಮರದ ತಳಿರ ತುಟಿಯೊಳು ತನ್ನ
ಅನುರಾಗವಿಟ್ಟು
ಬರುತಿಹುದು ನೋಡದೋ ಕೊಳೆಚರಂಡಿಯು ಜಲಕು
ಬಂಗಾರಗಳ ಬದುಕ ದಾನ ಕೊಟ್ಟು!

ಬಂದ ಮಂದಾನಿಲನ ಮಿದುಬೆರಳು ನೇವರಿಸಿತ್ತು
ಕಾತರದಿ ಕಾಯುತಿಹ ತರುಲತೆಯ ತಲೆನವಿರ
ಬಲು ನಲ್ಮೆಯಿಂದ.
ಹಕ್ಕಿ ಚಿಲಿಪಿಲಿದನಿಗೆ ಮರಮರದ ಎದೆಯಾಯ್ತು
ಭಾವಪೂರಿತ ಕವಿಯ ಮನಸಿನಂದ!

ನೂರು ಬೆಳಕಿನ ಹೆಜ್ಜೆ ಹಕ್ಕಿಗೂರಳಿನ ಗೆಜ್ಜೆ-
ಯನು ಕಾಲ್ಗೆ ಕಟ್ಟಿ
ಹೂ ಹೂವಿನಂಗಡಿಯ ಕಂಪುಮಳಿಗೆಯ ತಟ್ಟಿ
ಸಂಚಾರ ಹೊರಟವೋ ಕೈಕೈಯೊಳೂ ಹಿಡಿದು
ಚೆಲುವುಗಳ ಬುಟ್ಟಿ!

ಹಕ್ಕಿದೋಣಿಯ ರೆಕ್ಕೆವುಟ್ಟಿನ ಸುಯ್ಲು
ಗಾಳಿಕೊಳದಲಿ ತೆರೆಯನೇಳಿಸಿರಲು,
ಹುಲ್ಲುಹೂವಿನ ಕೊರಳು ಕೊರಳಿನ ಸುತ್ತ
ರತ್ನಕಂಠೀಹಾರ ರಾಜಿಸಿರಲು—
ಯಾವುದೋ ಹೊಸ ಹುಟ್ಟು ನಮ್ಮನೆಚ್ಚರಿಸಿರಲು
ಕೊಳೆ ಬದುಕಿನಿಂದ
ಅದೊ ಬಂತು, ಮೇಲೇರಿಬಂತು ನೇಸರತೇರು
ನೂತನೋತ್ಸಾಹಗಳ ಚಿಲುಮೆಯಿಂದ!

ನಾವಿರುವ ಈ ಲೋಕ ಸತ್ವಗಳ ನಾಕ
ಸತ್ತುಹೋಯಿತೊ ಇನ್ನು ಹಳೆಕೊಳೆಯ ನರಕ!

ಜಿ. ಎಸ್. ಶಿವರುದ್ರಪ್ಪ.

ಕನ್ನಡ ಕಾವ್ಯಾಲಂಕಾರ

(ಭಾಮಹನ ಮೂಲಗ್ರಂಥದ ಅನುವಾದ)

ಮೊದಲನೆಯ ಅಧ್ಯಾಯ

ಪ್ರಣಮ್ಯ ಸಾರ್ವಂ[1] ಸರ್ವಜ್ಞಂ[2] ಮನೋವಾಕ್ಕಾಯಕರ್ಮಭಿಃ ।
ಕಾವ್ಯಾಲಂಕಾರ ಇತ್ಯೇಷ ಯಥಾಬುದ್ಧಿ ವಿಧಾಸ್ಯತೇ ॥೧॥

ತನುಮನವಾಕ್ಕರ್ಮಗಳಿಂ
ವಿನಮಿಸಿ ಸರ್ವಜ್ಞನಪ್ಪ ಸರ್ವಾರ್ಥದನಂ ।
ಎನಗೆನಿತಿರ್ಕುಂ ಮತಿಯುಂ-
ತೆ ನೆಗಳ್ಚುವೆನಿಲ್ಲಿ ಕಾವ್ಯಭೂಷಣವಿಧಿಯಂ ॥

ಧರ್ಮಾರ್ಥಕಾಮಮೋಕ್ಷೇಷು ವೈಚಕ್ಷಣ್ಯಂ ಕಲಾಸು ಚ ।
ಪ್ರೀತಿಂ ಕರೋತಿ ಕೀರ್ತಿಂ ಚ ಸಾಧುಕಾವ್ಯನಿಬಂಧನಮ್[3] ॥೨॥

---

[1] ಪಾಠಾಂತರ—'ಶರ್ವಂ'. 'ಸಾರ್ವ' ಮತ್ತು 'ಸಾರ್ವೀಯ' ಈ ಎರಡು ಶಬ್ದಗಳೂ 'ಹಿತವನ್ನು ಮಾಡುವವನು' ಎಂಬರ್ಥದಲ್ಲಿ 'ಸರ್ವ' ಶಬ್ದದಿಂದ ನಿಷ್ಪನ್ನವಾಗಿವೆಯೆಂದು ಭಾಮಹನೇ ಮುಂದೆ ಕಡೆಯ ಅಧ್ಯಾಯದಲ್ಲಿ ವಿವರಿಸಿದ್ದಾನೆ (ಹೋಲಿಸಿ VI, ೫೪). ಆದ್ದರಿಂದಲೇ ಸಾರ್ವ=ಸರ್ವಾರ್ಥದ ಎಂದು ಭಾಷಾಂತರಿಸಲಾಗಿದೆ.

[2] ಇದು ಭಗವಾನ್ ಬುದ್ಧನ ಮತ್ತು ಶಿವನ ನಾಮಾಂತರ. ಭಾಮಹನ ಇಷ್ಟದೇವತೆ ಬುದ್ಧನೋ ಶಿವನೋ ಸ್ಪಷ್ಟವಾಗಿಲ್ಲ. 'ಶರ್ವ' ಎಂಬ ಪಾಠವನ್ನು ಸ್ವೀಕರಿಸಿದರೆ ಶಿವನೆಂಬುದು ಸ್ಪಷ್ಟ.

[3] ಪಾಠಾಂತರ—'ನಿಷೇವಣಮ್'; ಈ ಪಾಠದಲ್ಲಿ ಕಾವ್ಯದ ಪ್ರಯೋಜನಗಳು ಮುಖ್ಯವಾಗಿ ಸಹೃದಯನಿಗೆಂದಂತಾಗುತ್ತದೆ. ಇದರೊಡನೆ ಕವಿರಾಜಮಾರ್ಗದ ಕೆಳಗಿನ ಕಂದವನ್ನು ಹೋಲಿಸಿ—

ಅಧಿಕೃತಸತ್ಪುರುಷಾರ್ಥ
ಪ್ರಧಾನಧರ್ಮಾರ್ಥಕಾಮಮೋಕ್ಷಂಗಳವಾ ।
ಬುಧಜನವಿವಿಕ್ತಕಾವ್ಯ-
ಪ್ರಧಾರಿತಾರ್ಥಂಗಳಖಿಳಭುವನಹಿತಂಗಳ್ ॥—ಕ. ರಾ. ಮಾ. I, ೨೦.

ಇದನ್ನೇ ನಾಗವರ್ಮನು—

ಪರಮಪ್ರೀತಿನಿಮಿತ್ತಂ
ನಿರತಿಶಯಯಶೋನಿದಾನಮಪ್ಪುದಱಿನಿಹಂ ।

ಒಳ್ಳೆಯ ಕಾವ್ಯವನ್ನು ಬರೆಯುವುದರಿಂದ ಧರ್ಮ, ಅರ್ಥ, ಕಾಮ, ಮೋಕ್ಷ ಗಳೆಂಬ ನಾಲ್ಕು ಪುರುಷಾರ್ಥಗಳ ವಿಷಯದಲ್ಲಿ ಪ್ರಾವೀಣ್ಯವುಂಟಾಗುವುದಲ್ಲದೆ ಕಲೆಗಳಲ್ಲಿಯೂ ಆಸಕ್ತಿ ಹೆಚ್ಚುತ್ತದೆ. ಆನಂದ ಲಭಿಸುವುದಲ್ಲದೆ ಕೀರ್ತಿಯೂ ಹರಡುತ್ತದೆ.

ಅಧನಸ್ಯೇವ ದಾತೃತ್ವಂ ಕ್ಲೀಬಸ್ಯೇವಾಸ್ತ್ರಕೌಶಲಮ್ ।
ಅಜ್ಞಸ್ಯೇವ ಪ್ರಗಲ್ಭತ್ವಂ ಅಕವೇಃ ಶಾಸ್ತ್ರವೇದನಮ್[4] ‖ ೩‖

ಕವಿಯಲ್ಲದವನ ಶಾಸ್ತ್ರಜ್ಞಾನ ದರಿದ್ರನ ದಾನಾಸಕ್ತಿಯಂತೆ; ನಪುಂಸಕನ ಯುದ್ಧವಿದ್ಯೆಯಂತೆ; ಹೆಡ್ಡನ ಜಾಣ್ಮೆಯಂತೆ.

ವಿನಯೇನ ವಿನಾ ಕಾ ಶ್ರೀಃ ಕಾ ನಿಶಾ ಶಶಿನಾ ವಿನಾ ।
ರಹಿತಾ ಸತ್ಕವಿತ್ವೇನ ಕೀದೃಶೀ ವಾಗ್ವಿದಗ್ಧತಾ[5] ‖ ೪‖

ವಿನಯವಿಲ್ಲದ ಸಂಪತ್ತು ಯಾವ ಚೆಂದ? ಚಂದ್ರನಿಲ್ಲದ ರಾತ್ರಿ ಯಾವ ಅಂದ? ಒಳ್ಳೆಯ ಕವಿತ್ವವಿಲ್ಲದ ಮಾತಿನ ಜಾಣ್ಮೆ ಯಾವ ಲೆಕ್ಕ?

ಪರಮೆಂಬೆರಡರ್ಕಂ ಬಂ-
ಧುರಕಾವ್ಯನಿಬಂಧದಿಂ ಹಿತಂ ಪೆಱತುಂಟೇ ||
—ಕಾವ್ಯಾವಲೋಕನ, I, ೪.

ಎಂಬ ಮಾತುಗಳಲ್ಲಿ ಕನ್ನಡಿಸಿದ್ದಾನೆ.

[4] ಇಲ್ಲಿರುವ ಮಾಲೋಪಮೆ ಮನೋಹರವಾಗಿದೆ. ಪರಿಪಕ್ವವಾದ ಪಾಂಡಿತ್ಯದ ಪರಮ ಫಲವೇ ಕಾವ್ಯವೆಂಬುದು ಇಲ್ಲಿ ವ್ಯಕ್ತವಾಗಿದೆ. ಶಾಸ್ತ್ರಜ್ಞಾನವಿಲ್ಲದವನು ಮಹಾಕವಿಯಾಗುವುದು ಭಾಮಹನ ದೃಷ್ಟಿಯಲ್ಲಿ ಅಸಂಭವ.

[5] ನಾಗವರ್ಮನ ಅನುವಾದವನ್ನು ಕೆಳಗೆ ಕೊಟ್ಟಿದೆ—

ಮದವಿಲ್ಲದಿಭಂ ಮಧುವಿ-
ಲ್ಲದ ಕುಸುಮಂ ಚಂದ್ರನಿಲ್ಲದಿರುಳಾಳಾರ್ಪಿ-|
ಲ್ಲದ ನೃಪತಿ ಕವಿತೆಯಿಲ್ಲದ
ವಿದಗ್ಧತಾಗುಣಮದೇಂ ಮನಂಗೊಳಿಸುಗುಮೇ ||
—ಕಾವ್ಯಾವಲೋಕನ, II, ೩.

ಮಾತುಬಲ್ಲವನೆಂಬ ಹೆಮ್ಮೆಯುಳ್ಳವನು ಕವಿತೆಯನ್ನು ಬರೆಯಲೇಬೇಕೆಂಬುದು ಭಾಮಹನ ಮತ. 'ವಿನೋಕ್ತಿ' ಮತ್ತು 'ದೃಷ್ಟಾಂತ'ವೆಂಬ ಅಲಂಕಾರಗಳನ್ನು ಮೂಲದಲ್ಲಿ ಗಮನಿಸ ಬಹುದು.

ಗುರೂಪದೇಶಾದಧ್ಯೇತುಂ ಶಾಸ್ತ್ರಂ ಜಡಧಿಯೋಽಪ್ಯಲಮ್ ।
ಕಾವ್ಯಂ ತು ಜಾಯತೇ ಜಾತು ಕಸ್ಯಚಿತ್ ಪ್ರತಿಭಾವತಃ[6] ॥೫॥

ಮಂದಬುದ್ಧಿಗಳು ಬೇಕಾದರೂ ಗುರುಗಳ ಉಪದೇಶದಿಂದ ಶಾಸ್ತ್ರವನ್ನು ಅಭ್ಯಾಸಮಾಡಬಹುದು. ಆದರೆ ಕಾವ್ಯ ಹುಟ್ಟುವುದು ಎಲ್ಲೋ ಲಕ್ಷಕ್ಕೊಬ್ಬ ಪ್ರತಿಭಾಶಾಲಿಯಿಂದ ಮಾತ್ರ.

ಉಪೇಯುಷಾಮಪಿ ದಿವಂ ಸನ್ನಿಬಂಧವಿಧಾಯಿನಾಮ್ ।
ಆಸ್ತ ಏವ ನಿರಾತಂಕಂ ಕಾಂತಂ ಕಾವ್ಯಮಯಂ ವಪುಃ ॥೬॥

ಒಳ್ಳೆಯ ಕೃತಿಗಳನ್ನು ಬರೆದವರು ದಿವಂಗತರಾದ ಮೇಲೆಯೂ ಅವರ ಕಾವ್ಯ ಮಯವಾದ ಸುಂದರ ಶರೀರವು ಮಾತ್ರ ಎಂದೆಂದೂ ಕುಂದಿಲ್ಲದೆ ಉಳಿದೇ ಇರುವುದು.

ರುಣದ್ಧಿ ರೋದಸೀ ಚಾಸ್ಯ ಯಾವತ್ ಕೀರ್ತಿರನಶ್ವರೀ ।
ತಾವತ್ ಕಿಲಾಯಮಧ್ಯಾಸ್ತೇ ಸುಕೃತೀ ವೈಬುಧಂ ಪದಮ್ ॥೭॥

ಎಂದಿನ ವರೆಗೆ ಕವಿಯ ಶಾಶ್ವತ ಕೀರ್ತಿ ಭೂಮ್ಯಾಕಾಶಗಳ ಮೇರೆಯನ್ನು ಮುಟ್ಟುತ್ತಿರುವುದೋ ಅಂದಿನ ವರೆಗೂ ಆ ಪುಣ್ಯಾತ್ಮನು ಅಮರತ್ವವನ್ನು ಅನುಭವಿಸುತ್ತಲೇ ಇರುವನು.[7]

---

[6] ಈ ಶ್ಲೋಕದ ಭಾವವನ್ನು ನೃಪತುಂಗ, ನಾಗವರ್ಮ ಇಬ್ಬರೂ ಕನ್ನಡಿಸಿದ್ದಾರೆ :—

ಜಡಜನಮುಮೆಲ್ಲಮೋದಂ
ತಡೆಯದೆ ಕಲ್ಗುಂ ಗುರೂಪದೇಶಕ್ರಮದಿಂ ।
ನುಡಿವಲ್ಮೆಯಲ್ತದೇಂ ಕ-
ಲ್ತೊಡನೋದುವುದಲ್ತೆ ಗಿಳಿಗಳುಂ ಪುರುಳಿಗಳುಂ ॥ —ಕ.ರಾ.ಮಾ., I, ೧೦

ಶ್ರುತವಾರಿನಿಧಿಯ ಪಾರಮ-
ನತಿಪ್ರಬಂಧಾಭಿಯೋಗರಾರೆಯ್ದುದೊಡಂ ।
ಕೃತಪುಣ್ಯಂಗಲ್ಲದೆ ವಿ-
ಶ್ರುತಕವಿತಾರತ್ನಮಲ್ಲಿ ಸಂಭವಿಸುಗುಮೇ ॥ —ಕಾವ್ಯಾ. II, ೨.

[7] ಯಜ್ಞಯಾಗಾದಿಗಳನ್ನು ಮಾಡಿ ಸ್ವರ್ಗವನ್ನು ಸಂಪಾದಿಸಿದವರಿಗೂ ಆ ದೇವತ್ವಪದವಿ ಶಾಶ್ವತವಲ್ಲ ; ಪುಣ್ಯ ತೀರಿದಮೇಲೆ ಮತ್ತೆ ಮನುಷ್ಯಜನ್ಮವೇ ಬರುವುದೆಂದು ವೇದಾಂತಿಗಳ ಸಿದ್ಧಾಂತ. ಭಾಮಹನ ಪ್ರಕಾರ ಕವಿಯ ಅಮರತ್ವ ಅದಕ್ಕಿಂತಲೂ ಹೆಚ್ಚು ಶಾಶ್ವತ ; ಕೀರ್ತಿಯಿರುವ ವರೆಗೂ ಆ ಪದವಿಗೆ ಚ್ಯುತಿಯಿಲ್ಲ ; ಕೀರ್ತಿಯಂತೂ ಶಾಶ್ವತವೇ ಆದುದರಿಂದ ಅದು ಕ್ಷೀಣಿಸುವ ಪ್ರಸಕ್ತಿಯೇ ಇಲ್ಲ. ಇದು ಮತ್ತು ಇದರ ಹಿಂದಿನ ೨ ಶ್ಲೋಕಗಳು ಈ ಮೂರರಲ್ಲೂ 'ವ್ಯತಿರೇಕಾಲಂಕಾರ' ಗಮ್ಯವಾಗಿದೆ.

ಅತೋಽಭಿವಾಂಛತಾ ಕೀರ್ತಿಂ ಸ್ಥೇಯಸೀಮಾ ಭುವಃ ಸ್ಥಿತೇಃ ।
ಯತ್ನೋ ವಿದಿತವೇದ್ಯೇನ ವಿಧೇಯಃ ಕಾವ್ಯಲಕ್ಷಣಃ[8] ‖೮‖

ಆದ್ದರಿಂದ ಭೂಮಿಯಿರುವವರೆಗೂ ಒಂದೇ ಸಮನಾಗಿ ಉಳಿಯುವ ಕೀರ್ತಿಯನ್ನು ಬಯಸುವ ವಿದ್ವಾಂಸನು ಕಾವ್ಯ ಬರೆಯುವ ಕಾರ್ಯವನ್ನು ಕೈಕೊಳ್ಳಬೇಕು.

ಶಬ್ದಶ್ಛನ್ದೋಽಭಿಧಾನಾರ್ಥಾ ಇತಿಹಾಸಾಶ್ರಯಾಃ ಕಥಾಃ ।
ಲೋಕೋ ಯುಕ್ತಿಃ ಕಲಾಶ್ಚೇತಿ ಮನ್ತವ್ಯಾಃ 'ಕಾವ್ಯಹೇತವಃ[9]' ‖೯‖

ವ್ಯಾಕರಣ, ಛಂದಸ್ಸು, ಇತರ ನಿಘಂಟು, ಪುರಾಣಕಥೆಗಳು, ಪ್ರಪಂಚ ವ್ಯವಹಾರ, ತರ್ಕ, ಕಲೆಗಳು—ಇವೆಲ್ಲವೂ ಕಾವ್ಯ ಹುಟ್ಟಲು ಸಹಾಯಮಾಡುವುವೆಂದು ತಿಳಿಯಬೇಕು.

ಶಬ್ದಾಭಿಧೇಯೇ ವಿಜ್ಞಾಯ ಕೃತ್ವಾ ತದ್ವಿದುಪಾಸನಾಮ್ ।
ವಿಲೋಕ್ಯಾನ್ಯನಿಬಂಧಾಂಶ್ಚ ಕಾರ್ಯಃ ಕಾವ್ಯಕ್ರಿಯಾದರಃ[10] ‖೧೦‖

(ಭಾಷೆಯ) ಶಬ್ದ, ಅರ್ಥಗಳನ್ನು ತಿಳಿದು, ಅವುಗಳನ್ನು ಬಲ್ಲವರ ಸೇವೆಮಾಡಿ, ಇತರರ ಕೃತಿಗಳನ್ನೂ ನೋಡಿ, ಆಮೇಲೆ ಸ್ವಂತವಾಗಿ ಕಾವ್ಯ ಬರೆಯುವ ಪ್ರಯತ್ನವನ್ನು ಆದರದಿಂದ ಮಾಡಬೇಕು.

---

[8] ನೃಪತುಂಗನ ಕನ್ನಡ ಅನುವಾದ ಹೀಗಿದೆ:

ಲೋಕದೊಳದಱಿಂ ಕಾವ್ಯ-
ಸ್ವೀಕರಣೋದ್ಯುಕ್ತನಕ್ಕೆ ಕವಿ ತನ್ನಱಿವಂ-|
ತಾ ಕಲ್ಪಾಂತಸ್ಥಾಯಿ
ಶ್ರೀಕೀರ್ತಿವಧೂಪ್ರಧಾನವಲ್ಲಭನಕ್ಕುಂ ||—ಕ.ರಾ.ಮಾ. I, ೨೧.

[9] ಈ ಪಾಠವು ಅಭಿನವಗುಪ್ತನ 'ಲೋಚನ'ದ ಮೇಲಿನ ವ್ಯಾಖ್ಯಾನವಾದ 'ಕೌಮುದಿ' ಯಲ್ಲಿ ಉದಾಹೃತವಾಗಿದೆ.

[10] ಇದರ ಮತ್ತು ಹಿಂದಿನ ಶ್ಲೋಕದ ಅಭಿಪ್ರಾಯದೊಡನೆ ಹೋಲಿಸಿ—

ಪ್ರತಿಭಾನಂ ಕಾವ್ಯವಿದ್ಯಾಪ್ರಚಯಪರಿಚಯಂ ವೃದ್ಧಸೇವಾನುರಾಗಂ
ಸತತಾಭ್ಯಾಸಪ್ರಯತ್ನಂ ಕವಿತೆಗೆ ನಿಯತಂ ಕಾರಣಂ ಪೇೞ್ವೊಡಂತಾ |
ಪ್ರತಿಭಾನಂ ಶಕ್ತಿ ಲೋಕಾಗಮಸಕಲಕಲಾವೇದನಂ ವಿದ್ಯೆ ಶಾಸ್ತ್ರಾ-
ನ್ವಿತನಪ್ಪಂ ವೃದ್ಧನಾಲಸ್ಯಮನುಳಿದೆಸಪುದ್ಯೋಗಮಭ್ಯಾಸಕರ್ಮಂ ||
—ಕಾವ್ಯಾ. II, ೧.

ಸರ್ವಥಾ ಪದಮಪ್ಯೇಕಂ ನ ನಿಗದ್ಯಮವದ್ಯವತ್ ।
ವಿಲಕ್ಷ್ಮಣಾ ಹಿ ಕಾವ್ಯೇನ ದುಃಸುತೇನೇವ ನಿಂದ್ಯತೇ[11] ॥೧೧॥

ಖಂಡಿತವಾಗಿಯೂ ಒಂದೇ ಒಂದು ಪದವನ್ನಾಗಲಿ ದೋಷವಿರುವಂತೆ ಹೇಳಬಾರದು. ಹೀನನಾದ ಮಗನಿಂದ ತಂದೆಗೆ ಹೇಗೆ ಅಪಕೀರ್ತಿ ಬರುವುದೋ ಹಾಗೆಯೇ ನಿಯಮಗಳನ್ನು ಮೀರಿ ಬರೆದ ಕಾವ್ಯದಿಂದ ಕವಿಗೂ ಅಪಕೀರ್ತಿಯುಂಟಾಗುವುದು.

ನಾಕವಿತ್ವಮಧರ್ಮಾಯ ವ್ಯಾಧಯೇ ದಂಡನಾಯ ವಾ ।
ಕುಕವಿತ್ವಂ ಪುನಃ ಸಾಕ್ಷಾನ್ಮೃತಿಮಾಹುರ್ಮನೀಷಿಣಃ[12] ॥೧೨॥

ಕವಿತ್ವವನ್ನು ಮಾಡದಿದ್ದರೆ ಯಾವ ಪಾಪವೂ ಇಲ್ಲ; ಯಾವ ರೋಗವೂ ಬರುವುದಿಲ್ಲ; ಯಾರೂ ಶಿಕ್ಷೆ ವಿಧಿಸುವುದಿಲ್ಲ. ಆದರೆ ಕೆಟ್ಟ ಕವಿತ್ವವನ್ನು ಮಾಡುವುದು ಬದುಕಿದ್ದೂ ಮರಣವೇ ಸರಿ ಎಂದು ಬಲ್ಲವರು ಹೇಳುತ್ತಾರೆ.

ರೂಪಕಾದಿರಲಂಕಾರಸ್ತಸ್ಯಾನ್ಯೈರ್ಬಹುಧೋದಿತಃ ।
ನ ಕಾನ್ತಮಪಿ ನಿರ್ಭೂಷಂ ವಿಭಾತಿ ವನಿತಾಮುಖಮ್ ॥೧೩॥

ಕಾವ್ಯಕ್ಕೆ 'ರೂಪಕ'ವೇ ಮೊದಲಾದವು ಅಲಂಕಾರಗಳೆಂದು ಕೆಲವರು ಹಲವಾರು ಪರಿಗಳಿಂದ ಹೇಳಿದ್ದಾರೆ. ಹೆಣ್ಣಿನ ಮುಖವು ಚೆನ್ನಾಗಿದ್ದರೂ ಒಡವೆಗಳೊಂದೂ ಇಲ್ಲದಿದ್ದರೆ ಶೋಭಿಸುವುದಿಲ್ಲ.

---

11 ಹೋಲಿಸಿ—

ಕೃತಿಸತಿಯ ಮೆಯ್ಯೊಳೆಳ್ಳನಿ-
ತು ತಾನದೊಂದಱಿಯೆ ದೋಷಮಾಗೆ ತದಾವ-।
ರ್ಜಿತಮಪ್ಪ ಕೀರ್ತಿಯುಂ ನಿಂ-
ದಿತಮಕ್ಕುಂ ದರ್ಪಣಾರ್ಪಿತಚ್ಛಾಯೆಯವೋಲ್ ॥

—ಅದೇ II, ೫.

12 ಹೋಲಿಸಿ—

. . . . . ರಚನೆಯೊಳೇಂ ।
ಬೆಸನಂ ತನಗಿನಿತಱಿ ಬೇ
ವಸಮೇಂ ಕವರ್ದವರುಮೊಳರೆ ಕವಿಯಲ್ಲದರಂ ॥

—ಕ.ರಾ.ಮಾ. I, ೧೨.

ಇಲ್ಲಿ ದೃಷ್ಟಾಂತವೆಂಬ ಅಲಂಕಾರವಿದೆ.

ರೂಪಕಾದಿಮಲಂಕಾರಂ ಬಾಹ್ಯಮಾಚಕ್ಷತೇ ಪರೇ |
ಸುಪಾಂ ತಿಙಾಂ ಚ ವ್ಯುತ್ಪತ್ತಿಂ ವಾಚಾಂ ವಾಂಛಂತ್ಯಲಂಕೃತಿಮ್[13] ‖೧೪‖

'ರೂಪಕ'ವೇ ಮೊದಲಾದ ಅಲಂಕಾರಗಳು ಕಾವ್ಯದ ಹೊರಮೈಯನ್ನು ಕುರಿತವೆಂದು ಇತರರು ಹೇಳುತ್ತಾರೆ. ಇವರು ನಾಮವಿಭಕ್ತಿಗಳ ಮತ್ತು ಧಾತುರೂಪಗಳ ವ್ಯಾಕರಣಶುದ್ಧಿಯನ್ನೇ ಮಾತುಗಳಿಗೆ ಅಲಂಕಾರವೆಂದು ಬಗೆಯುತ್ತಾರೆ.

ತದೇತದಾಹುಃ ಸೌಶಬ್ದ್ಯಂ ನಾರ್ಥವ್ಯುತ್ಪತ್ತಿರೀದೃಶೀ |
ಶಬ್ದಾಭಿಧೇಯಾಲಂಕಾರಭೇದಾದಿಷ್ಟಂ ದ್ವಯಂ ತು ನಃ ‖೧೫‖

ಇದನ್ನು (=ವ್ಯಾಕರಣಶುದ್ಧಿಯನ್ನು) 'ತಪ್ಪುಗಳಿಲ್ಲದ ಪದಪ್ರಯೋಗ'ವೆಂದೂ ಹೇಳುವುದುಂಟು. ಅರ್ಥದ ಸೊಗಸು ಇಂತಹುದಲ್ಲ. ನಮಗೆ ಒಪ್ಪಿಗೆಯಾದ ಅಲಂಕಾರವು 'ಶಬ್ದಾಲಂಕಾರ' ಮತ್ತು 'ಅರ್ಥಾಲಂಕಾರ' ಎಂದು ಇಬ್ಬಗೆಯಾಗಿದೆ.

ಶಬ್ದಾರ್ಥೌ ಸಹಿತೌ ಕಾವ್ಯಂ ಗದ್ಯಂ ಪದ್ಯಂ ಚ ತದ್ ದ್ವಿಧಾ |
ಸಂಸ್ಕೃತಂ ಪ್ರಾಕೃತಂ ಚೈತದ್ ಅಪಭ್ರಂಶ ಇತಿ ತ್ರಿಧಾ[14] ‖೧೬‖

---

[13] ಹೋಲಿಸಿ—

ಸ್ತುವಂತಿ ಗುರ್ವೀಮಭಿಧೇಯಸಂಪದಂ
ವಿಶುದ್ಧಿಮುಕ್ತೇರಪರೇ ವಿಪಶ್ಚಿತಃ |
ಇತಿ ಸ್ಥಿತಾಯಾಂ ಪ್ರತಿಪೂರುಷಂ ರುಚಾ
ಸುದುರ್ಲಭಾಃ ಸರ್ವಮನೋರಮಾ ಗಿರಃ ||

—ಭಾರವಿಯ ಕಿರಾತಾರ್ಜುನೀಯ IV, ೫.

[14] ಹೋಲಿಸಿ—'ಶಬ್ದಾರ್ಥೌ ಸತ್ಕವಿರಿವ ದ್ವಯಂ ವಿದ್ವಾನಪೇಕ್ಷತೇ'

—ಮಾಘನ ಶಿಶುಪಾಲವಧ I.

'ಹಿತ'ದಿಂದ ಕೂಡಿದ್ದು 'ಸಹಿತ'; ಅದರ ಭಾವ 'ಸಾಹಿತ್ಯ' ಎಂಬ ಪ್ರಚಲಿತವಿವರಣೆ ಭಾಮಹಾದಿಗಳಿಗೆ ಸಮ್ಮತವಲ್ಲ. ಒಂದೇ ಕಾವ್ಯ ಅಥವಾ ಶಬ್ದಾರ್ಥಗಳ ಸಾಹಿತ್ಯ (=ಸಾಮರಸ್ಯ)ವು ಬೇರೆಬೇರೆ ದೃಷ್ಟಿಗಳಿಂದ ಎರಡು, ಮೂರು, ನಾಲ್ಕು, ಐದಾಗುವುದನ್ನು ಭಾಮಹನು ಮುಂದಿನ ಶ್ಲೋಕಗಳಲ್ಲಿ ತೋರಿಸುತ್ತಾನೆ. ಈ ಶಬ್ದಾರ್ಥ ಸಾಹಿತ್ಯವೆಂದರೆ ಶಬ್ದಾರ್ಥಾಲಂಕಾರಗಳ ಸಂಪರ್ಕವೆಂಬುದು ನೃಪತುಂಗನ ಕೆಳಗಿನ ಶ್ಲೋಕದಿಂದ ತಿಳಿಯುತ್ತದೆ.

ಕವಿಭಾವಕೃತಾನೇಕ
ಪ್ರವಿಭಾಗವಿವಿಕ್ತಸೂಕ್ತಮಾರ್ಗಂ ಕಾವ್ಯಂ ||

ಶಬ್ದ, ಅರ್ಥ ಎರಡೂ ಸೇರಿದಾಗ ಕಾವ್ಯವಾಗುತ್ತದೆ. ಅದು 'ಗದ್ಯ', 'ಪದ್ಯ' ಎಂದು ಎರಡು ವಿಧ. ಮತ್ತೆ ಅದೇ 'ಸಂಸ್ಕೃತ', 'ಪ್ರಾಕೃತ' ಮತ್ತು 'ಅಪಭ್ರಂಶ' ಎಂಬ ಮೂರು ಬಗೆಯ (ಭಾಷೆಗಳ)ಲ್ಲಿರುತ್ತದೆ.

ವೃತ್ತದೇವಾದಿಚರಿತಶಂಸಿ ಚೋತ್ಪಾದ್ಯವಸ್ತು ಚ |
ಕಲಾಶಾಸ್ತ್ರಾಶ್ರಯಂ ಚೇತಿ ಚತುರ್ಧಾ ಭಿದ್ಯತೇ ಪುನಃ ||೧೭||

(ಕಾವ್ಯದ ವಿಷಯ ವೈವಿಧ್ಯವನ್ನು ಗಮನಿಸಿದರೆ) ಮತ್ತೆ ಅದೇ ನಾಲ್ಕರನಾಗುತ್ತದೆ. (೧) (ಪುರಾಣಪ್ರಸಿದ್ಧರಾದ) ದೇವತೆಗಳೇ ಮುಂತಾದವರ ಪೂರ್ವದ ಚರಿತ್ರೆಯನ್ನು ಕುರಿತುದು, (೨) ಕವಿಕಲ್ಪಿತವಾದ ವಸ್ತುವುಳ್ಳುದು, (೩) ಕಲೆಗಳನ್ನು ಆಶ್ರಯಿಸಿ ಬರೆದುದು, (೪) ಶಾಸ್ತ್ರಗಳನ್ನು ಆಶ್ರಯಿಸಿ ಬರೆದುದು.

ಸರ್ಗಬಂಧೋಽಭಿನೇಯಾರ್ಥಂ ತಥೈವಾಖ್ಯಾಯಿಕಾಕಥೇ |
ಅನಿಬದ್ಧಂ ಚ ಕಾವ್ಯಾದಿ ತತ್ ಪುನಃ ಪಂಚಧೋಚ್ಯತೇ ||೧೮||

(ಕಾವ್ಯದ ಪ್ರಕಾರಗಳನ್ನು ಗಮನಿಸಿದರೆ) ತಿರುಗಿ ಅದೇ ಐದು ವಿಧವೆನ್ನಬಹುದು—(೧) ಅನೇಕ ಸರ್ಗಗಳು ಸೇರಿ ಆದ ಮಹಾಕಾವ್ಯ, (೨) ಅಭಿನಯಕ್ಕಾಗಿ ಬರೆದ ನಾಟಕ, (೩) ಆಖ್ಯಾಯಿಕೆ, (೪) ಕಥೆ, (೫) ಮುಕ್ತಕ.

ಸರ್ಗಬಂಧೋ ಮಹಾಕಾವ್ಯಂ ಮಹತಾಂ ಚ ಮಹಚ್ಚ ಯತ್ |
ಅಗ್ರಾಮ್ಯಶಬ್ದಮರ್ಥ್ಯಂ ಚ ಸಾಲಂಕಾರಂ ಸದಾಶ್ರಯಮ್ ||೧೯||

ಮಂತ್ರದೂತಪ್ರಯಾಣಾಜಿನಾಯಕಾಭ್ಯುದಯೈಶ್ಚ ಯತ್ |
ಪಂಚಭಿಃ ಸಂಧಿಭಿರ್ಯುಕ್ತಂ ನಾತಿವ್ಯಾಖ್ಯೇಯಮೃದ್ಧಿಮತ್ ||೨೦||

ಸವಿಶೇಷಶಬ್ದರಚನಂ
ವಿವಿಧಾರ್ಥವ್ಯಕ್ತಿವರ್ತಿತಾಲಂಕಾರಂ ||
ಕ.ರಾ.ಮಾ. I, ૩૩.

ಇದರೊಡನೆ ನಾಗವರ್ಮನ ಈ ಸೂತ್ರವನ್ನು ಹೋಲಿಸಬಹುದು—

ಇರೆ ಶಬ್ದಾರ್ಥಂಗಳ್ ತ
ತ್ಪರತೆಯಿನದು ಕಾವ್ಯಮದಱೊಳುಚಿತ್ಯೆಕಾರ್ಥಾಂ|
ತರವಾಚಿ ಶಬ್ದಮವಭಾ—
ಸರೂಪಮಾಹ್ಲಾದಕಾರಿಯಪ್ಪುದದರ್ಥಂ ||—ಕಾವ್ಯಾ. ಸೂ. ೯೨

ಚತುರ್ವರ್ಗಾಭಿಧಾನೇಽಪಿ ಭೂಯಸಾರ್ಥೋಪದೇಶಕೃತ್ ।
ಯುಕ್ತಂ ಲೋಕಸ್ವಭಾವೇನ ರಸೈಶ್ಚ ಸಕಲೈಃ ಪೃಥಕ್ ॥ ೨೧॥

ಅನೇಕ ಸರ್ಗಗಳು ಕೂಡಿ ಆದುದಕ್ಕೆ ಮಹಾಕಾವ್ಯವೆಂದು ಹೆಸರು. ಅದು ಮಹಾಪುರುಷರನ್ನು ಕುರಿತಿರುವುದಲ್ಲದೆ ಪರಿಮಾಣದಲ್ಲಿಯೂ ಮಹತ್ತಾಗಿರುವುದು. ಅದರ ಶಬ್ದಗಳಲ್ಲಿ ಗ್ರಾಮ್ಯ ಅಥವಾ ಅಶ್ಲೀಲದೋಷವಿರುವುದಿಲ್ಲ; ಅರ್ಥದಲ್ಲಿ ಗೌರವವಿರುತ್ತದೆ. ಅಲಂಕಾರಗಳಿಂದ ಭೂಷಿತವಾಗಿರುವುದಲ್ಲದೆ ಉತ್ತಮವಾದ ವಸ್ತುವನ್ನಾಶ್ರಯಿಸಿರುತ್ತದೆ. ಮಂತ್ರಾಲೋಚನೆ, ದೂತರು, ಪ್ರಯಾಣ, ಯುದ್ಧ, ನಾಯಕಾಭ್ಯುದಯಗಳಿಂದಲೂ ಪಂಚಸಂಧಿ[15]ಗಳಿಂದಲೂ ಸಮನ್ವಿತವಾಗಿರುತ್ತದೆ. ಕಷ್ಟಪಟ್ಟು ಅರ್ಥಮಾಡುವಂತಿರುವುದಿಲ್ಲ; ಎಲ್ಲ ರೀತಿಯಿಂದಲೂ ಸಮೃದ್ಧವಾಗಿರುತ್ತದೆ. ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳನ್ನೂ ಪ್ರತಿಪಾದಿಸುತ್ತಿದ್ದರೂ, ವಿಶೇಷವಾಗಿ ಐಹಿಕವಾದ ಅರ್ಥದ ಉಪದೇಶಕ್ಕೆ ಪ್ರಾಧಾನ್ಯವಿರುತ್ತದೆ. ಲೋಕಸ್ವಭಾವವನ್ನು ಚಿತ್ರಿಸುವುದಲ್ಲದೆ ಬೇರೆ ಬೇರೆ ರಸಗಳೆಲ್ಲವನ್ನೂ ಒಳಗೊಂಡಿರುತ್ತದೆ.

ನಾಯಕಂ ಪ್ರಾಗುಪನ್ಯಸ್ಯ ವಂಶವೀರ್ಯಶ್ರುತಾದಿಭಿಃ ।
ನ ತಸ್ಯೈವ ವಧಂ ಬ್ರೂಯಾದನ್ಯೋತ್ಕರ್ಷಾಭಿಧಿತ್ಸಯಾ ॥ ೨೨॥

ಕಾವ್ಯದ ಮೊದಲಲ್ಲಿ ನಾಯಕನ ಕುಲ, ಪ್ರತಾಪ, ವಿದ್ಯೆ ಮುಂತಾದುವನ್ನು ವಿಸ್ತಾರವಾಗಿ ವರ್ಣಿಸಿ ಕಡೆಗೆ ವೈರಿಯ ಉತ್ಕರ್ಷವನ್ನು ಸೂಚಿಸುವ ಉದ್ದೇಶದಿಂದ ಆ ನಾಯಕನಿಗೇ ಸಾವು ಒದಗಿತೆಂದು ಹೇಳಲಾಗದು.

ಯದಿ ಕಾವ್ಯಶರೀರಸ್ಯ ನ ಸ ವ್ಯಾಪಿತಯೇಷ್ಯತೇ ।
ನ ಚಾಭ್ಯುದಯಭಾಕ್ ತಸ್ಯ ಮುಧಾದೌ ಗ್ರಹಣಂ ಸ್ತವೇ ॥ ೨೩॥

ಇಡಿಯ ಕಾವ್ಯಶರೀರದ ಉದ್ದಕ್ಕೂ ಆತನು ಮುಖ್ಯನಾಗಿರಬೇಕಾಗಿಲ್ಲದ ಪಕ್ಷಕ್ಕೆ ಮತ್ತು ಕಡೆಗೆ ಅವನು ಅಭ್ಯುದಯವನ್ನು ಪಡೆಯದ ಪಕ್ಷಕ್ಕೆ ಮೊದಲೆಲ್ಲ ಅವನನ್ನು ಕೊಂಡಾಡುವುದು ವ್ಯರ್ಥವೇ ಸರಿ.

ನಾಟಕಂ ದ್ವಿಪದೀಶಮ್ಯಾರಾಸಕಸ್ಕಂಧಕಾದಿ ಯತ್ ।
ಉಕ್ತಂ ತದಭಿನೇಯಾರ್ಥಂ, ಉಕ್ತೋಽನ್ಯೈಸ್ತಸ್ಯ ವಿಸ್ತರಃ ॥ ೨೪॥

---

15 ಮುಖ, ಪ್ರತಿಮುಖ, ಗರ್ಭ, ಅವಮರ್ಶ, ನಿರ್ವಹಣ ಎಂಬುವು ಭರತೋಕ್ತವಾದ ಐದು ಸಂಧಿಗಳು. ಹೋಲಿಸಿ ಕಾವ್ಯಾ. ಸೂತ್ರ ೨೪೬.

ನಾಟಕ, ದ್ವಿಪದಿ, ಶಮ್ಯಾ, ರಾಸಕ, ಸ್ಕಂಧಕ ಇವೇ ಮುಂತಾದುವು[16] ಅಭಿನಯಕ್ಕಾಗಿ ಹೇಳಿರುವ ಕಾವ್ಯಜಾತಿ. ಅದರ ವಿವರಗಳನ್ನು ಬೇರೆಯವರು ಆಗಲೇ ಹೇಳಿದ್ದಾರೆ.

ಸಂಸ್ಕೃತಾನಾಕುಲಶ್ರವ್ಯಶಬ್ದಾರ್ಥಪದವೃತ್ತಿನಾ |
ಗದ್ಯೇನ ಯುಕ್ತೋದಾತ್ತಾರ್ಥಾ ಸೋಚ್ಛ್ವಾಸಾಖ್ಯಾಯಿಕಾ ಮತಾ || ೨೫ ||

ಸಂಸ್ಕೃತ ಭಾಷೆಯಲ್ಲಿ ಲಲಿತ ಹಾಗು ಮಧುರವಾದ ಶಬ್ದಾರ್ಥಗಳಿಂದ ತುಂಬಿದ ಸಮಾಸಮಯವಾದ ಗದ್ಯದಲ್ಲಿದ್ದು, ಉದಾತ್ತವಾದ ವಿಷಯಗಳನ್ನೊಳಗೊಂಡು, 'ಉಚ್ಛ್ವಾಸ'ವೆಂಬ ಹೆಸರಿನ ಅಧ್ಯಾಯಗಳು ಇರುತ್ತಿದ್ದರೆ ಅಂತಹ ಕಾವ್ಯಕ್ಕೆ 'ಆಖ್ಯಾಯಿಕೆ'[17]ಯೆನ್ನುವರು.

ವೃತ್ತಮಾಖ್ಯಾಯತೇ ತಸ್ಯಾಂ ನಾಯಕೇನ ಸ್ವಚೇಷ್ಟಿತಮ್ |
ವಕ್ತ್ರಂ ಚಾಪರವಕ್ತ್ರಂ ಚ ಕಾಲೇ ಭಾವ್ಯರ್ಥಶಂಸಿ ಚ || ೨೬ ||

ಅದರಲ್ಲಿ (ಆಖ್ಯಾಯಿಕೆಯಲ್ಲಿ) ನಾಯಕನು ತನ್ನ ಹಿಂದಿನ ಚರಿತ್ರೆಯನ್ನೆಲ್ಲ

---

[16] 'ನಾಟಕ'ವನ್ನು ಬಿಟ್ಟರೆ ಇಲ್ಲಿ ಹೇಳಿರುವ ಹೆಸರುಗಳು ಈಗ ಅಪ್ರಸಿದ್ಧವಾಗಿ ತೋರುತ್ತವೆ. ಆದರೆ ಇವೆಲ್ಲವೂ ಗೀತರೂಪಕಗಳಾಗಿದ್ದುವಲ್ಲದೆ, ಪ್ರಾಕೃತ ಮತ್ತು ದೇಶ್ಯಭಾಷೆಗಳಲ್ಲಿರುತ್ತಿದ್ದುವೆಂದು ತೋರುತ್ತದೆ. ಗೀತ ಮತ್ತು ನೃತ್ಯ ಇವೇ ಪ್ರಧಾನವಾಗಿದ್ದು ಬೇರೆ ಬೇರೆ ಪ್ರಾಂತಗಳಲ್ಲಿ ಪ್ರಚಾರದಲ್ಲಿದ್ದ 'ಅಭಿನೇಯಾರ್ಥ'ಗಳಿಗೆ ಈ ಹೆಸರುಗಳಿದ್ದುವು. ಉದಾಹರಣೆಗೆ—ಹೇಮಚಂದ್ರನು ಕೊಡುವ **ರಾಸಕ**ದ ಲಕ್ಷಣವನ್ನು ನೋಡಿ—

ಅನೇಕನರ್ತಕೀಯೋಜ್ಯಂ ಚಿತ್ರತಾಲಲಯಾನ್ವಿತಮ್ |
ಆಚತುಃಷಷ್ಟಿಯುಗಲಾದ್ರಾಸಕಂ ಮಸೃಣೋದ್ಧತಮ್ ||

ಅರವತ್ತುನಾಲ್ಕು ಜೊತೆ ನರ್ತಕಿಯರು ಚಿತ್ರ ವಿಚಿತ್ರ ತಾಲಲಯಗಳಿಗನುಗುಣವಾಗಿ ಮಾಡುವ ನೃತ್ಯವೇ ರಾಸಕ (ರಾಸಕ್ರೀಡೆ?). ಅವನೂ ಕೂಡ ಶಮ್ಯಾ, ಛಲಿತ, ದ್ವಿಪದಿ ಮುಂತಾದ 'ಗೇಯ' ರೂಪಕಗಳನ್ನು "ಬ್ರಹ್ಮ ಭರತಕೋಹಲಾದಿ ಶಾಸ್ತ್ರ"ಗಳಿಂದ ತಿಳಿಯಿರಿ ಎನ್ನುತ್ತಾನೆ—ಕಾವ್ಯಾನುಶಾಸನ. ಪುಟ ೪೪೯ (ಮಹಾವೀರ ಜೈನ ವಿದ್ಯಾಲಯ, ಮುಂಬಯಿ, ಪರಿಷ್ಕರಣ). ಭಾಮಹನು ಹೇಳುವ 'ಬೇರೆಯವರು' ಇವರೇ ಇರಬಹುದು.

[17] ಭಾಮಹನ ಮನಸ್ಸಿನಲ್ಲಿರಬಹುದಾದ ಪ್ರಾಚೀನ 'ಆಖ್ಯಾಯಿಕೆ'ಗಳು ಈಗ ಉಪಲಬ್ಧವಿಲ್ಲ. ಈಗ ಸಿಕ್ಕುವ ಬಾಣನ 'ಹರ್ಷಚರಿತೆ'ಯಲ್ಲಿ ನಾಯಕನೇ ಸ್ವಚೇಷ್ಟಿತವನ್ನು ಹೇಳಿಕೊಳ್ಳಬೇಕೆಂಬ ಮುಖ್ಯಲಕ್ಷಣವೇ ಪೂರ್ಣವಾಗಿ ಪಾಲಿತವಾದಂತಿಲ್ಲ.

ತಾನೇ ಬಾಯಿಂದ ಹೇಳಿಕೊಳ್ಳುತ್ತಾನೆ. 'ವಕ್ತ್ರ'[18] ಮತ್ತು 'ಅಪರವಕ್ತ್ರ'[19] ಎಂಬ ಛಂದಸ್ಸಿನ ಪದ್ಯಗಳು ಆಗಾಗ ಮುಂದಾಗುವುದನ್ನು ಸೂಚಿಸಲು ಬರುತ್ತವೆ.

ಕವೇರಭಿಪ್ರಾಯಕೃತೈರಂಕನ್ಯೈಃ ಕೈಶ್ಚಿದಂಕಿತಾ |
ಕನ್ಯಾಹರಣಸಂಗ್ರಾಮವಿಪ್ರಲಂಭೋದಯಾನ್ವಿತಾ ‖ ೨೭ ‖

ಕವಿಯ ಅಭಿಪ್ರಾಯವನ್ನು ಸೂಕ್ಷ್ಮವಾಗಿ ಒಳಗೊಂಡ ಕೆಲವು 'ಮುದ್ರೆ'

---

[18] ಇದು ಅನುಷ್ಟುಭ್ ಛಂದಸ್ಸಿನ ಪ್ರಕಾರಾಂತರ. ಕೆಳಗಿನ ಉದಾಹರಣೆಯನ್ನು ನೋಡಿ—

| ಜ | ಯ |
| ⏑ — ⏑ | ⏑ — — |

ನಿ ಜ ವ ರ್ಷ ಹಿ ತ ಸ್ನೇ ಹಾ ಬಹುಭಕ್ತಜನಾನ್ವಿತಾಃ |
ಸುಕಾಲಾ ಇವ ಜಾಯನ್ತೇ ಪ್ರಜಾಃ ಪುಣ್ಯೇನ ಭೂಭೃತಃ ||

—ಹರ್ಷಚರಿತೆ, III, ಪು. ೮೩.

"ಅನುಷ್ಟುಭಿ ನಾದ್ಯಾತ್ಸ್ನೌ ತುರ್ಯಾದ್ಯೋ ವಕ್ತ್ರಮ್" ಎಂದು ಹೇಮಚಂದ್ರನು ಅದರ ಲಕ್ಷಣ ಹೇಳಿದ್ದಾನೆ (ಛಂದೋನುಶಾಸನ). ವೃತ್ತರತ್ನಾಕರ (II. ೨೧)ದಲ್ಲಿ 'ವಕ್ತ್ರಂ ನಾದ್ಯಾನ್ನಸೌ ಸ್ಯಾತಾಮಬ್ಧೇರ್ಯೋಽನುಷ್ಟುಭಿ ಖ್ಯಾತಮ್' ಎಂದು ಲಕ್ಷಣ ಹೇಳಿದೆ. ಎಂದರೆ ಮೊದಲನೆಯ ಅಕ್ಷರವನ್ನು ಬಿಟ್ಟು ೨, ೩, ೪ ನೆ ಅಕ್ಷರಗಳು ಸಗಣ (⏑ — —) ಇಲ್ಲವೆ ನಗಣ (⏑ ⏑ ⏑) ವಾಗಕೂಡದು; ಮತ್ತು ನಾಲ್ಕನೆಯ ಅಕ್ಷರವನ್ನು ಬಿಟ್ಟು ೫, ೬, ೭ ನೆ ಅಕ್ಷರಗಳು ಯಗಣ (⏑ — —) ವಾಗಿರಬೇಕು. ಲಕ್ಷಣವು ಉದಾಹರಣೆಯ ಮೊದಲನೆಯ ಪಾದದಲ್ಲಿ ಮಾತ್ರ ಬಂದಿದೆ.

[19] 'ಅಪರವಕ್ತ್ರ' ಬೇರೆ ಜಾತಿಗೆ ಸೇರಿದುದು. ಅದರ ಲಕ್ಷಣ—'ನಾರಲ್ಗಾ ನ್ಜಜ್ರಾ ಅಪರವಕ್ತ್ರಮ್', ಕ್ರಮವಾಗಿ ಒಂದು ಮೂರನೆಯ ಪಾದಗಳಲ್ಲಿ ನ, ನ, ರ, ಗಣಗಳೂ, ಲಘು, ಗುರುಗಳೂ ಎರಡು ನಾಲ್ಕನೆಯ ಪಾದಗಳಲ್ಲಿ ಕ್ರಮವಾಗಿ ನ, ಜ, ಜ, ರ, ಗಣಗಳೂ ಬರಬೇಕು. ಉದಾಹರಣೆ—

ನ	ನ	ರ	ಲ ಗು
⏑ ⏑ ⏑	⏑ ⏑ ⏑	— ⏑ —	⏑ —
ತ ರ ಲ	ಯ ಸಿ ದೃ	ಶಂ ಕಿ ಮು	ತ್ಸು ಕಾಮ್

ನ	ಜ	ಜ	ರ
⏑ ⏑ ⏑	⏑ — ⏑	⏑ — ⏑	— ⏑ —
ಅ ಕ ಲು	ಷ ಮಾ ನ	ಸ ವಾ ಸ	ಲಾ ಲಿ ತೇ	

ಅವತರ ಕಲಹಂಸಿ ವಾಪಿಕಾಂ
ಪುನರಪಿ ಯಾಸ್ಯಸಿ ಪಂಕಜಾಲಯಮ್ ||

—ಹರ್ಷಚರಿತೆ, I, ಪುಟ ೧೮.

ಗಳಿಂದಲೂ ಅದು ಗರ್ಭಿತವಾಗಿರುವುದುಂಟು. ಕನ್ಯಾಹರಣ, ಯುದ್ಧ, ವಿರಹ, ನಾಯಕನ ಅಭ್ಯುದಯ—ಇವುಗಳಿಂದಂತೂ ಕೂಡಿರುತ್ತದೆ.

ನ ವಕ್ತ್ರಾಪರವಕ್ತ್ರಾಭ್ಯಾಂ ಯುಕ್ತಾ ನೋಚ್ಛ್ವಾಸವತ್ಯಪಿ।
ಸಂಸ್ಕೃತಾಸಂಸ್ಕೃತಾ ಚೇಷ್ಟಾ ಕಥಾಪಭ್ರಂಶಭಾಕ್ತಥಾ ॥ ೨೮॥

ಆದರೆ 'ಕಥೆ'[20] (ಯೆಂಬ ಕಾವ್ಯಜಾತಿ)ಯಲ್ಲಿ 'ವಕ್ತ್ರ', 'ಅಪರವಕ್ತ್ರ' ಪದ್ಯಗಳಿರುವುದಿಲ್ಲ; ಉಚ್ಛ್ವಾಸಗಳೂ ಇರುವುದಿಲ್ಲ. ಅದು ಸಂಸ್ಕೃತ, ಪ್ರಾಕೃತ, ಅಪಭ್ರಂಶ, ಹೀಗೆ ಯಾವ ಭಾಷೆಯಲ್ಲಿ ಬೇಕಾದರೂ ಇರಬಹುದು.

ಅನ್ಯೈಃ ಸ್ವಚರಿತಂ ತಸ್ಯಾಂ ನಾಯಕೇನ ತು ನೋಚ್ಯತೇ।
ಸ್ವಗುಣಾವಿಷ್ಕೃತಿಂ ಕುರ್ಯಾದಭಿಜಾತಃ ಕಥಂ ಜನಃ ॥ ೨೯॥

'ಕಥೆ'ಯಲ್ಲಿ ನಾಯಕನ ವೃತ್ತಾಂತವನ್ನು ಬೇರೆಯವರು ಹೇಳುತ್ತಾರೆ; ತಾನೇ ಅದನ್ನು ಹೇಳಿಕೊಳ್ಳುವುದಿಲ್ಲ. ವಿನಯಸಂಪನ್ನನಾದ ಮನುಷ್ಯನು ತನ್ನ ಗುಣಗಳನ್ನು ತಾನೇ ವಿಸ್ತಾರವಾಗಿ ಹೇಗೆ ಹೇಳಿಕೊಂಡಾನು?

ಅನಿಬದ್ಧಂ ಪುನರ್ಗಾಥಾಶ್ಲೋಕಮಾತ್ರಾದಿ ತತ್ ಪುನಃ।
ಯುಕ್ತಂ ವಕ್ರಸ್ವಭಾವೋಕ್ತ್ಯಾ ಸರ್ವಮೇವೈತದಿಷ್ಯತೇ ॥ ೩೦॥

ಬಿಡಿಬಿಡಿಯಾದ ಗಾಥೆ[21], ಶ್ಲೋಕ ಮುಂತಾದುವು 'ಅನಿಬದ್ಧ' ಅಥವಾ ಮುಕ್ತಕಗಳು. ಅದರಲ್ಲಿ ವಕ್ರೋಕ್ತಿ ಇಲ್ಲವೆ ಸ್ವಭಾವೋಕ್ತಿ ಇದ್ದೇ ಇರುತ್ತದೆ. ಈ ಎಲ್ಲವೂ ಕಾವ್ಯವೆಂದು ನಾವು ಒಪ್ಪುತ್ತೇವೆ.

ವೈದರ್ಭಮನ್ಯದಸ್ತೀತಿ ಮನ್ಯನ್ತೇ ಸುಧಿಯೋಽಪರೇ।
ತದೇವ ಚ ಕಿಲ ಜ್ಯಾಯಃ ಸದರ್ಥಮಪಿ ನಾಪರಮ್ ॥ ೩೧॥

ಕೆಲವರು ವಿದ್ವಾಂಸರು ವೈದರ್ಭವೆಂಬ ಮತ್ತೊಂದು ಕಾವ್ಯಜಾತಿಯುಂಟೆಂದು ತಿಳಿಯುತ್ತಾರೆ. ಅದೇ ಬಹಳ ದೊಡ್ಡದಂತೆ! ಒಳ್ಳೆಯ ವಸ್ತುವಿದ್ದರೂ ಉಳಿದುದು ಅಲ್ಲವಂತೆ!

---

20 'ಕಥೆ'ಯೆಂಬ ಕಾವ್ಯಜಾತಿಗೆ ಬಾಣನ ಕಾದಂಬರಿ ಉತ್ತಮವಾದ ಉದಾಹರಣೆ.

21 ಪ್ರಾಕೃತದ ಸೂಕ್ತಿಗಳಿಗೆ ಗಾಥೆಯೆನ್ನುವುದು ರೂಢಿ.

ಗೌಡೀಯಮಿದಮೇತತ್ತು ವೈದರ್ಭಮಿತಿ ಕಿಂ ಪೃಥಕ್ ।
ಗತಾನುಗತಿಕನ್ಯಾಯಾತ್ ನಾನಾಖ್ಯೇಯಮಮೇಧಸಾಮ್ ॥ ೩೨॥

ಇದು 'ಗೌಡೀಯ', ಇದು 'ವೈದರ್ಭ'[22] ಎಂದು ಹೀಗೆ ಬೇರೆ ಬೇರೆ ವಿಂಗಡಿಸುವುದೇತಕ್ಕೆ ? (ಕುರುಡರು) ಒಬ್ಬರನ್ನೊಬ್ಬರು ಹಿಂಬಾಲಿಸುವಂತೆ ಬುದ್ಧಿಯಿಲ್ಲದವರು ಹೀಗೆ ಬೇರೆ ಬೇರೆ ಹೆಸರುಗಳನ್ನು ಬಿತ್ತರಿಸುತ್ತಾರೆ.

ನನು ಚಾಶ್ಮಕವಂಶಾದಿ ವೈದರ್ಭಮಿತಿ ಕಥ್ಯತೇ ।
ಕಾಮಂ ತಥಾಸ್ತು ಪ್ರಾಯೇಣ ಸಂಜ್ಞೇಚ್ಛಾತೋ ವಿಧೀಯತೇ ॥ ೩೩॥

"'ಅಶ್ಮಕವಂಶ'[23] ಮುಂತಾದುದಷ್ಟೇ ವೈದರ್ಭವೆಂದು ನಾವು ಕರೆಯುವುದು!" ಎಂದವರು ಹೇಳಬಹುದು. ಧಾರಾಳವಾಗಿ ಹಾಗೆಯೇ ಹೇಳಿಕೊಳ್ಳಲಿ! ಮನಸ್ಸಿಗೆ ತೋರಿದಂತೆ ಹೆಸರುಗಳನ್ನು ಕೊಟ್ಟುಕೊಳ್ಳುವುದಕ್ಕೆ ಯಾರ ತಡೆಯೂ ಇಲ್ಲ.

ಅಪುಷ್ಟಾರ್ಥಮವಕ್ರೋಕ್ತಿ ಪ್ರಸನ್ನಮೃಜು ಕೋಮಲಮ್ ।
ಭಿನ್ನಂ ಗೇಯಮಿವೇದಂ ತು ಕೇವಲಂ ಶ್ರುತಿಪೇಶಲಮ್ ॥ ೩೪॥

ಅರ್ಥದಲ್ಲಿ ಗಾಂಭೀರ್ಯವಿಲ್ಲ, ಕೊಂಕು ನುಡಿಯ ಸೋಂಕೂ ಇಲ್ಲ; ಆದರೆ ತಿಳಿಯಾಗಿದೆ, ನೀಟಾಗಿದೆ, ಕೋಮಲವಾಗಿದೆ ಎಂದಮೇಲೆ ಕಿವಿಗೆ ಮಾತ್ರ ಇಂಪಾದ ಹಾಡಿನಂತೆಯೇ ಅದು ಕಾವ್ಯಕ್ಕಿಂತ ಬೇರೆಯೇ ನಿಜ.

ಅಲಂಕಾರವದಗ್ರಾಮ್ಯಮರ್ಥ್ಯಂ ನ್ಯಾಯ್ಯಮನಾಕುಲಮ್ ।
ಗೌಡೀಯಮಪಿ ಸಾಧೀಯೋ ವೈದರ್ಭಮಿತಿ ನಾನ್ಯಥಾ ॥ ೩೫॥

ಅಲಂಕಾರಗಳಿಂದ ಕೂಡಿದ್ದು, ಅರ್ಥಪುಷ್ಟಿಯಿಂದ ತುಂಬಿ, ಯುಕ್ತಿಯುಕ್ತವಾಗಿರುವುದಲ್ಲದೆ ಸರಳವೂ ಆಗಿದ್ದರೆ 'ಗೌಡೀಯ'ವೂ ಒಳ್ಳೆಯದೇ ; 'ವೈದರ್ಭ'ವೂ ಒಳ್ಳೆಯದೇ.

---

[22] ಹೋಲಿಸಿ—

ವೈದರ್ಭಗೌಡಮಾರ್ಗವಿ-
ಭೇದಂ ಬಗೆವೊಡೆ ಗತಾನುಗತಿಕವಿದೆಂದೊ-|
ಲ್ದಾದರಿಪರ್ ಕೆಲಬರ್ ಸಂ-
ವಾದದೊಳೆರಡುಂ ಸಮರ್ಥಮಪ್ಪುದಱಿಂದಂ ||

ಕಾವ್ಯಾ. ಸೂ. ೧೨೫.

[23] 'ಅಶ್ಮಕವಂಶ' ಕಾವ್ಯ ಈಗ ಉಪಲಬ್ಧವಿಲ್ಲ.

ನ ನಿತಾಂತಾದಿಮಾತ್ರೇಣ ಜಾಯತೇ ಚಾರುತಾ ಗಿರಾಮ್ ।
ವಕ್ರಾಭಿಧೇಯಶಬ್ದೋಕ್ತಿರಿಷ್ಟಾ ವಾಚಾಮಲಂಕೃತಿಃ ॥ ೩೬ ॥

'ನಿತಾಂತ' ಮುಂತಾದ (ಕಿವಿಗಿಂಪಾದ) ಪದಗಳಷ್ಟರಿಂದಲೇ ಮಾತುಗಳಿಗೆ ಯಾವ ಸೊಗಸೂ ಬರುವುದಿಲ್ಲ. ನಾವು ಮಾತುಗಳಿಗೆ ಅಲಂಕಾರವೆಂದು ಒಪ್ಪುವುದು ಅರ್ಥ ಹಾಗು ಶಬ್ದಗಳೆರಡರಲ್ಲೂ ಕಾಣಬರುವ 'ವಕ್ರೋಕ್ತಿ'[24]ಯನ್ನು ಮಾತ್ರ.

ನೇಯಾರ್ಥಂ ಕ್ಲಿಷ್ಟಮನ್ಯಾರ್ಥಮವಾಚಕಮಯುಕ್ತಿಮತ್ ।
ಗೂಢಶಬ್ದಾಭಿಧಾನಂ ಚ ಕವಯೋ ನ ಪ್ರಯುಂಜತೇ[25] ॥ ೩೭ ॥

'ನೇಯಾರ್ಥ', 'ಕ್ಲಿಷ್ಟ', 'ಅನ್ಯಾರ್ಥ', 'ಅವಾಚಕ', 'ಅಯುಕ್ತಿಮತ್', 'ಗೂಢಶಬ್ದಾಭಿಧಾನ'—ಈ ದೋಷಗಳುಳ್ಳ ಪದಗಳನ್ನು ಕವಿಗಳು ಪ್ರಯೋಗಿಸುವುದಿಲ್ಲ.

ನೇಯಾರ್ಥಂ ನೀಯತೇಽನುಕ್ತೋ ಯಸ್ಯಾರ್ಥಃ ಕೃತಿಭಿರ್ಬಲಾತ್ ।
ಶಬ್ದನ್ಯಾಯಾನುಪಾರೂಢಃ ಕಥಂಚಿತ್ ಸ್ವಾಭಿಸಂಧಿನಾ ॥ ೩೮ ॥

ಬಲವಂತವಾಗಿ ಪಂಡಿತರು ಶಬ್ದದಿಂದ ಸಹಜವಾಗಿ ಬರದಿರುವ ಅರ್ಥವನ್ನು ಎಳೆದು ತರಬೇಕಾಗಿದ್ದರೆ, ಶಬ್ದದ ಪ್ರಸಿದ್ಧವಾದ ಅರ್ಥಕ್ಕೆ ಅದು ದೂರವಾಗಿದ್ದರೂ ಹೇಗೋ ಕಷ್ಟದಿಂದ ತಮ್ಮ ಮನಸ್ಸಿಗೆ ಬಂದ ಅಭಿಪ್ರಾಯವನ್ನು ತಂದು ತೋರಿಸಬೇಕಾಗಿದ್ದರೆ, ಅದು 'ನೇಯಾರ್ಥ'ವೆಂಬ ದೋಷ.

ಮಾಯೇವ ಭದ್ರೇತಿ ಯಥಾ ಸಾ ಚಾಸಾಧ್ವೀ ಪ್ರಕಲ್ಪನಾ ।
ವೇಣುದಾಕೇರಿತಿ ಚ ತಾಂ ನಯನ್ತಿ ವಚನಾದ್ವಿನಾ ॥ ೩೯ ॥

'ಭದ್ರೆ ಮಾಯೆಯಂತೆ' ಎಂಬಲ್ಲಿ ತೋರಿತೋರಿದಂತೆ ಕಲ್ಪನೆಗಳನ್ನು ಮಾಡುತ್ತಾ ಹೊರಟರೆ 'ಮಾ' ಎಂದರೆ 'ಲಕ್ಷ್ಮಿ' 'ಯಾ' ಎಂದರೆ 'ಯಾವಳು' ಇತ್ಯಾದಿಯಾಗಿ ತಲೆಗೆ ತೋರಿದ ಅರ್ಥವನ್ನು ಎಳೆಯಬಹುದು. 'ಭದ್ರಾ' ಎನ್ನುವಾಗಲೂ 'ಭ' ಎಂದರೆ 'ನಕ್ಷತ್ರ'ಗಳನ್ನು 'ದ್ರಾ' ಎಂದರೆ 'ಸೃಷ್ಟಿಸುವಾಕೆ' ಇತ್ಯಾದಿ

---

24 'ವಕ್ರೋಕ್ತಿ' ಎಂಬ ಶಬ್ದವನ್ನು ಭಾಮಹನು ಬಹಳ ವಿಶಾಲಾರ್ಥದಲ್ಲಿ ಪ್ರಯೋಗಿಸುತ್ತಾನೆ. ಕವಿಯ ಪ್ರತಿಭಾವಿಲಾಸಕ್ಕೆ ದಿಕ್ಸೂಚಿಯಾದ ಅತಿಶಯವೇ ಅದು.

25 ಈ ದೋಷಗಳೆಲ್ಲವೂ ಶಬ್ದಗಳನ್ನು ಕುರಿತವು.

ಮನಸ್ಸಿಗೆ ಬಂದಂತೆ ಕಲ್ಪಿಸಬಹುದು. ಹೀಗೆಯೇ ಇದನ್ನು ಎಳೆದೆಳೆದು 'ವೇಣು ದಾಕಿಯ'[26] (ಒಬ್ಬನ ಹೆಸರು) ಎಂಬರ್ಥವನ್ನೂ ಅದಕ್ಕೆ ತೋರಿಸಿದ್ದಾರೆ. ಇದೊಂದಕ್ಕೂ ಶಬ್ದದಲ್ಲಿ ಆಧಾರವಿಲ್ಲ.

ಕ್ಲಿಷ್ಟಂ ವ್ಯವಹಿತಂ ವಿತ್ತೇರನ್ಯಾರ್ಥಂ ವಿಗಮೇ ಯಥಾ |
ವಿಜಹ್ರುಸ್ತಸ್ಯ ತಾಃ ಶೋಕಂ ಕ್ರೀಡಾಯಾಂ ವಿಕೃತಂ ಚ ತತ್ ‖ ೪೦ ‖

ಉದ್ದಿಷ್ಟವಾದ ಅರ್ಥವು ಪ್ರಸಿದ್ಧವಾದ ಅರ್ಥಕ್ಕೆ ದೂರವಾಗಿದ್ದರೆ ಅದು 'ಕ್ಲಿಷ್ಟ'ವೆಂಬ ದೋಷ. ಉದ್ದಿಷ್ಟವಾದ ಅರ್ಥವು ತೋರದೆಯೇ ಹೋಗುವಂತಿದ್ದರೆ ಅದು 'ಅನ್ಯಾರ್ಥ'ವೆಂಬ ದೋಷ. "ಆ ಸ್ತ್ರೀಯರು ಅವನ ಶೋಕವನ್ನು ವಿಹರಿಸಿದರು" ಎಂಬುದು ಕ್ಲಿಷ್ಟ. (ಏಕೆಂದರೆ ಅಪಹರಿಸಿದರು ಎಂಬುದು ಉದ್ದಿಷ್ಟವಾದ ಅರ್ಥ. 'ವಿಹರಿಸು' ಎಂಬ ಕ್ರಿಯೆಗೆ 'ಕ್ರೀಡಿಸು' ಎಂಬುದು ಪ್ರಸಿದ್ಧಾರ್ಥವಾದುದರಿಂದ 'ಅಪಹರಿಸು' ಎಂಬರ್ಥವು ಕಷ್ಟದಿಂದ ಸ್ಫುರಿಸುವುದೇ ಹೊರತು ನೇರವಾಗಿ ಹೊಳೆಯುವುದಿಲ್ಲ) "ಅದು (ಶೋಕನಿವಾರಣೆ) ಕ್ರೀಡೆಯಲ್ಲಿ ವಿಕೃತವಾಯಿತು" ಎಂಬುದು ಅನ್ಯಾರ್ಥ. ['ವಿಕೃತ' ಎಂಬುದಕ್ಕೆ 'ವಿಕಾರ ಹೊಂದಿದ' ಅಥವಾ 'ವಿಕಟ' ಎಂಬುದು ಪ್ರಸಿದ್ಧಾರ್ಥ. 'ವಿಶೇಷವಾಗಿ ಮಾಡಲ್ಪಟ್ಟ' ಎಂಬ ಅರ್ಥ ಆ ಶಬ್ದದಿಂದ ಪ್ರಕೃತದಲ್ಲಿ ತೋರುವುದೇ ಇಲ್ಲ.]

ಹಿಮಾಪಹಾಮಿತ್ರಧರೈರ್ವ್ಯಾಪ್ತಂ ವ್ಯೋಮೇತ್ಯವಾಚಕಮ್ |
ಸಾಕ್ಷಾದರೂಢಂ ವಾಚ್ಯೇಽರ್ಥೇ ನಾಭಿಧಾನಂ ಪ್ರತೀಯತೇ ‖ ೪೧ ‖

---

[26] ನೇಯಾರ್ಥದೋಷಕ್ಕೆ ಲಕ್ಷ್ಯವಾದ ಈ ಭಾಗದಲ್ಲಿ ಸಂಶಯಕ್ಕೆಡೆಯಿರುವುದೇನೂ ಸೋಜಿಗವಲ್ಲ. 'ವೇಣುದಾಕಿ' ಎಂದೊಬ್ಬ ನಾಯಕನ ಹೆಸರೆಂದು ಗೃಹೀತ ಹಿಡಿದಿದೆ. ಮಹಾಮಹೋಪಾಧ್ಯಾಯ ಕುಪ್ಪುಸ್ವಾಮಿ ಶಾಸ್ತ್ರಿಗಳು 'ವೇಣುದಾಕಿ' ಎಂಬ ಶಬ್ದದಲ್ಲೇ ನೇಯತ್ವವುಂಟೆಂದು ಹೇಳುವರೆಂದು ಶ್ರೀ ಡಿ. ಟಿ. ತಾತಾಚಾರ್ಯ ಶಿರೋಮಣಿಗಳು ಬರೆಯುತ್ತಾರೆ. ಆ ವಿವರಣೆಯ ಪ್ರಕಾರ—**'ವೇಣು'** ಎಂದರೆ ಸೂರ್ಯ: **'ದಾಕಿ'** ಎಂದರೆ ಉದಕದಿಂದ ಹುಟ್ಟಿದ ಚಂದ್ರ. ಯಾರಿಗೆ ಚಂದ್ರನೇ ಸೂರ್ಯನಾಗಿ ಕಾಣುವನೋ ಆ ವಿರಹಿಯೇ 'ವೇಣುದಾಕಿ' ಇತ್ಯಾದಿ ವಿಕಲ್ಪಗಳಾಗುತ್ತವೆ. ಆದರೆ ವಾಮನನು ಕಾವ್ಯಾಲಂಕಾರ ಸೂತ್ರ ವೃತ್ತಿಯಲ್ಲಿ ಕೊಟ್ಟಿರುವ ನೇಯಾರ್ಥದ ಉದಾಹರಣೆಯೊಡನೆ ಇದನ್ನು ಹೋಲಿಸಿದರೆ ಭಾಮಹನ ಮನಸ್ಸಿನಲ್ಲೂ 'ಮಾಯೇವ ಭದ್ರಾ' ಎಂಬ ಪದಗಳಿಂದಲೇ 'ವೇಣುದಾಕಿ' ಎಂಬರ್ಥವನ್ನೂ ಎಳೆದುತರುವ ಅಭಿಪ್ರಾಯವು ಮನಸ್ಸಿನಲ್ಲಿದ್ದಂತೆ ತೋರುತ್ತದೆ. ಆದರೆ ಸಂಪ್ರದಾಯ ನಷ್ಟವಾಗಿರುವುದರಿಂದ ಈಗ ಸ್ಪಷ್ಟವಾಗಿ ಏನೂ ಹೇಳುವಂತಿಲ್ಲ. ಉದ್ಭಟನ 'ಭಾಮಹ-ವಿವರಣ'ವು ಉಪಲಬ್ಧವಾದರೆ ಇಂತಹ ಸಂದೇಹಗಳು ನಿವಾರಣೆಯಾದಾವು. ಪಾಠದಲ್ಲಿಯೇ ತಪ್ಪಿದ್ದರೂ ಇರಬಹುದು.

"ಹಿಮನಾಶಕನ ವೈರಿಯನ್ನು ಹೊತ್ತವುಗಳಿಂದ ತುಂಬಿದೆ" ಎಂಬುದು 'ಅವಾಚಕ.' [ಹಿಮನಾಶಕ=ಅಗ್ನಿ; ಅಗ್ನಿಯ ವೈರಿ=ಜಲ; ಜಲವನ್ನು ಹೊತ್ತವು=ಮೋಡ] ರೂಢಿಯಲ್ಲಿ ಯಾವ ಅರ್ಥವು ಶಬ್ದಕ್ಕೆ ಇಲ್ಲವೋ ಅದರ ಪ್ರತೀತಿಯೂ ಉಂಟಾಗುವುದಿಲ್ಲ.

ಅಯುಕ್ತಿಮದ್ ಯಥಾ ದೂತಾ ಜಲಭೃನ್ಮಾರುತೇನ್ದವಃ।
ತಥಾ ಭ್ರಮರಹಾರೀತಚಕ್ರವಾಕಶುಕಾದಯಃ[27] ॥೪೨॥

ಮೋಡ, ಗಾಳಿ, ಚಂದ್ರ, ದುಂಬಿ, ಕಪೋತ, ಚಕ್ರವಾಕ, ಗಿಳಿ ಮೊದಲಾದುವು ದೂತರೆಂದು ಹೇಳುವುದು 'ಯುಕ್ತಿಹೀನ.'

ಅವಾಚೋಽವ್ಯಕ್ತವಾಚಶ್ಚ ದೂರದೇಶವಿಚಾರಿಣಃ।
ಕಥಂ ದ್ಯೂತಂ ಪ್ರಪದ್ಯೇರನ್ನಿತಿ ಯುಕ್ತ್ಯಾ ನ ಯುಜ್ಯತೇ ॥೪೩॥

ಮಾತಾಡಲಾರದ ಮತ್ತು ಅಸ್ಫುಟವಾಗಿ ದನಿಗೈಯುವ ಇವು ದೂರದೇಶಗಳಿಗೆ ಹೋಗಿ ದೂತರ ಕೆಲಸವನ್ನು ಹೇಗೆ ಮಾಡಿಯಾವು ಎಂಬುದು ಯುಕ್ತಿಯುಕ್ತವಾಗಿ ಕಾಣುವುದಿಲ್ಲ.

ಯದಿ ಚೋತ್ಕಂಠಯಾ ಯತ್ತದುನ್ಮತ್ತ ಇವ ಭಾಷತೇ[28]।
ತಥಾ ಭವತು ಭೂಮ್ನೇದಂ ಸುಮೇಧೋಭಿಃ ಪ್ರಯುಜ್ಯತೇ ॥೪೪॥

ವಿರಹದ ಸಂತಾಪದಿಂದ (ನಾಯಕನು) ಹುಚ್ಚನಂತೆ ಮಾತನಾಡುವುದಾದರೆ ಈ ದೋಷವಿಲ್ಲ. ಹಾಗೆ ಕವಿ ವರ್ಣಿಸಬಹುದು. ಮಹಾಕವಿಗಳೇ ಇದನ್ನು ಹೆಚ್ಚಾಗಿ ಬಳಸಿಕೊಂಡಿದ್ದಾರೆ.

ಗೂಢಶಬ್ದಾಭಿಧಾನಂ ಚ ನ ಪ್ರಯೋಜ್ಯಂ ಕಥಂಚನ।
ಸುಧಿಯಾಮಪಿ ನೈವೇದಮುಪಕಾರಾಯ ಕಲ್ಪತೇ ॥೪೫॥

ಬಹಳ 'ಗೂಢಾರ್ಥ'ವಡಗಿರುವ ಪದಗಳನ್ನು ಎಂದೂ ಪ್ರಯೋಗಿಸಲಾಗದು. ವಿದ್ವಾಂಸರಿಗೂ ಕೂಡ ಇದರಿಂದ ಯಾವ ಸಂತೋಷವೂ ಉಂಟಾಗುವುದಿಲ್ಲ.

---

27 ಇದನ್ನು ಬರೆಯುವಾಗ ಕಾಳಿದಾಸನ 'ಮೇಘದೂತ'ವು ಭಾಮಹನ ಮನಸ್ಸಿನಲ್ಲಿದ್ದಿರಬಹುದೆ?

28 ಹೋಲಿಸಿ—'ಕಾಮಾರ್ತಾ ಹಿ ಪ್ರಕೃತಿಕೃಪಣಾಶ್ಚೇತನಾಚೇತನೇಷು'— ಮತ್ತು 'ಗಾಢೋತ್ಕಂಠಾಗುರುಷು ದಿವಸೇಷ್ವೇಷು ಗಚ್ಛತ್ಸು. . . .' (ಮೇಘದೂತ).

ಅಸಿತರ್ತಿತುಗದ್ರಿಚ್ಛಿತ್ ಸ್ವಃಕ್ಷಿತಾಂ ಪತಿರದ್ವಿದೃಕ್ ।
ಅಮಿದ್ಭಿಃ ಶುಭ್ರದೃಗ್ದೃಷ್ಟೈರ್ದ್ವಿಷೋ ಜೇಘ್ನೀಯಿಷೀಷ್ಟ ವಃ ‖ ೪೬ ‖

ಉದಾಹರಣೆ—ಅಸಿತರ್ತಿ=ಕೃಷ್ಣವರ್ತ್ಮ=ಅಗ್ನಿ ; ಅಗ್ನಿತುಕ್=ಅಗ್ನಿಪುತ್ರ=ಷಣ್ಮುಖ ; ಅದ್ರಿಚ್ಛಿತ್=ಕ್ರೌಂಚಪರ್ವತವನ್ನು ಭೇದಿಸಿದವನು ; ಸ್ವಃಕ್ಷಿತಾಂ ಪತಿಃ=ಸ್ವರ್ಗವಾಸಿಗಳಾದ ದೇವತೆಗಳ ಸೇನಾಪತಿ ; ಅದ್ವಿದೃಕ್=ಎರಡು ಕಣ್ಣಿನವನಲ್ಲ=ಹನ್ನೆರಡು ಕಣ್ಣುಳ್ಳವನು ; ಅಮಿದ್ಭಿಃ=ಸ್ನೇಹಶೂನ್ಯವಾದ=ಕುಪಿತವಾದ ; ಶುಭ್ರದೃಗ್ದೃಷ್ಟೈಃ=ಬಿಳುಪಾದ ಕಣ್ಣುಗಳ ನೋಟಗಳಿಂದ : ವಃ=ನಮ್ಮ ದ್ವಿಷಃ=ಶತ್ರುಗಳನ್ನು ; ಜೇಘ್ನೀಯಿಷೀಷ್ಟ=ಸಂಹಾರಮಾಡಲಿ (ಇಂದ್ರನ ಪರವಾಗಿ ಅರ್ಥಮಾಡಿದರೆ ಕ್ರಮವಾಗಿ ಪಾಪಕರ್ಮಿಗಳ ಹಿಂಸಕ, ಬೆಟ್ಟಗಳನ್ನು ಪುಡಿಗೈದವ, ದೇವತೆಗಳ ಅಧಿಪತಿ, ಸಹಸ್ರಾಕ್ಷ ಎಂದೂ ಆಗುತ್ತದೆ.)

ಶ್ರುತಿದುಷ್ಟಾರ್ಥದುಷ್ಟೇ ಚ ಕಲ್ಪನಾದುಷ್ಟಮಿತ್ಯಪಿ ।
ಶ್ರುತಿಕಷ್ಟಂ ತಥೈವಾಹುರ್ವಾಚಾಂ ದೋಷಂ ಚತುರ್ವಿಧಮ್ ‖ ೪೭ ‖

ಕೇಳಿದೊಡನೆ ಜುಗುಪ್ಸೆ ತರುವಂತಹುದು ('ಶ್ರುತಿದುಷ್ಟ'), ಅರ್ಥ ಕಠಿನವಾದುದು ('ಅರ್ಥದುಷ್ಟ'), ಕಲ್ಪನೆ ಅಸಂಭವವಾದುದು ('ಕಲ್ಪನಾದುಷ್ಟ'), ಕಿವಿಗೆ ಕರ್ಕಶವಾದುದು (ಶ್ರುತಿಕಷ್ಟ)—ಹೀಗೆ ಶಬ್ದಗಳ ದೋಷಗಳು ನಾಲ್ಕು ಬಗೆಯೆಂದು ಹೇಳುತ್ತಾರೆ.

ವಿಡ್ವರ್ಚೋ-ವಿಷ್ಠಿತ-ಕ್ಲಿನ್ನ-ಚ್ಛಿನ್ನ-ವಾನ್ತ-ಪ್ರವೃತ್ತಯಃ ।
ಪ್ರಚಾರ-ಧರ್ಷಿತೋದ್ಗಾರ-ವಿಸರ್ಗ-ಹ್ರಾದ-ಯನ್ತ್ರಿತಾಃ ‖ ೪೮ ‖

ಹಿರಣ್ಯರೇತಾಃ ಸಂಬಾಧಪೇಲವೋಪಸ್ಥಿತಾಂಡಜಾಃ ।
ವಾಕ್ಕಾಟವಾದಯಶ್ಚೇತಿ ಶ್ರುತಿದುಷ್ಟಾ ಮತಾ ಗಿರಃ[29] ‖ ೪೯ ‖

ವಿಟ್='ವೈಶ್ಯ' ಮತ್ತು 'ಮಲ'; **ವರ್ಚಃ**='ತೇಜಸ್ಸು' ಮತ್ತು 'ಮಲ'; **ವಿಷ್ಠಿತ**=ವಿ+ಸ್ಥಿತ='ಅತಿಶಯವಾಗಿದ್ದವ' ಮತ್ತು 'ಮಲವಿಸರ್ಜನೆ ಮಾಡಿದವ'; **ಕ್ಲಿನ್ನ**='ಒದ್ದೆಯಾದ' ಮತ್ತು 'ರಕ್ತದಿಂದ ನೆನೆದ'; **ಛಿನ್ನ**='ಕತ್ತರಿಸಿದುದು' ಮತ್ತು 'ಕೊಲೆಮಾಡಿದ್ದು'; **ವಾನ್ತ**='ಹೊರಬಿದ್ದುದು' ಮತ್ತು

[29] ಇದರೊಡನೆ ಕವಿರಾಜ ಮಾರ್ಗದ (I, ೬೨-೬೮) ದೋಷನಿರೂಪಣೆಯನ್ನು ಹೋಲಿಸಬಹುದು.

'ವಾಂತಿ'; **ಪ್ರವೃತ್ತಿ**='ಕಾರ್ಯದಲ್ಲಿ ಆಸಕ್ತಿ' ಮತ್ತು 'ಮಲವಿಸರ್ಜನೆ'; **ಪ್ರಚಾರ**='ಸಂಚಾರ' ಮತ್ತು 'ಮಲವಿಸರ್ಜನೆ'; **ಧರ್ಷಿತ**='ಸೋಲಿಸಿದ' ಮತ್ತು 'ಸ್ತ್ರೀಯನ್ನು ಬಲಾತ್ಕಾರದಿಂದ ಭೋಗಿಸಿದ'; **ಉದ್ಗಾರ**='ಹೊರಬಂದ ಮಾತು' ಅಥವಾ 'ವಾಂತಿ'; **ವಿಸರ್ಗ**='ಬಿಡುಗಡೆ' ಮತ್ತು 'ಮಲವಿಸರ್ಜನೆ'; **ಹ್ರಾದ**='ಸಣ್ಣ ಸದ್ದು' ಮತ್ತು 'ಹೂಸು' **ಯುನ್ತೃತಾ**='ನಿಯಮಿಸುವಿಕೆ' ಮತ್ತು 'ಸಂಭೋಗಶಕ್ತಿ'; **ಹಿರಣ್ಯರೇತಾಃ**='ಅಗ್ನಿ' ಮತ್ತು 'ಚಿನ್ನದ ವೀರ್ಯ'; **ಸಂಬಾಧ**='ಧರ್ಷಣೆ' ಮತ್ತು 'ಅಂಗಪೀಡನ'; **ಪೇಲವ**= 'ಸುಂದರ' ಮತ್ತು 'ಕೃಶ'; **ಉಪಸ್ಥಿತ**='ಬಂದ' ಮತ್ತು 'ಸತ್ತ'; **ಅಂಡಜ**= 'ಪಕ್ಷಿ' ಮತ್ತು 'ವೃಷಣಸಿಕ್ತವಾದ ವೀರ್ಯ'; **ವಾಕ್ಕಾಟವ**='ಮಾತಿನ ಕಹಿ' ಮತ್ತು 'ಕಾಟ' ವೆಂದರೆ 'ಹೆಣದ ಯಾನ'. ಇಂತಹ ಶಬ್ದಗಳೆಲ್ಲವೂ (ಜುಗುಪ್ಸೆಯನ್ನು ತರುವ ಅರ್ಥವನ್ನು ಬೋಧಿಸುವುದರಿಂದ) 'ಶ್ರುತಿದುಷ್ಟ' ಗಳೆಂದು ಪರಿಗಣಿತವಾಗಿವೆ.

ಅರ್ಥದುಷ್ಟಂ ಪುನರ್ಜ್ಞೇಯಂ ಯತ್ರೋಕ್ತೇ ಜಾಯತೇ ಮತಿಃ।
ಅಸಭ್ಯವಸ್ತುವಿಷಯಾ ಶಬ್ದೈಸ್ತದ್ವಾಚಿಭಿರ್ಯಥಾ ॥೫೦॥

ಹನ್ತುಮೇವ ಪ್ರವೃತ್ತಸ್ಯ ಸ್ತಬ್ಧಸ್ಯ ವಿವರೈಷಿಣಃ।
ಪತನಂ ಜಾಯತೇಽವಶ್ಯಂ ಕೃಚ್ಛ್ರೇಣ ಪುನರುನ್ನತಿಃ ॥೫೧॥

ಯಾವ ವಾಕ್ಯದಲ್ಲಿ ಬೇರೆ ಬೇರೆ ಶಬ್ದಗಳೆಲ್ಲವೂ ಅಸಭ್ಯವಾದ ಅರ್ಥವನ್ನು ಸ್ಮರಣೆಗೆ ತರುವುವೋ ಆ ವಾಕ್ಯವು 'ಅರ್ಥದುಷ್ಟ'. ಉದಾಹರಣೆ—'ಹೊಡೆಯಲೆಂದೇ ಹೊರಟ ಸ್ತಬ್ಧನಾದ ರಂಧ್ರಾನ್ವೇಷಿಗೆ ಪತನವು ಬೇಗ ಬರುತ್ತದೆ. ಮತ್ತೆ ಉನ್ನತಿಯೊದಗುವುದು ಬಹಳ ಕಠಿನ.'

ಪದದ್ವಯಸ್ಯ ಸಂಧಾನೇ ಯದನಿಷ್ಟಂ ಪ್ರಕಲ್ಪತೇ।
ತದಾಹುಃ ಕಲ್ಪನಾದುಷ್ಟಂ ಸ ಶೌರ್ಯಾಭರಣೋ ಯಥಾ ॥೫೨॥

ಎರಡು ಪದಗಳು ಸೇರಿದಾಗ ಅಸಭ್ಯಾರ್ಥವು ಸ್ಮರಣೆಗೆ ಬರುತ್ತಿದ್ದರೆ ಆ ಪದ ಸಂಯೋಗವನ್ನು 'ಕಲ್ಪನಾದುಷ್ಟ'ವೆನ್ನುವರು. 'ಶೌರ್ಯಾಭರಣ' ಎಂಬುದು ಇದಕ್ಕೆ ಉದಾಹರಣೆ (ಶೌರ್ಯ+ಆಭರಣ ; ಈ ಎರಡು ಶಬ್ದಗಳಲ್ಲೂ ಪ್ರತ್ಯೇಕವಾಗಿ ಅಸಭ್ಯಸ್ಮೃತಿಯಿಲ್ಲ. ಆದರೆ ಸಮಾಸದಲ್ಲಿ ಸೇರಿದಾಗ 'ಯಾಭ' ಎಂಬ ಭಾಗವು ಗ್ರಾಮ್ಯಧರ್ಮದ ಸ್ಮೃತಿಯನ್ನು ತರುತ್ತದೆ).

ಯಥಾಜಿಹ್ಲದದಿತ್ಯಾದಿ ಶ್ರುತಿಕಷ್ಟಂ ಚ ತದ್ವಿದುಃ।
ನ ತದಿಚ್ಛನ್ತಿ ಕೃತಿನಃ ಗಣ್ಡಮಪ್ಯಪರೇ ಕಿಲ ॥೫೩॥

'ಅಜಿಹ್ಲದತ್' (=ಆನಂದಿಸಿದನು) ಮುಂತಾದ ಕಿವಿಗೆ ಕರ್ಕಶವಾದ ರೂಪಗಳನ್ನು 'ಶ್ರುತಿಕಷ್ಟ'ವೆಂದು ತಿಳಿಯುವರು. ಬಲ್ಲವರು ಇದನ್ನು ಒಪ್ಪುವುದಿಲ್ಲ. ಇತರರು 'ಗಂಡ' (ಗಲ್ಲ) ಮುಂತಾದುವನ್ನೂ ಇರಬಾರದೆನ್ನುವರು.

ಸನ್ನಿವೇಶವಿಶೇಷಾತ್ತು ದುರುಕ್ತಮಪಿ ಶೋಭತೇ।
ನೀಲಂ ಪಲಾಶಮಾಬದ್ಧಮನ್ತರಾಲೇ ಸ್ರಜಾಮಿವ ॥೫೪॥

ದೋಷಯುಕ್ತವಾದ ಪ್ರಯೋಗಗಳೂ ಕೂಡ ಅಕ್ಕಪಕ್ಕದ ಪದಗಳ ಪ್ರಭಾವದಿಂದ ಸೊಗಸಾಗಿಯೇ ಕಾಣಬಹುದು; ಹೂಮಾಲೆಗಳ ನಡುನಡುವೆ ಕಟ್ಟಿದ ಹಸಿರೆಲೆಗಳು ಶೋಭಿಸುವಂತೆ.

ಕಿಂಚಿದಾಶ್ರಯಸೌಂದರ್ಯಾದ್ ಧತ್ತೇ ಶೋಭಾಮಸಾಧ್ವಪಿ।
ಕಾನ್ತಾವಿಲೋಚನನ್ಯಸ್ತಂ ಮಲೀಮಸಮಿವಾಂಜನಮ್ ॥೫೫॥

ಕೆಲವೊಮ್ಮೆ ದೋಷಯುಕ್ತ ಪ್ರಯೋಗಗಳು ಆಶ್ರಯದ ಸೌಂದರ್ಯದಿಂದಲೂ ಚೆಲುವನ್ನು ತಳೆಯುತ್ತವೆ; ಇನಿಯಳ ಕಣ್ಣಿನಲ್ಲಿ ಹಚ್ಚಿದ ಕಪ್ಪು ಕಾಡಿಗೆಯಂತೆ.

ಆಪಾಂಡುಗಂಡಮೇತತ್ತೇ ವದನಂ ವನಜೇಕ್ಷಣೇ।
ಸಂಗಮಾತ್ ಪಾಂಡುಶಬ್ದಸ್ಯ ಗಂಡಃ ಸಾಧು ಯಥೋದಿತಮ್ ॥೫೬॥

'ವನಜಾಕ್ಷಿ, ಈ ನಿನ್ನ ವದನವನ್ನು ನೋಡಿದರೆ **ಗಂಡ** (ಗಲ್ಲ)ವು ಎಷ್ಟು ಪಾಂಡುರ (ಬಿಳುಪೇರಿದ್ದು)!' ಇಲ್ಲಿ 'ಪಾಂಡು' ಎಂಬ ಪದದ ಸಂಪರ್ಕದಿಂದ 'ಗಂಡ' ಎಂಬ (ಗ್ರಾಮ್ಯ)ಪದವೂ ಸುಂದರವಾಗಿ ತೋರುತ್ತದೆ.

ಅನಯಾನ್ಯದಪಿ ಜ್ಞೇಯಂ ದಿಶಾ ಯುಕ್ತಮಸಾಧ್ವಪಿ।
ಯಥಾ ವಿಕ್ಲಿನ್ನಗಂಡಾನಾಂ ಕರಿಣಾಂ ಮದವಾರಿಭಿಃ ॥೫೭॥

ಇದೇ ರೀತಿಯಾಗಿ ಉಳಿದ ದೋಷಯುಕ್ತ ಪ್ರಯೋಗಗಳನ್ನೂ ಊಹಿಸಿಕೊಳ್ಳಬೇಕು. '**ನೆನೆದ**[30] ಗಂಡಸ್ಥಳವುಳ್ಳ ಕರಿಗಳ ಮದಜಲಗಳಿಂದ . . .' ಎಂಬುದು ಉದಾಹರಣೆ.

---

[30] ಮೇಲೆ ೪೮ ನೆಯ ಶ್ಲೋಕದಲ್ಲಿ 'ಕ್ಲಿನ್ನ' ಎಂಬುದು 'ಶ್ರುತಿದುಷ್ಟ'ವೆಂದಿದೆ.

ಮದಕ್ಲಿನ್ನಕಪೋಲಾನಾಂ ದ್ವಿರದಾನಾಂ ಚತುಶ್ಶತೀ ।
ಯಥಾ ತದ್ವದಸಾಧೀಯಃ ಸಾಧೀಯಶ್ಚ ಪ್ರಯೋಜಯೇತ್ ॥೫೮॥

"ಮದಜಲದಿಂದ **ನೆನೆದ** ಕಪೋಲಗಳುಳ್ಳ ಆನೆಗಳ ನಾನೂರು" ಎಂಬುದು ಇನ್ನೊಂದು ಉದಾಹರಣೆ. ಹೀಗೆ ಅಸಾಧುವಾದುದನ್ನೂ ಸರಿಯಾಗಿಸಿಕೊಂಡು ಪ್ರಯೋಗಿಸಬೇಕು.

ಏತದ್ಗ್ರಾಹ್ಯಂ ಸುರಭಿ ಕುಸುಮಂ ಗ್ರಾಮ್ಯಮೇತನ್ನಿಧೇಯಂ
ಧತ್ತೇ ಶೋಭಾಂ ವಿರಚಿತಮಿದಂ ಸ್ಥಾನಮಸ್ತ್ಯೇತದಸ್ಯ ।
ಮಾಲಾಕಾರೋ ರಚಯತಿ ಯಥಾ ಸಾಧು ವಿಜ್ಞಾಯ ಮಾಲಾಂ
ಯೋಜ್ಯಂ ಕಾವ್ಯೇಷ್ವವಹಿತಧಿಯಾ ತದ್ವದೇವಾಭಿಧಾನಮ್[31] ॥೫೯॥

ಈ ಸುವಾಸನೆಯ ಹೂವನ್ನು ಸೇರಿಸಬೇಕು, ಈ ಗ್ರಾಮ್ಯವಾದುದನ್ನು ಕೆಳಗೇ ಬಿಡಬೇಕು; ಇದನ್ನು ಹಾಕಿದರೆ ಸೊಗಸು ಹೆಚ್ಚುತ್ತದೆ, ಇದಕ್ಕೆ ಇದೇ ಸರಿಯಾದ ಸ್ಥಳ; ಹೀಗೆ ಮಾಲೆಗಾರನು ಚೆನ್ನಾಗಿ ವಿಚಾರಮಾಡಿ ಹೂಮಾಲೆಯನ್ನು ಕಟ್ಟುವಂತೆ ಶಬ್ದಾರ್ಥವನ್ನು ಕಾವ್ಯಗಳಲ್ಲಿ ಸೇರಿಸುವಾಗಲೂ ಬಹಳ ಎಚ್ಚರಿಕೆಯಿಂದಿರಬೇಕು.

ಡಾ|| ಕೆ. ಕೃಷ್ಣಮೂರ್ತಿ

---

31 ಹೋಲಿಸಿ—

ಇಲ್ಲಿಗಿದು ತಕ್ಕುದಿಲ್ಲಿಗೆ
ಪೊಲ್ಲದಿದೆಂದಱಿದು ಸಮಱಿ ಬಲ್ಲಂತೆಲ್ಲಂ ।
ನೆಲ್ಲುಂ ಮೊಸರುಂಗುಡಿದಂ-
ತಲ್ಲದೆ ತಲ್ಲಣಿಸದಲಸದಿಡು ಮೃದುಪದಮಂ || ಕ.ರಾ.ಮಾ. II, ೪

ಇದು ಸೌಂದರ್ಯಗುಣಪ್ರಕಾಶಮಿದು ತಾನಗ್ರಾಮ್ಯತಾಧಾನಮಿಂ
ತಿದು ಭಾಸ್ವತ್ಪರಭಾಗರಮ್ಯಮಿದು ಬಂಧಾಶ್ಲೇಷವಿಚ್ಛಿತ್ತಿಗಾ ।
ಸ್ಪದಮೆಂದಿಂತುಚಿತಪ್ರಯೋಗವಿಧಿಯಿಂ ಸಯ್ತಪ್ಪಿನಂ ತಿರ್ದಿ ಪೇ
ಳ್ವುದು ಪೂಮಾಲೆಯನಿಂಬಿನಿಂ ಸಮೆವವೊಲ್ ಸತ್ಕಾವ್ಯಮಂ ಕಬ್ಬಿಗಂ || ಕಾವ್ಯಾ-III, ೧

ಬುಡುಬುಡಿಕೆ

ಮನೆಯ ಮೂಲೆಯೊಳಿಲ್ಲಿ
ಲೊಚಗುಡುತಲಿವೆ ಹಲ್ಲಿ,
ಎಲ್ಲಿ ನೋಡಿದರಲ್ಲಿ
ಪರೆಪರೆಯ ಜೇಡಬಲೆ
ಜೋತಿರುವುದಿಲ್ಲಿ!
ಅಸ್ಥಿಪಂಜರದಂಥ
ಮನೆಯ ಛಾವಣಿಯಿಂದ
ಬಿಸಿಲಕೋಲಿನ ಪ್ರೇತ
ಒಳಗಿಳಿದು ಬಂದು,
ತುಂಬಿದ್ದ ಕತ್ತಲನು
ಮದುವೆನಿಂದು
ಸರಸವಾಡುತಲಿಹುದು
ಭೀತಿಯನು ಹಡೆದು!

ಅಲ್ಲೊಂದು ಇಲ್ಲೊಂದು
ಜಿರಲೆ ಜಂಡಿಗ ಸರಿದು
ಒಳಸಂಚು ನಡೆಸುವರ
ಪಿಸುಮಾತಿನಂತೆ,
ಕೇಳುತಿರೆ ಮನವಿಲ್ಲಿ
ತತ್ತರಿಸಿ ನಡುಗುತಿದೆ
ಕುಳಿರ ಗಾಳಿಗೆ ಸಿಕ್ಕ
ತರಗಿನಂತೆ!

ಮನೆಯ ತುಂಬಾ ಧೂಳು,
ಬೇಸರದ ಬೂದಿ!
ಗೆದ್ದಲೋ ಗೆದ್ದಲು,
ಕಾಲಿಡಲು ಎಲ್ಲೆಲ್ಲು
ಇಲ್ಲವೋ ಹಾದಿ!

ಹೊರಗೆಲ್ಲ ಬಿರುಗಾಳಿ
ಮೊರೆದು ಹಾರಾಡುತಿದೆ,
ತರತರನೆ ನಡುಗುತಿವೆ
ಮನೆಯ ಗೋಡೆ!
ಯಾವ ಚಣವೋ ಏನೊ
ಏಲಯವೈತರಬಹುದು;
ಕಡೆತನಕ ಈ ಮನೆಗೆ
ಇಂಥ ಪಾಡೆ?

ಇಲ್ಲ, ಬಿಡುಗಡೆಯಿಲ್ಲ.
ಅರೆನೆಳಲು ಬೆಳಕುಗಳ
ವಿಕಾರದಪಶಕುನ-
ದಗ್ನಿ ಕುಂಡದಲಿ
ಬೇಯಬೇಕೇ ಇನ್ನು
ದಿನದಿನದಲಿ?
ಬರಿಕತ್ತಲೇ ಇರಲಿ,
ಅಥವ ಬೆಳಕೇ ಬರಲಿ;
ಬೇಡವಯ್ಯೋ ಬೇಡ
ಅರೆನೆಳಲು ಬೆಳಕುಗಳ
ಸಂದೆಯದ ಛಾಯೆ
ಎಂದು ಕೊರಗಿತು ಜೀವ
ಮನೆಯ ಒಳಗೆ!

ಮತ್ತೆ ಬರಿ ನಿಶ್ಶಬ್ದ;
ಕತ್ತಲಳುವಾ ಶಬ್ದ,
ಮೌನ ಸುಯ್ಯುವ ಶಬ್ದ
ಮೂಲೆಯಲ್ಲಿ!
ನಡುಗಿ ಹದುಗಿರೆ ಜೀವ
ಧೂಳಿನಲ್ಲಿ
ಏನಲ್ಲಿ ಆ ಸದ್ದು
ಬಾಗಿಲಲ್ಲಿ?

ಯಾರಿಗೂ ಬೇಡದೆಡೆ,
ಯಾರೊ ಬಂದಂತಾಯ್ತು
ಬಾಗಿಲಲ್ಲಿ!
ಕದವ ತಳ್ಳಿದರಾರೊ!
ಗಿರುಕೆಂದಿತು.
ಯಾವ ಬೆಳಕೋ ಏನೊ
ಒಳಗೈದಿತು!
ಅದೊ ಅದೋ ನೋಡಲ್ಲಿ
ನಿಂತಿರುವನವನು,
ಯಾವ ಸೀಮೆಯ ವೇಷ!
ಯಾರು ಅವನು?

ಎನಿತೊ ಜೀವರ ಕರ್ಮ
ಫಲವ ಹೊತ್ತಂತೆ
ಮೈತುಂಬ ಹಳೆ ಬಟ್ಟೆ
ಜೋಲುತಿರಲು,
ಕೈಯ್ಯಲಿದೆ ಬುಡುಬುಡಿಕೆ,
ನುಡಿಸುತಿಹನು!
ಬುಡುಬುಡುಕೆಯಾ ದನಿಗೆ
ಒಳಗೆಲ್ಲ ನಡುಗೆ,
ನುಡಿಸುತ್ತ ನಿಂತಿಹನು
ಬಾಗಿಲಿನ ಹೊರಗೆ!
ಯಾರಿವನು ಈ ವ್ಯಕ್ತಿ,
ವಿಧಿಯ ಬೇಹು?
ಮನೆಯ ಅಪಶಕುನಕ್ಕೆ
ಬಂದಂತೆ ಸಾವು!

"ಶುಭವಾಗುತ್ತೈತೆ ಶುಭವಾಗುತ್ತೈತೆ
ಶುಭವಾಗುತ್ತೈತೆ ನಿಮಗೆ"
ಎನ್ನುವನು ನಿಂತು ಹೊರಗೆ
ಜೀವ ಹಾರೈಸಿರಲು ಶುಭದ ನುಡಿಗೆ!

"ಬಾರಯ್ಯ ಒಳಗೆ ಬಾ
ಓ ಪರಮ ಬಂಧು,
ಇನಿತು ದಿನವೆಲ್ಲಿದ್ದೆ
ಶುಭನುಡಿಯ ಸಿಂಧು"
ಎಂದು ಕರೆದೆನು ಅವನ ನನ್ನ ಬಳಿಗೆ
ನಿಂತಿರುವನವನಿನ್ನು ಮನೆಯ ಹೊರಗೆ!

ಜಿ. ಎಸ್. ಶಿವರುದ್ರಪ್ಪ.

ಕೋಗಿಲೆಗೆ

ಮಾಗಿಯ ಮೌನವನಿರಿಯೋ ಬಾರೋ ಹಾಡೋ ಸುಗ್ಗಿಯ ಹರಿಕಾರ!
ಶಂಕರವಾಗಲಿ ನಗ್ನ ಭಯಂಕರ ಸೃಷ್ಟಿಯು ಪಡೆಯುತ ಶೃಂಗಾರ
ಪಚ್ಚೆಯ ತಳಿರಿನ ಪರಿಮಳದಲರಿನ. ಮಾಗಿಯ ಸೃಷ್ಟಿಯೊ ಸುಮ್ಮಾನ
ತೋರಲಿ; ಮೊಳಗಲಿ ಅಲೆಯಲೆಹೊಮ್ಮಲಿ ಪಕ್ಷಿಗಳೆದೆಯಿಂ ಮಧುಗಾನ
ನೀ ಹಾಡಿದೆಯೆನಲೊಮ್ಮೆಗೆ ಸೃಷ್ಟಿಗೆ ಚೈತ್ರಾವೇಶವೆ ಹಿಡಿಯುವುದು.
ನಾದೋನ್ಮತ್ತ ವಿಹಂಗಮ ಕಂಠದಿ ಗಾನ ತರಂಗಿಣಿ ಹರಿಯುವುದು!
ನಿನ್ನೀ ಹಾಡಿನ ಮೋಡಿಗೆ ಸಿಲುಕುತ ಚೈತ್ರನೆ ಭೂಮಿಗೆ ಧಾವಿಪನು,
ನಿನ್ನೀ ನುಡಿಯೇ ವಸಂತಕಾವ್ಯಕೆ ಮುನ್ನುಡಿಯೆನ್ನುತ ಭಾವಿಪನು!

ಕೋಗಿಲೆಯೇ ಓ ಚೈತ್ರದ ಬೇಹು!
ಮೌನವನಳಿಸುಲಿ: ಕುಹೂ, ಕಹೂ!
ಸಾಸಿರಸುಮಗಳ ಸೆಜ್ಜೆಯ ಹಾಸಿ
ಪುಷ್ಪ ಮಂಜರಿಯು ಚವರಿಯ ಬೀಸಿ
ಚೈತ್ರನೆ ಬರಲೈ ತಳಿರ್ಗುಡಿಯೆತ್ತಿ
ರಾಜ್ಯವಾಳಲೈ ಸೃಷ್ಟಿಯ ಮುತ್ತಿ!

ಖಗವುಲಿದಾಡಲಿ! ಜಗ ನಲಿದೇಳಲಿ ಚೈತ್ರಾರಂಭದ ದರ್ಶನಕೆ;
ಹೂ ತಳಿರಿನ ರೋಮಾಂಚನವಾಗಲಿ ಸೃಷ್ಟಿಗೆ ಚೈತ್ರದ ಸ್ಪರ್ಶನಕೆ!

ಜಿ. ಎಸ್. ಸಿದ್ಧಲಿಂಗಯ್ಯ.

ಮಾನವನ ಪ್ರಗತಿಯಲ್ಲಿ ಚಿಟ್ಟೆಯ ಪಾತ್ರ

ಚಿಟ್ಟೆಗಳು ಹಾರಾಡುವುದನ್ನು ಎಲ್ಲರೂ ನೋಡಿರುವರು. ಬಣ್ಣಬಣ್ಣದ ವಿನ್ಯಾಸ ಗಳಿಂದ ಕೂಡಿದ ರೆಕ್ಕೆಗಳುಳ್ಳ ಕೆಲವು ಚಿಟ್ಟೆಗಳು ಮಧುಪಾನಮಾಡಲು ಹೂವಿಂದ ಹೂವಿಗೆ ಹಾರಾಡುವುದನ್ನು ನೋಡಿ ಕೆಲವರು ಆನಂದಪಟ್ಟಿರಬಹುದು. ಆದರೆ ಕೆಲವು ಚಿಟ್ಟೆಗಳಿಂದಾಗುವ ಹಾನಿ ಮತ್ತು ಲಾಭಗಳನ್ನು ಅರಿತಿರುವವರು ವಿರಳ. ಕೆಲವು ಬೆಳೆಗಳ ನಾಶಕ್ಕೆ ಕೂಡ ಕೆಲವು ಬಗೆಯ ಚಿಟ್ಟೆಗಳೇ ಕಾರಣ. ಸವಿಯಾದ ಜೇನ ನ್ನೊದಗಿಸುವುವು ಜೇನುನೊಣಗಳೆಂದು ಯಾರಿಗೆ ಗೊತ್ತಿಲ್ಲ. ಹಾಗೆಯೇ ಮನಸ್ಸಿಗೆ ಹರ್ಷವನ್ನುಂಟುಮಾಡುವ ನವಿರಾದ ರೇಷ್ಮೆ ಬಟ್ಟೆಯನ್ನೊದಗಿಸುವುವೂ ಚಿಟ್ಟೆಗಳೇ. ಇಷ್ಟೆ, ಏಕೆ? ಒಂದು ದೇಶದ ಆರ್ಥಿಕ ಸುವ್ಯವಸ್ಥೆಗೆ ಭಂಗವುಂಟುಮಾಡಿದ್ದ ಪಿಡುಗನ್ನು ತಪ್ಪಿಸಿದ್ದು ಚಿಟ್ಟೆ ಎಂದರೆ ಅನೇಕರಿಗೆ ಆಶ್ಚರ್ಯವಾಗಬಹುದು. ಕಟ್ಟುಕಥೆ ಎಂದು ಉಪೇಕ್ಷೆ ಮಾಡಬಹುದು. ಆದರೆ ಇದು ಸತ್ಯ.

ಆಸ್ಟ್ರೇಲಿಯಾದೇಶ ಉಣ್ಣೆಯ ಕೈಗಾರಿಕೆಗೆ ಹೆಸರುವಾಸಿಯಾದದ್ದು. ಅಲ್ಲಿ ಕುರಿಗಳನ್ನು ಹೆಚ್ಚಾಗಿ ಸಾಕಲು ಅನುಕೂಲವಾದ ಹುಲ್ಲುಗಾವಲುಗಳಿರುವುದೇ ಇದಕ್ಕೆ ಕಾರಣ. ಕೇವಲ ಕೆಲವು ವರ್ಷಗಳ ಹಿಂದೆ ಈ ಕೈಗಾರಿಕೆಯು ನಶಿಸಿಹೋಗು ತ್ತದೊ ಎನ್ನುವ ಸ್ಥಿತಿ ಬಂದಿತ್ತು. ಪಾಪಾಸಕಳ್ಳಿಯು ಜಾಗ್ರತೆಯಾಗಿ ವೃದ್ಧಿಗೊಂಡು ಹರಡಿ ಹುಲ್ಲುಗಾವಲುಗಳು ಕಡಿಮೆಯಾಗುತ್ತ ಬಂದುವು. ಕುರಿಗಳಿಗೆ ಮೇವು ದೊರೆ ಯುವುದು ಕಷ್ಟವಾಯಿತು. ಸರ್ಕಾರವೂ ಸಾರ್ವಜನಿಕರೂ ಕೂಡಿ ಅದರ ವಿನಾಶಕ್ಕೆ ಕೋಟ್ಯಾಂತರ ರೂಪಾಯಿಗಳು ಖರ್ಚುಮಾಡಿದರೂ ಅದು ನಾಶವಾಗುವ ಬದಲು ವೃದ್ಧಿಯಾಗುತ್ತಲೆ ಇತ್ತು. ಜನರಿಗೆ ಭೀತಿಯೂ ನಿರಾಶೆಯೂ ಆಗಿದ್ದಾಗ ಒಂದು ಜಾತಿಯ ಚಿಟ್ಟೆ ಅದರ ಸರ್ವನಾಶಕ್ಕೆ ಕಾರಣವಾಗಿ ಉಣ್ಣೆಯ ಕೈಗಾರಿಕೆ ಯನ್ನುಳಿಸಿತು.


ಪಾಪಾಸಕಳ್ಳಿ ಮುಳ್ಳುಗಳಿಂದ ಕೂಡಿರುವುದರಿಂದ ಬೇಲಿಗೆ ಅನುಕೂಲ ವಾಗಿದೆ. ಸುಮಾರು ಒಂದು ಶತಮಾನದ ಹಿಂದೆ ಆಸ್ಟ್ರೇಲಿಯಾ ದೇಶಕ್ಕೆ ಇದು ಬಂದಿತು. ಜನರು ಬೇಲಿಗೆ ತಕ್ಕ ಗಿಡ ಎಂದು ಸ್ವಾಗತಿಸಿ ತಮ್ಮ ಹೊಲಗಳ ಸುತ್ತಲೂ ಬೇಲಿಹಾಕಿದರು. ಬೇಲಿಗ ಇದಕ್ಕೆ ಸರಿಸಮನಾದ ಗಿಡವಿಲ್ಲವೆಂದು ಹಿಗ್ಗಿದರು. ಇದರ ಮೇಲೆ ಜನರಿಗೆ ವಿಶೇಷವಾದ ಪ್ರೀತಿ ಹುಟ್ಟಿತು. ಈ ಗಿಡಗಳಿಗೆ ನೀರು ಹಾಕದಿದ್ದ

ಕೆಲಸಗಾರರನ್ನು ಕೆಲಸದಿಂದ ತೆಗೆದುಹಾಕಿದ ನಿದರ್ಶನಗಳೂ ಇವೆ. ಪಾಪಾಸಕಳ್ಳಿಯ ಹಣ್ಣುಗಳು ಕುರಿಕಾಯುವವರಿಗೆ ಇಷ್ಟವಾದುವು. ಪಕ್ಷಿಗಳು ಹಣ್ಣುಗಳನ್ನು ತಿಂದು ಸಿಕ್ಕಿದೆಡೆಯಲ್ಲೆಲ್ಲಾ ಬೀಜವನ್ನು ಎರಚಾಡಿದುವು. ಅದೇ ರೀತಿ ಕಾಡುಜನರು ಹಣ್ಣುತಿಂದು ಬೀಜಗಳನ್ನು ಅಲ್ಲಿ ಇಲ್ಲಿ ಬಿಸಾಡಿದರು. ಈ ರೀತಿ ಕಳ್ಳಿ ಎಲ್ಲಾ ಕಡೆಯೂ ವ್ಯಾಪಿಸಲು ಅನುಕೂಲವಾಯಿತು.

ಬೇಲಿಗೆ ಇದಕ್ಕಿಂತ ಅನುಕೂಲವಾದ ಗಿಡವಿಲ್ಲವೆಂದು ಮೆಚ್ಚುಗೆ ಪಡೆದಿದ್ದ ಕಳ್ಳಿ ೧೮೭೦ ರೊಳಗೆ ವಿಶಾಲ ಪ್ರದೇಶದಲ್ಲಿ ಹರಡಿತು. ಸುಮಾರು ಆರು ಕೋಟಿ ಎಕರೆಯಷ್ಟು ಭೂಮಿಯನ್ನು ಆಕ್ರಮಿಸಿತು. ಇದರ ಹರಡುವಿಕೆಯ ವೇಗವನ್ನು ಕಂಡು ಜನರು ಭೀತರಾದರು. ಅಷ್ಟಪಾದಿ ಅಥವಾ ಆಕ್ಟೋಪಸ್ ಎಂಬ ಪ್ರಾಣಿ ಯಾವುದನ್ನು ಹಿಡಿದುಕೊಂಡರೂ ಅದರ ಹಿಡಿತದಿಂದ ತಪ್ಪಿಸಿಕೊಳ್ಳುವುದು ಅಸಾಧ್ಯ. ಅದರಂತೆ ಪಾಪಾಸಕಳ್ಳಿಯ ಹಾವಳಿಯಿಂದ ತಪ್ಪಿಸಿಕೊಳ್ಳುವುದೂ ಜನಗಳಿಗೆ ಅಸಾಧ್ಯವಾಗಿ ಕಂಡಿತು. ಈ ಕಾರಣದಿಂದ ಕಳ್ಳಿಯ ಗಿಡಕ್ಕೆ ಆಕ್ಟೋಪಸ್ ಸಸ್ಯ ಎಂದು ಅನ್ವರ್ಥ ನಾಮ ಕೊಟ್ಟರು. ಇಪ್ಪತ್ತು—ಮೂವತ್ತು ಅಂಗುಲ ಮಳೆಬೀಳುವ ಕ್ವೀನ್ಸ್‌ಲೆಂಡ್ ಮತ್ತು ನ್ಯೂ ಸೌತ್‌ವೇಲ್ಸ್ ಪ್ರದೇಶದಲ್ಲೆಲ್ಲಾ ಹರಡಿತು, ಈ ಕಳ್ಳಿ. ಈ ಪ್ರದೇಶದಲ್ಲಿ ಹುಲ್ಲುಗಾವಲುಗಳಿದ್ದು ಕುರಿಗಳನ್ನು ಸಾಕುವುದೇ ಕಸಬಾಗಿತ್ತು. ಅದಕ್ಕೆ ಧಕ್ಕೆ ತಗುಲಿತು. ವ್ಯವಸಾಯಕ್ಕರ್ಹವಾದ ಜಮೀನಿನಲ್ಲಿಯೂ ಇದು ಬೆಳೆದು ಇನ್ನು ಯಾವ ಪೈರು ಬೆಳೆಯಲೂ ಅಸಾಧ್ಯವಾಯಿತು.

ಕಳ್ಳಿ ಹುಲ್ಲುಗಾವಲು ವ್ಯವಸಾಯ ಪ್ರದೇಶಗಳಲ್ಲೆಲ್ಲಾ ಹರಡಿದ್ದುದರಿಂದ ಅಲ್ಲಿಯ ಜನರಿಗೆ ವಿಪತ್ತು ತಲೆದೋರಿದಂತಾಯಿತು. ಇದರ ನಿರ್ಮೂಲನಕ್ಕೆ ೧೮೭೩ ರಲ್ಲಿ ಅಧಿಕಾರಿಗಳು ತಕ್ಕ ಕಾರ್ಯಕ್ರಮ ಕೈಗೊಳ್ಳಲು ನಿಶ್ಚಯಿಸಿದರು. ಈ ಪ್ರಯತ್ನ ಕೋಟೆ ಸೂರೆಯಾದಮೇಲೆ ಬಾಗಿಲು ಮುಚ್ಚಿದಂತಾಯಿತು. ಕಳ್ಳಿಯ ಪ್ರಸಾರ ತಡೆಗಟ್ಟುವ ಪ್ರಯತ್ನಗಳೆಲ್ಲವೂ ವಿಫಲವಾದುವು. ಒಂದಾನೊಂದು ಕಾಲದಲ್ಲಿ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದ್ದ ಕಳ್ಳಿ ದೇಶವನ್ನೇ ನುಂಗುವ ಸಸ್ಯವಾಯಿತು.

ಇಪ್ಪತ್ತನೆಯ ಶತಮಾನದ ಆದಿಯಲ್ಲಿ ಒಂದುನೂರು ಲಕ್ಷ ಎಕರೆಗಳಲ್ಲಿ ಬೆಳೆದು ದೊಡ್ಡ ವನವಾಯಿತು. ಮನುಷ್ಯ ಮತ್ತು ಮೃಗಗಳಿಗೆ ಒಳಹೋಗಲು ಅಸಾಧ್ಯವಾಯಿತು. ಇದರ ಹಬ್ಬುವಿಕೆ ತಡೆಯಲು ಪ್ರಯತ್ನಪಟ್ಟಷ್ಟೂ ಅದು ಬೆಳೆಯುತ್ತಲೇ ಇತ್ತು. ಆಗಿನ ಕಾಲಕ್ಕೆ ಕಳ್ಳಿ ಹರಡಲು ಒಂದು ಸದವಕಾಶವೂ ದೊರೆಯಿತು. ೧೯೦೨ರಲ್ಲಿ ಮಳೆಯ ಅಭಾವದಿಂದ ಕುರಿಗಳು ಕಳ್ಳಿಯ ಹಣ್ಣನ್ನು ತಿಂದು ಬೀಜ



ಪಾಪಾಸಕಳ್ಳಿಯನ್ನು ತಿನ್ನುವ ಚಿಟ್ಟೆಗಳು

ಗಳನ್ನು ಎಲ್ಲೆಲ್ಲಿಯೂ ಹರಡಿದುವು. ಆಸ್ಟ್ರೇಲಿಯಾದ ಪೂರ್ವತೀರದಲ್ಲಿ ಒಂಭೈನೂರು ಮೈಲಿ ದೂರ ಹಬ್ಬಿ ಸುಮಾರು ಇನ್ನೂರರಿಂದ ನಾಲ್ಕುನೂರು ಮೈಲಿಗಳ ವರೆಗೂ ಒಳಕ್ಕೆ ಚಾಚಿಕೊಂಡಿತ್ತು. ಕ್ವೀನ್ಸ್‌ಲ್ಯಾಂಡಿನ ಉತ್ತರ ಭಾಗದ ಮಾಕೆ (Mackay) ಯಿಂದ ಸಿಡ್ನಿಯ ಬಳಿಯಿರುವ ನ್ಯೂಕಾಸಲ್ ವರೆಗೂ ಹರಡಿತು. ಸರ್ಕಾರ ತನ್ನ ಕೈಲಾದ ಸರ್ವಪ್ರಯತ್ನಗಳನ್ನೂ ಕೈಗೊಂಡಿತು. ಇದನ್ನು ಬೇರುಸಹಿತ ಕಿತ್ತು ಸುಟ್ಟರು. ಉರುಳುಕಲ್ಲು (ರೋಲರ್)ಗಳಿಂದ ಅರೆಸಿ ಬೇರುಸಹಿತ ಕಿತ್ತು ಕುದುರೆ ಗಳಿಂದಲೂ ಎತ್ತುಗಳಿಂದಲೂ ಸಾಗಿಸಿದರು. ಬೆಲೆಬಾಳುವ ವಿಷಪದಾರ್ಥಗಳನ್ನು ಗಿಡದ ಮೇಲೆ ಸುರಿದರು. ಈ ಯಾವ ಪ್ರಯತ್ನಗಳಿಗೂ ಅದು ಮಣಿಯಲಿಲ್ಲ. ೧೯೨೩ ರ ರಾಯಲ್ ಕಮಿಷನ್‌ನವರ ವರದಿಯ ಪ್ರಕಾರ ಇದರ ನಿವಾರಣೆಗೆ ರೈತ ರಿಂದ ಒಂದು ಕೋಟಿ ರೂಪಾಯಿಗಳು ಖರ್ಚಾದುವು.

ಈ ಕಳ್ಳಿಯ ನಾಶಕ್ಕೆ ತಕ್ಕ ಪರಿಹಾರ ತೋರಿಸಿದವರಿಗೆ ಬಹುಮಾನ ಕೊಡುತ್ತೇವೆಂದು ಆಸ್ಟ್ರೇಲಿಯಾ ಸರ್ಕಾರದವರು ಪ್ರಚಾರಮಾಡಿದರು. ಬಹು ಮಾನದ ಬೆಲೆ ೧೯೨೧ ರಲ್ಲಿ ಸುಮಾರು ೭೦ ಸಾವಿರ ರೂಪಾಯಿಗಳು. ಆರು ವರ್ಷ ಗಳ ತರುವಾಯ ಬಹುಮಾನದ ಬೆಲೆ ನೂರೈವತ್ತು ಲಕ್ಷಕ್ಕೇರಿತು. ಪ್ರಪಂಚದ ಅನೇಕರಿಂದ ಪರಿಹಾರ ಸೂಚನೆಗಳು ಬಂದುವು. ಪಾಪಾಸಕಳ್ಳಿಯ ನಿವಾರಣೋ ಪಾಯಕ್ಕಾಗಿ ಏರ್ಪಟ್ಟ ಸಂಸ್ಥೆಯವರು ದೇಶದೇಶಗಳಲ್ಲಿ ಸಂಚರಿಸಿ ವಿಷಯ ಸಂಗ್ರಹಿಸಿದರು. ಅರ್ಜಂಟೈನಾ ದೇಶದಲ್ಲಿ ದೊರೆತ ಒಂದು ವರದಿ ಆಶಾಕಿರಣವನ್ನು ಬೀರಿತು. ೧೯೧೪ ರಲ್ಲಿ ಲಪ್ಲಾಟ (Laplata) ಉದ್ಯಾನವನದಲ್ಲಿ ಹಬ್ಬಿದ ಪಾಪಾಸ ಕಳ್ಳಿಯನ್ನು "ಕ್ಯಾಕ್ಟೊಬ್ಲಾಸ್ಟಿಸ್ ಕ್ಯಾಕ್ಟೊರಂ" (Cactoblastis Cactorum) ಎಂಬ ಚಿಟ್ಟೆ ನಾಶಮಾಡಿತು ಎಂದು ವರದಿಯಾಗಿತ್ತು.

ರೇಷ್ಮೆಯ ಚಿಟ್ಟೆಯ ಜೀವನದಲ್ಲಿರುವಂತೆ ಆ ಚಿಟ್ಟೆಗೂ ನಾಲ್ಕು ಅವಸ್ಥೆ ಗಳುಂಟು. ಮೊದಲನೆಯ ಅವಸ್ಥೆ ಮೊಟ್ಟೆ. ಎರಡನೆಯದು ಮೊಟ್ಟೆಯಿಂದೊಡೆದು ಬಂದ ಕಂಬಳಿಹುಳು. ಮೂರನೆಯದು ನಿದ್ರಾವಸ್ಥೆ. ನಾಲ್ಕನೆಯದು ಚಿಟ್ಟೆಯ ಅವಸ್ಥೆ. ಎರಡನೆಯ ಅವಸ್ಥೆಯ ಕಂಬಳಿ ಹುಳುವೆ ಬಕಾಸುರನಂತೆ ಕಳ್ಳಿಯನ್ನು ತಿಂದು ತಿಂದು ಜೀವಿಸುವುದು.

ಆ ವರದಿಯ ಅಭಿಪ್ರಾಯದಂತೆ ಕಂಬಳಿ ಹುಳುಗಳನ್ನು ಅರ್ಜಂಟೈನಾದಿಂದ ಆಮದು ಮಾಡಿಕೊಂಡರು. ಆದರೇನು! ಜಯಲಕ್ಷ್ಮಿ ಕಳ್ಳಿಯ ಪಕ್ಷ ವಹಿಸಿದಳು. ತರಿಸಿದ ಹುಳುಗಳೆಲ್ಲಾ ಸತ್ತುಹೋದುವು. ತರವಾಯ ಚಿಟ್ಟೆಯ ಮೇಲಿದ್ದ ವಿಶ್ವಾಸ ಜನರಿಗೆ ಕಡಿಮೆಯಾಗಿ ಸುಮಾರು ಹತ್ತು ವರ್ಷಗಳು ಯಾವ ಪ್ರಯತ್ನವೂ ಇಲ್ಲದೆ

ಉರುಳಿಹೋದುವು. ಈ ಮಧ್ಯೆ ಸಿಲೋನನಿಂದ ಕಾಕಿನಿಯಲ್ (Cochineal Insects) ಎಂಬ ಚಿಟ್ಟೆಗಳನ್ನು ತಂದರು. ಕಳ್ಳಿಯ ಹಬ್ಬುವಿಕೆಯ ಪ್ರಮಾಣದ ಮುಂದೆ ಈ ಚಿಟ್ಟೆಗಳಿಂದಾದ ನಷ್ಟ ಗಣನೆಗೆ ಬಾರದಾಯಿತು.

೧೯೨೦ ರಿಂದ ೧೯೨೭ ರ ವರೆಗೆ ದೇಶಕಂಟಕ ಕಳ್ಳಿಯ ಪರಮವೈರಿಯಾಗಿರುವ ಚಿಟ್ಟೆಗಳ ಶೋಧನೆ ನಡೆಯಿತು. ಇದರಿಂದ ಸುಮಾರು ನೂರೈವತ್ತು ತರಹ ಚಿಟ್ಟೆಗಳು ಕಳ್ಳಿಯನ್ನು ತಿಂದು ಬದುಕುತ್ತವೆ ಎಂದು ಗೊತ್ತಾಯಿತು. ಇವುಗಳಲ್ಲಿ ಐವತ್ತು ತರಹ ಚಿಟ್ಟೆಗಳನ್ನಾರಿಸಿ ಸಂತಾನಾಭಿವೃದ್ಧಿ ಮಾಡಲು ಕಾಮನ್‌ವೆಲ್ತ್ ಪ್ರಿಕ್ಲಿ ಪ್ರಿಯರ್ ಬೋರ್ಡಿನಿಂದ ಬ್ರಿಸ್‌ಬೇನ್‌ನಲ್ಲಿ ಒಂದು ಸಂಶೋಧನಾಲಯ ಸ್ಥಾಪಿತ ವಾಯಿತು. ಚಿಟ್ಟೆಗಳನ್ನು ಸ್ಥಳದ ಹವಾಗುಣಕ್ಕೆ ಹೊಂದಿಕೊಳ್ಳುವಂತೆ ಸಾಕಿ ಸಂತಾನ ಅಭಿವೃದ್ಧಿ ಮಾಡಿದರು. ಕಳ್ಳಿಯ ವನಗಳಿದ್ದ ಸ್ಥಳದಲ್ಲೆಲ್ಲಾ ಚಿಟ್ಟೆಗಳನ್ನು ಹಂಚಿದರು. ಕಳ್ಳಿಯನ್ನು ನಾಶಗೈವ ಬದಲು ಬೆಳೆಗಳನ್ನು ಈ ಚಿಟ್ಟೆಗಳು ಎಲ್ಲಿ ತಿಂದುಹಾಕುತ್ತವೊ ಎಂಬ ಹೆದರಿಕೆ ಇತ್ತು. ಚಿಟ್ಟೆಗಳಿಗೆ ಕಳ್ಳಿಯನ್ನೊದಗಿಸದೆ ತರಕಾರಿ, ಹಣ್ಣು ಇತರ ವಾಣಿಜ್ಯ ಬೆಳೆಗಳು, ಮರಗಳು ಇವುಗಳ ಮೇಲೆಲ್ಲಾ ಬೆಳಸಿ, ಬೆಳೆಗಳಿಗೆ ಏನೂ ನಷ್ಟವಾಗುವುದಿಲ್ಲವೆಂದು ಮನದಟ್ಟು ಮಾಡಿಕೊಂಡರು.

ಸಂಸ್ಥೆಯು ಅಭಿವೃದ್ಧಿಪಡಿಸಿದ ಚಿಟ್ಟೆಗಳಲ್ಲೆಲ್ಲಾ ಕ್ಯಾಕ್ಟೊಬ್ಲಾಸ್ಟಿಸ್ ಚಿಟ್ಟೆಯೇ ಕಳ್ಳಿಯ ಪರಮವೈರಿ ಎಂದು ತಿಳಿಯಿತು. ಆ ತರುವಾಯ ಉರಗ್ವೆ ಮತ್ತು ಅರ್ಜಂಟೈನಾಗಳಿಂದ ಚಿಟ್ಟೆಯ ೨೭೫೦ ಮೊಟ್ಟೆಗಳನ್ನು ಕ್ವೀನ್ಸ್‌ಲೆಂಡಿಗೆ ತರಿಸಿದರು. ಈ ಮೊಟ್ಟೆಗಳಿಂದ ಬಂದ ಚಿಟ್ಟೆಗಳು ಒಂದು ಲಕ್ಷದ ಆರನೂರೈದು ಮೊಟ್ಟೆಗಳನ್ನಿಟ್ಟುವು. ಹದಿನೆಂಟು ತಿಂಗಳ ಕಾಲ ಕೀಟಶಾಸ್ತ್ರಜ್ಞರು ಚಿಟ್ಟೆಗಳನ್ನು ಬೆಳೆಸಿ ಸಂತಾನ ಹೆಚ್ಚಿಸಿದರು. ಅನಂತರ ಚಿಟ್ಟೆಗಳಿಟ್ಟ ಮೊಟ್ಟೆಗಳಿರುವ ಕಡ್ಡಿಗಳನ್ನು ತೆಗೆದುಕೊಂಡು ಪಾಪಾಸ ಕಳ್ಳಿಯ ಕಾಂಡಕ್ಕೆ ಅಂಟಿಸಿದರು. ಮೊಟ್ಟೆಯೊಡೆದು ಬಂದ ಕಂಬಳಿಹುಳು ನೇರವಾಗಿ ಕಳ್ಳಿಯನ್ನು ತಿನ್ನಲಿ ಎನ್ನುವುದೇ ಇದರ ಉದ್ದೇಶ.

೧೯೨೫ ರಿಂದ ೧೯೩೧ ರ ವರೆಗೆ ವರ್ಷದಲ್ಲಿ ಮೂರು ತಿಂಗಳ ಕಾಲ ಜನರು ತಂಡ ತಂಡಗಳಾಗಿ ಹೋಗಿ ಮೊಟ್ಟೆ ಮತ್ತು ಕಂಬಳಿ ಹುಳುವಿನ ಗೂಡುಗಳನ್ನು ಸಂಗ್ರಹಿಸುತ್ತಿದ್ದರು. ಅಧಿಕಾರಿಗಳು ಮತ್ತು ಜಮೀನುದಾರರು ಅವುಗಳನ್ನು ಹಂಚಿಸಲು ಏರ್ಪಾಟು ಮಾಡುತ್ತಿದ್ದರು. ಈ ವ್ಯವಸ್ಥಿತವಾದ ಕಾರ್ಯಕ್ಕೆ ಸುಮಾರು ಮೂರೂವರೆ ಲಕ್ಷ ರೂಪಾಯಿಗಳು ಖರ್ಚಾದುವು.

ಈ ರೀತಿ ಪ್ರಚಾರ ಕೈಗೊಂಡ ನಾಲ್ಕು ತಿಂಗಳಲ್ಲಿ ಕಂಡುಬಂದ ಫಲಿತಾಂಶ ವಿಸ್ಮಯಕಾರಿಯಾದುದು. ಕಾಂಡದ ಮೃದುಭಾಗ ಮಾತ್ರವಲ್ಲ, ಬೇರುಗಳನ್ನೂ

ಕಂಬಳಿ ಹುಳುಗಳು ತಿಂದುಹಾಕಿದುವು. ಸಾವಿರಾರು ಎಕರೆಗಳಲ್ಲಿ ಅರಣ್ಯದಂತಿದ್ದ ಕಳ್ಳಿಯೆಲ್ಲಾ ನಾಶವಾಯಿತು. ೧೯೩೦ ನೆ ಇಸ್ವಿಯಲ್ಲಿ ಐದು ಲಕ್ಷ ಎಕರೆಗಳಲ್ಲಿದ್ದ ಕಳ್ಳಿಯೆಲ್ಲ ನಾಶವಾಗಿ ಆ ಜಮೀನು ವ್ಯವಸಾಯಕ್ಕೆ ಅನುಕೂಲವಾಯಿತು.

ಚಿಟ್ಟೆಯಿಂದ ದೊರೆತ ಜಯ ವರ್ಣಿಸಲು ಅಸಾಧ್ಯ. ಬಂಜರಾಗುತ್ತಿದ್ದ ಹುಲ್ಲುಗಾವಲು ಮತ್ತು ವ್ಯವಸಾಯ ಪ್ರದೇಶಗಳು ಪುನಃ ಅಭಿವೃದ್ಧಿಗೊಂಡವು. ಹುಲ್ಲುಗಾವಲುಗಳು ಪುನಃ ದೊರೆತುದುದರಿಂದ ಕುರಿ ಸಾಕಾಣಿಕೆಗೆ ಅನುಕೂಲವಾಗಿ ಉಣ್ಣೆಯ ಕೈಗಾರಿಕೆ ಉಳಿಯಿತು. ಇದರಿಂದ ದೇಶದ ಆರ್ಥಿಕ ಸ್ಥಿತಿಯೂ ಭದ್ರವಾಯಿತು.

ಕಳ್ಳಿಯ ಗಿಡ ಈಗಲೂ ಅಲ್ಲೊಂದು ಇಲ್ಲೊಂದು ಬೆಳೆದಿರುತ್ತದೆ. ಆದರಿಂದ ದೇಶಕ್ಕೆ ಅಷ್ಟೇನೂ ಹಾನಿ ಸಂಭವಿಸುತ್ತಿಲ್ಲ. ಮಾನವನ ಪ್ರಗತಿಯಲ್ಲಿ ಚಿಟ್ಟೆಗಳೂ ಪಾತ್ರವಹಿಸಬಲ್ಲವೆಂಬುದಕ್ಕೆ ಇದೊಂದು ಅದ್ಭುತ ನಿದರ್ಶನ.

ಎಚ್. ಎನ್. ಚಾಮಯ್ಯ.

ಹೂ

ಜನನ ಮರಣಗಳೆರಡು ಜೀವನಾದ್ರಿಯ ಜಗ್ಗೆ
  ಪ್ರತಿನಿತ್ಯ ನಡೆದಿಹುದು ಸೃಷ್ಟಿಮಥನ
ಅದರೊಳುದಿಸುವ ಅಮೃತ ಹೂವಾಗಿ ಹರಡುವುದು
  ಅದರ ಗುರಿ ಈ ಜಗದ ಸೌಂದರ್ಯಕಥನ.

ಆರೆಸಳ ನೂರೆಸಳ ನೂರಾರು ಬಣ್ಣಗಳ
  ಹೂಗಳಿವು ಈಶ್ವರನ ಮೂಲಾಕ್ಷರ
ಈ ಸೊಬಗಿನಕ್ಕರದಿ ಬರೆಯುವನು ಅನುದಿನವು
  ಸೌಂದರ್ಯ ಸಂಹಿತೆಯನಾದಿ ಕಲೆಗಾರ.

ಆ ಕಮಲ ಓಂಕಾರ ಮಲ್ಲಿಗೆಯು ಶ್ರೀಕಾರ
  ಸಂಪಿಗೆಯೆ ಭಾವಿಸಲು ಉದ್ಗಾರವು
ಜಾಜಿ ಪ್ರಶ್ನಾರ್ಥಕವು ವಿಷ್ಣುಕ್ರಾಂತಿ ವಿಸರ್ಗ
  ಪಾರಿಜಾತವೆ ಪೂಜಿ, ಅನುಸ್ವಾರವು.

ದೊಡ್ಡ ಹೂ ವ್ಯಂಜನವು ಸಣ್ಣ ಹೂವೇ ಸ್ವರವು
  ಇಲ್ಲಿಯೂ ಕಾಣಿಸವೆ ಬಳ್ಳಿ ಮೊಗ್ಗೆ ?
ಎಸಳ ಮೇಲೆಸಳಿರಲು ಅದುವೆ ಒತ್ತಕ್ಷರವು
  ಉಳಿದಿಹುದೆ ಸಂಶಯವು ಇದರ ಬಗ್ಗೆ ?

ಏನ ಬರೆವನೊ ನಿತ್ಯ ಈ ವರ್ಣಮಾಲೆಯಲಿ
  ಓದುವರು ಎಷ್ಟಿಹರು ಈ ಸೃಷ್ಟಿಯಲ್ಲಿ ?
ಈ ಪ್ರಶ್ನೆ ಪೆಚ್ಚಾಗಿ ತೋರಿದರೆ ಇರಬಹುದು
  ಏನಾದರೂ ದೋಷ ಕವಿದೃಷ್ಟಿಯಲ್ಲಿ !

ಕಾವ್ಯಾನಂದ

ಅನ್ನ

"ಏಕಂಸತ್ ವಿಪ್ರಾ ಬಹುಧಾ ವದಂತಿ"

ಅನೇಕ ವೇಳೆ ಉತ್ಸವ ಸಮಯಗಳಲ್ಲಿ ವೇದಘೋಷವನ್ನು ಕೇಳಿದ್ದೇವೆ. . . . ಎಲೆಯ ಮುಂದೆ ಸಮಾರಾಧನೆ ಊಟಕ್ಕೆ ಕುಳಿತಾಗ (ಈ ಋಕ್ಕುಗಳಿಗೂ "Grace before meat" ಗೂ ಎಷ್ಟು ಸಂಬಂಧವೋ ತಿಳಿಯದು) ಅವರು ಹೇಳುವ ಅನೇಕ ವಾಕ್ಯಗಳಲ್ಲಿ ಒಂದು ನನಗೆ ಚೆನ್ನಾಗಿ ನೆನಪಿದೆ. "ಅಹಮನ್ನಂ, ಅಹಮನ್ನಂ, ಅಹ ಮನ್ನಂ . . . . ಅನ್ನಂ ನ ನಿಂದ್ಯಾತ್ . . . ತದ್ವ್ರತಂ." ಈಶ್ವರನ ಬಹುರೂಪ ಗಳಲ್ಲಿ ಅನ್ನವೂ ಒಂದು. ಅನ್ನವೂ ಸಹ ಬಹುರೂಪವುಳ್ಳದ್ದು. ಇಲ್ಲಿ ಅನ್ನ ಅಂದರೆ— ಆಹಾರಪದಾರ್ಥ ಎಂದು ಅರ್ಥ. ವಿಶಾಲವಾದ ಅರ್ಥ—ಅಕ್ಕಿಯನ್ನು ಬೇಯಿಸಿದರೆ ಆಗುವ ವಸ್ತು ಮಾತ್ರವಲ್ಲ. ಭೂಲೋಕದಲ್ಲಿರುವ ಬಹು ದೇಶಗಳನ್ನೂ ಅಲ್ಲಿಯ ಜನರ ಆಹಾರವನ್ನು ಪರಿಗಣಿಸಿದರೆ ತಿಳಿಯುತ್ತೆ ಅನ್ನದ ವಿಶ್ವರೂಪ . . . ಆಗ ಮನಸ್ಸಿಗೆ ಚೆನ್ನಾಗಿ ತಂದುಕೊಳ್ಳಬೇಕು 'ಅನ್ನಂ ನ ನಿಂದ್ಯಾತ್' ಎನ್ನುವುದನ್ನು. ಊಟಮಾಡುವುದು, ತಿಂಡಿ ತಿನ್ನುವುದು; ಪಾನಕ, ಪಾಯಸ, ಕೀರು, ಕಾಫೀ, ಟೀ ಗಳನ್ನು ಕುಡಿಯುವುದು ಒಂದು ಬಗೆಯ ಈಶ್ವರನ ಆರಾಧನೆ ಎಂದು ತಿಳಿಯಬೇಕು. ಅವನ್ನೆಲ್ಲಾ ನಾವು ಅರ್ಪಿಸುವುದು ದೇಹದೊಳಗೆ ಇರುವ ಈಶ್ವರನಿಗೆ ಎಂದು ನೆನಪಿ ನಲ್ಲಿಡುವುದು ಒಳ್ಳೆಯದು. ಅದಕ್ಕೂ ಒಂದು ಹೆಜ್ಜೆ ಮುಂದೆ ಹೋಗುವುದಾದರೆ 'ಅನ್ನ' ಈಶ್ವರನ ರೂಪವೇ ಎಂದು ತಿಳಿದರೆ, ಊಟ ತಿಂಡಿಗಳ ಸೇವನೆ ಪವಿತ್ರ ಕರ್ತವ್ಯ ವಾಗುತ್ತೆ ಈಶ್ವರನೊಡನೆ ಒಂದಾಗುವ ಯೋಗಸಾಧನೆಯಾಗುತ್ತೆ. ಆದ್ದರಿಂದ ಹೆಚ್ಚು ಸಲ ತಿಂಡಿ ತಿನ್ನುವವರನ್ನು, ಊಟಮಾಡುವವರನ್ನು ಹೊಟ್ಟೆಬಾಕರು, ಬಕಾಸುರರು, ತಿಂಡಿಪೋತರು ಇತ್ಯಾದಿ ಮಾತುಗಳಿಂದ ಹೀಯಾಳಿಸುವುದು ಈಶ್ವರನಿಂದೆಗೆ ಸಮಾನ ವಾಗುತ್ತೆ. ಇವರು ಸಂತತವಾಗಿ ಒಂದು ಬಗೆಯ ಯೋಗಸಾಧನೆಯಲ್ಲಿರುವವರು. ಈಶ್ವರನು ಸದಾಕಾಲದಲ್ಲಿಯೂ ಯೋಗಿಗಳ ಹೃದಯದಲ್ಲಿರುತ್ತಾನೆ ಅಥವಾ "ಯತ್ರ ಯೋಗೀಶ್ವರಃ ಕೃಷ್ಣೋ ತತ್ರ ಪಾರ್ಥೋ ಧನುರ್ಧರಃ". ಅಂದರೆ ಯೋಗಿ ಗಳು ದೇವರ ಸಾನ್ನಿಧ್ಯದಲ್ಲೇ ಇರುವರು.

ರಾಮಕೃಷ್ಣ ಪರಮಹಂಸರು ದೇವರನ್ನು ಒಂದೊಂದು ರೂಪದಲ್ಲಿಯೂ ಧ್ಯಾನಿಸಿ ಪೂಜಿಸಿ, ಪ್ರತಿಯೊಂದು ರೂಪದಲ್ಲಿಯೂ ದೇವರನ್ನು ಪ್ರತ್ಯಕ್ಷವಾಗಿ ಕಂಡು ಸಾಕ್ಷಾತ್ಕಾರ ಮಾಡಿಕೊಂಡರು. ಇದು ಅವರ ಜೀವನ ಚರಿತ್ರೆ ಓದಿದವರಿಗೆಲ್ಲಾ

ತಿಳಿದ ವಿಷಯ. ನಾನೂ ಯೋಗಿಗಳ ಗುಂಪಿಗೆ ಸೇರಿದವನು. ಅಂದರೆ ನನ್ನ ಯೋಗ ದೇವರ ಬಹು ಸಾಮಾನ್ಯವಾದ ರೂಪವನ್ನನುಸರಿಸಿದ ಮಾರ್ಗ. . . . ಅದೇ ಅನ್ನ— ಅದರ ಬಹುರೂಪ. . . . ನಮ್ಮ ಮನೆಗಳಲ್ಲಿ ಸಂಪ್ರದಾಯಾನುಸಾರವಾಗಿ ಬಂದ ಬಹುರೂಪ. ಈ ಯೋಗಸಾಧನೆ ಹಿಂದಿನ ಜನ್ಮದಿಂದ ಬೆಳೆದುಬಂದದ್ದು. ನನ್ನ ಚಿಕ್ಕ ವಯಸ್ಸಿನಿಂದಲೂ ನಾನು ಯಾವತ್ತೂ 'ಈ ತಿಂಡಿ ಬೇಡ, ಇದು ನನಗೆ ಸೇರುವುದಿಲ್ಲ' ಎಂದು ಹೇಳಲಿಲ್ಲವಂತೆ. ಯಾವ ತಿಂಡಿಯನ್ನೂ ಬಿಸುಡಲಿಲ್ಲವಂತೆ. ಊಟವೂ ಒಂದು ಯೋಗಮಾರ್ಗ ಎನ್ನುವ ಸತ್ಯ ನನ್ನೊಳಗೆ ಇದ್ದುದರಿಂದ ಆತುರವಿಲ್ಲದೆ ಯೋಚನೆ ಇಲ್ಲದೆ ಬಹು ಭಕ್ತಿಯಿಂದ ಸಾವಕಾಶವಾಗಿ ಈ ಕೆಲಸವನ್ನು ನೆರವೇರಿಸುತ್ತಿದ್ದೆನಂತೆ. ಇದೇ ಅಭ್ಯಾಸಗಳು ದೊಡ್ಡವನಾದಮೇಲೆಯೂ ನನ್ನಲ್ಲಿ ಇದ್ದುದರಿಂದ ಈ ಹೇಳಿಕೆಗಳೆಲ್ಲಾ ಸತ್ಯವೆಂದು ನಾನೂ ನೀವೂ ತಿಳಿಯದೆ ಬೇರೆ ಮಾರ್ಗವಿಲ್ಲ.

ದೇವರ ಅನಂತರೂಪಗಳಲ್ಲಿ ಯಾವುದು ಚೆನ್ನಾಗಿದೆ, ಯಾವುದು ಚೆನ್ನಾಗಿಲ್ಲ ಎಂದು ಹೇಳುವುದು ಸುಲಭವಲ್ಲ. ಆದರೂ ಮಾಯಾದೇವಿಯ ದಾಸರಾದ ಇಂದ್ರಿಯಗಳ ಮೂಲಕ ಬಾಹ್ಯರೂಪವನ್ನು ನೋಡುವಾಗ ಒಂದು ಇನ್ನೊಂದಕ್ಕಿಂತ ಹೆಚ್ಚು ರಮ್ಯವಾಗಿರುವುದು ಸರ್ವರ ಅನುಭವ. ಅನ್ನರೂಪದಲ್ಲಿ ದೇವರನ್ನು ಆರಾಧಿಸುವವರಿಗೆ ಮುಖ್ಯ ಸಾಧನ 'ನಾಲಗೆ.' ಇದು ಯಾವಾಗಲೂ ಚೊಕ್ಕಟವಾಗಿರಬೇಕು. ಇದು ಸರಿಯಾದ ಸ್ಥಿತಿಯಲ್ಲಿರಬೇಕಾದರೆ ದೇಹಾರೋಗ್ಯ ಚೆನ್ನಾಗಿರಬೇಕು. ಪಿತ್ತ, ಅಜೀರ್ಣ, ಜ್ವರ ಮುಂತಾದ ಕೆಟ್ಟ ಶಕ್ತಿಗಳು ದೇಹವನ್ನು ಆವರಿಸಿದರೆ ನಾಲಗೆ ಕೆಡುತ್ತೆ, ಯೋಗಸಾಧನೆಗೆ ಭಂಗಬರುತ್ತೆ. ಶರೀರ ಸರಿಯಾದ ಆರೋಗ್ಯಸ್ಥಿತಿಯಲ್ಲಿರಬೇಕು. 'ಶರೀರಮಾದ್ಯಂ ಖಲು ಧರ್ಮಸಾಧನಂ.' ಇಷ್ಟೆಲ್ಲ ತಿಳಿದವರೂ ಒಂದೊಂದು ಬಾರಿ 'ನಾಲಗೆಯಿಂದ ಕೆಟ್ಟೆ—ಅಥವಾ ಅವನು ಕೆಟ್ಟ ಇವನು ಕೆಟ್ಟ' ಎಂದು ಹೇಳುವುದನ್ನು ಕೇಳಿದ್ದೇನೆ. ಈ ಯೋಗಸಾಧನವನ್ನು, ಸಂತೋಷದ ಮೂಲಕ ಸರಿಯಾದ ಮಾರ್ಗದಲ್ಲಿ ದೇವರ ಸಾಕ್ಷಾತ್ಕಾರ ಮಾಡಿಕೊಡುವ ವಸ್ತುವನ್ನು ನಿಂದಿಸುವುದು ಸರಿಯಲ್ಲ. ಆದರೆ 'ನಾಲಗೆ' ಒಂದು ಸಾಧನವಾಗಿ ನಮ್ಮ ಅಧೀನದಲ್ಲಿರಬೇಕೇ ಹೊರತು ನಾವು ಜಿಹ್ವಾಚಾಪಲ್ಯಕ್ಕೆ ಗುಲಾಮರಾಗಬಾರದು.

ಯೂರೋಪು ಖಂಡದ ದೇಶಗಳನ್ನೆಲ್ಲಾ ಎರಡು ಬಾರಿ ಸುತ್ತಿಬಂದ ಸ್ನೇಹಿತರೊಬ್ಬರು ಹೇಳಿದರು : 'ನಮ್ಮ ದೇಶದ ದೋಸೆಗೆ ಸಮಾನವಾದ ತಿಂಡಿ (ಅದರಲ್ಲಿಯೂ ಮಸಾಲೆ ದೋಸೆ) ಪ್ರಪಂಚದ ಯಾವ ದೇಶದಲ್ಲಿಯೂ ಇಲ್ಲ.' ಈ ಮಾತು ಇಷ್ಟು ಚೆನ್ನಾಗಿ ನೆನಪಿದ್ದರೂ ನಾನು ಈ ದಿನ ಧ್ಯಾನಿಸುವುದು, ವರ್ಣಿಸುವುದು ಇಡ್ಲಿಯನ್ನು ; ಸಕಾರಣವಾಗಿ :

ರೋಗಿ : "ಈ ಔಷಧಿಗೆ ಪಥ್ಯ ಏನು ಸ್ವಾಮಿ ?"

ಕಾಶಿಪಂಡಿತರು : "ಇಡ್ಲಿ, ಕಾಫಿ. ಇಡ್ಲಿ ಮೈಗೆ ಬಹಳ ಒಳ್ಳೇದು."

ಇದು ಒಬ್ಬರಿಗೆ ಒಂದು ದಿನ ಹೇಳಿದ ಮಾತಲ್ಲ. ಪ್ರತಿಯೊಬ್ಬ ರೋಗಿಗೂ ಪ್ರತಿದಿನವೂ ಹೇಳುತ್ತಿದ್ದ ಮಾತು. ರೋಗಿ ಸಂಶಯವನ್ನು ತೋರಿದರೆ ಪಂಡಿತರು ಅವನ ಮನಸ್ಸಿಗೆ ಹಿಡಿಯುವಂತೆ ಇಡ್ಲಿಯ ಗುಣಗಳನ್ನು ವರ್ಣಿಸುತ್ತಿದ್ದರು. ರೋಗಿ ಅಲ್ಲಿಯೇ ಔಷಧಿ ಕುಡಿದು, ಇಡ್ಲಿ ಕಾಫಿಗೋಸ್ಕರ ಪಕ್ಕದ ಹೋಟೆಲಿಗೆ ಹೋಗುತ್ತಿದ್ದ. ಪಂಡಿತರು ಪ್ರಿಸ್ಕ್ರೈಬ್ ಮಾಡುತ್ತಿದ್ದ ಇಡ್ಲಿಯೇ ಅದರ ನಿಜ ಸ್ವರೂಪದಲ್ಲಿ ಕಾಣುವ ಇಡ್ಲಿ—ಇದು ಅಕ್ಕಿಯಿಂದ ಮಾಡಲ್ಪಟ್ಟದು, ಬಣ್ಣದಲ್ಲಿ ಆಕಾರದಲ್ಲಿ ಚಂದ್ರನನ್ನು ಹೋಲುವುದು ; ಇಡ್ಲಿ ಬಿಸಿಯಾಗಿರಬೇಕು, ಮುಟ್ಟಿದರೆ ಬೆರಳು ಇಳಿಯುವಷ್ಟು ಮೆತ್ತಗಿರುತ್ತೆ ಆಗ ; ಅದಕ್ಕೆ ಸ್ವಂತವಾದ ರುಚಿ ಯಾವುದೂ ಇಲ್ಲ ; ನೀವು ಅದರೊಡನೆ ಸೇರಿಸಿಕೊಳ್ಳುವ ವ್ಯಂಜನದ ರುಚಿಯನ್ನು ಅದು ತೆಗೆದು ಕೊಂಡು ನಿಮ್ಮ ಸೇವೆಗೆ, ನೀವು ಸೇವಿಸುವುದಕ್ಕೆ ಸಿದ್ಧವಾಗುತ್ತೆ. ಈ ಶುದ್ಧ ಇಡ್ಲಿಯಲ್ಲಿಯೂ ಎರಡು ಬಗೆ—ಬಾಹ್ಯ ಆಕಾರವನ್ನೆ ತೆಗೆದುಕೊಂಡರೆ : ಮೈಸೂರು ಇಡ್ಲಿ ಅಂದರೆ ಮನೆಯಲ್ಲಿ ಪೂರ್ವಾಚಾರ ಪದ್ಧತಿಯನ್ನನುಸರಿಸುವ ಇಡ್ಲಿ ಸುಮಾರು ಅರ್ಧ ಅಥವ ಮುಕ್ಕಾಲು ಅಂಗುಲ ಮಾತ್ರದಷ್ಟೆ ದಪ್ಪವಾಗಿರುತ್ತೆ ; ಇದರ ಅಡ್ಡಳತೆ ಸುಮಾರು ಒಂಬತ್ತು ಅಂಗುಲ ; ಒಂದು ಸಲಕ್ಕೆ ನಾಲ್ಕು ಇಡ್ಲಿಗಿಂತ ಹೆಚ್ಚು ಮಾಡ ಲಾಗುವುದಿಲ್ಲ. ಇದಕ್ಕೆ ಪ್ರಶಸ್ತವಾದ ಹಬ್ಬಗಳು—ವರಮಹಾಲಕ್ಷ್ಮಿ, ಉಪಾಕರ್ಮ, ಗೌರೀ, ಗಣೇಶ, ಅನಂತ, ದೀಪಾವಳಿ (ಅಳಿಯನನ್ನು ಕರೆಯದ ಸಾಮಾನ್ಯ ದೀಪಾ ವಳಿ). ಈ ದಿನಗಳಲ್ಲಿ ಬೇರೆ ಭೋಜನಗಳು ಭಕ್ಷ್ಯಗಳು ಇರುವುದರಿಂದ ನಾವು ಇಡ್ಲಿ ಯನ್ನು ತಿನ್ನುವ ವೇಳೆಗೆ ಅದು ಆರೇಹೋಗಿರುತ್ತೆ. ಅದಕ್ಕೆ ಆ ದಿನ ಹೆಚ್ಚಿನ ಪ್ರಶಸ್ತಿ ಇಲ್ಲ. ಅದಕ್ಕೆ ಪರಿಕರವೂ ಅಚ್ಚುಕಟ್ಟಾಗಿರುವುದಿಲ್ಲ ; ಪಾಯಸವೋ, ಚಟ್ಣಿಯೋ ಇರುತ್ತೆ. ಇದು ಇಡ್ಲಿಯ ಸ್ವರೂಪವಾದರೂ ಹಬ್ಬದ ಗೊಂದಲದಲ್ಲಿ ಅದಕ್ಕೆ ಹೆಚ್ಚಿನ ಮನ್ನಣೆಯಿಲ್ಲ. ಅದು ಉಪಯೋಗಕ್ಕೆ ಪ್ರಯೋಜನವಾದ ವಸ್ತುವಾಗುವುದಿಲ್ಲ. ಈ ಹಿಟ್ಟಿಗೇ ಕಡಲೇಬೇಳೆ, ಹೆಸರುಬೇಳೆ, ಹಶೀಮೆಣಸಿನಕಾಯಿ, ಹೆಚ್ಚಿದ ಬಲಿತ ತೆಂಗಿನ ಕಾಯಿ (ತುರಿದ ತೆಂಗಿನಕಾಯಲ್ಲ) ಶುಂಠಿ, ಕೊತ್ತುಂಬರಿಸೊಪ್ಪು ಎಲ್ಲವನ್ನೂ ಸೇರಿಸಿ ಇಡ್ಲಿಯನ್ನು ಮಾಡಿದರೆ ಅದು ಪರಿಕರವೇ ಇಲ್ಲದೆ ತಿನ್ನಲು ಯೋಗ್ಯವಾಗುತ್ತೆ. ಈ ಇಡ್ಲಿ ಸ್ವಲ್ಪ ಆರಿದರೂ ಸರಿ ರುಚಿಯಾಗಿರುತ್ತೆ. ಇದರ ಜತೆಗೆ ಗಟ್ಟಿಯಾಗಿರುವ ಅಂದರೆ ನೀರಾಗದ ತುಪ್ಪವನ್ನು ಸೇರಿಸಿಕೊಂಡು ತಿಂದರೆ ಒಳ್ಳೆಯದು.

ಎರಡನೆ ಬಗೆ ಇಡ್ಲಿಯನ್ನು ಮಲಬಾರ್ ಇಡ್ಲಿ ಎಂದು ಕರೆದರೆ ಯಾರಿಗೂ

ಕೋಪಬರುವುದಿಲ್ಲ ಎಂದು ಭಾವಿಸುತ್ತೇನೆ. ಇದು ಶುದ್ಧ ಇಡ್ಲಿಯ ಇನ್ನೊಂದು ರೂಪ, ಇದರ ಅಡ್ಡಳತೆ ನಾಲ್ಕು ಅಂಗುಲದಿಂದ ಆರು ಅಂಗುಲದ ವರೆಗೂ ಇರುವುದು. ಒಂದು ಸಲಕ್ಕೆ ಹತ್ತರಿಂದ ಒಂದು ನೂರರಷ್ಟು ಸಂಖ್ಯೆಯಲ್ಲಿ ಇದನ್ನು ತಯಾರುಮಾಡಬಹುದು. ಕಣಿವೇಕೆಳಗಿನ ಜನರಲ್ಲಿ ಮದುವೆಯ ಸಮಯದಲ್ಲಿಯೇ ಹೆಣ್ಣಿಗೆ ಒಂದು ಸಂಸಾರಕ್ಕಾಗುವ ಹಿತ್ತಾಳೆ ಮತ್ತು ಕಂಚಿನ ಪಾತ್ರೆಗಳನ್ನು ಕೊಡುವ ಪದ್ಧತಿ ಬಹು ಕಾಲದಿಂದ ಬೆಳದುಬಂದಿದೆ; ಇವುಗಳಲ್ಲಿ ಇಡ್ಲಿ ಪಾತ್ರೆ ಬಹು ಮುಖ್ಯ. ಇತ್ತೀಚೆಗೆ ಮೈಸೂರಲ್ಲಿ ಮನೆಗಳಲ್ಲಿಯೂ ಮಲಬಾರ್ ಇಡ್ಲಿಯೇ ಹೆಚ್ಚಿದೆ, ಮೈಸೂರು ಇಡ್ಲಿ ಕಣ್ಣಿಗೆ ಕಾಣದಂತಾಗಿದೆ. ಇದಕ್ಕೆ ಕಾರಣ ಮನೆಯ ಹೆಂಗಸರೋ ಪಾತ್ರೆ ಅಂಗಡಿಯವರೋ, ಅಥವಾ ಹೊಟೇಲಿನಲ್ಲಿ ತಿನ್ನುವ ಇಡ್ಲಿಯ ಹಾಗೇ ಮನೆಯ ಇಡ್ಲಿಯೂ ಇರಬೇಕು ಎಂದು ಅಪೇಕ್ಷಿಸುವ ಗಂಡಸರೋ ನಾನು ಹೇಳಲಾರೆ. ಮದುವೆ ಸಮಯದಲ್ಲಿ, ದೀಪಾವಳಿಗೆ ಅಳಿಯನನ್ನು ಕರೆದ ಸಮಯದಲ್ಲಿ ಬೀಗರ ತಂಡಕ್ಕೆ ಒದಗಿಸಬಹುದಾದ, ಆರೋಗ್ಯಕರವಾದ ವಸ್ತು ಇಡ್ಲಿ. ಕೊಳಕು ಚೌಕವನ್ನುಟ್ಟು ಪರಿಚಾರಕನು ಮಾಡಿದನೆಂದರೆ ಮಡಿಯುವರೂ ತಿನ್ನಲು ಯೋಗ್ಯ ವಾಗುತ್ತೆ. ಇಂಥ ಸಮಯಗಳಲ್ಲಿ ದೊಡ್ಡ ಇಡ್ಲಿ ಪಾತ್ರೆಯನ್ನು ಬಾಡಿಗೆಗೋ ಎರವಲಾಗಿಯೋ ತಂದು ಒಂದು ಬಾರಿಗೆ ಐವತ್ತು ಅಥವಾ ಒಂದು ನೂರು ಇಡ್ಲಿ ಬೇಯಿಸಿ ತೆಗೆದರೆ ಎಂಥ ಬೀಗರ ತಂಡವನ್ನಾದರೂ ತೃಪ್ತಿಗೊಳಿಸಬಹುದು. ಇದಕ್ಕೆ ಪರಿಕರ, ಕೆಲವರಿಗೆ ಬೆಣ್ಣೆ ಚಟ್ನಿ; ಕೆಲವರಿಗೆ ತುಪ್ಪ ಚಟ್ನಿ; ಇನ್ನು ಕೆಲವರಿಗೆ (ನಾಲಗೆಯ ಆರಾಧಕರಿಗೆ) ಎಳ್ಳೆಣ್ಣೆ, ಚಟ್ನಿಪುಡಿ, (ಊಟಕ್ಕೆ ಮಾಡಿರುವ ವಸ್ತು ವಲ್ಲ; ಇಡ್ಲಿಗಾಗಿಯೇ ಹೆಚ್ಚು ಖಾರ ಹಾಕಿ ಮಾಡಿಸಿರುವ ಪುಡಿಯಾಗಬೇಕು).

ಮಲಬಾರ್ ಇಡ್ಲಿಯ ಮ್ಯಾನುಫ್ಯಾಕ್ಚರ್ ಈಗ ಸ್ಟಾಂಡರ್ಡೈಸ್ ಆಗಿ ಹೋಗಿದೆ. ಅದಕ್ಕೆ ಆಧುನಿಕ ನಾಗರಿಕತೆಯ ನಾಜೋಕಿನ ಮುದ್ರೆ ಬಿದ್ದಿದೆ. ಈಗ ಸುಮಾರು ನಲವತ್ತು ವರ್ಷಗಳಿಗೆ ಮೊದಲು ಮಲಬಾರ್ ಕಡೆಯಿಂದ ಹೊಸದಾಗಿ ನಮ್ಮ ಸಂಬಂಧ ಬೆಳಸಿ ಹಲವು ಹಿರಿಯರು ಬಂದು ಇಲ್ಲಿ ನೆಲಸಿದರು. ಅವರು ಮಾಡುತ್ತಿದ್ದ ಇಡ್ಲಿಗೆ ವಿಶೇಷ ಗುಣಗಳಿರುತ್ತಿದ್ದುವು—ಇದು ಮುಖ್ಯವಾಗಿ ಆಕಾರ ಮತ್ತು ಗಾತ್ರದಲ್ಲಿ: ಅಡ್ಡಳತೆ ನಾಲ್ಕೂವರೆ ಅಂಗುಲ, ದಪ್ಪ ಮೂರು ಅಂಗುಲ—ದಪ್ಪ ಸ್ವಲ್ಪ ಹೆಚ್ಚಿದ್ದರೆ ಚೆಂಡಿನ ಆಕಾರವೇ ಆಗುತ್ತಿತ್ತು; ಅಡ್ಡಳತೆ ಆರು ಅಥವ ಏಳಂಗುಲವಾದರೆ, ದಪ್ಪ ಮೂರು ಅಥವ ಮೂರೂವರೆ ಅಂಗುಲ—ಇದನ್ನು ನೋಡಿಯೇ ನಮಗೆ ಭಯವಾಗುತ್ತಿತ್ತು; ಅದನ್ನು ನಾಲ್ಕು ಹೋಳುಮಾಡಿ ನಮಗೆ ಒಂದು ಹೋಳು ಕೊಡುತ್ತಿದ್ದರು. ನಾನು ಕಾಲೇಜಿನಲ್ಲಿ ಓದುವ ಕಾಲದಲ್ಲಿ

ಅಯ್ಯರ್ ಮಿತ್ರರೊಬ್ಬರೊಂದಿಗೆ ಮಾತನಾಡುತ್ತ, ಮೇಲೆ ಹೇಳಿದ ಇಡ್ಲಿಯನ್ನು ವರ್ಣಿಸಿ, ನನ್ನ ಆಶ್ಚರ್ಯವನ್ನು ಸೂಚಿಸಿದೆ. ಅದಕ್ಕೆ ಅವರು ಹೇಳಿದರು: ಇಡ್ಲಿ ವಿಚಾರ ನಿಮಗೆ ಏನೂ ತಿಳಿಯದು. ನಮ್ಮ ಊರಿನಲ್ಲಿ ಈಗಲೂ ಒಂದು ಪದ್ಧತಿ ಉಂಟು. ಇದು ಯಾವ ಹಬ್ಬದ ಸಂದರ್ಭದಲ್ಲಿ ನನಗೆ ಈಗ ನೆನಪಿಲ್ಲ. ಬಿದಿರಿನಲ್ಲಿ ಸಣ್ಣ ಬುಟ್ಟಿಗಳನ್ನು ಹೆಣೆಯಿಸುವರಂತೆ—ಅಗಲ ಒಂದಡಿ, ಎತ್ತರ ಎರಡಡಿ—ಅದರ ತುಂಬ ಸುಸಂಸ್ಕೃತವಾದ (ಕಡಲೆಬೇಳೆ, ಹೆಸರುಬೇಳೆ ಇತ್ಯಾದಿ ವಸ್ತುಗಳು ಸೇರಿದ) ಇಡ್ಲಿ ಹಿಟ್ಟನ್ನು ತುಂಬಿ ಅದನ್ನು ಒಂದು ದೊಡ್ಡ ಪಾತ್ರೆಯಲ್ಲಿಟ್ಟು ಒಂದು ಅಥವ ಒಂದೂವರೆ ಗಂಟೆಗಳ ಕಾಲ ಬೇಯಿಸುವುದು. ಅದನ್ನು ತೆಗೆದು, ಆರಿದಮೇಲೆ, ಚೂರುಚೂರಾಗಿ ಕತ್ತರಿಸಿ ತಿನ್ನುವುದು. ಸಾಮಾನ್ಯದ ಇಡ್ಲಿಗಿಂತ ಇದಕ್ಕೆ ರುಚಿ ಹೆಚ್ಚು. ಇದು ನಾಜೋಕಿನ ಮೈಸೂರಿನವರಿಗೆ ಆಸುರೀಯವಾಗಿ ಕಾಣ ಬಹುದು. ಆದರೇನು—ಲೋಕೋಭಿನ್ನರುಚಿಃ ; ಅನ್ನಂ ನ ನಿಂದ್ಯಾತ್ ; ತದ್ವ್ರತಂ. ಈ ಇಡ್ಲಿಯ ಗಾತ್ರ ನೆನಪಿಗೆ ಬಂದಾಗ ಸರ್ ಸಿ. ವಿ. ರಾಮನ್ ಅವರು ಹೇಳಿದ ಒಂದು ಅನುಭವ ನೆನಪಿಗೆ ಬರುತ್ತೆ. ಯೂರೋಪಿನ ಪ್ರವಾಸಮಾಡುವಾಗ ಒಂದು ಕಡೆ ಊಟಕ್ಕೆ ಆಹ್ವಾನ ಬಂದಿತು; ಆತಿಥ್ಯವನ್ನು ನೀಡಿದವನೂ ದೊಡ್ಡ ಶಾಸ್ತ್ರಜ್ಞ. ಆತನ ಹೆಂಡತಿಗೆ ಸಮಾಚಾರ ಮುಟ್ಟಿತ್ತು: ಸರ್ ಸಿ. ವಿ. ರಾಮನ್ ರವರು ಅಕ್ಕಿ ಅನ್ನವನ್ನು ತಿನ್ನುವವರು. ಆಕೆ ಅಕ್ಕಿಯನ್ನು ತರಿಸಿ ಒಂದು ಪಾತ್ರೆಯಲ್ಲಿ ಹಾಕಿ ಚೆನ್ನಾಗಿ ಬೇಯಿಸಿದ್ದರಂತೆ. ರಾಮನ್ ರವರು ಊಟಕ್ಕೆ ಹೋದಾಗ ಮೇಜಿನ ಮೇಲೆ ಒಂದು ಅನ್ನದ ಗಟ್ಟಿ ಇದ್ದಿತಂತೆ: ಅಗಲ ಒಂದಡಿ, ಎತ್ತರ ಒಂದೂವರೆ ಅಡಿ. ಆ ಗಟ್ಟಿಯನ್ನು ಕತ್ತರಿಸಿ ಊಟಮಾಡಿದರಂತೆ. ನಮ್ಮ ಮನೆಗಳಲ್ಲಿ ಅನ್ನದ ಈ ರೂಪವು ಪ್ರತ್ಯಕ್ಷವಾದರೆ ಅಂದು ಅನ್ನಿಸುತ್ತೆ Divorce Court ಆವಶ್ಯಕವೇ ಸರಿ ಎಂದು.

ಹೋಟಲಂದರೆ ಕೆಲವರಿಗೆ ಅನಾದರ. ಹೋಟಲಿಗೆ ಹೋಗುವುದು ತಪ್ಪು ಎಂದು ಅವರ ಭಾವನೆ. ಅನ್ನಬ್ರಹ್ಮದ ಗುಡಿಯೇ ಹೋಟಲು. ಅನ್ನಬ್ರಹ್ಮದ ಯೋಗಿಗೆ ಹೋಟಲು ಬಹು ಪವಿತ್ರಸ್ಥಳ. ಅಲ್ಲಿ ಹೋದರೆ ಸಾಮಾನ್ಯವಾಗಿ ಮಾಣಿ ಹೇಳುವನು: ಇಡ್ಲಿ ಸಾಂಬಾರ್ ಇದೆ ಸರ್. ಬಹುಜನಕ್ಕೆ ಇದೇ ರುಚಿ, ಇದೇ ಬೇಕು. ನನಗೆ ಇಡ್ಲಿ ಸಾಂಬಾರ್ ಇಷ್ಟವಿಲ್ಲ. ಸಾಂಬಾರಿನ ರುಚಿ ನಾಲಗೆಗೆ ಬಿದ್ದಕೂಡಲೆ ಊಟಮಾಡಿದಂತೆ ಭಾವನೆಯಾಗುತ್ತೆ, ಆಮೇಲೆ ಆ ದಿನ ಸಾಂಬಾರಿನಲ್ಲಿ ಊಟಮಾಡಲು ಬೇಸರವಾಗುತ್ತೆ. ಸಾಂಬಾರ್ ಬೇಡವೆಂದರೆ ಇಡ್ಲಿ ಚಟ್ನಿ; ನನಗೆ ಗಟ್ಟಿ ಚಟ್ನಿಯೇ ಬೇಕು; ಬೆಣ್ಣೆಯೂ ಬೇಕು, ಇಷ್ಟಾದರೂ ತೃಪ್ತಿ ಇಲ್ಲ.

ಚೈತನ್ಯ ಹೋಟಲಿನಲ್ಲಿ ಒಂದು ಹೊಸರೀತಿ ಆರಂಭವಾಯಿತು: ಒಂದು ಸೆಟ್ ಅಂದರೆ ನಾಲ್ಕು ಇಡ್ಲಿ, ಎರಡು ಉದ್ದಿನ ಒಡೆ, ಚಟ್ನಿ. ಇಲ್ಲಿ ಇಡ್ಲಿ ರುಚಿಯಾಗಿದ್ದರೂ ಬಿಸಿಯಾಗಿದ್ದರೂ, ಬಲು ತೆಳುವು. ಇಲ್ಲಿಯ ಇಡ್ಲಿ ಸಂಪ್ರದಾಯದ ರೀತಿಯಿಂದ ಮಾಡಿದ್ದೇ ಅಲ್ಲ ಅನ್ನುವಷ್ಟು ಸಂಶಯ ಬರುವುದಕ್ಕೆ ಮಾರ್ಗಕೊಟ್ಟಿತು. ಕೆಲವು ದಿನಗಳಾದ ಮೇಲೆ ಈ ಹೋಟಲೇ ಮಾಯವಾಯಿತು. ಇಡ್ಲಿಯ ರುಚಿಯನ್ನು ಸರಿಯಾಗಿ ಸವಿಯಬೇಕೆನ್ನುವವರು ದೊಡ್ಡ ಹೋಟಲಿಗೆ ಹೋಗಬಾರದು, ಸಣ್ಣ ಹೋಟಲೊಂದನ್ನು ಗೊತ್ತುಮಾಡಿಕೊಳ್ಳಬೇಕು. ಗಲಾಟೆ ಬೆಳಿಗ್ಗೆ ಎಷ್ಟು ಹೊತ್ತಿಗೆ ಮುಗಿಯುತ್ತೆ ತಿಳಿದುಕೊಳ್ಳಬೇಕು. ಹೆಚ್ಚು ಗಲಭೆ ಇಲ್ಲದಾಗ ಹೋಗಿ, ಅಡುಗೆಮನೆಗೆ ಆದಷ್ಟು ಸಮೀಪದಲ್ಲಿರಬೇಕು. ಬಿಸಿಬಿಸಿಯಾದ ಇಡ್ಲಿಯನ್ನು ನಾಲ್ಕುನಾಲ್ಕಾಗಿ ತರಿಸಬೇಕು. ಹಿಂದೆ ಹೇಳಿದಂತೆ ಖಾರವಾದ ಚಟ್ನಿಪುಡಿಯನ್ನು, ಒಳ್ಳೆ ಅಚ್ಚ ಎಳ್ಳೆಣ್ಣೆಯನ್ನು ಪಕ್ಕದಲ್ಲಿಟ್ಟುಕೊಂಡು, ಒಂದು ತಟ್ಟೆಯಲ್ಲಿ ಎರಡನ್ನೂ ಧಾರಾಳವಾಗಿ ಹಾಕಿರಬೇಕು, ಎರಡನ್ನೂ ಕಲಸಬಾರದು. ಇಡ್ಲಿಯನ್ನು ಮುರಿದು, ಒಂದು ಚೂರನ್ನು ಮೊದಲು ಎಣ್ಣೆಯಲ್ಲಿ ಅದ್ದಿ ಆಮೇಲೆ ಚಟ್ನಿಪುಡಿಯಲ್ಲಿ ಅದ್ದಿ ಬಾಯಿಗೆ ಹಾಕಿಕೊಳ್ಳಬೇಕು. ಒಂದುಸಲ ಅಗಿದು ನುಂಗಬೇಕು. ಈಗ ಈ ಮಾತನ್ನು ಹೇಳುವಷ್ಟು ಹೊತ್ತೂ ಆಗಬಾರದು ಒಂದು ಇಡ್ಲಿಯನ್ನು ತಿನ್ನುವುದಕ್ಕೆ. ಪರಿಕರಗಳಿಂದ ಸುಸಂಸ್ಕೃತವಾದ ಇಡ್ಲಿ ನಾಲಿಗೆಗೆ ಒಂದುಸಲ ತಗಲಿ, ಹಲ್ಲನ್ನು ಮುಟ್ಟಿ, ಕೂಡಲೇ ಒಳಕ್ಕೆ ಪ್ರವೇಶಿಸಬೇಕು. ಹೀಗೆ ಮಾಡಿದರೆ ನಾಲಗೆಗೆ ಅದರ ಮೃದುತ್ವ, ಚಟ್ನಿಪುಡಿಯ ಖಾರ, ಎಣ್ಣೆಯ ಮೃದುತ್ವ ಮತ್ತು ಸುವಾಸನೆ, ಬಿಸಿಯಿಂದಲೇ ಬರತಕ್ಕ ಸುಖ ಅನುಭವ ಆಗುವುದು.————ದ ಆರನೇ ಕ್ರಾಸ್ ರಸ್ತೆಯಲ್ಲಿದ್ದ ಸಣ್ಣ ಹೋಟಲಲ್ಲಿ ಇದು ನನಗೆ ಸಾಧ್ಯವಾಗಿತ್ತು. ಈಗಲೂ ಆ ಅನುಭವಕ್ಕೆ ನಾಲಗೆ ಕಾದಿದೆ. ಆದರೆ ಆ ತರಹ ಹೋಟಲು ಇನ್ನೂ ಸಿಕ್ಕಿಲ್ಲ, ಸಿಕ್ಕಲಾರದು ಎನಿಸುತ್ತೆ.

ರವೆ ಇಡ್ಲಿ—ಕೆಲವು ಮಾಣಿಗಳು ಹೇಳುವಂತೆ—ರವಾ ಇಡ್ಲಿ ಬೇರೆ ಜಾತಿಗೆ ಸೇರಿದ್ದು. ಮೊದಮೊದಲು ಇದು ದೊರೆಯುತ್ತಿದ್ದುದು ಚಿಕ್ಕಪೇಟೆಯ ದೊಡ್ಡ ಉಡುಪಿ ಹೋಟಲಲ್ಲಿ. ಇದು ಇಡ್ಲಿಯ ಶುದ್ಧರೂಪ; ಒಂದು ರವೆ ಇಡ್ಲಿಯನ್ನು ಪುಡಿಮಾಡಿದರೆ; ಒಂದು ಪ್ಲೇಟು ಉಪ್ಪಿಟ್ಟನ್ನು ತಿಂದಹಾಗೆ ಆಗುತ್ತಿತ್ತು. ಈ ಇಡ್ಲಿಯಲ್ಲಿರುತ್ತಿದ್ದುದು ಬರೀ ಬೇಯಿಸಿದ ರವೆ. ಇದು ಬಹು ಹಿಂದಿನ ಮಾತು. ರವೆ ಅಗ್ಗವಾಗಿದ್ದು—ಎರಡು ಯುದ್ಧಗಳಿಗೆ ಮಧ್ಯೆ—ಜನರಿಗೆ ಜೀವನದ ರುಚಿ ಹಿಡಿದಿದ್ದಾಗ—ರವೆ ಇಡ್ಲಿಯ ರುಚಿಯೂ ಹೆಚ್ಚುತ್ತಾ ಬಂದಿತು. ಇಡ್ಲಿ ಹಿಟ್ಟಿಗೆ

ಒಗ್ಗರಣೆ ಹಾಕಿ, ಕಡಲೆಬೇಳೆ, ತೆಂಗಿನಕಾಯಿಚೂರು, ಕೊತ್ತುಂಬರಿ, ಕರಿಬೇವು ಸೇರಲು ಆರಂಭವಾಯಿತು. ರವೆಯನ್ನು ಬರೇ ನೀರಿನಲ್ಲಿ ನೆನಸುವ ಬದಲು, ಮೊಸರಿನಲ್ಲಿ ನೆನಸಿ, ಇಡ್ಲಿಮಾಡುವ ಪದ್ಧತಿ ಬಂದಿತು; ಜತೆಗೆ ಗೋಡಂಬಿಯೂ ಸೇರಿತು. ಗಾತ್ರ ದೊಡ್ಡದಾಯಿತು; ಬೆಲೆ ಹೆಚ್ಚಿತು; ಆದರೆ ಇಡ್ಲಿಯು ಹೊರ ನೋಟಕ್ಕೆ ರಮ್ಯವಾಗಿಯೂ ನಾಲಗೆಗೆ ಹೆಚ್ಚು ಸವಿಯಾಗಿಯೂ ಆಯಿತು. ಈ ಉತ್ತಮ ದರ್ಜೆಯ ಇಡ್ಲಿ ಯಾವಾಗಲೂ ಬಿಸಿಬಿಸಿಯಾಗಿಯೇ ಸಿಗುತ್ತಿತ್ತು. ಇಂಥ ವಸ್ತುವನ್ನು ಎರಡು ತಿಂದರೆ ತೃಪ್ತಿಯಾಗುತ್ತಿತ್ತು. ಈಗಲೂ ನಾಲಗೆ ಅಪೇಕ್ಷಿಸುತ್ತೆ ಇಂಥ ವಸ್ತುವನ್ನು . . . ಈ ಬರಗಾಲದಲ್ಲಿ ಇವು ಎಲ್ಲಿಂದ ಬರಬೇಕು !

ಹಾಗೂ ಚಪಲ ಹೆಚ್ಚಿದರೆ ಪಾಕಶಾಸ್ತ್ರದಲ್ಲಿಯೂ ಪಂಡಿತನಾದ ನನಗೆ ಬಯಕೆ ತೀರಿಸಿಕೊಳ್ಳಲು ಯಾವ ಅಡಚಣೆಯೂ ಇಲ್ಲ; ಅಂಥ ದಿನದಲ್ಲಿ ನೀವು ಸಂಧಿಸಿದರೆ ನಿಮಗೂ ಈ ಇಡ್ಲಿಯ ಸುಖ ಸಿಕ್ಕುವುದು. ಇದರಲ್ಲಿ ಯಾವ ಸಂಶಯವೂ ಬೇಡ.

ಮಂ.

ಶಿವಮಾನಸಪೂಜಾ

ಆತ್ಮಾ ತ್ವಂ ಗಿರಿಜಾ ಮತಿಃ ಸಹಚರಾಃ ಪ್ರಾಣಾಃ ಶರೀರಂ ಗೃಹಂ
ಪೂಜಾ ತೇ ವಿಷಯೋಪಭೋಗರಚನಾ ನಿದ್ರಾ ಸಮಾಧಿಸ್ಥಿತಿಃ |
ಸಂಚಾರಃ ಪದಯೋಃ ಪ್ರದಕ್ಷಿಣವಿಧಿಃ ಸ್ತೋತ್ರಾಣಿ ಸರ್ವಾ ಗಿರೋ
ಯದ್ಯತ್ಕರ್ಮ ಕರೋಮಿ ತತ್ತದಖಿಲಂ ಶಂಭೋ ತವಾರಾಧನಮ್ ||

—ಶ್ರೀ ಶಂಕರಾಚಾರ್ಯ

ನೀನಾತ್ಮಂ ; ಮತಿ ಗಿರಿಜೆ ; ಸಹಚರರ್ ಪ್ರಾಣಗಳ್ ;
ಮನೆ ಶರೀರಂ ; ವಿಷಯೋಪಭೋಗರಚನೆಯೆ ಪೂಜೆ ;
ನಿದ್ರೆಯೆ ಸಮಾಧಿ ; ಸಂಚಲನೆ ತಾಂ ಪ್ರದಕ್ಷಿಣಂ ;
ನುಡಿವುದೆಲ್ಲಂ ನುತಿ : ನೆಗಳ್ಕೆಯಖಿಲಂ ನಿನಗೆ,
ಓ ಗುರುವೆ, ತಾನಪ್ಪುದಾರಾಧನೆ !

—ಕುವೆಂಪು

ಅನುಭಾವಿ ಕಬೀರ್

ಭರತಖಂಡದ ಸಂತಮಹಾನುಭಾವರ ಪರಂಪರೆಯಲ್ಲಿ ಕಬೀರನಿಗೆ ಪ್ರಭಾವಯುತವಾದ ಸ್ಥಾನ ಸಂದಿದೆ. ಈತನು ಭಾರತ ಜನತೆಯ ಹೃದಯಮಂದಿರದಲ್ಲಿ ಆರಾಧ್ಯ ಸಂತಕವಿಯಾಗಿ ಶೋಭಿಸಿದ್ದಾನೆ. ಆಸೇತು ಹಿಮಾಚಲಪರ್ಯಂತ ಈ ಸಂತಕವಿ ಕಬೀರನ ಹೆಸರನ್ನು ಕೇಳದಿದ್ದ ಭಾರತೀಯನಾವನೂ ಇರಲಾರನೆಂದು ನಿಸ್ಸಂಶಯವಾಗಿ ಹೇಳಬಹುದು. ಆದರೂ ಆಧುನಿಕ ಐತಿಹಾಸಿಕ ದೃಷ್ಟಿಯಿಂದ ಕಬೀರನ ಜನನ, ಮರಣ, ಇವುಗಳ ಮಧ್ಯೆ ಸಂಭವಿಸಿದ ಘಟನೆಗಳು ಇವೆಲ್ಲ ವಿಷಯಗಳೂ ವಿವಾದಾಸ್ಪದವಾಗಿವೆ. ಇತಿಹಾಸ ಸಂಶೋಧಕರಿಗೆ ಸಮಸ್ಯೆಯಾಗಿದೆ. ಕಬೀರನ ಉಪದೇಶಗಳೇನೋ ಪದ್ಯಗಳ ರೂಪದಲ್ಲಿ ಉತ್ತರಭಾರತದ ಜನರಿಗೆ ಪರಿಚಯವಾಗಿವೆ, ಭಾಷಾಂತರಗಳಲ್ಲಿ ಇತರರಿಗೂ ಪರಿಚಯವಾಗಿವೆ. ಭಾರತದ ವಿಶ್ವಕವಿ ರವೀಂದ್ರನಾಥ ಠಾಕೂರರು ಕಬೀರನ ನೂರು ಹಾಡುಗಳನ್ನು ಆರಿಸಿ ಆಂಗ್ಲಭಾಷೆಗೆ ಅನುವಾದಮಾಡಿದ್ದಾರೆ. ಇಲ್ಲಿ ಕವಿಯ ಆಶಯವನ್ನು ಕವಿಯೇ ಹೊರಸೂಸುವ ಒಂದು ಸೊಗಸು ಕಾಣಬರುತ್ತದೆ. ಕಬೀರ್ ಮತ್ತು ಠಾಕೋರ್ ಕವಿಗಳು ಮಾತ್ರವಲ್ಲ ಸಂತರೂ ಹೌದು.

ಈಗ ತಿಳಿದಿರುವಮಟ್ಟಿಗೆ ಕಬೀರ್ ಹುಟ್ಟಿದ ವರ್ಷ ೧೪೪೦. ತೀರಿಕೊಂಡ ವರ್ಷ ೧೫೧೮. ೭೮ ವರ್ಷಗಳ ಈ ದೀರ್ಘ ಆಯುಷ್ಯವು ಪರಮಾತ್ಮನ ಸಾಕ್ಷಾತ್ಕಾರಕ್ಕಾಗಿ ಮತ್ತು ಕೈಂಕರ್ಯಕ್ಕಾಗಿ ಅರ್ಪಿತವಾಗಿತ್ತು.

ಕಬೀರ್ ಜನ್ಮತಃ ಮುಸಲ್ಮಾನನೋ ಅಥವಾ ಹಿಂದುವೋ ಎನ್ನುವ ವಿಷಯವೂ ಸ್ಪಷ್ಟವಾಗಿಲ್ಲ. ಕಬೀರನ ಜನ್ಮವೃತ್ತಾಂತವನ್ನು ಕುರಿತು ಅನೇಕ ಕಥೆಗಳು ಪ್ರಚಾರದಲ್ಲಿವೆ. ಇವುಗಳಲ್ಲಿ ಎಷ್ಟರಮಟ್ಟಿನ ಸತ್ಯಾಂಶವಿದೆ ಎಂಬುದನ್ನು ಹೇಳುವುದೂ ಕಷ್ಟ.

ಇವನನ್ನು ಸಾಕಿ ಸಲಹಿದ ತಂದೆತಾಯಿ ಮುಸಲ್ಮಾನರೆಂದು ನಂಬಲಾಗಿದೆ. ತಂದೆ ಹೆಸರು ನಿರು, ತಾಯಿ ಹೆಸರು ನಿಮಾ. ನಿರು ನೇಕಾರನಾಗಿದ್ದು ಕಬೀರನೂ ನೇಕಾರನಾಗಿಯೇ ಬೆಳೆದನು. ಬಾಲ್ಯದಲ್ಲಿಯೇ ಕಬೀರನಿಗೆ ಮುಸಲ್ಮಾನ ಸೂಫಿ ಅನುಭಾವಿ ಪಂಥದ ಪರಿಚಯವಾಗಿದ್ದಿರಬೇಕೆಂದು ಊಹಿಸಬಹುದು. ಈ ಸೂಫಿ ಪಂಥದ ಸೂಕ್ಷ್ಮತತ್ವಗಳಿಗೂ ವೇದಾಂತಮಾರ್ಗದ ತತ್ವಗಳಿಗೂ ಅನೇಕ ಸಾದೃಶ್ಯಗಳಿರುವುದು ಸ್ಪಷ್ಟವಾದ ವಿಚಾರ. ಪರಮಾತ್ಮನು ಸರ್ವಾಂತರ್ಯಾಮಿ

ಎಂಬ ತತ್ತ್ವ ಇದರಲ್ಲಿ ಬಹು ಮುಖ್ಯವಾದದ್ದು. ವಿಶ್ವದಲ್ಲಿ ಹೇಗೆ ಅಂತರ್ಯಾಮಿಯೋ ಅದೇ ರೀತಿಯಲ್ಲಿ ಮಾನವರ ಹೃದಯದಲ್ಲಿಯೂ ಪರಮಾತ್ಮನು ಅಂತರ್ಯಾಮಿಯಾಗಿರುವನೆಂದು ಸೂಫಿಗಳು ವೇದಾಂತಿಗಳಂತೆಯೇ ನಂಬಿದ್ದರು. ವಿಷಯಾಸಕ್ತಿಯನ್ನು ತೊರೆದು ಅಂತರ್ಮುಖಿಯಾಗಿ ಮಾನವನು ತನ್ನ ಅಂತರಂಗದಲ್ಲಿ ಪರಮಾತ್ಮನ ಸಾಕ್ಷಾತ್ಕಾರಮಾಡಿಕೊಳ್ಳಬಲ್ಲನೆಂದು ಸೂಫಿಗಳು ನಂಬಿದ್ದರು. ಸಾಕ್ಷಾತ್ಕಾರದ ಅನುಭವದಲ್ಲಿ ಉಂಟಾಗುವ ತಲ್ಲೀನತೆಯಲ್ಲಿ ಜೀವಾತ್ಮ ಪರಮಾತ್ಮನೆಂಬ ಭೇದ ಅಳಿದುಹೋಗುವುದೆಂದೂ ಸೂಫಿಗಳು ಸಾರಿದರು. ಭಗವದನುಭವ ಜನಿತವಾದ ಆನಂದದಲ್ಲಿ ಲಯಹೊಂದುವುದನ್ನು 'ಫನ' ಅನ್ನುವ ಪದದಿಂದ ನಿರ್ದೇಶಮಾಡಿದರು. ಪರಮಾತ್ಮನನ್ನು 'ಸತ್' ಅನ್ನುವ ಪದದಿಂದ ವೇದಾಂತಿಗಳು ಕರೆಯುವಂತೆ ಸೂಫಿಗಳು ಅದೇ ಅರ್ಥಕೊಡುವ 'ಅಲ್ ಹಖ್' ಅನ್ನುವ ಪದದಿಂದ ನಿರ್ದೇಶಿಸಿದರು. ಪರಮಾತ್ಮನಲ್ಲಿ ಅನುರಕ್ತನಾದ ಸಾಧಕ ಅವನಲ್ಲಿ ಸಾಯುಜ್ಯವನ್ನು ಬಯಸುತ್ತಾನೆ. ಈ ಸಾಯುಜ್ಯವನ್ನೂ ಇಷ್ಟಪಟ್ಟ ಮಾತ್ರದಲ್ಲಿ ಮಾನವನು ಗಳಿಸಲಾರ. ಅದರ ಸಾಧನಮಾರ್ಗದಲ್ಲಿ ನಡೆಯಬೇಕು. ಈ ಸಾಧನಮಾರ್ಗಕ್ಕೆ 'ತರೀಖತ್' ಎಂದು ಹೆಸರು. ಈ ಮಾರ್ಗದಲ್ಲಿ ನಡೆಯಬೇಕಾದರೆ ಮಾರ್ಗದರ್ಶಕರು ಬೇಕು. ಸದ್ಗುರು ಕೃಪೆ ಲಭಿಸಬೇಕು. ಗುರುವು ಸಾಕ್ಷಾತ್ಕಾರವನ್ನು ಮಾಡಿಕೊಂಡವನಾಗಿರಬೇಕು. ಗುರುವನ್ನು ಸೂಫಿಪಂಥದಲ್ಲಿ ಷೇಕ್‌ಪೀರ್ ಅಥವಾ ಮುರ್ಷಿದ್ ಎಂದು ಕರೆಯುತ್ತಾರೆ. ಸೂಫಿ ಸಾಧನಮಾರ್ಗದ ಹಂತಗಳಿಗೂ ಅಷ್ಟಾಂಗಯೋಗ ಸಾಧನಕ್ಕೂ ಅನೇಕ ರೀತಿಯಲ್ಲಿ ಸಾದೃಶ್ಯವಿದೆ. ಸಾಕ್ಷಾತ್ಕಾರದ ಅನುಭವವನ್ನು ಪಡೆದವನಿಗೆ ಅಂದರೆ ಅನುಭಾವಿಗೆ ಪರಮಾತ್ಮ ಒಂದೇ ಪರಾತ್ಪರ ಸತ್ಯ, ಅದರಲ್ಲಿ ವಿಶ್ವವೆಲ್ಲವನ್ನೂ ಕಾಣಬಲ್ಲನು ಮತ್ತು ವಿಶ್ವದಲ್ಲಿ ಪರಮಾತ್ಮನನ್ನು ಎಲ್ಲೆಲ್ಲೂ ಕಾಣಬಲ್ಲನು. ಈ ಸಮದರ್ಶನ ಭಾವನೆಯುಳ್ಳವನಿಗೆ ಇವನು ಹಿಂದು ಇವನು ಮುಸಲ್ಮಾನ್ ಅನ್ನುವ ವ್ಯತ್ಯಾಸ ಅರ್ಥರಹಿತವಾಗುತ್ತದೆ. ಬಾಹ್ಯವಾಗಿ ಎಂತಹ ವ್ಯತ್ಯಾಸಗಳು ಕಂಡುಬಂದರೂ ಸಾಧಕನ ಮಾರ್ಗ ಮಾತ್ರ ಒಂದೇ ರೀತಿಯಾದದ್ದೆಂಬ ಭಾವನೆ ಮೂಡುತ್ತದೆ. ಕಬೀರನಿಗೆ ಮುಸಲ್ಮಾನ್ ಸಾಧಕರಲ್ಲಿ ಎಷ್ಟು ಭಕ್ತಿವಿಶ್ವಾಸಗಳಿದ್ದವೊ ಅಷ್ಟೇ ಭಕ್ತಿವಿಶ್ವಾಸಗಳು ಹಿಂದೂ ಸಾಧಕರಲ್ಲಿಯೂ ಇತ್ತೆಂಬುದು ಕಂಡುಬರುತ್ತದೆ. ತನ್ನ ಪದ್ಯ ಒಂದರಲ್ಲಿ 'ರಾಮಾನಂದರು ನನಗೆ ದಿವ್ಯಮಾರ್ಗ ತೋರಿದರು' ಎಂದು ಕಬೀರ್ ಹಾಡಿದ್ದಾನೆ. ಮತ್ತೊಂದು ಪದ್ಯದಲ್ಲಿ ಚಮಾರ್‌ಜಾತಿಯ ಸಂತನಾಗಿದ್ದ ರಾಯಿದಾಸ್ ಹೆಸರನ್ನೂ ಹೇಳುತ್ತಾನೆ. ೧೪೮೯ ರಿಂದ ೧೫೧೭ ರ ವರೆಗೆ ಆಳಿದ ಚಕ್ರವರ್ತಿ ಸಿಕಂದರ್ ಲೋದಿಯ ಮುಂದೆ ಕಬೀರನನ್ನು ಕರೆತರಲಾಯಿತೆಂಬ ಐತಿ

ಹಾಸಿಕ ಅಂಶ ನಿಜವೆಂದು ನಂಬಲಾಗಿದೆ. ಚಕ್ರವರ್ತಿಯ ಮುಂದೆ ಕರೆತಂದಾಗ ಚಕ್ರವರ್ತಿಗೆ ತಲೆ ಬಾಗಬೇಕೆಂದು ರಾಜಭಟರು ಹೇಳಿದಾಗ ತನ್ನ ತಲೆ ಜಗತ್ತಿನ ಒಡೆಯನಿಗಲ್ಲದೆ ಇನ್ನು ಯಾರಿಗೂ ಬಾಗದೆಂದು ಉತ್ತರವಿತ್ತ ಕೆಚ್ಚು ಕಬೀರನಲ್ಲಿದ್ದದ್ದು ಸ್ಪಷ್ಟವಾಗಿದೆ. ಚಕ್ರವರ್ತಿಯು ಈ ಉದ್ಧಟತನಕ್ಕೆ ಕೋಪಗೊಂಡು ಕಬೀರನನ್ನು ಅವನ ಜನ್ಮಸ್ಥಳವಾದ ಕಾಶಿಯಿಂದ ಹೊರದೂಡಿದನೆಂದೂ ಅಂದಿನಿಂದ ಪರಿವ್ರಾಜಕನಾಗಿ ಊರಿಂದ ಊರಿಗೆ ಪ್ರಯಾಣಮಾಡುತ್ತಾ ತಾನು ನಂಬಿದ ಭಕ್ತಿಪಂಥವನ್ನು ಹರಡುತ್ತಾ ಇದ್ದು ಗೋರಖ್‌ಪುರ್ ಸಮೀಪದಲ್ಲಿ ಮಘಾರ್ ಎಂಬ ಊರಿನಲ್ಲಿ ನಿರ್ಯಾಣ ಹೊಂದಿದನೆಂದೂ ನಂಬಲಾಗಿದೆ.

ಕಬೀರನಲ್ಲಿ ಇಸ್ಲಾಂ ಧರ್ಮದಲ್ಲಿ ಅಂತರ್ಗತವಾದ ಸೂಫಿ ಪಂಥಕ್ಕೂ ಹಿಂದೂ ಧರ್ಮದಲ್ಲಿ ಅಂತರ್ಗತವಾದ ನಿರ್ಗುಣ ಭಕ್ತಿ ಪಂಥಕ್ಕೂ ಸಮನ್ವಯ ಏರ್ಪಟ್ಟಿತು. ಆದರೆ ಇಸ್ಲಾಂ ಧರ್ಮದ ಸಂಪ್ರದಾಯಸ್ಥರು ಮತ್ತು ಹಿಂದೂಧರ್ಮದ ಸಂಪ್ರದಾಯಸ್ಥರು ಕಬೀರನನ್ನು ಅರ್ಥಮಾಡಿಕೊಳ್ಳುವುದು ಕಷ್ಟವಾಯಿತು. ಮುಸಲ್ಮಾನರು ಕಬೀರನನ್ನು ಹಿಂದುವೆಂದು ತಿಳಿದು ಕಾಫಿರ್ ಎಂದು ಮೂದಲಿಸಿದರು. ಹಿಂದುಗಳು ಅವನು ಮುಸಲ್ಮಾನನೆಂದು ಬಗೆದು ಮ್ಲೇಚ್ಛನೆಂದು ಹೊರಗಿಟ್ಟರು. ಆದರೆ ಈ ಎರಡು ಪಂಗಡಗಳಲ್ಲಿಯೂ ಕಬೀರನ ನಿರ್ಮಲಜ್ಞಾನ ಭಕ್ತಿ ವೈರಾಗ್ಯಗಳನ್ನು ಅರಿತವರು ಇವನನ್ನು ಗೌರವಿಸಿದ್ದಲ್ಲದೆ ಇವನನ್ನು ಹಿಂಬಾಲಿಸಲೂ ಸಿದ್ಧವಾದರು. ಸಾಮಾನ್ಯ ಜನರು ಇವನ ಭಜನೆ ಕೀರ್ತನೆಗಳಲ್ಲಿ ಉಪಾಸನೆ ಉಪದೇಶಗಳಲ್ಲಿ ಭಾಗಿಗಳಾದರು. ಹಿಂದೂ ಮತ್ತು ಇಸ್ಲಾಮ್ ಧರ್ಮಗಳ ಅನುಯಾಯಿಗಳಲ್ಲಿ ಕಂಡುಬಂದ ದೋಷಗಳನ್ನು ಅವರಿಗೆ ತೋರಿಸಿಕೊಟ್ಟು ಈ ಎರಡು ಧರ್ಮಗಳ ಸಂಸ್ಕರಣಕ್ಕೂ ಕಬೀರ್ ಸಹಾಯಮಾಡಿದನು.

ಕಬೀರ್ ಏಕದೇವೋಪಾಸಕನಾಗಿದ್ದನು. ಏಕೈಕದೇವನನ್ನು ರಾಮ್ ಎಂದೂ ರಹೀಮ್ ಎಂದೂ ಕರೆದನು. ಕೃಷ್ಣ ಎಂದರೂ ಅವನೆ ಕರೀಮ್ ಎಂದರೂ ಅವನೆ ಎಂದು ಉಪದೇಶಮಾಡಿದನು. ಮಂದಿರದಲ್ಲಿಯಾಗಲಿ ಮಸೀದಿಯಲ್ಲಾಗಲಿ ನಾವು ಆರಾಧಿಸುವ ಜಗದೀಶನೊಬ್ಬನೇ ಎಂದು ಸಾರಿದನು.

ರಾಮಾನಂದನ ಶಿಷ್ಯನೆನಿಸಿದ ಕಬೀರ ವೈಷ್ಣವಪಂಥಿ ಎಂದೂ ವಿಶಿಷ್ಟಾದ್ವೈತ ವೇದಾಂತಪ್ರವರ್ತಕರಾದ ರಾಮಾನುಜಾಚಾರ್ಯರ ಪಂಥಕ್ಕೆ ರಾಮಾನಂದನು ಒಲಿದಿದ್ದನೆಂದೂ ಕೆಲವು ಸಂಶೋಧಕರು ಅಭಿಪ್ರಾಯಪಡುತ್ತಾರೆ. ಮತ್ತೆ ಕೆಲವರು ಕಬೀರನು ಸಗುಣೇಶ್ವರೋಪಾಸಕನಲ್ಲವೆಂದೂ ಇವನ ಭಕ್ತಿಪಂಥವು ರಾಮಾನುಜರ ಪಂಥದಂತೆ ಸಗುಣಭಕ್ತಿ ಪಂಥವಾಗಿರದೆ ಅದ್ವೈತವೇದಾಂತಕ್ಕೆ ಹೊಂದಿಕೊಂಡ

ನಿರ್ಗುಣಭಕ್ತಿ ಪಂಥದ ಪ್ರಚಾರಕನಾಗಿದ್ದನೆಂದೂ, ಅಭಿಪ್ರಾಯಪಡುತ್ತಾರೆ. ವಾಸ್ತವವಾಗಿ ಇದು ಹೀಗೆಯೇ ಎಂದು ಯಾವುದನ್ನೂ ನಿರ್ವಿವಾದವಾಗಿ ಹೇಳುವುದು ಕಷ್ಟ.

ಕಬೀರನ ಪದ್ಯಗಳು ಹಿಂದಿ ಭಾಷೆಯಲ್ಲಿವೆ. ಹೃದಯದ ಉದ್ಗಾರಗಳಿವು. ಶ್ರಮಪಟ್ಟುಕೊಂಡು ಮಾಡಿದ ಪದ್ಯ ರಚನೆ ಇಲ್ಲಿ ಕಾಣುವುದಿಲ್ಲ. ಕಬೀರನ ಪದ್ಯರಾಶಿ ಎಂದು ಈಗ ನಿರ್ದೇಶಿಸುವುದೆಲ್ಲಾ ಕಬೀರನದೇ ಎಂದು ಹೇಳುವಹಾಗಿಲ್ಲ. ವಿಮರ್ಶಾತ್ಮಕವಾದ ರೀತಿಯಲ್ಲಿ ಇದನ್ನು ನಿಷ್ಕರ್ಷಿಸಬೇಕಾಗುವುದು. ಸುಮಾರು ೧೫೭೦ ರಲ್ಲಿ ಕಬೀರನ ಪದ್ಯಗಳನ್ನು ಅವನ ಶಿಷ್ಯನೊಬ್ಬ 'ಬೀಜಕ್' ಎಂಬ ಹೆಸರಿನಲ್ಲಿ ಕೂಡಿಸಿದನೆಂದು ನಂಬಲಾಗಿದೆ. ಇದಾದ ಸುಮಾರು ೩೦ ವರ್ಷಗಳ ಮೇಲೆ ಕಬೀರನ ಅನೇಕ ಪದ್ಯಗಳು ಸಿಕ್ಕರ ಪವಿತ್ರಗ್ರಂಥವಾದ 'ಗ್ರಂಥ್'ನಲ್ಲಿ ಸೇರಿರುವಂತಿದೆ.

ಕಬೀರನ ಸ್ಫೂರ್ತಿಯಿಂದ ಹುಟ್ಟಿದ ಪಂಥಗಳು ಅನೇಕ. ಕಬೀರನ ಅನುಯಾಯಿಗಳು ತಮ್ಮ ಪಂಥವನ್ನು ಕಬೀರ್ ಪಂಥವೆಂದು ಕರೆದರು. ತಮ್ಮನ್ನು ಕಬೀರ್ ಪಂಥಿಗಳೆಂದು ಕರೆದುಕೊಂಡರು. ಕಬೀರನ ಉಪದೇಶಗಳ ಪ್ರಭಾವವನ್ನು ಸಿಖ್, ದಾದುಪಂಥಿ, ಲಾಲ್‌ದಾಸಿ, ಸತ್‌ನಾಮಿ, ಬಾಬಾಲಾಲಿ, ಚರಣ್‌ದಾಸಿ, ಶಿವನಾರಾಯಣಿ, ಗರೀಬ್‌ದಾಸಿ, ರಾಮ್‌ಸನೇಹಿ ಮೊದಲಾದ ಭಕ್ತಿಪಂಥಗಳಲ್ಲಿ ಕಾಣಬಹುದು. ಈ ಎಲ್ಲಾ ಪಂಥಗಳಿಗೂ ಸಮಾನವಾದ ತತ್ವಗಳಾವುವೆಂದರೆ, ದೇವನೊಬ್ಬ, ಸಚ್ಚಿದಾನಂದಸ್ವರೂಪನು, ಅವಾಙ್ಮನಸಗೋಚರನು, ದೇವನಲ್ಲಿ ಧ್ಯಾನಪರರಾಗಿ ಭಕ್ತರಾದವರಲ್ಲಿ ಜಾತಿ ಕುಲಗೋತ್ರಗಳ ವ್ಯತ್ಯಾಸವಿಲ್ಲ, ಸದ್ಗುರುವಿನ ಅನುಗ್ರಹ ಪರಮಾತ್ಮನ ಸಾಕ್ಷಾತ್ಕಾರಕ್ಕೆ ಅವಶ್ಯಕ, ದೇಶಭಾಷೆಯಲ್ಲಿ ಎಲ್ಲರಿಗೂ ತಿಳಿಯುವಂತೆ ಭಗವಂತನ ಮಹಿಮೆಯನ್ನು ಹೇಳಬೇಕು, ಎಂಬುವು.

ಕಬೀರನ ದೃಷ್ಟಿಯಲ್ಲಿ ಜಾತಿ, ಪಾಂಡಿತ್ಯ, ಸಿರಿತನಗಳಿಗೆ ಬೆಲೆಯಿಲ್ಲ. ಮಾನವನ ಜನ್ಮಕ್ಕೆ ಬೆಲೆ ಕೊಡುವುದು ಹರಿಭಕ್ತಿಯೊಂದೇ ಎಂದು ಅಭಿಪ್ರಾಯಪಟ್ಟನು. ಪಂಡಿತನೊಬ್ಬ ಕಬೀರನನ್ನು ಪರೀಕ್ಷೆಮಾಡುವ ಉದ್ದೇಶದಿಂದ 'ಏನನ್ನು ಓದಿರುವೆ' ಎಂದು ಕೇಳಿದಾಗ ಕಬೀರ್ "ಓದುವದನು ನಾನರಿಯೆ, ವಾದಮಾಡಲು ನನಗೆ ತಿಳಿಯದು, ಹರಿಯ ಗುಣಕೀರ್ತನೆಯನ್ನು ಹೇಳಿಕೊಂಡು ಕೇಳಿಕೊಂಡು ಸಂಚಾರಮಾಡುತ್ತಿರುವೆನು" ಅಂದನಂತೆ.

'ನೀನು ಯಾವ ಜಾತಿ' ಎಂದು ಕೇಳಿದ್ದಕ್ಕೆ ಕಬೀರ್ ನೇಕಾರನೆಂದು ಪ್ರತ್ಯುತ್ತರವಿತ್ತನು. ವಿಶ್ವದ ನೇಕಾರನಿಗೂ ತನಗೂ ಇರುವ ಸಂಬಂಧವನ್ನು ಕುರಿತು ಹೀಗೆ ಹೇಳಿದನು:

"ಈ ವಿಚಿತ್ರದ ವಿಶ್ವಪಟವ ನೆಯ್ದಿರುವಂಥ
ಅತಿ ಚತುರ ನೇಕಾರನಾರು ;
ಭೂಮಿ ಆಕಾಶಗಳೆ ಅವನ ಮಗ್ಗ !
ಸೂರ್ಯ ಚಂದ್ರರೆ ಹಾಸುಹೊಕ್ಕು !
ಅವನ ನೆಯ್ಗೆಯ ಇಂದ್ರಜಾಲ ಈ ಸೃಷ್ಟಿ.
ನಾನೂ ನೇಕಾರ. ಕಬೀರ ಹೇಳುವುದ ಕೇಳು
ಅವನ ಬಾಳಿನ ನೂಲು ವಿಶ್ವವಸ್ತ್ರದೆ ನೂತ
ಒಂದು ಎಳೆ ಮಾತ್ರ."

ಕಬೀರ್ ಕಾವಿಬಟ್ಟೆ ಹೊದ್ದ ಸನ್ಯಾಸಿಯಾಗಿರಲಿಲ್ಲ. ಗೃಹಸ್ಥಾಶ್ರಮಿಯಾಗಿದ್ದನು. ಹೊಟ್ಟೆಪಾಡಿಗಾಗಿ ಬಟ್ಟೆನೇಯುವ ಕೆಲಸದಲ್ಲಿಯೂ ತೊಡಗಿದ್ದನು. ಈ ಕೈಗಾರಿಕೆಯಲ್ಲಿ ನಿಪುಣನಾಗಿಯೂ ಇದ್ದನು. ಸಂಸಾರದಲ್ಲಿದ್ದೇ ಭಗವಂತನ ಸಾನ್ನಿಧ್ಯವನ್ನು ಅಭ್ಯಾಸಮಾಡಿಕೊಳ್ಳುತ್ತಿದ್ದ ಸಾಧಕನಾಗಿದ್ದನು. "ಮನೆ ತೊರೆದು ವನವಾಸಮಾಡಿದ ಮಾತ್ರಕ್ಕೆ ಶೋಕಸಂತಾಪಗಳೂ ಜರಾಮರಣಗಳೂ ನಮ್ಮನ್ನು ಬಿಡುವುವೇನು ? ಭಗವಂತನ ಚರಣಾರವಿಂದಗಳಿಗೆ ಕಟ್ಟಿದ್ದರೆ ಮಾತ್ರ ಇರುವೆಡೆಯೆ ಪರಮಾನಂದ ಮನೆಯನ್ನು ಕಟ್ಟಿಕೊಂಡಂತೆ" ಎಂದು ಒಂದು ಪದ್ಯದಲ್ಲಿ ಹೇಳಿದ್ದಾನೆ. ಮತ್ತೊಂದು ಪದ್ಯದಲ್ಲಿ ಹೀಗೆ ಹೇಳಿದ್ದಾನೆ:

"ಈ ಜಗವು ಸತ್ಯಸೌಂದರ್ಯಗಳ ನೆಲೆವೀಡು.
ನೀವಿದನು ತೊರೆದಿಂದು ಓಡಿಹೋಗುವಿರೇಕೆ ?
ಆಡಿನೊಲು ಗಡ್ಡವನು ಬೆಳೆಯಿಸಿದ ಮಾತ್ರದಿಂ
ದೇನು ಸಾಧಿಸಿದಂತೆ ಹೇಳಿ.
ತನ್ನ ಆ ಪ್ರೇಮಜಾಲವ ಬೀಸಿ ಜಗದ ಮೇ
ಲೆಸೆದಿರುವ ಆ ಚೆಲುವ ನನ್ನಿನಿಯ.
ಈ ಲೋಕವನದಲ್ಲಿ ಕಣ್ಣುಮುಚ್ಚಾಲೆಯನು
ತಾನಾಡುತಿಹನು."

ಅಂದರೆ ಪರಮಾತ್ಮನ ಕ್ರೀಡಾವನವಾದ ಈ ಪ್ರಪಂಚವನ್ನು ತೊರೆಯುವುದು ವಿರಕ್ತಿಯಲ್ಲ ಎಂಬುದು ಕಬೀರನ ಭಾವ.

ಕಬೀರ್ ಭಗವದ್ಭಕ್ತಿಯ ಬಾಗಿಲನ್ನು ಎಲ್ಲರಿಗೂ ತೆರೆದಿಟ್ಟನು. ಸ್ತ್ರೀ ಪುರುಷ, ಸವರ್ಣ ಅವರ್ಣ, ಹಿಂದು ಮುಸಲ್ಮಾನ್, ಪಂಡಿತ ಪಾಮರ, ಬಲ್ಲಿದ ಬಡವ ಎಂಬ ಯಾವ ವ್ಯತ್ಯಾಸವೂ ಭಕ್ತಿಪಂಥಕ್ಕೆ ಅಡ್ಡಬರುವಂಥದಲ್ಲ ಎಂಬುದು ಇವನ ಮತ. ಈ ರೀತಿಯ ವಿಶ್ವಧರ್ಮವನ್ನು ಬೋಧಿಸಿದ ಕಬೀರನಲ್ಲಿ ಮತಾಂಧತೆ ತಲೆದೋರಲು

ಏನೇನೂ ಅವಕಾಶವಿಲ್ಲ. ಮತಗಳು ಮತ್ತು ಬಾಹ್ಯಮತಾಚಾರಗಳು ಅಂತರಂಗ ಧರ್ಮದ ಹೊರಮೈ ಮಾತ್ರ ಎಂಬುದು ಕಬೀರನ ಅಭಿಪ್ರಾಯ. ಮುಖ್ಯವಾಗಿ ಗಣನೆಗೆ ತಂದುಕೊಳ್ಳಬೇಕಾದುದು ಅಂತಃಕರಣ ಪರಿಶುದ್ಧಿ. ಈ ಭಾವವನ್ನೂ ಕಬೀರ್ ಒಂದು ಪದ್ಯದಲ್ಲಿ ಈ ರೀತಿ ವರ್ಣಿಸಿದ್ದಾನೆ:

ಓ ಭಕ್ತ ! ನನ್ನನ್ನು ನೀನೆಲ್ಲಿ ಹುಡುಕುತಿಹೆ ?
ಇಗೊ ನೋಡು ! ನಿನ್ನ ಬಳಿಯೇ ನಾನು ಇರುವೆನಲ್ಲ !
ಮಂದಿರದೊಳಾನಿಲ್ಲ, ಮೇಣ್ ಮಸೀದಿಯೊಳಿಲ್ಲ;
ಕಾಬದಲ್ಲಿಲ್ಲ, ಕೈಲಾಸದಲ್ಲಿಲ್ಲ;
ಯಜ್ಞದಲ್ಲಿಲ್ಲ, ಮೇಣ್ ಯಾಗದಲ್ಲಿಲ್ಲ ;
ಉಪವಾಸವ್ರತಗಳಲ್ಲಿಲ್ಲ ;
ಯೋಗದಲ್ಲಿಲ್ಲ, ಸನ್ಯಾಸದಲ್ಲಿಲ್ಲ;
ನೀನೆನ್ನ ಮನಸಾರೆ ಕಾಣುವೊಂದಾಸೆಯಿರೆ
ಇಗೊ ! ಈಗ, ನೀನು ಇದ್ದಲ್ಲಿಯೇ
ನನ್ನನ್ನು ಕಾಣಲಿರುವೆ.
ಕಬೀರ್ ಹೇಳುವುದ ಕೇಳು : ಹೇ ಸಾಧು !
ಈಶ್ವರನು ಉಸಿರಾಡುವುದರಲ್ಲಿಲ್ಲ
ಉಸಿರೇ ಆಗಿಹನು.
ಪುಣ್ಯತೀರ್ಥಗಳಲ್ಲಿ ಮೈತೊಳೆದರೇನು ?
ಮನ ತೊಳೆಯಬೇಕು.
ಮರುಮಾತನಾಡದಿಹ ಮೂರ್ತಿಯನು
ಮಾತನಾಡಿಸುವ ಒಂದು ಯತ್ನವೇಕೆ ?
ನಿನ್ನಂತರಾತ್ಮನನೆ ನುಡಿಸು ನೀನು.
ಸಾಕ್ಷಾತ್ ದರ್ಶನವದಿಲ್ಲದೆಡೆ
ಪುರಾಣ ಕುರಾನುಗಳು ಬರಿಯ ವಾಗ್ಜಾಲ.
ತೆರೆ ತೆಗೆದು ನೋಡಿಹೆನು ನಾನು ;
ಕಬೀರ್ ಹೇಳುವುದು ಸುಳ್ಳು ನುಡಿಯಲ್ಲ ಕಾಣಿರೊ !
ಇದು ಬಿಟ್ಟು ಮಿಕ್ಕೆಲ್ಲ ಹುಸಿ.

ಭಕ್ತಿ ಎಂಬುದು ನಾರದಭಕ್ತಿಸೂತ್ರದಲ್ಲಿ ಹೇಳಿರುವಂತೆ ಈಶನಲ್ಲಿ ಪರಮ ಅನುರಾಗ. ಈ ಅನುರಾಗದಿಂದ ತುಂಬಿಕೊಂಡ ಹೃದಯ ಬೇರೆ ಯಾವುದಕ್ಕೂ ತಲ್ಲಣಿಸದು, ಯಾವುದಕ್ಕೂ ಅಂಜದು, ಯಾವುದಕ್ಕೂ ಮಣಿಯದು. ಭಕ್ತನ ಹೃದಯವೇ ಈಶನ ಭವ್ಯಮಂದಿರ. ಅವನ ಉಸಿರೇ ಈಶನ ನಾಮಸಂಕೀರ್ತನೆ. ಈಶನೊಡನೆ

ಸಂಶ್ಲೇಷವೇ ಸ್ವರ್ಗ, ವಿಶ್ಲೇಷವೇ ನರಕ. ಅನುಭಾವಿಯ ಸಾಧನೆಯಲ್ಲಿ, ಜ್ಞಾನ, ದರ್ಶನ, ಪ್ರಾಪ್ತಿ ಎಂಬ ಅವಸ್ಥಾತ್ರಯ ಉಂಟು. ಭಗವದ್ಗೀತೆಯಲ್ಲಿ ಈ ವಿಷಯ ವನ್ನು ಈ ಶ್ಲೋಕದಲ್ಲಿ ಪ್ರತಿಪಾದಿಸಿದೆ. "ಭಕ್ತ್ಯಾತ್ವನನ್ಯಯಾಶಕ್ಯಾಃ ಅಹಮೇವಂ ವಿಧೋಽರ್ಜುನ, ಜ್ಞಾತುಂ ದ್ರಷ್ಟುಂ ಚ ತತ್ತ್ವೇನ ಪ್ರವೇಷ್ಟುಂ ಚ ಪರಂತಪ" ಅನುಭಾವಿಯಾದವನು ಮೊದಲು ಭಗವತ್ಸ್ವರೂಪ ರೂಪ ಗುಣ ವಿಭೂತಿಗಳನ್ನು ಉಪದೇಶದಿಂದ ತಿಳಿಯುತ್ತಾನೆ. ಇವುಗಳ ಶ್ರವಣ, ಮನನ, ನಿಧಿಧ್ಯಾಸನಗಳ ಫಲವಾಗಿ ಪರಮಾತ್ಮನ ದರ್ಶನ ಲಭಿಸುತ್ತದೆ. ಪರಮಾತ್ಮನ ಸಾಕ್ಷಾತ್ಕಾರವಾದ ಮೇಲೆ 'ವಿಶ್ಲೇಷ ಭೀರುತ್ವ' ಅಂದರೆ ಅವನಿಂದ ಬೇರೆಯಾದರೆ ಏನು ಗತಿ ಎಂಬ ಭಯ ಹೃದಯವನ್ನು ಆವರಿಸುತ್ತದೆ. ಆದರೆ ಈ ಭಯ ಮುಂದಿನ ಸ್ಥಿತಿಯಾದ 'ಪ್ರವೇಶ'ದ ಮುಂದಿನ ಸೂಚನೆ. ಆ ಬೆಳಗಿನ ಮುಂಬೆಳಗು.

ಅನುಭಾವಿಯ ಹೃದಯವೇದನೆಯುನ್ನು ಕಬೀರ್ ಈ ಪದ್ಯದಲ್ಲಿ ಹೇಳಿದ್ದಾನೆ.

ಓ ನನ್ನ ಆತ್ಮವೇ ! ಪರಿತಪಿಸಬೇಡ.
ಅಂಜದಿರು. ನಾಕವನು ಬಯಸದಿರು,
ನರಕಕ್ಕೆ ಹೆದರದಿರು. ಏನು ತಾನಾಗುವುದೊ
ಅದು ಆಗಲೆನ್ನು.
ಈಶ್ವರನ ಮಧುರ ನಾಮಂಗಳನು ನೆನೆಯುತಿರು.
ಎಲ್ಲ ತೆರ ಫಲಗಳನು ಈಯುವವನವನು.
ಅನುರಾಗವಿಲ್ಲದೆಡೆ ಭಕ್ತಿಯಿಂದೇನು ?
ಜಪತಪಗಳಿಂದೇನು ?
ಉಪವಾಸ ತೀರ್ಥಯಾತ್ರೆಗಳಿಂದಲೇನು ?
ಈಶನಲಿ ನಲಿಯುವುದು, ಅವನ ನುಡಿಯಂತೆ
ನಡೆಯುವುದು, ಲೇಸು.
ಸುಖದಲ್ಲಿ ಹಿಗ್ಗದಿರು, ದುಃಖದಲಿ ಕುಗ್ಗದಿರು,
ಅವನಿಚ್ಛೆ ನಮ್ಮ ಹಿತವೊ !
ಕಬೀರ ಹೇಳುವದ ಕೇಳು :
ಹೃದಯಮಂದಿರದಲ್ಲಿ ದೇವನನು ನೆಲೆಗೊಳಿಸು.
ಅಂತೆಸಗಲದುವೆ ನಿಜಪೂಜೆಯಹುದು.
ಮಸೀತಿಯಲೋ ಮಂದಿರದಲೋ ದೇವನಿಹನೆನ್ನುವೆಯ ?
ಹೇಳು ಹಾಗಾದರಿನ್ನುಳಿದ ಈ ಜಗದ
ತಾಣಗಳಿಗಾರೊಡೆಯರಯ್ಯ ?
ದೇವನೆಂದಾದರೂ ಅಲ್ಲನೆಂದಾದರೂ

ನಿನ್ನ ನಾಮವದಿರಲಿ. ಅಲ್ಲದಿರಲಾ ನಾಮ
ರಾಮನೆಂದಾದರೂ ಆಗಿರಲಿ.
ನಾನು ಆ ಸುಪವಿತ್ರ ನಾಮವನೆ
ನೆನೆನೆನೆದು ಜೀವಿಪೆನು ಕೃಪೆತೋರು!
ಎಲೆ ಸಾಧು! ನಿನ್ನ ಹೃದಯದೊಳಿಹನು ಆ ದೇವನು.
ಅವನೆ ಹೃದಯೇಶ್ವರನು. ಅದೆ ಅವನ ಮಂದಿರ ಕಣಾ.''

ಈ ರೀತಿಯಲ್ಲಿ ಈಶ್ವರಸಾಕ್ಷಾತ್ಕಾರಮಾಡಿಕೊಂಡವನಿಗೆ ಅವನು ಮಾಡುವ ಸಕಲ ಕರ್ಮಗಳೂ ಈಶ್ವರನ ಅರ್ಚನೆ, ಆರಾಧನೆ ಎಂಬುವ ಭಾವವನ್ನು ಕಬೀರ ವ್ಯಕ್ತಪಡಿಸಿದ್ದಾನೆ. ಭಗವದ್ಗೀತೆಯ "ಯತ್ಕರೋಷಿ ಯದಶ್ನಾಸಿ, ಯಜ್ಜುಹೋಷಿ ದದಾಸಿಯತ್" ಅನ್ನುವ ಕಾವ್ಯದ ಛಾಯೆಯನ್ನು ಈ ಪದ್ಯದಲ್ಲಿ ಕಾಣಬಹುದು:

ಹೇ ಸಾಧು! ಸಹಜಸಮಾಧಿಯು ಒಳಿತಯ್.
ಗುರುಕೃಪೆಯ ಮಹಿಮೆಯಿಂದೆನ್ನೊಡೆಯನನು
ನಾನು ಸಂಧಿಸಿದೆನು.
ಅಂದಿನಿಂದಿದುವರೆಗೆ ನಮ್ಮ ಪ್ರೇಮದ ಲೀಲೆ
ನಡೆಯುತಿದೆ. ಕೊನೆಯಿಲ್ಲ, ಮಿತಿಯಿಲ್ಲ, ಅದಕೆ
ಎಲ್ಲೆಲ್ಲಿ ನಾನಲೆವೆನಲ್ಲಲ್ಲಿ ಸ್ವಾಮಿಯನು
ಸೇರಿಹನು. ಅದೆ ನನಗೆ ಆನಂದವೋ!
ನಾ ಮಲಗಿದಂದೆಲ್ಲ ಅವನ ಅಡಿದಾವರೆಗೆ ದಂಡಪ್ರಣಾಮ!
ನಾನೇನನಾಡುವೆನೊ ಆ ಎಲ್ಲವೂ ಅವನ ಸುಪವಿತ್ರನಾಮ!
ನಾನು ಕೇಳುವುದೆಲ್ಲ ಆ ಮಹಾತ್ಮನ ಸ್ಮರಣ!
ನಾನೇನ ತಿನ್ನುವೆನು, ನನ್ನ ಬಾಯಾರಿಕೆಗೆ ನಾನೇನ ಕುಡಿಯುವೆನು,
ಅವನ ತೀರ್ಥಪ್ರಸಾದ ಆ ಎಲ್ಲವೂ!
ನನಗೀಗ ಮನೆಮಠಗಳೆಲ್ಲವೂ ಒಂದೆ ಸಮ. ಎಲ್ಲವೂ ಅವನ ಧಾಮ!
ಕಣ್ಣು ಮುಚ್ಚೆನು ನಾನು, ಕಿವಿಯ ಮುಚ್ಚೆನು ನಾನು,
ದಂಡಿಸೆನು ಮೇಣೆನ್ನ ದೇಹವಿದನು.
ಕಣ್ದೆರೆದು ನಾ ನೋಡುವನಿತರೊಳು
ಹರಿಯ ಸುಂದರ ರೂಪ ಕಾಣುತಿಹೆನು.
ನನ್ನ ಮನ ನೆಟ್ಟಿರುವುದಾತನೊಳು.
ಮಲಿನತೆಯು ನನ್ನ ಬಿಟ್ಟೋಡಿರುವುದು.
ಎದ್ದರೂ ಕುಳಿತರೂ ಸತತ ಸ್ವಾಮಿಯ ನೋಟ.
ಕಬೀರ ಹೇಳುವುದ ಕೇಳು—ಇದು ನನ್ನ ಪರಮಪದ
ಸುಖದುಃಖಗಳನು ದಾಂಟಿರ್ದುದು.

ಈ ದಿವ್ಯಾನುಭವವನ್ನು ವರ್ಣಿಸಲು ನಮ್ಮ ಮಾತು ಸಾಲದು.

ಮೂಕನೊಬ್ಬ ಸಕ್ಕರೆಯನು ಸವಿದನು
ಅದರ ಸವಿಯನವನೊಬ್ಬನೆ ಬಲ್ಲನು.
ಬಾಯಿ ಇಲ್ಲ ಅವನಿಗದನು ಹೇಳಲು
ಇಂದು ನನ್ನ ಗತಿಯುಮವನ ತೆರದೊಲು.

ಶ್ರೀ ರಾಮಾನುಜರ ವಿಶಿಷ್ಟಾದ್ವೈತಸಿದ್ಧಾಂತದಲ್ಲಿ ಮುಖ್ಯವೆಂದೆಣಿಸಿದ ಶೇಷ ಶೇಷಿ ಭಾವವನ್ನೂ, ಆಧಾರಾಧೇಯ ಭಾವವನ್ನೂ ಈ ಪದ್ಯದಲ್ಲಿ ಕಾಣು ತ್ತೇವೆ. ಪರಮಾತ್ಮನಿಗೆ ನಾವು ಪರಾಧೀನರಾದಾಗಲೆ ನಮ್ಮ ಸ್ವಾತಂತ್ರ್ಯವನ್ನೂ ಸಂಪಾದಿಸಿದಂತಾಗುವದು ಎಂಬುವುದು ಇದರ ಭಾವ. "ನ್ಯಗ್ರೋಧಬೀಜೇ ವಟವತ್ ಪ್ರಣವೇ ಶಬ್ದಜಾಲವತ್ ಸಿದ್ಧೇ ತದೀಯ ಶೇಷತ್ವೇ ಸರ್ವಾರ್ಥಾಃ ಸಂಭ ವಂತಿ ಹಿ" ಎಂದು ಹೇಳಿದೆ. ವಟವೃಕ್ಷ ಒಂದು ಸಣ್ಣ ಬೀಜದಲ್ಲಿ ಅಡಗಿರುವಂತೆ, ಶಬ್ದಜಾಲವೆಲ್ಲಾ ಓಂಕಾರದಲ್ಲಿ ಅಡಗಿರುವಂತೆ, ಪರಮಾತ್ಮನಿಗೆ ನಾವು ಶೇಷ ಭೂತರು ಅನ್ನುವ ಅರಿವು ನಮಗೆ ಉಂಟಾದರೆ ಎಲ್ಲ ಪ್ರಯೋಜನಗಳನ್ನೂ ಸುಖ ಸಂಪತ್ತುಗಳನ್ನೂ ಪಡೆದಂತಾಯಿತು. ಕಬೀರ ತನ್ನನ್ನು 'ರಾಮನ ನಾಯಿ' ಎಂದು ವರ್ಣಿಸಿಕೊಳ್ಳುತ್ತಾನೆ:

ನಾನು ರಾಮನ ನಾಯಿ, ಅವನೊಂದು ಸರಪಳಿಯ
ಕೊಂಡಿಯಲಿ ಸಿಲುಕಿರುವೆನು.
ಅವನೆತ್ತಲೆಳೆಯುವನು ಅತ್ತ ಕಡೆಗೆಲೆಯುವೆನು,
ಹೋಗುವೆನು ಅತ್ತ ನಾನು.

ಪ್ರಿಯ ಪ್ರೇಯಸಿಯರ ಮಧುರಭಾವವು ಕಬೀರನ ಅನೇಕ ಪದ್ಯಗಳಲ್ಲಿ ಚಿಮ್ಮುತ್ತದೆ.

ಸಂಜೆಯ ನಸುಗೆಂಪು ಮೂಡಿತು, ಕತ್ತಲ
ಮೋಡವು ಕವಿಯುತಿದೆ.
ವನದೊಳಗಲೆಯುವ ಆ ದಾರಿಹೋಕರು
ದಾರಿ ತಪ್ಪಿದರು.
ಕಾದಲೆ ಮುಸುಮುಸು ಮುಸುಕೊಳಗಳುವಳು
ಹೂವು ಹಿಡಿದಿಹಳು.
ಕಂಬನಿಯೊಳು ತೊಯ್ದ ಮುಸುಕಿನ ಭಾರವ
ಕೋಮಲೆ ಹೊರಲಾರಳು.

ಭಗವದ್ವಿರಹವಿಹ್ವಲನಾದ ಭಕ್ತ ತನ್ನಿನಿಯನೊಡನೆ ಸಂಗಮವನ್ನು ಬಯಸುವನು. ತನಗೂ ತನ್ನ ಸ್ವಾಮಿಗೂ ಇರುವ ಅಂತರ ಮನಸ್ಸನ್ನು ಕಾಡುವುದು. ಆದರೂ ತನ್ನ ಸ್ವಾಮಿಯು ತನ್ನನ್ನು ವರಿಸುವನೆಂಬ ಭರವಸೆ ಕೊಂಚಕೊಂಚವಾಗಿ ಮನಸ್ಸಿನಲ್ಲಿ ಮೂಡುತ್ತಿದೆ.

ಇನಿಯನನು ನಾಸೇರುವಾಸೆಯು
 ನನ್ನ ಕಾಡಿಸುತಿರುವುದು.
ಆದರಾಹಾ! ನನ್ನ ಸ್ವಾಮಿಯ
 ಸೌಧವಿಹುದೆನಿತೆತ್ತರ!
ಎಷ್ಟು ದೂರವನೇರಿ ಸಾಗಲಿ
 ನಡುಗುತಿವೆ ಕಾಲ್ ತರತರ!
ಮನವ ನಾಚಿಕೆ ಬಾಧಿಸುತ್ತಿದೆ
 ಹೇಗೆ ಸೇರಲಿ ನಿನ್ನನು!
ಆದರಾಗದು ನಿಮಿಷಮಾತ್ರವು
 ನಿನ್ನ ನಗಲಿರಲಾರೆನು.
ನನ್ನ ಮುಖದವಕುಂಠನವ ನಾ
 ನೆಳೆದು ನಿನ್ನನು ನೋಡುವೆ.
ಕಣ್ಣ ಬರ ಮುಗಿವಂತೆ ನೋಡುವೆ
 ನೋಡಿ ಸುಖದೊಳಗದ್ದುವೆ.
ಓವೊ ಹುಚ್ಚಿಯೆ! ನಿನ್ನ ಪ್ರಿಯತಮ
 ನಾಗಳೇ ಬಳಿಬಂದನು.
ಇದಿಗೊ! ಹೃನ್ಮಂದಿರವಹೊಕ್ಕನು.
 ನೋಡು, ನಿನ್ನೊಳಿ ನಿಂದನು.

ಕಬೀರ ತನ್ನ ಅಂತರಂಗಧರ್ಮವನ್ನು ಈ ಪದ್ಯದಲ್ಲಿ ಹಾಡಿದ್ದಾನೆ:

ನಿನ್ನ ಮನವೇ ಮಾಧವನ ಮಧುರಾಪುರಿ!
ನಿನ್ನ ಹೃದಯವೆ ಕೃಷ್ಣನಿಹ ದ್ವಾರಾವತಿ!
ನಿನ್ನ ದೇಹವೆ ವಿಶ್ವನಾಥನ ಕಾಶಿ ಸುಕ್ಷೇತ್ರ!
ನಿನ್ನ ಮೈ ದೇಗುಲದ ಬಾಗಿಲೀರೈದ
ಮುಚ್ಚಿ, ಅದರೊಳು ಹೊಳೆವ ಥಳಥಳದ
ಆ ನಿರಂಜನ ಸುಪ್ರಕಾಶವ ಸೇರು ಓ ತಮ್ಮ!

"ಏಕಂ ಸದ್ವಿಪ್ರಾಃ ಬಹುಧಾ ವದಂತಿ" ತತ್ವವನ್ನು ಈ ಪದ್ಯದಲ್ಲಿ ಪ್ರತಿಪಾದಿಸಿದ್ದಾನೆ.

ಆವನು ರಾಮನು ಅವನೆ ರಹೀಮನು.
ಆವನು ಕೇಶವನವನೆ ಕರೀಮನು.
ಅವನೆ ಸನಾತನ ಸತ್ಯನು.
ಒಬ್ಬನೆ ವಿಶ್ವಂಭರನಾ ಮಹಿಮೆಯ
ಹಾಡುತಲಿರುವುವು ವೇದ ಕುರಾನುಗಳು.
ಇವನಲ್ಲದೆ ಪೇಳ್ ಬೇರೆಯ ದೇವರು ಇನ್ನಿಲ್ಲ.
ಇಬ್ಬರು ಜಗದೀಶ್ವರರಿಹರೆಂತು ?
ಒರ್ವನೆ ಜಗದೊಡೆಯನು ತಮ್ಮ !
ಆರನು 'ಅಲ್ಲಾ' ಎನುವೆಯೊ ನೀನು
ಅವನೇ 'ರಾಮ' 'ಕರೀಮ ನು 'ಕೇಶವ'ನು
'ಹರಿ' ಎಂದರು 'ಹಜರತ್' ಎಂದರು
ನಿನ್ನಾ ಕರೆಯನು ಒರ್ವನೆ ಕೇಳುವನು.
ಆವನು ರಾಮನೊ ಅವನೆ ಖುದಾ
ಅವನೇ ಶಕ್ತಿ ಅವನೇ ಶಿವನು.
ನಿಜವಿಂತಿರುತಿರೆ ಭೇದವಿದೇತಕೆ ತಮ್ಮ ?
ಭಗವದ್ಧ್ಯಾನವೆ ಭಕ್ತನ ಜೀವಾಧಾರ.
ಹರಿಹರಿ ಎನ್ನುತೆ ಹಗಲೂ ಇರುಳೂ
ನಿನ್ನೆದೆ ಭಗವನ್ನಾದವ ನುಡಿದಿರಲಿ.
ಹರಿ ಎನ್ನುವುದೇ ಈ ಸಂಸಾರದಿ
ನಮ್ಮನು ಆಕಡೆಗೊಯ್ಯುವ ನಾವೆ.
ನಿನ್ನೀ ತನುಮನಧನಗಳನೆಲ್ಲವನು
ರಾಮನ ಅಡಿಗಳಿಗರ್ಪಿಸು ನೀನು.
ಕಬೀರ್ ಹೇಳುವ ಮಾತನು ಕೇಳು :
ಸ್ವಾಮಿಯ ಚರಣವೆ ಶರಣಯ್ ನಿನಗೆ
ಬೇರೆಲ್ಲಿಡೆಯೂ ದೊರೆಯದು ಆಸರೆ ಕೊನೆಗೆ"

ಭಕ್ತಿ ಎಂಬುವುದು ಬಾಯಿಮಾತಿನಲ್ಲಿಲ್ಲ. ಆಂತರಿಕ ಪ್ರವೃತ್ತಿ ಅದು ಎನ್ನುವ ಅಭಿಪ್ರಾಯ ಕಬೀರನ ಈ ಪದ್ಯದಲ್ಲಿದೆ—

ಮನಸಿನಲ್ಲಿ ಸ್ಮರಿಸು ನೀನು
ಬಾಯಿ ತೆರೆಯಬೇಡ.
ಹೊರಗಿನೆಲ್ಲ ಬಾಗಿಲುಗಳ
ಮುಚ್ಚಿ ತೆರೆಯೊ ಒಳಕದ.

ಯೋಗಿಯ ದಿವ್ಯ ಚಕ್ಷುಸ್ಸು ತೆರೆದ ಆನಂದಾನುಭವವನ್ನು ಕಬೀರ್ ಈ ರೀತಿ ವರ್ಣಿಸಿರುವನು—

ನಾನೊಲಿದು ವಾಸಿಸುವ ದೇಶದಲಿ ಹನ್ನೆರಡು
ತಿಂಗಳೂ ಮೆರೆವುದು ವಸಂತಋತು
ಅಲ್ಲಿ ತಾವರೆಯರಳು ನಿತ್ಯವೂ ಬಿರಿಯುವುದು
ಅಲ್ಲಿ ಒಲುಮೆಯ ಮಳೆಯು ದಿನನಿತ್ಯ ಸುರಿಯುವುದು
ತುಂಬಿರುವುದೆಲ್ಲೆಲ್ಲಿಯೂ ಅಲ್ಲಿ ತೇಜಃಪುಂಜದೀಪ್ತಿ.

ಪರಮಾತ್ಮನೊಡನೆ ಬೆರೆಯಬೇಕೆಂಬ ಆತುರ ಕಬೀರನಲ್ಲಿ ಕರುಣಾಪೂರ್ಣವಾದ ಮತ್ತು ಮಾರ್ಮಿಕವಾದ ರೂಪವನ್ನು ತಾಳಿದೆ. ಇದರಲ್ಲಿ ಕಬೀರನ ಕವನ ಕಲೆ, ಸೌಂದರ್ಯದ ಪೂರ್ಣಾವತಾರವನ್ನು ತಾಳಿದೆ.

ಅನುಭಾವಿಯ ಸಾಧನಕ್ರಮದಲ್ಲಿ ಕಂಡುಬರುವ ಜ್ಞಾನ, ದರ್ಶನ, ಪ್ರಾಪ್ತಿ ಎಂಬ ಅವಸ್ಥಾತ್ರಯಗಳ ಸುಂದರ ಚಿತ್ರವನ್ನು ಕಬೀರನ ಜೀವನದಲ್ಲಿಯೂ ಮತ್ತು ಅವನ ಪದ್ಯಕಾವ್ಯದಲ್ಲಿಯೂ ಕಾಣುತ್ತೇವೆ.

ತನ್ನ ಎಪ್ಪತ್ತೆಂಟನೆಯ ವಯಸ್ಸಿನಲ್ಲಿ ಕಬೀರ್ ತೀರಿಕೊಂಡನು. ಇದರ ವಿಷಯವಾಗಿ ಒಂದು ಕಥೆ ಪ್ರಚಾರದಲ್ಲಿದೆ. ಕಬೀರನ ಶಿಷ್ಯರಲ್ಲಿ ಮುಸಲ್ಮಾನರೂ ಇದ್ದರು. ಹಿಂದುಗಳೂ ಇದ್ದರು. ಕಬೀರ್ ತೀರಿಕೊಂಡಮೇಲೆ ಇವನ ಕಳೇಬರವನ್ನು ತಮ್ಮ ಪದ್ಧತಿಯಂತೆ ಸಮಾಧಿಮಾಡಬೇಕೆಂದು ಮುಸಲ್ಮಾನ್ ಶಿಷ್ಯರೂ, ಅಗ್ನಿಸಂಸ್ಕಾರಮಾಡಬೇಕೆಂದು ಹಿಂದೂ ಶಿಷ್ಯರೂ ಹಠಹಿಡಿದರು. ಆಗ ಬಿಳಿ ಬಟ್ಟೆಯಿಂದ ಮುಚ್ಚಿದ್ದ ಕಬೀರನ ಕಳೇಬರದಿಂದ "ಸಹೋದರರೆ ಜಗಳವೇಕೆ? ಶವದ ಮುಸುಕು ತೆಗೆದು ನೋಡಿ" ಎಂಬ ಅಶರೀರವಾಣಿ ಕೇಳಿಸಿತು. ಮುಸುಕು ತೆಗೆದಾಗ ಅಲ್ಲಿದ್ದದ್ದು ಪುಷ್ಪರಾಶಿ. ಇದರಲ್ಲಿ ಅರ್ಧವನ್ನು ಹಿಂದುಗಳು ತೆಗೆದುಕೊಂಡು ಹೋಗಿ ಅಗ್ನಿಸಂಸ್ಕಾರಮಾಡಿದರೆಂದೂ, ಉಳಿದರ್ಧವನ್ನು ಮುಸಲ್ಮಾನರು ತೆಗೆದುಕೊಂಡು ಹೋಗಿ ಸಮಾಧಿಮಾಡಿದರೆಂದೂ ಪ್ರತೀತಿ ಇದೆ. ಈ ಕಥೆಯ ವಿಷಯವಾಗಿ ಪಂಡಿತ ಉಪಾಧ್ಯಾಯ ಎನ್ನುವರು ತಮ್ಮ 'ಕಬೀರ್—ಗ್ರಂಥಾವಳಿ'ಯ ಉಪೋದ್ಘಾತದಲ್ಲಿ ಈ ರೀತಿ ಬರೆದಿದ್ದಾರೆ. "ಈ ಕಥೆಯನ್ನು ನಾವು ನಂಬಬೇಕಾಗಿಲ್ಲ. ಆದರೆ ಈ ಕಥೆಯ ಮೂಲಭಾವ ಅಮೂಲ್ಯವಾದದ್ದು".

ಎಂ. ಯಾಮುನಾಚಾರ್ಯ.

ಒಲುಮೆ ಒಂದೇ ಒಲಿವುದು

ಏನು ಬೇಕೊ ಏನು ಬೇಡವೊ
ಕಣ್ಣು ಈಕಡೆ ನೋಡವೊ
ಬೆಳಕು ಹರಿದೂ ಮೋಡವೊ
ಬಯಕೆಗಳೆ ಕೈಗೂಡವೊ. ||೧||

ಗಣಿಯ ಹೊನ್ನೊ ಆಳದಲ್ಲಿ
ಬನದ ಇಂಪೊ ದೂರದಲ್ಲಿ
ತಾರೆಸಗೆಯೊ ಗಗನದಲ್ಲಿ
ನಿನ್ನ ಕಣ್ಣೊ ಕನಸಿನಲ್ಲಿ. ||೨||

ನೀಲಗಿರಿಯ ಹೃದಯದಲ್ಲಿ
ಹುಟ್ಟಿಬರುವ ಹೊಳೆಗಳಲ್ಲಿ
ಮೀನರಳುವ ಸುಳಿಗಳಲ್ಲಿ
ನಿನ್ನ ನಗೆಯು ರಂಗವಲ್ಲಿ. ||೩||

ಹಗಲು ಹಡೆದ ರಾತ್ರಿಯಲ್ಲಿ
ಹಸುರು ಹಾವಿನ ಜಾತ್ರೆಯಲ್ಲಿ
ಚಂದ್ರಲತೆಯ ಪಾತ್ರೆಯಲ್ಲಿ
ನಿನ್ನ ಕನಸೊ ಪ್ರೇಮದಲ್ಲಿ. ||೪||

ಒಂದು ದನಿಯೆ ಕಣಿವೆಯಲ್ಲಿ
ದನಿಯು ಹೊಳಲೆ ದೂರದಲ್ಲಿ
ನೀರು ದಣಿದ ದಾರಿಯಲ್ಲಿ
ನಿದ್ದೆ ಬಹುದೆ ನೆರಳಿನಲ್ಲಿ. ||೫||

ನಿದ್ದೆ ಬಹುದೆ ಕಣ್ಣಬಳಿಗೆ
ಬಂದರಂತೂ ಒಂದೆ ಗಳಿಗೆ
ನೀನೆ ತಂಗಿ ತಾರೆಗಳಿಗೆ
ಇರುಳು ಹಗಲು ಒಂದೆ ನಿನಗೆ. ||೬||

ವೀಣೆ ನುಡಿಸಿ ದೂರವಿರಿಸಿ
ಬೆಳಕನಿಳಿಸಿ ವಿರಮಿಸಿ
ಮಲಗಬಹುದೆ ನಗೆಯ ಸುಳಿಸಿ
ಆಸೆಗಳನೆ ಅಡಗಿಸಿ. ‖ ೭ ‖

ಎಷ್ಟು ಕಡೆಗೆ ದೀಪವುರಿದು
ಒಟ್ಟಿನಲ್ಲಿ ಕತ್ತಲು
ಕೊರಗಿನಲ್ಲಿ ಕಣ್ಣು ತೆರೆದು
ಒಲುಮೆ ಹೂವೆ ಎತ್ತಲು. ‖ ೮ ‖

ತುರುಬಿನಿಂದ ಹೂವಹಿರಿದು
ತುಟಿಯನೇಕೆ ಒತ್ತುವೆ
ಕಣ್ಣು ಹನಿಯ ಮುತ್ತಸುರಿದು
ನಿಟ್ಟುಸಿರನೇ ಬಿತ್ತುವೆ. ‖ ೯ ‖

ಬೇಕು ಬೇಡ ದಡಗಳೆರಡು
ಒಲುಮೆ-ಗಂಗೆ ಹರಿವುದು
ಕಾದು ಕೊರಗಿ ದಾಟಬೇಕು
ಒಲುಮೆ ಒಲಿದೇ ಒಲಿವುದು. ‖ ೧೦ ‖

ಕೆ. ಎಸ್. ನರಸಿಂಹಸ್ವಾಮಿ.

ಅಶ್ವತ್ಥಾಮನ್

ಶ್ರೀಯವರ ಮೂರು ನಾಟಕಗಳಲ್ಲಿ ಎರಡನೆಯದು "ಅಶ್ವತ್ಥಾಮನ್." ಅವರ ಇತರ ನಾಟಕಗಳಿಗಿಂತ ಈ ನಾಟಕದಿಂದ ಶ್ರೀಯವರ ಹೆಸರು ಹೆಚ್ಚು ಪ್ರಸಾರ ಗೊಂಡಿತು. ಈ ನಾಟಕವನ್ನು ಹೊಗಳುವವರೂ, ತೆಗಳುವವರೂ ಕೂಡಿಯೇ ಈ ಕಾರ್ಯಕ್ಕೆ ಸಹಾಯಕರಾದರೆಂದು ಹೇಳಬಹುದು. ಏಕೆಂದರೆ ಇಬ್ಬರ ಕಾರ್ಯವೂ ಅತಿರೇಕದ ಅಂಚಿನಲ್ಲಿಯೇ ನಿಂತಿದೆ. (ಅತಿರೇಕದ ನುಡಿಗೆ ಜನರ ಗಮನವನ್ನು ಸೆಳೆಯುವ ಶಕ್ತಿ ಸಹಜವಷ್ಟೆ!). ಒಂದು ಗುಂಪಿನವರು ಗ್ರಂಥದ ಯೋಗ್ಯತೆಯನ್ನು "ನ ಭೂತೋ ನ ಭವಿಷ್ಯತಿ"ಗೆ ಏರಿಸಿದರೆ, ಮತ್ತೊಂದು ಗುಂಪಿನವರು ಕಥಾವಸ್ತು ಶುದ್ಧ ನಾಸ್ತಿಕವೆಂದೂ ಅಸಂಬದ್ಧ ಪ್ರಲಾಪವೆಂದೂ ಕೆಳಕ್ಕೆಳೆದರು. ಈ ಅನುಕೂಲ ಪ್ರತಿಕೂಲ ವಿಮರ್ಶೆಗಳ ವಾದವಿವಾದಗಳಿಗೆ ಎಡೆಗೊಟ್ಟಿರುವ ಕಥಾವಸ್ತುವನ್ನು ಕುರಿತು ಸ್ವಲ್ಪ ವಿಚಾರಮಾಡೋಣ.

ಗ್ರೀಕ್ ರುದ್ರನಾಟಕದ ರತ್ನತ್ರಯ ಕರ್ತೃಗಳಲ್ಲಿ ಒಬ್ಬನಾದ ಸಾಫೋಕ್ಲೀಸ್‌ನ "ಅಯಾಸ್" ನಾಟಕದ ರೂಪಾಂತರವೇ "ಅಶ್ವತ್ಥಾಮನ್". ಗ್ರೀಕ್ ಮೂಲದ ಕಥೆ ಸ್ಥೂಲವಾಗಿ ಇಷ್ಟು—ಗ್ರೀಕರು ಟ್ರೋಜ್ ದಂಡಯಾತ್ರೆಗೆಂದು ಹೊರಟಾಗ ಅಚಿಲಿಸನು ಮುಖ್ಯ ಸೇನಾನಿಯಾಗಿದ್ದನು. ಶೌರ್ಯದಲ್ಲಿ ಆತನಿಗೆ ದ್ವಿತೀಯ ನೆಂದರೆ ಸಲಾಮಿಾಸ್ ಪ್ರಾಂತದಿಂದ ಬಂದಿದ್ದ ಅಯಾಸ್. ಮುಖ್ಯ ಸೇನಾನಿ ಯುದ್ಧದಲ್ಲಿ ಮರಣಹೊಂದಿದ ಮೇಲೆ ಆತನ ಶಸ್ತ್ರಸಜ್ಜು ನ್ಯಾಯವಾಗಿ ಅಯಾಸಿಗೆ ದೊರೆಯಬೇಕಾಗಿತ್ತು. ಆದರೆ ಒಡಿಸಿಯಸ್ಸನು ಹೆಚ್ಚು ವಿವೇಕಿಯೆಂದು ಆತನಿಗೆ ಆ ಗೌರವವನ್ನು ಸಲ್ಲಿಸಿದರು. ಇದರಿಂದ ಕೆರಳಿದ ಅಯಾಸನು ಕೋಪದಿಂದ ಕುರುಡ ನಾಗಿ ತನ್ನ ಪ್ರತಿಪಕ್ಷದ ತಲೆಯಾಳುಗಳನ್ನೆಲ್ಲ ರಾತ್ರಿ ನಿದ್ದೆಮಾಡುವಂದು ಸಂಹರಿಸ ಬೇಕೆಂದುಕೊಂಡು ಹೊರಟ. ಆದರೆ ಅಥೀನಿ ದೇವತೆಯ ಪ್ರಭಾವದಿಂದ ಆತನು ಮರುಳ್ಗೊಂಡು ಮೂಕಪಶುಗಳನ್ನು ಸಂಹರಿಸಿ, ತಾತ್ಕಾಲಿಕವಾಗಿ ತೃಪ್ತಿ ಗೊಂಡನು. ದೇವೀ ಮೋಹದಿಂದ ಎಚ್ಚರಗೊಂಡಾಗ ತನ್ನ ಅವಿವೇಕವನ್ನು ಕಂಡು ಆತನಿಗೆ ಅಪಾರವಾದ ಮನೋವ್ಯಥೆಯಾಯಿತು. ತನ್ನೊಡನೆ ಯುದ್ಧರಂಗಕ್ಕೆ ಬಂದಿದ್ದ ಮೇಳದಾಳುಗಳನ್ನೂ, ಹೆಂಡತಿಯಾದ ಟೆಕ್ಮೇಸ ಮತ್ತು ಹಸುಳೆಯಾದ ಯೂರಿ ಸಾಕೀಸರನ್ನೂ ತೊರೆದು ಸಮುದ್ರದ ಕರೆಯಲ್ಲಿ ಆತ್ಮಹತ್ಯ ಮಾಡಿಕೊಂಡನು. ಹೀಗೆ ದುರ್ಮರಣಕ್ಕೆ ತುತ್ತಾದ ಅಯಾಸನ ಶವವನ್ನು ಒಪ್ಪಮಾಡಲು ಮಿನಿಲೇಯಸ್

ಮತ್ತು ಅಗಮೆಮ್ನಾನ್ ಎಂಬ ಪ್ರತಿಪಕ್ಷದವರು ಅಡ್ಡಿಪಡಿಸಲು, ಅಯಾಸನ ಮಲ ತಮ್ಮನಾದ ಟ್ಯೂಕರನು ಅವರನ್ನು ಇದಿರಿಸಿ ಯುದ್ಧಕ್ಕೆ ಸಿದ್ಧನಾಗುವನು. ಕೈಗೆ ಕೈ ಹತ್ತುವ ವೇಳೆಗೆ ಒಡಿಸಿಯುಸ್ಸನು ಬಂದು ಎಲ್ಲರನ್ನೂ ಸಮಾಧಾನಪಡಿಸುವನು. ಉತ್ತರಕ್ರಿಯೆಯೊಂದಿಗೆ ನಾಟಕ ಕೊನೆಗೊಳ್ಳುವುದು.

ಈ ಕಥೆಯನ್ನು ಸ್ಥೂಲರೇಖೆಗಳಲ್ಲಿ ಹೋಲುವ ಕಥೆ ಮಹಾಭಾರತದ ಸೌಪ್ತಿಕ ಪರ್ವದಲ್ಲಿ ದೊರೆಯುತ್ತದೆ. ದುರ್ಯೋಧನನ ಊರುಭಂಗದಿಂದ ಕೆರಳಿದ ಅಶ್ವತ್ಥಾಮನು ಜಗತ್ತನ್ನು ನಿಷ್ಪಾಂಡವರನ್ನಾಗಿ ಮಾಡುವುದಾಗಿ ಭಯಂಕರ ಪ್ರತಿಜ್ಞೆಯನ್ನು ಕೈಕೊಂಡು ರಾತ್ರಿಯ ಅವೇಳೆಯಲ್ಲಿ ಪಾಂಡವ ಪಾಳೆಯವನ್ನು ಪ್ರವೇಶಿಸಿದನು. ಶ್ರೀ ಕೃಷ್ಣನ ಮಾಯೆಯಿಂದ ಆತನ ಮನಸ್ಸು ಮೋಹಗೊಂಡು ಉಪ ಪಾಂಡವರನ್ನೇ ಪಾಂಡವರೆಂದು ಭ್ರಮಿಸಿ ಅವರ ತಲೆಗಳನ್ನು ತರಿದು ತಂದು ತನ್ನ ಸ್ವಾಮಿಗೆ ಅರ್ಪಿಸಿದನು. ಇದರಿಂದ ಕೌರವನೇನೋ ಸಂತುಷ್ಟನಾಗಿ ಸತ್ತನು. ಆದರೆ ಅಶ್ವತ್ಥಾಮನು ಪ್ರಾಣಭಯದಿಂದ ಪಲಾಯನ ಸೂಕ್ತವನ್ನು ಪಠಿಸಬೇಕಾಯಿತು. ಪುತ್ರಶೋಕದಿಂದ ಅಳುತ್ತಿದ್ದ ದ್ರೌಪದಿಯನ್ನು ಕಂಡು ಭೀಮನು ರೋಷಭೀಷಣನಾದನು; ಅಶ್ವತ್ಥಾಮನನ್ನು ಕೊಲ್ಲುವುದಕ್ಕಾಗಿ ಅವನನ್ನು ಅಟ್ಟಿಸಿಕೊಂಡು ಹೊರಟನು. ಆದರೆ ವ್ಯಾಸರ ಆದೇಶದಂತೆ ಅರ್ಜುನನು ಅಶ್ವತ್ಥಾಮನ ತಲೆಯಲ್ಲಿದ್ದ ರತ್ನವನ್ನು ಕಿತ್ತುಕೊಂಡು, ಅವನನ್ನು ಜೀವಶವವನ್ನಾಗಿ ಮಾಡಿದನು. ಶ್ರೀ ಕೃಷ್ಣನು ಆ ಸಮಯದಲ್ಲಿ ಕೊಟ್ಟ ಶಾಪದ ಫಲವಾಗಿ[1] ಮೂರು ಸಹಸ್ರ ವರ್ಷಗಳು ಅಶ್ವತ್ಥಾಮನು ನಿರ್ಜನಪ್ರದೇಶದಲ್ಲಿ ಅಲೆಯುತ್ತಾ ಬಾಳು ಹೊರಬೇಕಾಯಿತು.

ಮಹಾಭಾರತದ ಕಥೆಗೂ, 'ಅಯಾಸ್' ಕಥೆಗೂ, ಇರುವ ಸ್ಥೂಲವಾದ ಹೋಲಿಕೆ ಸ್ವಯಂವೇದ್ಯವಾಗಿದೆ. ಅಯಾಸನು ಟ್ರೋಜನ್ ಯುದ್ಧದಲ್ಲಿ ಅದ್ಭುತ ಪರಾಕ್ರಮಿಯಾಗಿದ್ದಂತೆ ಭಾರತಯುದ್ಧದಲ್ಲಿ ಅಶ್ವತ್ಥಾಮನು ಹೆಸರಾಂತ ವೀರ. ಮುಂಗೋಪಿಗಳಾದ ಇಬ್ಬರಲ್ಲಿಯೂ, ಪ್ರತೀಕಾರ ಮನೋಭಾವ ಒಂದೇ ಹಾದಿ ಹಿಡಿಯಿತು. ಇಬ್ಬರಲ್ಲಿಯೂ ವಿಧಿ ತನ್ನ ವಿಕಟಾಟ್ಟಹಾಸವನ್ನು ಮೆರೆದು ಅವರನ್ನು ಅಧೋಗತಿಗೆ ಎಳೆಯಿತು. ಈ ಹೋಲಿಕೆಯನ್ನು ಕಂಡ ಶ್ರೀಯವರು ಗ್ರೀಕ್ ನಾಟಕವನ್ನು ಭಾರತದ ಕಥೆಯೊಡನೆ ಅಳವಡಿಸಿಕೊಂಡು ಕನ್ನಡಕ್ಕೆ

[1] ತ್ವಾಂತು ಕಾಪುರುಷಂ ಪಾಪಂ ವಿದುಃ ಸರ್ವೇ ಮನೀಷಿಣಃ
ಅಸಕೃತ್ ಪಾಪಕರ್ಮಾಣಂ ಬಾಲಜೀವಿತ ಘಾತಕಂ |
ತಸ್ಮಾತ್ ತ್ವಮಸ್ಯ ಪಾಪಸ್ಯ ಕರ್ಮಣಃ ಫಲಾವಾಪ್ನುಹಿ
ತ್ರೀಣಿ ವರ್ಷ ಸಹಸ್ರಾಣಿ ಚರಿಷ್ಯಸಿ ಮಹೀಮಿಮಾಂ.

ರೂಪಾಂತರಿಸುವ ಕಾರ್ಯವನ್ನು ಕೈಕೊಂಡರು; ಅದ್ಭುತರೀತಿಯಲ್ಲಿ ಆ ಕಾರ್ಯ ವನ್ನು ನಿರ್ವಹಿಸಿದರು. ಹಾಗೆ ಅಳವಡಿಸಿಕೊಳ್ಳುವಾಗ ಕೆಲವು ವ್ಯತ್ಯಾಸಗಳು ಅನಿವಾರ್ಯವಾಗಿ ಕನ್ನಡ ನಾಟಕದಲ್ಲಿ ನುಸುಳಿಕೊಳ್ಳಬೇಕಾಯಿತು. ಈ ವ್ಯತ್ಯಾಸಗಳು ವಿಪುಲವಾದ ವಾಗ್ವಾದಕ್ಕೆ ಎಡೆಗೊಟ್ಟಿರುವುದರಿಂದ ಅವುಗಳ ಸ್ವರೂಪವೇನೆಂಬು ದನ್ನು ಈಗ ಸ್ವಲ್ಪ ನೋಡೋಣ—

ಅಯಾಸನ ಹೆಂಡತಿ ಟೆಕ್ಮೆಸೆ ಕನ್ನಡ ನಾಟಕದಲ್ಲಿ ಅಯಾಸನ ಸ್ಥಾನವನ್ನು ಆಕ್ರಮಿಸಿರುವ ಅಶ್ವತ್ಥಾಮನ ಅಜ್ಜಿ, ದ್ರೋಣನ ತಾಯಿ, ಪರಶುರಾಮನ ತಂಗಿ— ಭಾರ್ಗವಿ. ಅಯಾಸನ ಬಲತಮ್ಮನಾದ ಟ್ಯೂಕರನು ಇಲ್ಲಿ ಏಕಲವ್ಯನ ಪಾತ್ರವನ್ನು ವಹಿಸಿದ್ದಾನೆ. ಅವನಿಗೂ ಅಶ್ವತ್ಥಾಮನಿಗೂ ಸೋದರ ಸಂಬಂಧವಿರಲಿ, ಇಬ್ಬರೂ ಪರಸ್ಪರ ಒಂದು ಜಾತಿಯವರು ಕೂಡ ಅಲ್ಲ; ಒಬ್ಬನು ಬೇಡ, ಮತ್ತೊಬ್ಬ ಬ್ರಾಹ್ಮಣ. ಮೂಲದ ಮೇಳದವರು ಅಯಾಸನೊಡನೆ ಯುದ್ಧಕ್ಕೆ ಬಂದಿದ್ದ ಯೋಧ ರಾದರೆ ಕನ್ನಡ ನಾಟಕದಲ್ಲಿ ಬರುವ ಮೇಳದವರು ಏಕಲವ್ಯನ ಹಿಂಬಾಲಕರಾದ ಬೇಡ ಪಡೆಯವರು. ಇವರೂ ಏಕಲವ್ಯ, ಅಶ್ವತ್ಥಾಮರೂ ಕನ್ನಡ ನಾಡಿನ ಬನವಾಸಿಯಿಂದ ಭಾರತಯುದ್ಧಕ್ಕಾಗಿ ಬಂದಿದ್ದವರೆಂದು ಇಲ್ಲಿ ಕಲ್ಪಿಸಿಕೊಳ್ಳಲಾಗಿದೆ. ಮೂಲ ನಾಟಕದ ಅಧಿನೀ ದೇವತೆ ಕನ್ನಡದಲ್ಲಿ ರುದ್ರ. ಓಡಿಯಸ್ ಇಲ್ಲಿನ ಕೃಷ್ಣ. ಮೆನಿಲೇ ಯಿಸ್ ಮತ್ತು ಅಗಮೆಮ್ನಾನ್ ಪಾತ್ರಗಳೆರಡಕ್ಕೂ ಪ್ರತಿನಿಧಿಯಾಗಿ ಭೀಮ ಕಾಣಿಸಿ ಕೊಂಡಿದ್ದಾನೆ. ಅಯಾಸ್‌ನ ಮಗ ಯೂರಿಸಾಕಿಸ್‌ಗೆ ಬದಲಾಗಿ ರುದ್ರಶಕ್ತಿ ಬಂದಿ ದ್ದಾನೆ. ಮೂಲದ ಸಲಾಮಿಸ್ ಇಲ್ಲಿನ ಬನವಾಸಿಯಾಗಿ ಮಾರ್ಪಟ್ಟಿದೆ.

ಮೇಲಿನ ಈ ಬದಲಾವಣೆಗಳಲ್ಲಿ ನಮ್ಮ ಸಂಪ್ರದಾಯಕ್ಕೆ ಕೆಲವು ಕಡೆ ಲೋಪ ಬಂದಿದೆ. ಕುಂಭಸಂಭವನೆಂದು ಭಾರತದಲ್ಲಿ ಪ್ರಖ್ಯಾತನಾದ ದ್ರೋಣನು ಇಲ್ಲಿ ಭಾರ್ಗವಿಯ ಮಗನಾಗಿದ್ದಾನೆ. ಏಕಲವ್ಯ ಭಾರತದ ಯುದ್ಧಕ್ಕಿಂತಲೂ ಎಷ್ಟೋ ಮುಂಚೆಯೇ ಗತಾಯುವಾದನೆಂದು ಭಾರತದಲ್ಲಿ ವರ್ಣಿತವಾಗಿದ್ದರೆ, ನಮ್ಮ ನಾಟಕ ದಲ್ಲಿ ಆತನು ಭಾರತಯುದ್ಧದ ಕೊನೆಯಲ್ಲಿ ಸತ್ತ ವೀರನಿಗೆ ಉತ್ತರಕ್ರಿಯೆಗಳನ್ನು ಸಲ್ಲಿಸಲು ಸಹಕಾರಿಯಾಗಿ ನಿಂತಿದ್ದಾನೆ. ಕಪಟನಾಟಕಸೂತ್ರಧಾರಿಯೆಂದೂ, ಸರ್ವಶಕ್ತ ನೆಂದೂ ಭಾರತ ಸಾರುತ್ತಿರುವ ಶ್ರೀಕೃಷ್ಣ ಇಲ್ಲಿ ರುದ್ರಭಕ್ತನಾದ ಸಾಮಾನ್ಯ ಮಾನವ. ಬ್ರಹ್ಮಚಾರಿಯೆಂದೂ ಸಪ್ತಸ್ಥಿರ ಜೀವಿಗಳಲ್ಲಿ ಒಬ್ಬನೆಂದೂ ಪ್ರಖ್ಯಾತನಾಗಿರುವ ಅಶ್ವ ತ್ಥಾಮ, ಇಲ್ಲಿ ಗೃಹಸ್ಥನಾಗಿ ರುದ್ರಶಕ್ತಿಯ ತಂದೆಯ ಪಟ್ಟವನ್ನು ವಹಿಸಿರುವುದರ ಜೊತೆಗೆ ಅಲ್ಪಾಯುವಾಗಿ ಅಪಮೃತ್ಯುವಿಗೆ ತುತ್ತಾಗುತ್ತಾನೆ. ಸಂಪ್ರದಾಯ ಸ್ಥಿರವಾದ ಮನಸ್ಸಿಗೆ ಇವು ಹೊಂದಿಕೆಯಾಗದಿರುವುದು ಅಷ್ಟೇನೂ ಆಶ್ಚರ್ಯವಲ್ಲ.

ಸಂಪ್ರದಾಯದ ಕಥೆಯಲ್ಲಿ ಅಲ್ಪಸ್ವಲ್ಪ ಬದಲಾವಣೆ ಮಾಡಿಕೊಳ್ಳುವುದು ಅನಾದಿಕಾಲದಿಂದಲೂ ಕವಿಗಳಲ್ಲಿ ನಡೆದುಬಂದಿರುವ ಒಂದು ಸಂಪ್ರದಾಯ. ಒಂದು ದೃಷ್ಟಿಯಿಂದ ಒಂದು ಸತ್ಸಂಪ್ರದಾಯ. ಭಾಸ, ಕಾಳಿದಾಸ, ಭವಭೂತಿ ಮೊದಲಾದ ಪ್ರಸಿದ್ಧರಾದ ನಾಟಕಕಾರರೆಲ್ಲರೂ ತಮ್ಮ ಕೃತಿಕನ್ನಿಕೆಯರನ್ನು ಅಲಂಕರಿಸಿರುವುದು ಈ ವ್ಯತ್ಯಾಸರೂಪದ ರತ್ನಗಳಿಂದಲೇ. ಆದರೆ ಈ ವ್ಯತ್ಯಾಸ 'ತಲ್ಲೋಕಾಧೀನ'ವಾಗಿರಬೇಕು; ಆ ಲೋಕಕ್ಕೆ ವ್ಯತಿರೇಕವಾಗಿರಬಾರದು. ಮೂಲಪಾತ್ರಗಳ ತಲ್ಲೋಕನಿಷ್ಠವಾದ ವ್ಯಕ್ತಿತ್ವಕ್ಕೆ ಚ್ಯುತಿ ಬರದೆ, ಕಲಾದೃಷ್ಟಿಯಿಂದ ಅವುಗಳ "ಮೇಲ್ಮೆ"ಗೆ ಸಹಾಯಕವಾಗುವಂತಿರಬೇಕು. ಅಶ್ವತ್ಥಾಮನ್ ನಾಟಕದಲ್ಲಿ ಮಾಡಿಕೊಂಡಿರುವ ಬದಲಾವಣೆಗಳು ಇಂತಹ ಒಂದು ಸಾಧನೆಗೆ ಸಹಾಯಕವಾಗಿವೆಯೆ ಎಂಬುದು ವಿಚಾರಾರ್ಹವಾದ ವಿಷಯ.

ಈಗ ಮೊದಲನೆಯದಾಗಿ ಅಶ್ವತ್ಥಾಮನ್ ನಾಟಕದಲ್ಲಿ ಕಾಣಬರುವ ಪ್ರತೀಕಾರ ಮನೋಧರ್ಮ ಭರತಖಂಡದ ಸಂಸ್ಕೃತಿಗೆ ಅಷ್ಟಾಗಿ ಹೊಂದಿಕೆಯಾಗತಕ್ಕುದಲ್ಲ. ಅದೇನಿದ್ದರೂ ಹಿರಿಯ ಕಾರ್ಯದಲ್ಲಿ—ಜಗಚ್ಛಾಂತಿಯ ಗುರಿಯಲ್ಲಿ—ಒಂದು ಅಂಶವಾಗಿರಬಹುದೇ ಹೊರತು ಅದು ಅದಕ್ಕಾಗಿಯೇ ವೈಗೊಳ್ಳುವುದು ನಮ್ಮ ಸಂಸ್ಕೃತಿಗೆ ವ್ಯತಿರಿಕ್ತ. ಅದೇನಿದ್ದರೂ ಪ್ರತಿನಾಯಕನಲ್ಲಿ ಸ್ಪಷ್ಟವಾಗಿ ಗೋಚರವಾಗಬಹುದು; ನಾಯಕನಲ್ಲಿ ಮಾತ್ರ ಸತ್ವಪರವಾಗಿರಬೇಕು. ನಮ್ಮ ಸಹೃದಯರ ಹೃದಯದಲ್ಲಿ ಕಡೆಗೆ ನಿಲ್ಲುವುದು ಶಾಂತ ರಸ. ಉಳಿದ ರಸಗಳೇನಿದ್ದರೂ ಇದಕ್ಕೆ ಪರಿಪೋಷಕಗಳಾಗಿರುತ್ತವೆ. ಆದರೆ ಗ್ರೀಕ್ ನಾಟಕದ ಸಾಹಿತ್ಯದಲ್ಲಿ, ಸತ್ವದ ಸುಳಿವಿಲ್ಲ; ತಮೋ ರಜಗಳು ತಾಂಡವವಾಡುತ್ತವೆ. ಆದ್ದರಿಂದಲೇ ಅಲ್ಲಿ ಪ್ರತೀಕಾರ ಮನೋಭಾವ ತಾನೇ ತಾನಾಗಿದೆ. ಆದ್ದರಿಂದ ಈ ಮನೋಭಾವ ಸರ್ವಸ್ವವಾಗಿ ಹಿನ್ನೆಲೆಯಲ್ಲಿ ಕುಳಿತಿರುವ ನಾಟಕವೊಂದು ಭಾರತದ ವಾತಾವರಣದಲ್ಲಿ ಕಾಣಿಸಿಕೊಂಡಾಗ ತಲ್ಲೋಕ ವಿಪರೀತವಾಗಿ ಕಾಣಿಸಬಹುದು.[1]

---

[1] ಶ್ರೀರಾಮ ಸೀತಾಮಾತೆಯನ್ನು ಹಿಂದಕ್ಕೆ ಪಡೆಯುವುದಕ್ಕಾಗಿ ರಾವಣನೊಡನೆ ಯುದ್ಧಕ್ಕೆ ನಿಂತನು. ಟ್ರೋಜನ್ ದಂಡಯಾತ್ರೆಯಲ್ಲಿಯೂ ಇದೇ ಸಂದರ್ಭವೇ—ಹೆಲೆನಳನ್ನು ಪ್ಯಾರಿಸ್ಸಿನ ಕೈಯಿಂದ ಉದ್ಧರಿಸುವುದು. ಆದರೆ ಎರಡಕ್ಕೂ ಅದೆಂತಹ ಅಜಗಜಾಂತರ ವ್ಯತ್ಯಾಸ! ಹೆಲನ್ ಪ್ಯಾರಿಸ್ಸಿನೊಡನೆ ಭೋಗಜೀವನ ನಡಸುತ್ತಾ ಸುಖವಾಗಿದ್ದಾಳೆ. ಸೀತಾದೇವಿ, ರಾವಣನ ಬಂದಿಯಾಗಿ ರಾಮಧ್ಯಾನದಿಂದ ಜೀವಧಾರಣೆ ಮಾಡಿದ್ದಾಳೆ. ಟ್ರೋಜನ್ ದಂಡಯಾತ್ರೆಗೆ ನೀತಿಗೆಟ್ಟ ಒಂದು ಹೆಣ್ಣನ್ನು ಹಿಂದಕ್ಕೆ ತರಬೇಕೆಂಬ ಕ್ಷಾತ್ರ ಒಂದೇ ಕಾರಣವಾಗಿದ್ದರೆ, ರಾಮಾಯಣದಲ್ಲಿ ಪತಿವ್ರತೆಯಾದ ಸೀತೆಯ ಉದ್ಧಾರವಾಗಬೇಕೆಂಬ ಸತ್ಯಪೂರಿತ ಧ್ಯೇಯ. ರಾವಣ ಸತ್ತಮೇಲೆ ಆತನ ಅಂತ್ಯಕ್ರಿಯೆಗಳೆಲ್ಲಕ್ಕೂ ಶ್ರೀರಾಮನೇ ಸ್ವತಃ ಅನುಕೂಲಗಳನ್ನು ಕಲ್ಪಿಸುತ್ತಾನೆ. ಕುವೆಂಪು ರವರ ಕೃತ್ತಿಕೆಯಲ್ಲಿ "ಹೋಮರ್" ನೋಡಿ.

ಇನ್ನು ಅಶ್ವತ್ಥಾಮನ ಮರಣದ ವಿಚಾರ.—ಚಿರಂಜೀವಿಯಾದ ಅಶ್ವತ್ಥಾಮ ಆತ್ಮಹತ್ಯೆಗೆ ಈಡಾದನೆಂಬುದು ನಮಗೇನೂ ಅಷ್ಟು ಸಂಕಟವನ್ನುಂಟುಮಾಡುವುದಿಲ್ಲ. ಆತನು ಸತ್ತನೆಂದು ಕೇಳಿ ಆತನ ತಂದೆಯಾದ ದ್ರೋಣಾಚಾರ್ಯರೇ ಆ ಮಾತನ್ನು ನಂಬಿ ಶಸ್ತ್ರಸನ್ಯಾಸ ಮಾಡಿದರಂತೆ. ಅಂತಹುದರಲ್ಲಿ ಬಿ. ಯಂ. ಶ್ರೀ. ಯವರು ಅಶ್ವತ್ಥಾಮನನ್ನು ಕೊಲೆಮಾಡಿಸಿದರೆಂದು ನಾವೇಕೆ ಅಳಬೇಕು? ಆದರೆ ಆ ಮೂಲಕ, ನಾಟಕಕಾರರು ಸಾಧಿಸಿರುವ ಹೆಚ್ಚಳವೇನು? ಅರ್ಜುನನು ಅವನ ತಲೆಮಣಿಯನ್ನು ಕಿತ್ತುಕೊಂಡು ತೇಜೋಭಂಗ ಮಾಡಿದ ಮೇಲೆ ಅಶ್ವತ್ಥಾಮನು ಬರಿಯ ಜೀವಶವ. ನಿರ್ಜನಪ್ರದೇಶದಲ್ಲಿ ಯಾರಿಗೂ ಕಾಣದಂತೆ ಮೂರು ಸಹಸ್ರ ವರ್ಷಗಳು ಆತ ನೆಲೆಯಿಲ್ಲದೆ ಅಲೆಯುತ್ತಿರುವಂತೆ ಭಾರತದಲ್ಲಿ ವಿಧಿಸಿರುವುದು ಅದೆಂತಹ ಭಯಂಕರ ಶಿಕ್ಷೆ! ಅದನ್ನು ನೆನೆದಾಗ ಮೈನವಿರೆದ್ದು ಜೀವ ತತ್ತರಿಸುತ್ತದೆ. ಈ ಶಿಕ್ಷೆಯ ಮುಂದೆ ಮರಣ ಒಂದು ಕಃಪದಾರ್ಥ. ಅದಕ್ಕಿಂತಲೂ ದೊಡ್ಡ ರೌದ್ರತೆ ಇನ್ನುಂಟೆ? ಸಾವಿಗಿಂತಲೂ ಬಾಳೇ ಹೆಚ್ಚು ದುರಂತವಾಗಿರುವಾಗ ರೌದ್ರತೆಯನ್ನು ತರಲು ಸಾವೇಕೆ? ಎಷ್ಟೋ ಗ್ರೀಕ್ ನಾಟಕಗಳಲ್ಲಿ ನಾಯಕನ ಮರಣ ನಡೆಯುವುದೇ ಇಲ್ಲ. ರುದ್ರತೆಗೆ ಅದೊಂದು ಅನಿವಾರ್ಯವಾದ ಘಟನೆಯೇನೂ ಅಲ್ಲ. ಎಂದಮೇಲೆ ಮೂಲದ ಕಥೆಯಿಂದ ಮಾಡಿಕೊಂಡಿರುವ ಬದಲಾವಣೆಗೆ ಸಾರ್ಥಕತೆ ಏನು?

ಇನ್ನು ದುರಂತ ವಸ್ತುವಿನ್ಯಾಸದ ವಿಚಾರದಲ್ಲಿ ಭಾರತೀಯರ ಮನೋಭಾವ ವೇನೆಂಬುದನ್ನು ಸ್ವಲ್ಪ ಗಮನಿಸಬೇಕು. ನಮಗೆ ಮರಣವೆಂಬುದು ಜೀವನ ವಿಶ್ರಾಮಸ್ಥಾನವೇನೂ ಅಲ್ಲ. ಹಳೆಯಂಗಿಯನ್ನು ಕಿತ್ತೊಗೆದು ಹೊಸ ಅಂಗಿಯನ್ನು ಧರಿಸಿದಂತೆ ಸಾವು ಹುಟ್ಟುಗಳ ಬಾಂಧವ್ಯ. ಆದ್ದರಿಂದ ಸಾವೆಂಬುದು ಒಂದು ಅಗಾಧವಾದ ನಷ್ಟವೆಂದು ನಾವು ಭಾವಿಸುವಂತಿಲ್ಲ. ವ್ಯಕ್ತಿಯ ಆತ್ಮ ತನ್ನ ಕರ್ಮಗಳ ಮೊಟ್ಟೆಯನ್ನು ಹೊತ್ತುಕೊಂಡೇ ಮುಂದೆ ಸಾಗಬೇಕು. ಆತ್ಮಹತ್ಯೆ ಯೆಂಬುದು ನಮ್ಮಲ್ಲಿ ಒಂದು ಬಹು ದೊಡ್ಡ ಪಾಪ ಮತ್ತು ಹೇಡಿತನ. ಇಲ್ಲಿನ ಮನೋವೇದನೆಯಿಂದ ಪಾರಾಗುವುದಕ್ಕಾಗಿ ಆತ್ಮಹತ್ಯೆಗೆ ಕೈಯಿಟ್ಟರೆ ಮರಣಾನಂತರ ಅದಕ್ಕೂ ಭಯಂಕರವಾದ ವೇದನೆ ಸಿದ್ಧವಾಗಿರುತ್ತದೆ. ಅಶ್ವತ್ಥಾಮನು ಇದನ್ನರಿಯ ದಂತಹ ಮೂಢನೇನೂ ಅಲ್ಲ, ದ್ರೋಣಪುತ್ರನಾದ ಆತ ವೈದಿಕ ಸಂಸ್ಕೃತಿಯನ್ನು ಹೀರಿಯೇ ಮಹೋನ್ನತವಾಗಿ ಬೆಳೆದಿರುವನು. ಈ ಅವೈದಿಕವಾದ ಅಧರ್ಮ ಕಾರ್ಯಕ್ಕೆ ಆತ ಕೈಹಾಕಿದನೆಂದು ಹೇಳುವುದು ಕಲಾದೃಷ್ಟಿಯಿಂದಲೂ ಅಸ್ವಾಭಾವಿಕ. ಅಶ್ವತ್ಥಾಮನು ಆತ್ಮಹತ್ಯ ಮಾಡಿಕೊಂಡನೆಂದು ಹೇಳುವುದು ಮೈಸೂರಿನ ಕುಕ್ಕರ ಹಳ್ಳಿ ಕೆರೆಯಲ್ಲಿ ನೀರು ಗೆಡ್ಡೆ ಕಟ್ಟಿತೆಂದು ಹೇಳಿದಂತಾಗುತ್ತದೆ.

ಇನ್ನು ಕಡೆಯದಾಗಿ—ಅಶ್ವತ್ಥಾಮ ಚಿರಂಜೀವಿಯೆಂಬ ವಿಷಯವನ್ನೂ ಸ್ವಲ್ಪ ನೋಡೋಣ. ಇದರ ವಿಚಾರವನ್ನು ಕುರಿತು ಜನ ಹಿಂದೆ ವಾದವಿವಾದ ಮಾಡಿದಾಗ ಅವರು ಹೇಳಿದ ರೀತಿ ಯುಕ್ತವಾಗಿದ್ದಿರಲಿಕ್ಕಿಲ್ಲ. ಆದರೆ ಅದು ಸಕಾರಣವೆ? 'ಅಶ್ವತ್ಥಾಮ ಚಿರಂಜೀವಿ' ಎಂಬ ಮಾತಿನ ಹಿಂದಿರುವ ಮನೋಭಾವ ನಮಗೆ ಮುಖ್ಯವಾದದ್ದು. ನಮ್ಮ ಪುರಾಣ ನಮ್ಮ ಜನ ಮನೋಭೂಮಿಯಲ್ಲಿ ಸಾವಯವ ಸಂಬಂಧವನ್ನು ಪಡೆದಿದೆ. ಅಲ್ಲಿ ಬರುವ್ರವು ಬರಿಯ ಕಟ್ಟುಕಥೆಗಳಲ್ಲ, ಪ್ರತಿಮೆಗಳು. ಈ ಪ್ರತಿಮೆಯೆಂಬುವುದು ಬರಿಯ ವ್ಯಕ್ತಿ ಕಲ್ಪಿಸಿದುವಲ್ಲ. ಜನಮನಶ್ಶಕ್ತಿ ಸೃಜಿಸಿದುವು. ಇವು ಋತಗಳು, ಅನೃತಗಳಲ್ಲ. ಮನೋವಿಕಲ್ಪ ಕಲ್ಪಿಸಿದುದಾದರೆ ಅದು ಮಾತ್ರ ಅನೃತವಾದೀತು. ಬಾಹ್ಯದ ಜಡಜಗತ್ತಿನಲ್ಲಿ ಯಾವುದನ್ನು ಸತ್ಯವೆಂದು ಕರೆಯುತ್ತೇವೆಯೋ ಅದು ದೈವದ ಇಚ್ಛಾಶಕ್ತಿ. ವಾಲ್ಮೀಕಿ ಮೊದಲಾದ ಕವಿಗಳು ಈ ಬೃಹಚ್ಛಕ್ತಿಯ ಆಲೋಚನಾದರ್ಶಿಗಳು. ಆದ್ದರಿಂದ ಈ ಮಹೋನ್ನತ ಭಾವಶೈಲಗಳನ್ನು ಲಘುಕಾರಣಗಳಿಗಾಗಿ ಬದಲಾಯಿಸುವುದು ಸೂಕ್ತವಲ್ಲವೆಂದೇ ಹೇಳಬೇಕು. ಬೋರೆಯೊಂದನ್ನು ಕತ್ತರಿಸ ಹೊರಡಬಹುದೇ ಹೊರತು ಹಿಮಾಲಯವನ್ನು ಕತ್ತರಿಸ ಹೊರಡುವುದು ಸಾಧ್ಯವಿಲ್ಲದ ಮಾತು. ಆದ್ದರಿಂದ ಜನಮನದಲ್ಲಿ ಆಳವಾಗಿ ಬೇರೂರಿ ನಿಂತಿರುವ ಕವಿಕೃತಿಗಳನ್ನು ಬದಲಾಯಿಸಿದರೆ ಅದು ವಿಕೃತಿಯಾದೀತು.—ಕಣ್ಣಿರುವ ಕಡೆ ಕಿವಿಯಿಟ್ಟರೆ ಹೇಗೆ ತಲೆ ವಿರೂಪವಾಗುತ್ತದೆಯೋ ಹಾಗೆ. ಮನೋಧರ್ಮ, ಮನೋಭೂಮಿಕೆ, ಸಂಕಲ್ಪಗಳು ಅನೇಕರಿಗೆ ಸತ್ಯವಲ್ಲವೆಂದು ಭ್ರಮೆ ಬರಬಹುದು. ಆದರೆ ಅವು ಆಕರ್ಷಣ ಶಕ್ತಿಯ ನಿಯಮ (The Law of Gravitation) ಗಳಿಗಿಂತಲೂ ಹೆಚ್ಚು ಸತ್ಯ. ಅವಿನ್ನೂ ಮೃದ್‌ಭೂಮಿಕೆಯಲ್ಲಿ ಮೈದೋರದ ಚಿದ್‌ಭೂಮಿಕೆಯ ಸತ್ಯಗಳು; ಅಸತ್ಯಗಳಲ್ಲ. ಆಶಕ್ತಿತತ್ವಗಳು ಮರ್ತ್ಯದಲ್ಲಿ ಅವತರಿಸಿ ಅನುಷ್ಠಿತವಾಗಿ ನಿಯಮಗಳಾಗುತ್ತವೆ. ಸತ್ಯಹೇಳಬೇಕಂದಿರುವುದು ಒಂದು ಆದರ್ಶ; ಅದು ಅಮರ್ತ್ಯದಲ್ಲಿದೆ. ಅದು ಭೂಮಿಗೆ ಇಳಿದಾಗ ಆಕರ್ಷಣಶಕ್ತಿಯ ನಿಯಮದಷ್ಟೇ ಸ್ವಾಭಾವಿಕವಾಗುತ್ತದೆ; ಹಾರುವ ಹಕ್ಕಿಗೆ ಹಾರುವುದು ಸ್ವಾಭಾವಿಕವಾಗಿರುವಂತೆ ಸತ್ಯತ್ಯಾಗಗಳು ಪ್ರಕೃತಿ ಸಿದ್ಧವಾಗುತ್ತವೆ. ಇದನ್ನೆಲ್ಲಾ ಗ್ರಹಿಸಿ ಶ್ರದ್ಧೆ ಮೂಡಿದ್ದರೆ—ಅನುಭವಾಂಚಿತವಾದ ಆಲೋಚನಾಸತ್ಯ ಕ್ವಚಿತ್ತಾಗಿಯಾದರೂ ಗೋಚರವಾಗಿದ್ದರೆ—ಇವುಗಳನ್ನು ಬದಲಾಯಿಸುವುದಿಲ್ಲ.

ಲೋಕಾಕ್ರಾಂತವಾದುದಕ್ಕೆ ವಿರೋಧವಾದಾಗ ನಮ್ಮ ಮನಸ್ಸು ಏನೋ ಒಂದು ಮೂಕಸಂಕಟವನ್ನು ಅನುಭವಿಸುತ್ತದೆ. ದುರ್ಯೋಧನನ ಸಾವು ನಮಗೆ ಸಂಕಟವುಂಟುಮಾಡುವುದಿಲ್ಲ. ಆದರೆ ಅಶ್ವತ್ಥಾಮನ ಸಾವು ನಮಗೆ ಅಸಹ್ಯವಾಗು

ತ್ತದೆ. ದುರ್ಯೋಧನನ ವಧೆ ರಜಸ್ಸು ತಮಸ್ಸುಗಳಿಂದ ಕೂಡಿದ್ದರೂ ಪರಿಣಾಮ ಸತ್ವ. ಆದರೆ ಅಶ್ವತ್ಥಾಮನ ಆತ್ಮಹತ್ಯ ಸಂಪೂರ್ಣ ತಮಸ್ಸು. ಧುರ್ಯೋಧನ ವಿಧಿಯನ್ನು ಧೈರ್ಯದಿಂದ ಇದಿರಿಸಿದ; ಅಶ್ವತ್ಥಾಮ ವಿಧಿಗೆ ಹೆದರಿ, ಹೇಡಿಯಂತೆ ಸತ್ತ. ಇದು ಭಾರತೀಯ ದೃಷ್ಟಿಯಲ್ಲ. ಭಾರತೀಯ ದೃಷ್ಟಿಯಿಂದ ಉದ್ಭವಿಸಿದ ಕಲಾಪ್ರತಿಮೆ ಗಳಿಗೆ ಇದನ್ನು ಆರೋಪಿಸುವುದು ಕಲಾವಿರುದ್ಧವಾಗುತ್ತದೆ.

ಗ್ರೀಕ್ ರುದ್ರನಾಟಕಗಳಲ್ಲಿ ಕಾಣಬರುವ ವಿಧಿಯ ವಿಲಾಸವನ್ನು ಕುರಿತು ಎರಡು ಮಾತು. ಗ್ರೀಕ್ ಮನೋಧರ್ಮಕ್ಕೂ ಭಾರತೀಯ ಮನೋಧರ್ಮಕ್ಕೂ ಇರುವ ವ್ಯತ್ಯಾಸಗಳನ್ನು ಅರಿತುಕೊಳ್ಳದೆ ಇವುಗಳನ್ನು ವಿಮರ್ಶಿಸುವುದು ಅನ್ಯಾಯ. ಸೂತ್ರತತ್ವಗಳ ಕಡೆ ನಾವು ಗಮನವನ್ನು ಕೊಡಬೇಕು. ಗ್ರೀಕ್ ನಾಟಕಗಳಲ್ಲಿ ವಿಧಿನಿಯಮ ಅಪ್ರತಿಹತವಾದುದು. ದೈವವು ಕೂಡ ವಿಧಿನಿಯಮಕ್ಕೆ ತಲೆಬಾಗಬೇಕು. ನಮ್ಮಲ್ಲಿಯೂ "ತೇನ ವಿನಾ ತೃಣಮಪಿ ನ ಚಲತಿ" ಎಂಬ ಹೇಳಿಕೆ ಇದೆ. ಆದರೆ ವಿಧಿಯ ಕೈಲಿ ನಾವಿದ್ದೇವೆ ಎಂಬುದು ಅಂಶಸತ್ಯ. ವಿಧಿಯೂ ನಮ್ಮ ಸಂಸ್ಕಾರ ಸಾಧನಗಳ ಮೇಲೆ ನಿಂತಿದೆ. ಅದನ್ನು ವಿಧಿಸುವ ಸ್ವಾತಂತ್ರ್ಯ ನಮಗಿದೆ. ತಪಸ್ಸಿ ನಿಂದ ಸಾಧಿತವಾಗದುದು ಯಾವುದೂ ಇಲ್ಲ ಎಂದು ನಮ್ಮ ನಂಬಿಕೆ. ನರನ ನಾರಾಯಣತ್ವಕ್ಕೆ ಚ್ಯುತಿ ಬರುವಂತಿಲ್ಲ. ಕೈಗಳನ್ನು ಮೇಲಕ್ಕೆತ್ತಿ ವಿಧಿಯ ಜುಟ್ಟನ್ನು ಹಿಡಿದು ಬಗ್ಗಿಸುವ ಶಕ್ತಿ ನಮಗಿದೆ. ತಪಸ್ಸಿನಿಂದ, ಭಗವತ್ಕೃಪೆಯಿಂದ ನಾವು ವಿಧಿಯನ್ನು ಬದಲಾಯಿಸಬಹುದು; ಕರ್ಮವನ್ನು ಅಳಿಸಬಹುದು. ಮಾರ್ಕಂಡೇ ಯನು ಹದಿನಾರು ವರ್ಷಕ್ಕೆ ಸಾಯಬೇಕೆಂದು ವಿಧಿನಿಯಮವಿದ್ದರೆ ಭಗವತ್ಕೃಪೆ ಆ ವಿಧಿಯನ್ನು ನಿವಾರಿಸಲು ಶಕ್ತವಾಗುತ್ತದೆ. ಒಟ್ಟಿನಲ್ಲಿ ಮನುಷ್ಯನ ಹೃದಯಪರಿ ವರ್ತನೆಯನ್ನು ಅನುಸರಿಸುತ್ತದೆ ವಿಧಿ. ಅದು ತಪಸ್ಸಿಗೆ ಶರಣಾಗುತ್ತದೆ; ಪೂಜೆಗೆ ಒಲಿಯುತ್ತದೆ. ಮನುಷ್ಯ ತಪಸ್ಸಿನಿಂದ ದುಷ್ಕೃತ್ಯಗಳನ್ನು ಮಾತ್ರವೇ ಅಲ್ಲ ತನ್ನ ತನವನ್ನೇ ತಾನು ಬದಲಾಯಿಸಿಕೊಳ್ಳಬಲ್ಲ. ತನ್ನ ವಿಧಿಯನ್ನು ತಾನೇ ನಿರ್ವಹಿಸ ಬಲ್ಲ, ಆಳಬಲ್ಲ. ಕ್ಷುದ್ರಭೂಮಿಕೆಗಳಲ್ಲಿ ಅವನು ವಿಧಿಯವಶ. ಉತ್ತಮ ಭೂಮಿಕೆಗಳಲ್ಲಿ ವಿಧಿ ಅವನ ವಶ. ಗ್ರೀಕರ ದೃಷ್ಟಿಗೆ ವಿಧಿ ತುಂಬ ನಿಷ್ಠುರವೆಂದು ಕಾಣುತ್ತಿದ್ದರೆ ಅದು ಅವರ ದೃಷ್ಟಿಮಾಂದ್ಯತೆಯ ಫಲ. ಅವರು ಹೊಡೆವ ಬೆತ್ತವನ್ನು ಗಮನಿಸು ತ್ತಾರೆಯೇ ಹೊರತು ಅದನ್ನು ಹಿಡಿವ ಕೈಯನ್ನು ನೋಡುವುದಿಲ್ಲ. ಇಲ್ಲಿಯೇ ಭಾರತ ದೃಷ್ಟಿಯ ಸರ್ವೋತ್ಕೃಷ್ಟತೆ ನಮಗೆ ಕಾಣಬರುವುದು. ಈ ದೃಷ್ಟಿಯನ್ನು ಮರೆ ಮಾಡಿ ಇದಕ್ಕಿಂತಲೂ ಕೀಳಾದ ದೃಷ್ಟಿಯನ್ನು ಕೈಗೊಳ್ಳುವುದು ಕಲಾದೃಷ್ಟಿಯಿಂದ ಲಾದರೂ ಸಾಧುವೆಂದು ಹೇಳುವುದು ಹೇಗೆ ಸಾಧ್ಯ? ಹಕ್ಕಿಯ ಲೋಕದಲ್ಲಿ

ನಾಟಕವಾಡಿ ಮೀನಿನ ಲೋಕದಲ್ಲಿನ ಮಾತುಗಳನ್ನಾಡಿದರೆ ಅನರ್ಥವಷ್ಟೆ! ದೃಷ್ಟಿ ಬದಲಾವಣೆಯಿಂದ ಸೃಷ್ಟಿ ಬದಲಾವಣೆಯಾಗಿ ವಿಕಾರರೂಪಿನ ಅಸತ್ಯಗಳು ಹುಟ್ಟಿಕೊಳ್ಳಲು ಕಾರಣವಾಗುತ್ತದೆ.

ಆಜನ್ಮ ಬ್ರಹ್ಮಚಾರಿಯಾದ ಅಶ್ವತ್ಥಾಮನಿಗೆ ಗೃಹಸ್ಥಾಶ್ರಮವನ್ನು ಗಂಟು ಹಾಕಿ, ಅವನಿಗೆ ರುದ್ರಶಕ್ತಿಯೆಂಬ ಮಗನನ್ನು ಬೇರೆ ತಂದಿಟ್ಟಿರುವುದು ಅಷ್ಟೇನೂ ಸಮಂಜಸವಲ್ಲದಿದ್ದರೂ, ಅದಕ್ಕಿಂತಲೂ ಅಸಮಂಜಸವಾದುದು ಭಾರ್ಗವಿಯ ಪಾತ್ರಸೃಷ್ಟಿ. ಅವಳ ಪಾತ್ರ ಗ್ರೀಕ್ ದಾಸೀ ಪುತ್ರಿಗೆ ವಲ್ಕಲ ಉಡಿಸಿದಂತಾಗಿದೆ. ಅವಳ ಬಾಯಲ್ಲಿ ಬರುವ ಮಾತು ಗುರುಮಾತೆಯ ಬಾಯಲ್ಲಿ ಬರಲು ಯೋಗ್ಯವಾಗಿಲ್ಲ. ಸಾಯಲು ಸಿದ್ಧನಾಗಿ ಹೋಗುತ್ತಿರುವ ಅಶ್ವತ್ಥಾಮನನ್ನು ಕುರಿತು ಆಕೆ "ಪೋಗದಿರ್, ಓ ಎನ್ನಕಂದ ಅಶ್ವತ್ಥಾಮ! ಎನ್ನನಾರ್ಗಿತ್ತು ಪೋಪಯ್? ನೀನ್ ಪೋದ ಮಱುಗಳಿಗೆ ಅಡಗಿದ್ದ ಶೂರರೆಲ್ಲರ್ ಬಂದು ಸೆಳೆದುಕೊಂಡು ಪೋಗೀತೊಟ್ಟನೆಂದು ಬಯ್ದುಯ್ಯರೇ—ನಿನ್ನ ಮಗನೊಡನೆ! ನಿನ್ನ ಕುಲಕಿದು ಜಸಮೆ? ನಿನಗೊಂದು ಕೀರ್ತಿಯೆ? ಇದನೆಣಿಸವೇಡಾ?" ಎಂದು ಹೇಳುವುದು ಶುದ್ಧ ಅಸಂಗತವೆಂದೇ ಹೇಳಬೇಕು. ದ್ವಾಪರಯುಗದ ಸಂಸ್ಕೃತಿಯನ್ನೆಲ್ಲಾ ಹೀರಿದ ಮಹೋನ್ನತ ವೃಕ್ಷದಂತಿರುವ ಪಾಂಡವರು ಮುಪ್ಪಿನ ಮುದುಕಿಯಾದ ತನ್ನನ್ನು—ಗುರುಮಾತೆಯನ್ನು—ಮಾನಭಂಗ ಮಾಡುವರೆಂದು ಆಕೆ ಆಡುವುದು ಆಕೆಯ ಪಾತ್ರಕ್ಕೇ ಅಲ್ಲ, ಭಾರತದ ಇಡೀ ಕಥನ ಕಟ್ಟಡದ ಬುಡಕ್ಕೇ ಗುದ್ದಲಿ ಇಟ್ಟಂತೆ. (ಅವಳು ಅಶ್ವತ್ಥಾಮನ ಮನಸ್ಸನ್ನು ತಿರುಗಿಸಲು ಹೀಗೆ ಹೇಳಿದಳೆಂದು ಹೇಳುವ ವಾದವೂ ಅಷ್ಟು ಸಮಂಜಸವಾಗಲಾರದು.)

ಮೇಲಿನ ವಿಮರ್ಶೆ ಕಟುವೆಂದು ಕಂಡರೂ ಅದು ಸತ್ಯದೂರವೆಂದು ಹೇಳುವಂತೆ ಏನೂ ಇಲ್ಲ. ಇದೆಲ್ಲ ದೋಷಾರೋಪಣೆ ಕಥಾವಸ್ತುವನ್ನು ಅಳವಡಿಸಿಕೊಂಡಿರುವುದನ್ನು ಕುರಿತು ಹೇಳಿದುದೇ ಹೊರತು ಶ್ರೀಯವರ ಕಲಾಶಕ್ತಿಯ ವಿರುದ್ಧವಾದ ಒಂದು ಮಾತನ್ನೂ ಯಾರೂ ಎತ್ತುವಂತಿಲ್ಲ. ಅವರ ಸಂವಿಧಾನಕೌಶಲ, ನಿರ್ದುಷ್ಟವಾದ ಭಾಷಾಪ್ರೌಢಿಮೆ, ಶೈಲಿಯ ಲಾಲಿತ್ಯ, ಉನ್ನತವಾದ ಪ್ರತಿಭೆ ಮತ್ತು ಕಲ್ಪನಾಶಕ್ತಿಗಳು—ಇವುಗಳು ಹೊಸಗನ್ನಡದ ಸಾಹಿತ್ಯೋಪಾಸಕರಿಗೆ ಮೇಲ್ಪಂಕ್ತಿಯಾಗಿವೆಯೆಂದು ಹೇಳಬಹುದು. ಕನ್ನಡ ನಾಟಕಕ್ಕೊಂದು ನೂತನ ರೀತಿಯನ್ನು ಅಳವಡಿಸಿಕೊಟ್ಟದ್ದಕ್ಕಾಗಿಯೇ ಅವರನ್ನು ಮುಕ್ತಕಂಠರಾಗಿ ಹೊಗಳಬೇಕಾಗಿದೆ. ಹಳಗನ್ನಡ—ಪೂರ್ವದ ಹಳಗನ್ನಡ—ವನ್ನು ಗ್ರಂಥದ ಭಾಷೆಯಾಗಿ ಬಳಸಿಕೊಂಡಿದ್ದರೂ ಅರ್ಥಕ್ಕಾಗಿ ಕುದಿವಂತಿಲ್ಲ. ಅಚ್ಚ ಕನ್ನಡದ ನುಡಿಮಿಂಚಿನಲ್ಲಿ ಭಾವಗಳು ಪರಿಸ್ಫುಟವಾಗಿ

ಕಾಣಿಸಿಕೊಂಡು ಕಿವಿಗೆ ಹಿತವನ್ನೂ ಮನಕ್ಕೆ ತಣಿವನ್ನೂ ಒದಗಿಸುತ್ತವೆ. ಛಂದಸ್ಸೆಂಬ ಮಾತಿನ ಸಾರ್ಥಕತೆಯನ್ನು ತೋರುವಂತೆ ಮಾತಿನ ಕುಣಿತದೊಡನೆ ಕಾವ್ಯದ ಓಟ ಮುಂದುವರಿಯುತ್ತದೆ.

ಶ್ರೀಯವರ ಕನ್ನಡ ನಾಡುನುಡಿಗಳ ಅಭಿಮಾನ ಎಷ್ಟು ಗಾಢವಾದುದೆಂಬುದನ್ನು ನೋಡಬೇಕಾದರೆ ಅವರ ಅಶ್ವತ್ಥಾಮನ್ ಒಂದು ಸಾಕು. ಕನ್ನಡನಾಡಿನಿಂದ ಬಂದಿದ್ದ ಭಟರಾದ ಮೇಳದಾಳುಗಳು ತಮ್ಮ ಒಡೆಯನಾದ ಅಶ್ವತ್ಥಾಮನು 'ನಿರ್ದಯ ದೈವದ ಕೈಯಿನ್ ಬಿಡುಗಡೆ ಕಾಣದೆ ಮಡಿವನ್' ಎಂದುಕೊಂಡು ತಮ್ಮ ನಾಡಿನ ಸುಖಜೀವನವನ್ನು ನೆನೆದುಕೊಳ್ಳುತ್ತಾರೆ.

> ಚೆಲ್ವಿನ ನೆಲೆ, ಕಣ್ಗಳ ಬಲೆ, ಸುಖದೊಱತೆಯ ಬನವಾಸೀ,
> ಬಳೆದಲೆದಾ ಕಾನ್ ಮಲೆಗಳನ್ ಆನ್ ಮರೆವೆನೆ ಬನವಾಸೀ
> ಭಾರತದೀ ಸುಳಿಗಾಳಿಗೆ ಸಿಲ್ಕುತೆ ನಾನ್ ತಱಗಾದೆನ್
> ಪೆಱೆ ತುಂಬುತೆ, ಪೆಱೆ ತೇಯುತೆ ಮನೆಗಾಣದೆ ಬಡವಾದೆನ್ ;
> ನಿನ್ನನೆ ನೆನೆನೆನೆದೋ ತಾಯ್, ಪಂಬಲಿಸುವ ನೋವೊಂದೇ,
> ಇನ್ನೇನೆನಗಾಸೆಗಳೋ ಪಾರ್ವುದು ನಾನ್ ಸಾವೊಂದೇ,
> ಪೆರ್ಮೆಯ ನೆಲೆ, ಪಡುಗಡಲಲೆ, ಸುಖವೆಱಚುವ ಬನವಾಸೀ
> ನೀನ್ ಕಟಿಪಿದ ಪೇರಾಳ್ಗಳದೇನಾದರ್ ಬನವಾಸೀ.

ಹೃದಯಾಂತರಾಳದಿಂದ ಹೊರಹೊರಡುವ ಈ ಮೇಳದಾಳಿನ ನುಡಿ, ಶ್ರೀಯವರ ಹೃದಯವೀಣೆ ತಾನತಾನವಾಗಿ ಮಿಡಿಯುತ್ತಿರುವುದರ ಅಪ್ರತ್ಯಕ್ಷ ನೋಟವೇ ಸರಿ. ಸಾಫೋಕ್ಲೀಸ್ ಕವಿಯ ಸಲಾಮೀಸ್‌ಗೆ ಕನ್ನಡನಾಡನ್ನು ಸರಿಹೊಂದಿಸಿಕೊಂಡು. ನಾಟಕದ ನಾಯಕನಾದ ಅಶ್ವತ್ಥಾಮನನ್ನು ಕನ್ನಡಿಗನೆಂದು ಭಾವಿಸಿರುವುದೇ ಶ್ರೀಯವರ ದೇಶಾಭಿಮಾನಕ್ಕೆ ದೊಡ್ಡ ಉದಾಹರಣೆಯೆಂದು ಹೇಳಬಹುದು. "ಆರಂಕುಸಮಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ" ಕಾತರದಿಂದ ಹೃದಯದ ಹಂಬಲವನ್ನು ಹೊರಡೋರಿದ ಪಂಪನ ಅಮೃತವಾಣಿ ಮತ್ತೊಮ್ಮೆ ಶ್ರೀಯವರ ಹೃದಯದಲ್ಲಿ ಪುಟಿಯುತ್ತಿರುವಂತೆ ಕಾಣುತ್ತದೆ.

'ಅಶ್ವತ್ಥಾಮನ್' ನಾಟಕವು ಕನ್ನಡ ನಾಟಕಪ್ರಪಂಚದಲ್ಲಿ ಚಿರಜೀವಿಯಾಗಬಲ್ಲ ಒಂದು ಕಲಾಕೃತಿ. ಅವರ ನಾಟಕ ಮೂಲವೊಂದರ ಭಾಷಾಂತರ ಅಥವಾ ಭಾವಾಂತರವೆಂಬ ಭಾವವೇ ನಮ್ಮ ಮನಸ್ಸಿಗೆ ಬರದಷ್ಟು ಮಟ್ಟಿಗೆ ಸ್ವಾಭಾವಿಕವಾಗಿದೆ. ಹಾಗಿರುವುದರಿಂದಲೇ ನಾವು ಈ ನಾಟಕ ಕಥೆಯನ್ನು ಕುರಿತು ಇಷ್ಟು ಸುದೀರ್ಘವಾಗಿ ಆಲೋಚಿಸ ಹೊರಟುದು. ಅವರ ಕೃತಿ ರಮಣಿಯ ಕೊರಳಲ್ಲಿನ ರತ್ನಹಾರಗಳು ಅದೆಷ್ಟು ಅಮೂಲ್ಯವಾದುವುಗಳು! "ಒಂದು ಪಗ

ಲೆತ್ತುವುದು ಒಂದು ಪಗಲುರುಳಿಪುದು ಮಾನುಷಮನೆಲ್ಲಮನ್. ಮಿತಿಯಱಿದು ನೆಗಟ್ಟುರ್ಗೆ ದೇವರ್ಕಳೊಸೆದಪರ್, ಮುಱಿದಪರ್ ಮಿಕ್ಕರನ್; ಪಗೆವನವನೊರ್ವೆ ಕೆಳೆಯನಪ್ಪನ್, ಕೆಳೆಯೆ ಪಗೆಯಪ್ಪನ್, ಅದಱಿಂದೆ ಕಟ್ಟೊಲ್ಮೆತಗದು, ಕಡುಪಗೆಯು ಮಾಗದು; ಇಂದೇನೊ ಮುಂದೇನೊ ಮುನ್ನೆ ಆಳ್ ಕಾಣನ್; ಬಂದುದನ್ ಕೊಂಡುಂಡು ತಾಳ್ದವನೆ ಜಾಣನ್; ರುದ್ರನೊಲ್ದೊಡೆ ಉಟಿವು; ಒಲ್ಲದೊಡೆ ಒಡನಟಿವು; ತಟ್ಟಿನಡೆದೊಡೆ ರುದ್ರನೊಲ್ಲದೆಯೆ ಮಾಣನ್."—ಈ ನುಡಿ ರತ್ನಗಳ ಬೆಡಗು ಎಷ್ಟು ಮನೋಹಾರಿಯಾದುದು; ಎಷ್ಟು ಅಮೂಲ್ಯವಾದುದು; ಎಂತಹ ವಿಶ್ವನಿಯಮ ಪ್ರತಿಪಾದಕವಾದುದು!

ಕಥೆಯ ಆದಿಯಿಂದ ಅಂತ್ಯದ ವರೆವಿಗೂ ಮನೋಹರವಾದ ಒಂದು ಸಾಮರಸ್ಯ ಕಂಡುಬರುತ್ತದೆ. ನಾಟಕದ ಕ್ರಿಯೆಯೆಲ್ಲವೂ ಏಮ್ಮುಖವಾಗಿ ನಡೆದು ಪ್ರಧಾನ ವ್ಯಕ್ತಿಯಾದ ಅಶ್ವತ್ಥಾಮನಲ್ಲಿ ಕೇಂದ್ರೀಕೃತವಾಗಿವೆ. ಮೂಲದಲ್ಲಿ ಟ್ಯೂಕರಿಗೂ, ಅಗೆಮೆಮ್ನಾನ್ ಮತ್ತು ಮಿನಿಲೇಯಸ್—ಇವರಿಗೂ ನಡೆದ ದೀರ್ಘ ಸಂಭಾಷಣೆಯ ಭಾಗದಲ್ಲಿ ಸ್ವಲ್ಪಮಟ್ಟಿಗೆ ಕಥೆಯ ರಸೈಕ್ಯತೆಗೆ ಭಂಗಬರುವಂತೆ ಕಾಣುತ್ತದೆ. ನೀರಸ ವಾದ ಈ ಭಾಗವನ್ನು ಅಶ್ವತ್ಥಾಮನ್ ನಾಟಕದಲ್ಲಿ ಹ್ರಸ್ವಗೊಳಿಸಿರುವುದು ಕಾವ್ಯದ ಕಲಾವೈಭವವನ್ನು ಹೆಚ್ಚು ಉಜ್ವಲಗೊಳಿಸಿದೆ. ಕನ್ನಡನಾಟಕದ ಬೇರೆ ಬೇರೆ ಭಾಗ ಗಳು ಪರಸ್ಪರ ಸಮಪ್ರಮಾಣದಲ್ಲಿ ಮಿಲನಗೊಂಡು ಕಥೆಯ ಕಟ್ಟಡಕ್ಕೆ ಒಂದು ಅಚ್ಚುಕಟ್ಟನ್ನು ಒದಗಿಸುತ್ತವೆ. ಸಂಭಾಷಣೆ, ಮೇಳ, ಗೀತೆಗಳು ಸಮತೂಕವಾಗಿವೆ. ಅನಾವಶ್ಯಕವಾದ, ಅಸ್ವಾಭಾವಿಕವಾದ ಅಪ್ರಾಸಂಗಿಕವಾದ ಒಂದು ನುಡಿಯೂ ನಮ್ಮ ನಾಟಕದಲ್ಲಿ ಕಂಡುಬರುವುದಿಲ್ಲ. ರುದ್ರ ಕೃಷ್ಣರ ಸಂವಾದದಲ್ಲಿ ಆರಂಭವಾದ ಕಥೆ ಭಾರ್ಗವಿ, ಮೇಳ—ಇವುಗಳ ಕಾರ್ಯಗಳಿಂದ ಅಭಿವೃದ್ಧಿಯಾಗಿ ಅಶ್ವತ್ಥಾಮನ ಆತ್ಮಹತ್ಯದಲ್ಲಿ ಶಿಖರವನ್ನು ಮುಟ್ಟುತ್ತದೆ. ಶವಸಂಸ್ಕಾರ ಪ್ರಸಂಗದ ಅದು ಸ್ವಲ್ಪ ಸ್ವಲ್ಪವಾಗಿ ಇಳಿದು ಸಮಾಧಾನದಲ್ಲಿ ಕೊನೆಗಾಣುವುದು. ಒಟ್ಟಿನಲ್ಲಿ ಗ್ರೀಕ್ ನಾಟಕದಲ್ಲಿ ಜೀವಾಳದಂತಿರುವ ಕ್ರಿಯೈಕ್ಯ ಸಂಪೂರ್ಣವಾಗಿ ಸಾಧಿತವಾಗಿದೆ. ಹಾಗೆಯೇ ಮುಂಜಾನೆ ಆರಂಭವಾದ ಕಥೆ ಸಂಜೆಯೊಳಗೆ ಮುಗಿದುಹೋಗುವು ದರಿಂದ, ಕಾಲೈಕ್ಯವೂ ಕಂಡುಬರುತ್ತದೆ. ಸ್ಥಲೈಕ್ಯತೆಗೆ ಸ್ವಲ್ಪಮಟ್ಟಿಗೆ ಅಪೋಹ ವೇನೋ ಬಂದಿದೆ—ಅಶ್ವತ್ಥಾಮನಗುಡಾರದೆಡೆಯಿಂದ ಬೇರೆಡೆಗೆ ದೃಶ್ಯ ಬದಲಾಯಿಸು ವುದರಿಂದ. ಆದರೆ ಇದರಿಂದ ನಾಟಕದ ಐಕ್ಯತೆಗೆ ಭಂಗವೇನೂ ಬರುವುದಿಲ್ಲ. 'ಅಶ್ವತ್ಥಾಮನ್' ಕನ್ನಡ ಸಾಹಿತ್ಯದಲ್ಲಿ ಒಂದು ಅಮರಕೃತಿ.

ತ. ಸು. ಶಾಮರಾಯ.

ಜನಪ್ರಿಯ ಕತೆಗಾರ ಚಾರ್ಲ್ಸ್ ಡಿಕನ್ಸ್

ಸುಮಾರು ನೂರು ವರ್ಷದ ಹಿಂದಿನ ಮಾತು. ಇದೇ ಕ್ರಿಸ್ಮಸ್ ಹಬ್ಬ ಸಮೀಪಿಸುತ್ತಿದ್ದಾಗ ಲಂಡನ್ನಿನಲ್ಲಿ ಎಲ್ಲೆಲ್ಲೂ ಅದೇ ಮಾತು. ಹೊಸದಾಗಿ ಪ್ರಕಟವಾಗಿದ್ದ 'ಕ್ರಿಸ್ಮಸ್ ಕೆರೋಲ್' ಎಂಬ ಕಿರಿಯ ಪುಸ್ತಕದ ವಿಚಾರ. ಬರೆದವನು ಆಗಲೇ ಜನಪ್ರಿಯನಾಗಿ ವಿಖ್ಯಾತನಾಗಿದ್ದ ಕತೆಗಾರ ಡಿಕನ್ಸ್. ಎಲ್ಲರೂ ಆ ಕೃತಿಯನ್ನು ಹೊಗಳುವವರೇ. ಡಿಕನ್ಸನನ್ನು ಹಾಡಿ ಹರಸುವವರೇ. ಎಲ್ಲರ ಮನಸ್ಸನ್ನೂ ಸೆಳೆದ ಆ ಕಿರಿಯ ಪುಸ್ತಕ ಕ್ರಿಸ್ಮಸ್ಸಿಗೆ ಸಂಬಂಧಪಟ್ಟ ಕತೆ. ಪ್ರಕಟವಾದುದೇ ತಡ ಸಾವಿರ—ಹತ್ತು—ಹದಿನೈದು ಸಾವಿರ ಎಂದು ಬೇಗ ಖರ್ಚಾಗಿಹೋಯಿತು. ಆ ಕೀರ್ತಿ, ಆ ಶ್ಲಾಘನೆ ಡಿಕನ್ಸಿಗೆ ಹೊಸದಾಗಿರಲಿಲ್ಲ. ಆದರೂ ವಿನಯದಿಂದ ಜನರ ವಿಶ್ವಾಸವನ್ನು ಸನ್ಮಾನಿಸಿದ.

ಆಂಗ್ಲಸಾಹಿತ್ಯದ ಪರಿಚಯವಿರುವವರಲ್ಲಿ ಡಿಕನ್ಸನ ಹೆಸರನ್ನು ಕೇಳದವರಿಲ್ಲ. ಆತನ ಬರೆಹದ ಮೋಡಿಗೆ ಸಿಲುಕದವರಿಲ್ಲ. ಅವನ ಒಂದು ಕತೆ ಓದಿದರೆ ಸಾಕು ಪರಿಚಯ ಬಹುಬೇಗ ಆತ್ಮೀಯಸ್ನೇಹವಾಗುತ್ತದೆ. ಸ್ವಾರಸ್ಯವಾಗಿ ಕತೆಯನ್ನು ಹೇಳುವ ಚಾತುರ್ಯ, ಹಿತವಾಗಿ ಬೆರೆತಿರುವ ನಿರ್ದುಷ್ಟ ಹಾಸ್ಯ ಮಾಧುರ್ಯ, ಎಲ್ಲಕ್ಕಿಂತ ಹೆಚ್ಚಾಗಿ ಭಾವಮುಗ್ಧರನ್ನಾಗಿ ಮಾಡುವ ಆತನ ಅಪಾರವಾದ ಮಾನವ ಪ್ರೀತಿ, ಕರುಣೆ ಇವು ಡಿಕನ್ಸನ ಕೃತಿಗಳ ಜೀವಗುಣಗಳು. ಆಂಗ್ಲ ಸಾಹಿತ್ಯಭಂಡಾರದಲ್ಲಿ ಡಿಕನ್ಸನ ಕಾದಂಬರಿಗಳು ಅನರ್ಘ್ಯರತ್ನಗಳು. ಕಾದಂಬರೀಕ್ಷೇತ್ರದಲ್ಲಿ ಆತನ ಹೆಸರು ಅಮರವಾಗಿದೆ.

ಆದರೆ ಇದೇ ಪ್ರಖ್ಯಾತ ಕಾದಂಬರಿಕಾರ ತನ್ನ ಮೊದಲ ಬರೆಹವನ್ನು ಮಾಸಿಕ ಪತ್ರಿಕೆಯೊಂದಕ್ಕೆ ಕಳಿಸುವುದಕ್ಕೂ ಎಷ್ಟು ನಾಚಿಕೆ ಭಯಗಳಿಂದ ಅಧೀರನಾಗಿದ್ದ ಗೊತ್ತೆ ?

ಆಗ ಅವನಿಗಿನ್ನೂ ಇಪ್ಪತ್ತು ವರ್ಷ. ಒಂದು ಸಂಜೆ ಕತ್ತಲಾಗುವುದನ್ನೇ ಕಾಯುತ್ತಿದ್ದು ಕಗ್ಗತ್ತಲೆ ಮುಸುಕಿದ ಕೂಡಲೆ ಬೆಳಕಿಲ್ಲದ ಬೀದಿಯುದ್ದಕ್ಕೂ ಅಂಚಿನಲ್ಲೇ ಕಳ್ಳತನದಿಂದ ನಡೆದು Monthly Magazine ಎಂಬ ಹೆಸರಿನ ಪತ್ರಿಕಾ ಕಚೇರಿಯ ಅಂಚೆಪೆಟ್ಟಿಗೆಯೊಳಗೆ, ಯಾರಿಗೂ ಕಾಣಿಸದೆಂದು ಭರವಸೆಗೊಂಡಮೇಲೆ ಕೋಟಿನೊಳಗೆ ಮಾಜಿದ್ದ ಕಾಗದದ ಸುರಳಿಯೊಂದನ್ನು ತೆಗೆದು, ಹಾಕಿದ. ಆ

ವಾರವೆಲ್ಲ ಪತ್ರಿಕೆ ಹೊರಡುವುದನ್ನೇ ಅತ್ಯಂತ ಕುತೂಹಲದಿಂದ ಕಾಯುತ್ತಿದ್ದ. ಪತ್ರಿಕೆ ಹೊರಟ ದಿನ, ಆತುರವಾಗಿ ಓಡಿ ಒಂದು ಪ್ರತಿ ಕೊಂಡು ಪುಟ ತಿರುವಿ ನೋಡುತ್ತಾನೆ ವಿಸ್ತರಿಸಿದ ಕಣ್ಣಿನಿಂದ, ತನ್ನ ಲೇಖ! ಅಚ್ಚಾಗಿ! ಕಿರಿಯ ಹೃದಯ ಉತ್ಸಾಹ, ಸಂತೋಷಗಳಿಂದ ತುಂಬಿ ಜಿರಿಯುವಂತಾಯಿತು. ತಾನೂ ಸಾಹಿತಿ ಯಾಗುವೆನೆಂದುಕೊಂಡು ಹಿಗ್ಗಿದ " ಮಿ|| ಮಿನ್ಸ್ ಅಂಡ್ ಹಿಸ್ ಕಸ್ಸಿನ್ " ಆ ಕತೆ—ಅಲ್ಲ—ಪುಟ್ಟ ಚಿತ್ರ. ಓದಿದವರನ್ನೆಲ್ಲ ನಗಿಸಿ ಹರ್ಷಗೊಳಿಸಿದ್ದಲ್ಲದೆ ಬಹು ಬೇಗ ಸಂಪಾದಕರ ಮೆಚ್ಚುಗೆಯನ್ನೂ ಸಂಪಾದಿಸಿಕೊಟ್ಟಿತು. ಅದೇ ಉತ್ಸಾಹ, ಯಶಸ್ಸು ಮತ್ತೆ ಎಂಟು ವಿವಿಧ ಚಿತ್ರಗಳನ್ನು ಸೃಷ್ಟಿಸಿತು. ಅವೆಲ್ಲಕ್ಕೂ ಆಗ ದೊರಕಿದುದು ಬರಿಯ ಶ್ಲಾಘನೆ; ಹಣವಲ್ಲ. ಡಿಕನ್ಸನ ಮುಂದಿನ ಮಹಾಭವಿತವ್ಯಕ್ಕೇನೊ ಅಷ್ಟು ಸಾಕಾಗಿತ್ತು. ಆದರೆ ಆಗಿನ ಆತನ ಸ್ಥಿತಿ ನೋಡಿದರೆ ಹಣದ ಅಗತ್ಯ ಇನ್ನೂ ಹೆಚ್ಚಾಗಿತ್ತು. ಆತನಿಗೆ ಬಂದ ಪ್ರಥಮ ಸಂಭಾವನೆ ಒಂದು ಪೌಂಡ್ ಒಂದು ಕತೆಗೆ! ಹೌದು. ಅಷ್ಟೆ. ಆದರೆ ಆತನ ಕೊನೆಯ ಕೃತಿಯ ಹಸ್ತಪ್ರತಿಯನ್ನು ಮಾರಿದಾಗ ಬಂದುದು ಪದಕ್ಕೆ ಮೂರು ಪೌಂಡಿನಂತೆ! ಸಾಹಿತ್ಯ ಹುಟ್ಟಿದಾಗಿನಿಂದ ಒಂದು ಪದಕ್ಕೆ ಇಷ್ಟು ಹಣ ಸಂಪಾದಿಸುವ ಅದೃಷ್ಟಶಾಲಿಗಳಲ್ಲಿ ಡಿಕನ್ಸನೇ ಮೊದಲನೆಯವನು.

ಈ ನೂರು ವರ್ಷಗಳಲ್ಲಿ ಡಿಕನ್ಸನ ಕೃತಿಗಳೆಂದರೆ ಎಲ್ಲೆಲ್ಲೂ ನಿಲ್ಲದೆ ಖರ್ಚಾಗುವ ಪುಸ್ತಕಗಳು. ಷೇಕ್ಸಪಿಯರಿನ ನಾಟಕಗಳು, ಬೈಬಲ್ ಬಿಟ್ಟರೆ ಡಿಕನ್ಸ್‌ನ ಕಾದಂಬರಿಗಳಷ್ಟು ವಿಪುಲವಾಗಿ ಮಾರಾಟವಾಗಿರುವ ಗ್ರಂಥ ಮತ್ತೊಂದಿಲ್ಲ. ಈ ಪ್ರಖ್ಯಾತ ಜನಪ್ರಿಯ ಕಾದಂಬರಿಕಾರ ತನ್ನ ಜೀವಮಾನದಲ್ಲೆಲ್ಲಾ ಕೇವಲ ನಾಲ್ಕೇ ವರ್ಷ ಶಾಲೆಗೆ ಹೋದದ್ದು ಎಂದರೆ ಅತ್ಯಾಶ್ಚರ್ಯ. ಆತನ ಜೀವನವೇ ಒಂದು ಕತೆ. ಬಹುಮಟ್ಟಿಗೆ ಮನಕರಗಿಸುವಷ್ಟು ದಾರುಣವೇ.

ಚಾರಲ್ಸ್ ಡಿಕನ್ಸ್ ೧೮೧೨ರಲ್ಲಿ ಪೋರ್ಟ್ಸ್‌ಮತ್ತಿನಲ್ಲಿ ಬಡಕುಟುಂಬವೊಂದರಲ್ಲಿ ಹುಟ್ಟಿದ. ತಂದೆ ಜಾನ್ ಡಿಕನ್ಸ್, ತಾಯಿ ಎಲಿಜಬೆತ್, ಅವರ ಎಂಟು ಮಕ್ಕಳಲ್ಲಿ ಚಾರ್ಲ್ಸ್ ಎರಡನೆಯವನು. ಜೇಷ್ಠಪುತ್ರ. ತಂದೆ ನೇವಿ ಪೇ ಕಚೇರಿಯಲ್ಲಿ ಗುಮಾಸ್ತೆಯಾಗಿದ್ದ. ಚಾರ್ಲ್ಸ್ ನಾಲ್ಕು ವರ್ಷದವನಾಗಿದ್ದಾಗ ತಂದೆಗೆ ಚಾಥ್ಯಾಮಿಗೆ ವರ್ಗವಾಗಿತ್ತು. ಅಲ್ಲಿ ಕಳೆದ ಆರು ವರ್ಷಗಳು ಮಗುವಿನ ಭಾವಜೀವನಕ್ಕೆ ತುಂಬ ಪೋಷಕವಾದ ಕಾಲ.

ಅಲ್ಲಿಯ ಸುತ್ತಮುತ್ತಲ ನಿಸರ್ಗ ಎಳೆಯ ಹುಡುಗನ ಕಲ್ಪನಾಶಕ್ತಿಯ ಬೆಳವಣಿಗೆಗೆ ಸ್ಫೂರ್ತಿದಾಯಕ ಸನ್ನಿವೇಶಗಳನ್ನು ಒದಗಿಸಿತು. ಚಾಥ್ಯಾಮ್ ಮತ್ತು

ಅದರ ಪಕ್ಕದಲ್ಲೇ ಇದ್ದ ಹಿರಿಯ ರಾಚೆಸ್ಟರ್ ನಗರ ಇವುಗಳನ್ನು ಸುತ್ತುವರೆದಿದ್ದ ನಿತ್ಯ ಸುಂದರ ನಿಸರ್ಗ ಇಂಗ್ಲೆಂಡಿನ ಮನಸೆಳೆಯುವ ರಮ್ಯಪ್ರದೇಶಗಳಲ್ಲೊಂದು. ಬೆಣ್ಣೆಯವೋ ಎನಿಸುವ ಹಾಲುಬಿಳುಪಿನ ಸುಣ್ಣದ ಗುಡ್ಡಗಳು, ಅವುಗಳನ್ನು ಅಲ್ಲಲ್ಲಿ ಸುತ್ತುವರೆದ ಸೀಳುಕಣಿವೆಗಳ ಹಸಿರು ವನಸಿರಿ, ಅಲೆಗಳಂತೆ ಹಬ್ಬಿದ ಕಾಡು ಮೇಡು ಅಲ್ಲಲ್ಲಿ ನಿಂತ ಚೆಲುವಾದ ನೀರ ತಾಣಗಳು ಈ ಎಲ್ಲ ಚೆಲುವಿನ ಮೇಲೆ ಭಗವತ್ಕೃಪೆಯಂತೆ ಹಬ್ಬಿರುವ ವಿಶಾಲ ನೀಲಾಕಾಶ!

೧೮೧೯ ರಲ್ಲಿ ಆ ಸುಂದರ ಕೆಂಟ್ ಪ್ರದೇಶದಲ್ಲಿ ಯಾರಾದರೂ ವಿಹಾರಯಾತ್ರೆ ಹೋಗಿದ್ದರೆ ಆ ಕಿರಿಯ ವಿಲಕ್ಷಣ ಹುಡುಗ ಚಾರ್ಲ್ಸ್ ಹಸಿರ ಮಧ್ಯೆ ಸ್ವಚ್ಛಂದವಾಗಿ ಅಲೆದಾಡುತ್ತಿದ್ದುದನ್ನೋ, ಬಳಿಗೆ ಬಂದು ಮುದ್ದಾಗಿ ಮಾತಾಡಿಸುವುದನ್ನೋ ಕಾಣಬಹುದಾಗಿತ್ತು. ಅಲ್ಲೇ ಸಮೀಪದಲ್ಲಿ ಮರಗಳ ತೋಪಿನ ಮಧ್ಯೆ ಪ್ರಾಚೀನ ಗಾಂಭೀರ್ಯದಿಂದ ನಿಂತ ಭವ್ಯಸುಂದರ ಗ್ಯಾಡ್ಸ್‌ಹಿಲ್ ಬಂಗಲೆ ಮೊದಲಿಸಿಂದಲೂ ಕಿರಿಯ ಡಿಕನ್ಸನ ಮೆಚ್ಚಿನ 'ಗಂಧರ್ವಮಂದಿರ'ವಾಗಿತ್ತು. ಒಮ್ಮೆ ಜಾನ್ ಡಿಕನ್ಸ್ ತನ್ನ ಐದು ವರ್ಷದ ಮಗನನ್ನು ಸಂಜೆ ತಿರುಗಾಡಿಸಿಕೊಂಡು ಬರುತ್ತ ಆ ಬಂಗಲೆಯ ಬಳಿ ಕರೆದೊಯ್ದ. ಮಗುವಿನ ಆಶ್ಚರ್ಯ, ಆನಂದಗಳಿಗೆ ಪಾರವೇ ಇಲ್ಲ. ತಂದೆ, "ನೋಡು ನೀನು ದೊಡ್ಡವನಾದಮೇಲೆ ಶ್ರದ್ಧೆಯಿಂದ ಶ್ರಮವಹಿಸಿ ಕೆಲಸಮಾಡುತ್ತ ಬಂದರೆ ಒಂದು ದಿನ ನೀನೂ ಈ ಮನೆಯಲ್ಲಿ ಶ್ರೀಮಂತನಾಗಿ ಇರಬಹುದು" ಎಂದ. ಮಗು ಆಸ್ಥೆಯಿಂದ ಆ ಮಾತನ್ನು ಕೇಳಿ ಹೊಸಬಯಕೆಯೊಂದನ್ನು ಬೆಳೆಸ ತೊಡಗಿತು. ಆ ಮಾತು ಮುಂದೆಂದೂ ಅವನ ನೆನಪಿನಿಂದಳಿಯಲಿಲ್ಲ. ಇದಲ್ಲದೆ ಎಳೆಯ ಬಾಲಕನಿಗೆ ಕಡಲತೀರದ ರೇವು ಮತ್ತೊಂದು ಆಕರ್ಷಕ ಸ್ಥಳವಾಯಿತು. ಅಲ್ಲಿ ಹೋಗಿ ಕುಳಿತರೆ ಹೊತ್ತೇ ಕಾಣದು. ನಾವೆ, ದೋಣಿ, ನಾವಿಕರು, ಮೀನುಗಾರರು, ಹಕ್ಕಿಗಳು, ನೀಲತೆರೆಗಳು ಎಲ್ಲದರ ಚಟುವಟಿಕೆ ನೋಡಿದಷ್ಟೂ ತೃಪ್ತಿಯಿಲ್ಲ. ಅವನಿಗಿದ್ದ ಅಮೋಘ ಸ್ಮರಣಶಕ್ತಿ, ಆಗ ನಿಸರ್ಗದ ಮಡಿಲಿನಲ್ಲಿ ಅಲೆದು, ಆಡಿ ಸವಿದ ಸಾವಿರಾರು ಸುಂದರ ನೋಟ, ಅನುಭವಗಳನ್ನು ಮುಂದೆ ಅವನ ಕಾದಂಬರಿಗಳಲ್ಲಿ ನೆಯ್ದು ಚಿರಂತನ ಸಾಹಿತ್ಯಚಿತ್ರಗಳನ್ನಾಗಿ ರೂಪಿಸಿತು.

ಡಿಕನ್ಸನ ಬಾಲ್ಯದ ಸುಂದರ ಕನಸಿನಂತಿದ್ದ ಚಾಥ್ಯಾಮಿನ ಸುಖಜೀವನದ ಕಾಲದಲ್ಲೇ ಬೇರೊಂದು ಕಡೆ, ಮುಂದೆ ಡಿಕನ್ಸನಂತೆಯೇ ಜಗದ್ವಿಖ್ಯಾತ ಕಾದಂಬರಿಕಾರನಾಗಲಿದ್ದ ಥ್ಯಾಕರೆ ಡಿಕನ್ಸನಿಗಿಂತ ಅತ್ಯುತ್ತಮ ಸನ್ನಿವೇಶದಲ್ಲಿ ಬೆಳೆಯುತ್ತಿದ್ದ. ಥ್ಯಾಕರೆ, ಡಿಕನ್ಸ್ ಹುಟ್ಟುವುದಕ್ಕೆ ಕೆಲವು ತಿಂಗಳು ಮಾತ್ರ ಮುಂಚೆ ಹುಟ್ಟಿದ್ದ. ವಿಕ್ಟೋರಿಯನ್ ಕಾಲದ ಪ್ರಸಿದ್ಧ ಕಾದಂಬರಿಕಾರರಿಬ್ಬರೂ ಒಟ್ಟಿಗೆ

ಬೇರೆ ಬೇರೆ ಕಡೆ ಬೆಳೆಯುತ್ತಿದ್ದ ವಿಷಯ ದೊಡ್ಡ ಸೋಜಿಗ! ಹೌದು. ಡಿಕನ್ಸನಿಗಿಂತ ಥ್ಯಾಕರೆ ತುಂಬ ಉತ್ತಮವಾದ ಸನ್ನಿವೇಶದಲ್ಲಿ ಬೆಳೆಯುತ್ತಿದ್ದ. ಆತನಿಗೆ ಶ್ರೀಮಂತ ಸಾಧ್ಯವಾದ ಉತ್ತಮ ಶಿಕ್ಷಣ ದೊರೆಯಿತು. ಪಾಪ! ಚಾರ್ಲ್ಸ್‌ನಿಗೆ ಹುಟ್ಟಿದಂದಿನಿಂದ ಪರಿಚಯವಿದ್ದುದೆಂದರೆ ಎರಡೇ ; ಹಸಿವು, ಅತೃಪ್ತ ಬಯಕೆಗಳು. ಆತನಿಗೆ ದೊರೆತ ನಿಜವಾದ ಶಿಕ್ಷಣ ಚಾಥ್ಯಾಮ್ ಮತ್ತು ಲಂಡನ್ನಿನ ಹೊಲಸುತುಂಬಿದ ಬೀದಿಗಳಲ್ಲಿ.

ಎಳೆಯ ಮಗುವಾಗಿದ್ದಾಗ ಕೆಲವು ದಿನ ಶಾಲೆಗೆ ಹೋಗುತ್ತಿದ್ದ. ತುಂಬ ಚುರುಕಿನಿಂದ ಓದುಬರೆಹ ಕಲಿತ. ಅಷ್ಟು ಎಳೆಯ ವಯಸ್ಸಿನಲ್ಲೇ ಅವನ ಒಲವೆಲ್ಲಾ ಪುಸ್ತಕಗಳನ್ನು ಓದುವುದರ ಕಡೆಗೇ ಇತ್ತು. ಒರಟೊರಟಾದ ಆಟಗಳಿಂದ ದೂರವಾಗಿ ಮೂಲೆಯೊಂದರಲ್ಲಿ ಪುಸ್ತಕ ಹಿಡಿದು ಕುಳಿತುಬಿಡುತ್ತಿದ್ದ. ಪುಸ್ತಕ ತೆರೆದನೆಂದರೆ, ಯಾವುದೊ ಸುಂದರ ಕಲ್ಪನಾಲೋಕ ತೆರೆಯುವುದು. ಅಲ್ಲಿ ಆತ ಧೀರ ಸಾಹಸಿ. ಒಂಬತ್ತು ವರ್ಷದ ವೇಳೆಗಾಗಲೇ ಷೇಕ್ಸ್‌ಪಿಯರಿನ ನಾಟಕಗಳನ್ನೋದಿ ಫಾಲ್‌ಸ್ಟಾಫ಼ಿನ ನಿಕಟಪರಿಚಯವಾಗಿತ್ತು. ಪುಸ್ತಕ, ಕತೆ, ಎಂದರೆ ಅಷ್ಟು ಪ್ರಾಣ.

ಆ ದಿನಗಳೆಲ್ಲ ಮರೆಯಾದವು. ಲಂಡನ್ ಕಷ್ಟಜೀವನದ ಪೀಠಿಕೆಯಾಗಿ ತಂದೆಗೆ ಅಲ್ಲಿಗೆ ವರ್ಗವಾಯಿತು. ಜಾನ್ ಡಿಕನ್ಸನ ಬಡತನಕ್ಕೆ ಜೊತೆಯಾಗಿ ಸಾಲದ ಹೊರೆ ಬೆಳೆಯುತ್ತ ಹೋಯಿತು. ಕೊನೆಗೊಮ್ಮೆ ಆಗಬಾರದುದು ಆಗಿಯೇಬಿಟ್ಟಿತು. ತಂದೆ ಜೇಲು ಸೇರಿ, ತಾಯಿಯೂ ಅವನೊಡನೆ ಉಳಿದ ಮಕ್ಕಳನ್ನು ಕಟ್ಟಿಕೊಂಡು ಇರಲಾರಂಭಿಸಿದ ಮೇಲೆ, ಇನ್ನೂ ಹತ್ತು ವರ್ಷದ ಎಳೆಯ ಹುಡುಗ ತನ್ನ ಜೀವನದ ಹೊರೆಯನ್ನು ತಾನೇ ಹೊರಬೇಕಾಯಿತು. ಬೂಟ್‌ಪಾಲಿಷ್ ಕಾರ್ಖಾನೆಯೊಂದರಲ್ಲಿ ಕೂಲಿಯಾದ. ವಾರಕ್ಕೆ ಆರೇ ಷಿಲಿಂಗ್ ಸಂಬಳ. ಹೊಲಸುತುಂಬಿದ ಹೀನ ವಾತಾವರಣದ ಮುರುಕು ಕೋಣೆಯೊಂದರಲ್ಲಿ ತಲೆಯಿಡಲು ಜಾಗ. ಭಾನುವಾರಕ್ಕೊಮ್ಮೆ ತಂದೆತಾಯಿಗಳನ್ನು ನೋಡಲು ಮಾರ್ಷೆಲ್ಸಿಗೆ ಹೋಗಿಬರುವುದು. ಕಾರ್ಖಾನೆಗಳಲ್ಲಿ, ಕಲ್ಲಿದ್ದಲ ಕಪ್ಪುಗಣಿಗಳ ಆಳದಲ್ಲಿ ನಿರ್ದಯರಾಗಿ ನಿರ್ದಾಕ್ಷಿಣ್ಯವಾಗಿ ಎಳೆಯ ಮಕ್ಕಳ ಕೈಲಿ ದುಡಿಸಿಕೊಳ್ಳುತ್ತಿದ್ದ ರಾಕ್ಷಸ ದಣಿಗಳು, ಲಂಡನ್ನಿನ ದೀನದಲಿತರ ವಸತಿಪ್ರದೇಶದ ಸರಕಸ್ಥಿತಿ, ಒಂದೊಂದಾಗಿ ಬಡತನದ ಜೀವನದ ಪ್ರತಿಯೊಂದು ವಿಧದ ಬೇಗೆಯ ಅನುಭವ ಡಿಕನ್ಸನ ವ್ಯಕ್ತಿತ್ವವನ್ನು ಯಾವುದೋ ಹದಕ್ಕೆ ರೂಪುಗೊಳಿಸುತ್ತಿತ್ತು.

ತಂದೆ ಜೇಲಿನಿಂದ ವಿಮುಕ್ತನಾಗಿ ಹೊರಬಂದ ಮೇಲೆ ಡಿಕನ್ಸನ ಮತ್ತೊಂದು ಹೊಸ ಜೀವನ ಆರಂಭಿಸಿತು; ಶಾಲೆ ಸೇರಿದ. ಅದೂ ಬಹಳ ದಿನವಾಗಲಿಲ್ಲ. ಷಾರ್ಟ್‌ಹ್ಯಾಂಡ್ ಕಲಿತ. ಹದಿನಾರನೆಯ ವಯಸ್ಸಿನಲ್ಲಿ ಲಾಯರ್ ಆಫೀಸೊಂದರಲ್ಲಿ ಗುಮಾಸ್ತೆಯಾದ. ಅಲ್ಲಿಯೂ ಆದುದಿಷ್ಟೆ: ಅನುಭವವೈಶಾಲ್ಯ. ಮೂರು ವರ್ಷದಲ್ಲೇ ಆ

ಕೆಲಸ ಬೇಸರತಂದಿತು. *True Sun* ಪತ್ರಿಕೆಯ ವರದಿಗಾರನಾಗಿ ನೇಮಿಸಲ್ಪಟ್ಟ. ಪಾರ್ಲಿಮೆಂಟ್ ಸಭೆಗಳಲ್ಲಾದ ವಿಷಯಗಳ ವಿವರವನ್ನು ಬರೆದುಕಳಿಸುವ ಕೆಲಸ. ಇದರಿಂದ ಇನ್ನೂ ಅನೇಕ ವಿಧದ ಅನುಭವಗಳಾದವು. ಹಳ್ಳಿಹಳ್ಳಿಗಳ ಮೇಲೆ ಕೋಚ್ ಗಾಡಿಗಳಲ್ಲಿ ಪ್ರವಾಸಮಾಡಿದ. ಆಗಿನ ಅನುಭವಗಳೆಲ್ಲ ಜೀವಂತವಾಗಿ ಅವನ ಕಾದಂಬರಿಗಳಲ್ಲಿ ಉಳಿದುಬರುವಂತಾಯಿತು. ವರದಿ ಬರೆಯುತ್ತ ಡಿಕನ್ಸ್‌ನ ಕೈ, ಭಾಷೆ ಶೈಲಿಗಳಲ್ಲಿ ಪಳಗಿತು. ಹದುಗಿದ್ದ ಕಾದಂಬರಿಕಾರ—ಹಿರಿಯ ಕತೆಗಾರ—ಹೊಂಬರಲು ತವಕಿಸುತ್ತಿದ್ದ. ಪತ್ರಿಕಾ ವರದಿಯ ಕೆಲಸ ಡಿಕನ್ಸನ ಸೂಕ್ಷ್ಮ ಅವಲೋಕನಾಶಕ್ತಿಯನ್ನು ಬಹುಬೇಗ ಸ್ಫುಟಗೊಳಿಸಿತು ಡಿಕನ್ಸ್ ಅದ್ಭುತ ವರದಿಕಾರ, ಅವನ ತೀಕ್ಷ್ಣ ದೃಷ್ಟಿಯಿಂದ ಯಾವುದೂ ತಪ್ಪಿಸಿಕೊಳ್ಳಲಾರದು ಎನ್ನುವಂತಾಯಿತು. ಮೆಲ್ಲನೆ ಅವನ ಲೇಖನಿ ವರದಿಯಿಂದ ಸೃಷ್ಟಿಯ ಕಡೆ ಹರಿಯತೊಡಗಿತು. "Sketches by Boz" ೧೮೩೬ರಲ್ಲಿ ಚಿತ್ರ, ಕತೆಗಳ ಕಿರಿಯ ಸಂಕಲನವಾಯಿತು. ಜನರ ಆದರ ಪಡೆಯಿತು. ಡಿಕನ್ಸನ ಉತ್ಸಾಹಕ್ಕೆ ಪುಟ ದೊರಕಿತು.

ಅನಂತರ ಯಾರೊ ಪ್ರಸಿದ್ಧ ಹಾಸ್ಯ ಚಿತ್ರಗಾರನ ಚಿತ್ರಗಳಿಗೆ ವಿವರಣೆ ಬರೆಯುವ ಕೆಲಸ ಬಿತ್ತು. ಕಣ್ಣಿಗೆ ಕಟ್ಟುವ ಹಾಗೆ ವರ್ಣಿಸಿ ಬರೆಯುವ ಪ್ರತಿಭೆಯಿದ್ದ ಡಿಕನ್ಸನ ನಿರರ್ಗಳ ಶೈಲಿ ಸಂಪಾದಕರ ಈ ಕೃಪೆಗೆ ಕಾರಣವಾಗಿತ್ತು. ವಾರ ವಾರ ಬರುತ್ತಿದ್ದ ಆ ಚಿತ್ರಗಳೂ ಮತ್ತು ವಿವರಣೆ ನಾಲ್ಕಾಯಿತು. ಐದನೆಯ ಚಿತ್ರ ಬರುವ ವೇಳೆಗೆ ಜನರ ಗಮನ, ಮೆಚ್ಚುಗೆಯನ್ನು ಸೆಳೆದು ಪ್ರಾಮುಖ್ಯವಾದುದು ಚಿತ್ರವಲ್ಲ, ಅದರ ವಿವರಣೆ! ಎಲ್ಲ ತರಹೆಯ ಜನರಿಗೂ ಪ್ರಿಯವಾಗಿ ಮನೆಮನೆಯ ಮಾತಾಯಿತು. ಓದಿದವರೆಲ್ಲ ನಗು ತಡೆಯದಾದರು. ಇದೇ ಲೇಖನ ಮಾಲೆ ತುಸು ಬದಲಾಗಿ ಸಂಕಲನವಾಗಿ "ಪಿಕ್ವಿಕ್ ಪೇಪರ್ಸ್" ಆಯಿತು.

(Then came the Pickwick Papers—and Fame and Popularity and Money.) . . . ಆಗ ಪಿಕ್ವಿಕ್ ಪೇಪರ್ಸ್!—ಅದರ ಹಿಂದೆ ಕೀರ್ತಿಯೂ ಜನಾನುರಾಗವೂ, ಸಂಪತ್ತೂ ಬಂದವು.

ಲಂಡನ್ನಿನ ಕೆಲವು ಗೆಳೆಯರು ದೇಶಸಂಚಾರವನ್ನು ಕೈಗೊಂಡು ಪಡುವ ವಿವಿಧ ಸಾಹಸಮಯ ಅನುಭವಗಳ ಹಾಸ್ಯಚಿತ್ರಗಳೇ ಈ ಪುಸ್ತಕದ ವಿಷಯ. ಪಿಕ್ವಿಕ್ ಮಧ್ಯವಯಸ್ಸಿನ ಗಂಭೀರವಾದ, ಶುಭಗಾತ್ರದ ವ್ಯಕ್ತಿ. ತುಂಬ ಗೌರವ ಶಾಲಿ ಎಂದುಕೊಂಡರೂ ಅವನ ಮೃದುಹೃದಯ, ಶಿಶುಸರಳತೆ, ದೀನದಲಿತರೊಡನೆಯೂ ಸಲುಗೆಯಿಂದ ಪ್ರಿಯನಾಗಿ ನಡೆದುಕೊಳ್ಳುವಂತೆ ಮಾಡುತ್ತವೆ. ಆತನ ಬೋಳುತಲೆ, ಸದಾ ನಗುವ ತುಟಿ, ದುಂಡಗೆ ದಪ್ಪಗೆ ಇದ್ದ ಕನ್ನಡಕಗಳನ್ನು

ಭೇದಿಸಿ ಜಗತ್ತಿನ ರೀತಿಯನ್ನು ಅವಲೋಕಿಸುತ್ತಿದ್ದ ತೀಕ್ಷ್ಣ ಕಣ್ಣುಗಳು ಪಿಕ್ವಿಕ್ಕನ ವೈಶಿಷ್ಟ್ಯ. ಹೊರಪ್ರಪಂಚದ ವಿಚಿತ್ರ ವಿಚಾರಗಳನ್ನೆಲ್ಲ ಸಂಗ್ರಹಿಸಿ ಲಂಡನ್ ಬಿಟ್ಟು ಅಲುಗದ ಅಜ್ಞಜನಸ್ತೋಮಕ್ಕೆ ಹೊಸ ತಿಳುವಳಿಕೆ ಕೊಡಬಲ್ಲ ವಿಸ್ಮಯ ಕಾರಕ ಪ್ರವಾಸಗ್ರಂಥವೊಂದನ್ನು ಬರೆಯುವ ಮಹೋದ್ದೇಶದಿಂದ ಪಿಕ್ವಿಕ್ ಹೊರಡುತ್ತಾನೆ. ಜೊತೆಗೆ ಅವನನ್ನು ಬಿಟ್ಟಿರದ ಅನುಯಾಯಿ ಗೆಳೆಯರು ಮೂರು ಜನ ಸಹ ಹೊರಡುತ್ತಾರೆ. ಪ್ರವಾಸದಲ್ಲೇ ಸ್ಯಾಮ್‌ವೆಲ್ಲರ್ ಎಂಬ ವಾಚಾಳಿ ಯುವಕ ಪಿಕ್ವಿಕನ ಮೆಚ್ಚಿನ ಸೇವಕನಾಗಿ ಸಿಗುತ್ತಾನೆ. ಅನೇಕ ಹಾಸ್ಯದ ಸನ್ನಿವೇಶಗಳಿಗೆ ಅವಕಾಶ ದೊರೆತು ಪುಸ್ತಕದುದ್ದಕ್ಕೂ ನಗುವಿನ ಚಿಲುಮೆಗಳು ಚಿಮ್ಮುತ್ತವೆ.

ಡಿಕನ್ಸ್ ಓದುಗರ ಪ್ರಿಯಲೇಖಕನಾದ. ಅವನ ಹಾಸ್ಯ ಎಲ್ಲರ ಮನಸ್ಸನ್ನೂ ಹರ್ಷಗೊಳಿಸಿ ಅರಳಿಸಿತು. ಅವರ ಒಲವನ್ನು ಅನಂತವಾಗಿ ಸಂಪಾದಿಸಿತು. "ಆಲಿವರ್ ಟ್ವಿಸ್ಟ್" ಬಡತನದ ವಿವಿಧ ಕಷ್ಟಗಳನ್ನು ತುಂಬ ಅನುಭವಿಸಿದ ಎಳೆಯ ಹುಡುಗ ನೊಬ್ಬನ ಬಾಲ್ಯಜೀವನ, ಬಡವರ ಬಾಳಿಗೆ ಶೂಲವಾಗಿದ್ದ ನಾನಾರೀತಿಯ ಸಮಾಜದ, ರಾಷ್ಟ್ರದ ಅನ್ಯಾಯಗಳು, ದೋಷಗಳು ಇವೆಲ್ಲದರ ಕತೆ. ಆ ಕಾಲದ ಬಹು ದೋಷಯುಕ್ತವಾದ ಶಿಕ್ಷಣಪದ್ಧತಿಯನ್ನು ಖಂಡಿಸುವ ನಿಕೊಲಾಸ್ ನಿಕಲ್‌ಬಿ ; ಹಾಸ್ಯ, ವಿಷಮ ಚಿತ್ರಗಳ ಸಮಾವೇಶದ ವಿಶಿಷ್ಟ ಶೈಲಿಯಲ್ಲಿ ಬರೆದ ಲಂಡನ್ ಜೀವನದ ಚಿತ್ರ, ದಿ ಓಲ್ಡ್ ಕ್ಯೂರಿಯಾಸಿಟಿ ಷಾಪ್ ; ಗೋರ್ಡ್ ದಂಗೆಯ ವಿಷಯದ ಮೇಲೆ ಬರೆದ ಐತಿಹಾಸಿಕ ಕಾದಂಬರಿ ಬಾರ್ನಾಬಿ ರಡ್ಜ್ ; ಒಂದಾದ ಮೇಲೊಂದು ಕಾದಂಬರಿಗಳು ಹೊರಬಂದುವು. ಡಿಕನ್ಸ್ ಆಗಲೇ ಪ್ರಖ್ಯಾತನಾಗಿದ್ದ ಬರೆಬರೆದ ಕೃತಿಗಳನ್ನು ಪ್ರಕಟನೆಗೆ ಕಳಿಸಲು ಸಂಜೆಗತ್ತಲಿಗೆ ಕಾಯಬೇಕಾಗಿರಲಿಲ್ಲ. ಕ್ಯೂರಿಯಾ ಸಿಟಿ ಷಾಪಿನ 'ಕಿರಿಯ ನೆಲ್' ಪಟ್ಟ ಕಷ್ಟಜೀವನ ಓದುಗರ ಮನ ಕರಗಿಸಿತು. ಅವರೆಲ್ಲ ಆಕೆಯೊಡನೆ ಕಣ್ಣೀರ್ಗರೆದರು. ಆಕೆ ಜೀವಂತ ವ್ಯಕ್ತಿಯೇ ಎಂದುಕೊಂಡು ಪರಿತಪಿ ಸಿದರು. ಆಕೆ ಸಾಯಬಹುದು ಎಂದು ಊಹಿಸಿದ ಅನೇಕರು "ದಯವಿಟ್ಟು ಆಕೆ ಯನ್ನು ಸಾಯಿಸಬೇಡಿ ; ಹೇಗಾದರೂ ಮಾಡಿ ಬದುಕಿಸಿ" ಎಂದು ಗೋಗರೆದು ಕತೆಗಾರನಿಗೆ ಕಾಗದ ಬರೆದರು.

ಡಿಕನ್ಸನ ಕಥಾಕೌಶಲದ ವಿಶೇಷ ಗುಣ ಅದು. ಆತ ಸೃಷ್ಟಿಸಿದ ವ್ಯಕ್ತಿಗಳ ವಾಸ್ತವಿಕತೆ ಅವು ಜೀವಂತ ವ್ಯಕ್ತಿಗಳೇ ಎನ್ನುವ ಭ್ರಾಂತಿಯನ್ನು ಕೊಡುವಷ್ಟು ಸಹಜವಾಗಿತ್ತು. ಬಹುಬೇಗ ಓದುಗರ ಅನುಕಂಪವನ್ನು ಪಡೆಯುವಷ್ಟು ಆತ್ಮೀಯ ವಾಗುತ್ತಿದ್ದವು. ಆ ಸ್ಯಾಮ್‌ವೆಲ್ಲರ್, ಆಲ್ಫ್ರೆಡ್ ಜಿಂಗಲ್, ಆಲಿವರ್ ಟ್ವಿಸ್ಟ್,

ಬ್ರೌನ್ ಲೊ, ಬಂಬಲ್, ಡೇವಿಡ್ ಕಾಫರ್ ಫೀಲ್ಡ್, ಜಿಪುಣ ಸ್ಕ್ರೂಜ್– ಇಂದೂ ನಮ್ಮ ಜನರ ಗುಂಪಿನಲ್ಲಿ, ಜೀವನದಲ್ಲಿ ಕಾಣಸಿಗುವರು.

ಡೇವಿಡ್ ಕಾಪರ್ ಫೀಲ್ಡ್ ಡಿಕನ್ಸನ ಅಮೋಘ ಕೃತಿ. ಆತನ ಬಾಳು, ಅದರ ಕಷ್ಟ, ಸುಖ, ಕಾದಂಬರಿಯ ಕಾಪರ್ ಫೀಲ್ಡ್‌ನ ಜೀವನದಲ್ಲಿ ಹಾಸುಹೊಕ್ಕಾಗಿ ನೇಯಲ್ಪಟ್ಟಿದೆ. ಒಂದು ರೀತಿಯಲ್ಲಿ ಡಿಕನ್ಸನ ಆತ್ಮಕತೆಯೇ ಕಾದಂಬರಿಯಾಗಿರುವಂತೆ ಕಾಣುತ್ತದೆ. ಟೇಲ್ ಆಫ್ ಟು ಸಿಟೀಸ್, ಫ್ರೆಂಚ್ ಮಹಾಕ್ರಾಂತಿಯ ಕಾಲದ ವ್ಯಕ್ತಿಯೊಬ್ಬನ ಧೀರೋದಾತ್ತತೆ, ಆತ್ಮಬಲಿದಾನದ ಹೃದಯ ವಿದ್ರಾವಕ ಕತೆ, ಎದೆನಡುಗಿಸುವ, ರೋಮಾಂಚಕಾರಕ ಪುಸ್ತಕ.

ಇವು ಅವನ ಹೆಸರಾದ ಅಮರಕೃತಿಗಳು.

"ಕಾವ್ಯ ಜೀವನದ ವಿಮರ್ಶೆ" ಎಂದ ವಿಮರ್ಶಕ ಆರ್ನಾಲ್ಡ್; ನಿಜ. ಈ ಮಾತು ಕಾದಂಬರಿ ವಿಷಯಕ್ಕೆ ಹೆಚ್ಚು ಸಮಂಜಸವಾಗಿ ಅನ್ವಯಿಸುತ್ತದೆ. ಕಾದಂಬರಿಯಲ್ಲಿ ಆ ಕಾಲದ ಜನಜೀವನದ ಪ್ರತಿಫಲನ ಮಾತ್ರವಲ್ಲ ಅದರ ವಿಮರ್ಶೆಯಂತಹ ಚಿತ್ರ ಬರಬೇಕು. ವಿಕ್ಟೋರಿಯನ್ ಕಾಲ ವಾಣಿಜ್ಯ, ಕೈಗಾರಿಕೆಗಳ ಅಭ್ಯುದಯದ ಸಂಪದ್ಯುಕ್ತವಾದ ಕಾಲ, ಸಾಮ್ರಾಜ್ಯದ ಉನ್ನತ ವೈಭವಕಾಲ, ಬೆಡಗು ಆಡಂಬರಗಳ ನಾಗರಿಕ ಕಾಲ ಎಂದು ನಾನಾ ವಿಧವಾಗಿ ನಾನಾ ರಾಗಗಳಲ್ಲಿ ಹಾಡಲ್ಪಟ್ಟಿದೆ. ಸಾಮ್ರಾಜ್ಯಶಾಹಿಯ ವಣಿಕ ಶ್ರೀಮಂತ ನಾಗರಿಕರ ಸುಖ ವೈಭವದ ಜೀವನ ಕಣ್ಣು ಕುಕ್ಕುವಂತಿತ್ತು ನಿಜ. ಆದರೆ ಅದು ಆ ಕಾಲದ ಸಮಗ್ರ ಜೀವನದ ಒಂದು ಮುಖ ಅಷ್ಟೆ. ಆ ಸುವರ್ಣಯುಗದಲ್ಲೇ ಆಲಿವರ್ ಟ್ವಿಸ್ಟ್ ಅಷ್ಟು ಎಳೆಯ ವಯಸ್ಸಿನಲ್ಲಿ ಧೂಳೀಮಯ ರಸ್ತೆಯಲ್ಲಿ ಎಪ್ಪತ್ತು ಮೈಲಿ ನಡೆದು ಲಂಡನ್ ಸೇರಿದುದು. ದಾರಿಯಲ್ಲಿನ ಹಳ್ಳಿ ಹಳ್ಳಿಗಳಲ್ಲೂ ಅವನಿಗೆ ಭಯ. 'ಭಿಕ್ಷೆ ಬೇಡುವವರನ್ನೆಲ್ಲ ಜೇಲಿಗೆ ಕಳಿಸುವ' ಎಚ್ಚರಿಕೆಯ ಹಲಗೆಗಳು ಎಲ್ಲೆಲ್ಲೂ ಇದ್ದವು. ಹರುಕು ಬಟ್ಟೆಯ, ದೂಳು ಮುಳುಗಿದ, ಬೇಗುದಿಗೊಂಡು, ನಡೆದು ಬಳಲಿದ ಮುಖದ ಕಿರಿಯ ಈ ಮುಗ್ಧ ಹುಡುಗನನ್ನು, ಚರ್ಚಿಗೆ ಹೋಗುತ್ತಿದ್ದ ನಾಗರಿಕ ಕೋಮಲೆಯರು ಕಳ್ಳನೆಂದು ಶಂಕೆ ಭಯಗಳಿಂದ ದುರುಗುಟ್ಟಿ ನೋಡಿದರು. ಲಂಡನ್ನಿನ ಮುಕ್ಕಾಲುಪಾಲು ಬೀದಿಗಳೆಲ್ಲ ಹೊಲಸು ಕೊಚ್ಚೆ ತುಂಬಿದ, ಅನಾರೋಗ್ಯಕರವಾದ ಹೀನಸ್ಥಿತಿಯಲ್ಲಿದ್ದವು. ಅಲ್ಲಿ ಹಂದಿಗಳಂತೆ ಗಾಳಿ ಬೆಳಕಿನ ಉಚಿತ ಸುಖವೂ ಇಲ್ಲದೆ ಬಾಳುತ್ತಿದ್ದ ಬಡವರ ತಂಡ. ತಮ್ಮ ಹೀನಸ್ಥಿತಿಯ ಅರಿವೇ ಇಲ್ಲದಷ್ಟು ಅಜ್ಞಾನತಮ ಸುತ್ತಿದ್ದ ದೀನಜನ. ಕಾರ್ಖಾನೆಗಳಲ್ಲಿ, ಗಣಿಗಳ ಕತ್ತಲು ತುಂಬಿ ಉಸಿರುಕಟ್ಟುವ ಆಳಗಳಲ್ಲಿ ನಾಲ್ಕು ಐದು ವರ್ಷದ ಎಳೆಯ

ಮಕ್ಕಳೂ ಕೆಲಸಮಾಡುತ್ತಿದ್ದ ನಿರ್ದಯಸ್ಥಿತಿಯೂ ಆಗ ಇತ್ತು. ಅನಾಥಾಲಯಗಳು, ಜೇಲುಗಳು, ಶಾಲೆಗಳು, ಎಲ್ಲ ಒಂದೇ ಅಚ್ಚಿನಲ್ಲಿ 'ಹೊಯ್ದಿಟ್ಟ ನರಕಪ್ರದೇಶಗಳಾಗಿದ್ದವು. ಎಷ್ಟೊಂದು ಅನ್ಯಾಯ, ಹಸಿವು, ಅವಮಾನ, ತಿರಸ್ಕಾರಗಳನ್ನು ಸಹಿಸಬೇಕಾಗಿತ್ತು ಆ ಬಡಜನ!

ವಿಕ್ಟೋರಿಯನ್ ವೈಭವಯುಗದ ಜನಜೀವನದ ಮತ್ತೊಂದು ಮುಖ ಇದು. ಆದರೆ ಈ ಮುಖವೇ ತುಂಬ ದೊಡ್ಡದು. ಬೇರೆಬೇರೆಯಾಗಿ ಎರಡೂ ಜನಜೀವನದ ಅಪೂರ್ಣ ನೋಟಗಳೇ. ಆ ಶ್ರೀಮಂತ ಜೀವನದ ಚಿತ್ರ ಥ್ಯಾಕರೆಯ ಕಾದಂಬರಿಗಳಲ್ಲಿ ಕಾಣಸಿಕ್ಕುವುದು. ಬಹು ಸಂಖ್ಯಾತ ಬಡವರ ಗೋಳಿನ ಬಾಳು ಸಮಾಜದ—ಸರ್ಕಾರದ—ಕ್ರೂರ ನಿರ್ಲಕ್ಷ್ಯತೆ, ಅನಾಥರೂ ದಲಿತರೂ ಆಗಿದ್ದ ಮಕ್ಕಳಿಗೆ ಇದ್ದ ವಿಷಮಸನ್ನಿವೇಶಗಳು ಇವನ್ನೆಲ್ಲ ಕರುಣಾಜನಕವಾಗಿ ಚಿತ್ರಿಸಿದ ಆ ಯುಗದ ಜೀವನ ಡಿಕನ್ಸನ ಕಾದಂಬರಿಗಳ ಉದ್ದಕ್ಕೂ ಹರಿಯುತ್ತದೆ. ಸಮಾಜದ ಲೋಪದೋಷಗಳು, ವ್ಯಕ್ತಿಗಳ ನಡೆನುಡಿ, ರೀತಿ ನೀತಿಗಳಲ್ಲೇ ಇದ್ದ ವಿರೂಪತೆ, ಅವಗುಣ ಎಲ್ಲಕ್ಕೂ ಕನ್ನಡಿ ಹಿಡಿದು ಎತ್ತಿ ತೋರಿಸಿದ, ಡಿಕನ್ಸ್. ಅದು ಬರಿಯ ನಿಷ್ಫಲ ವರದಿಯಾಗಲಿ, ಕಟುವಾದ ಟೀಕೆಯಾಗಲಿ ಆಗಲಿಲ್ಲ. ತುಂಬ ಪರಿಣಾಮಕಾರಿಯಾದ ಸಹೃದಯನ ಸಹಾನುಭೂತಿಯ ವಿಮರ್ಶೆಯಂತಾಯಿತು. ಡಿಕನ್ಸನ ಹೆಚ್ಚಳ ಇರುವುದು ಇಲ್ಲಿಯೇ. ತುಟಿಯ ಮೇಲೆ ನಗು ಮಿಂಚುತ್ತಿರುವಂತೆಯೇ ಆ ನಗೆಯ ಕೊಂಕಿನಿಂದಲೇ ಲೋಕದ ಡೊಂಕನ್ನು ತಮಾಷೆಮಾಡಿ ಆ ಜನರನ್ನೆ ನಗಿಸಿ ತಮಗೆ ತಾವೇ ಸುಧಾರಿಸುವಂತೆ ಮಾಡಿದ. ಅವನ ಹಾಸ್ಯದ ಅಗಾಧ ಮಾಯಾಶಕ್ತಿ ಅಂತಹದು. ಕಷ್ಟದಲ್ಲಿರುವವರನ್ನು ಕಂಡರೆ ಅವನಿಗೆ ಅಪಾರ ಕರುಣೆ. ಅದು ತಾನೂ 'ಆಡಿದ ಹೊಲ ಉಂಡ ಮದ್ದು' ಅಲ್ಲವೆ? ಅದಕ್ಕಾಗಿಯೇ ಆತ ಬಡವರ ನಿಜವಾದ ಬೆಂಬಲಿಗನಾದ.

ಡಿಕನ್ಸ್ ತನ್ನ ಭಾಗ್ಯದ ಮೆಟ್ಟಿಲೇರ ತೊಡಗಿದ. ವಿಖ್ಯಾತ ಸಾಹಿತಿ ಎನಿಸಿದ. ಸಂಪತ್ತು ಬೆಳೆಯಿತು. ೪೪ ನೇ ವಯಸ್ಸಾಗುವ ವೇಳೆಗೆ ಅವನ ಬಹುದಿನದ ಬಯಕೆ, ಗ್ಯಾಡ್ಸ್‌ಹಿಲ್ ಬಂಗಲೆಯನ್ನು ಕೊಂಡು ಅದರಲ್ಲಿ ವಾಸಿಸುವ ಕನಸು, ಪೂರ್ಣಗೊಂಡಿತು. ಆ ಹಳೆಯ ಭವ್ಯ ಪ್ರಾಸಾದದ ಶ್ರೀಮಂತ ಧಣಿ ಬಡವರನ್ನೆಂದೂ ಮರೆಯಲಿಲ್ಲ. ಎಲ್ಲ ವಿಧದಲ್ಲೂ ಅವರಿಗೆ ಸಹಾನುಭೂತಿಯಿಂದ ನೆರವಾಗುತ್ತಿದ್ದನು. ಬಡವರ ಸ್ಥಿತಿಯನ್ನು ಉತ್ತಮಪಡಿಸುವುದಕ್ಕೆ, ಸಮಾಜ ಸುಧಾರಣೆಗೆ ಆತನ ಬರೆಹದ ಪ್ರಭಾವ ತುಂಬ ಕಾರಣವಾಯಿತು.

ಡಿಕನ್ಸ್ ಸದಾ ಕರ್ಮನಿರತ—ಬರೆಯುವ ಕೆಲಸವಲ್ಲದೆ ಬರೆದುದನ್ನು ಅನೇಕ ಕಡೆ ಹೋಗಿ ಅಭಿನಯಪೂರ್ವಕ ಓದುತ್ತಿದ್ದ. ಜನ ಕಿಕ್ಕಿರಿದು ಕೇಳಿ ಆನಂದಿಸು

ತ್ತಿದ್ದರು. ಕಿರಿಯತನದ ಕಷ್ಟದಿಂದ ಬಳಲಿ ಮೊದಲೇ ದುರ್ಬಲವಾಗಿದ್ದ ಅವನ ದೇಹ ಲೇಖನ, ಪಠನಗಳ ಅವಿಶ್ರಾಂತ ಕಾರ್ಯಗಳಿಂದ ಮತ್ತಷ್ಟು ಕುಸಿಯಿತು. ಆರೋಗ್ಯ ಹದಗೆಟ್ಟಿತು. ಅಷ್ಟೊಂದು ಭಾವಾತಿರೇಕ, ಚಿಂತೆ, ಅವಿರಾಮಶ್ರಮ ಅವನ ಅಕಾಲಮರಣಕ್ಕೆ ಅನುಕೂಲವಾದವು.

೧೮೭೦ ನೇ ಮಾರ್ಚ್ ೧೬ ನೇ ತಾರೀಖು ರಾತ್ರಿ ಡಿಕನ್ಸನ ಗೌರವಾರ್ಥದ ದೊಡ್ಡ ಸತ್ಕಾರ ಸಮಾರಂಭವಿತ್ತು. ಲಂಡನ್ನಿನ ಭವ್ಯ ವಿಶಾಲಮಂದಿರ ಒಂದರಲ್ಲಿ ಲಕ್ಷಾಂತರ ಜನ ಮಹಾರಾಣಿ ಸಹಿತ—ತಮ್ಮ ಪ್ರಿಯ ಕತೆಗಾರನನ್ನು ರಾಷ್ಟ್ರದ ಸಾಹಿತಿ ಎಂಬ ಗೌರವದಿಂದ ಆದರಿಸಲು ಸಂದಣಿಸಿದ್ದರು. ಪ್ರಕಾಶಯುತವಾದ ಬೆಳಕಿನ ದೀಪಗಳ ಸಾಲು, ಆ ಅಲಂಕಾರ, ತೋರಣ ಕೋರೈಸುವಂತಿತ್ತು. ತನ್ನ ಒಲುಮೆಯ ನಾಡಜನ ತೋರಿಸುತ್ತಿದ್ದ ಅಮಿತ ವಿಶ್ವಾಸ ಗೌರವಗಳಿಗಾಗಿ ಡಿಕನ್ಸನ ಭಾವುಕಹೃದಯ ತುಂಬಿಬಂದಿತು. ಅವನ ಸಹಜ ವಾಕ್ಚತುರಿ ಎಲ್ಲಿ ಹೋಯಿತೋ—ಗಂಟಲು ಕಟ್ಟಿ ಮಾತೇ ಹೊರಡದಾಯಿತು. ಹಾಗೂ ಹೀಗೂ ಮಾಡಿ ವೇದಿಕೆಯ ಮೇಲೆ ಬಂದು ಕೆಲವೇ ಮಾತು—ಕೊನೆಯ ಮಾತು ಹೇಳಿ ತನ್ನ ಕೃತಜ್ಞತೆಯನ್ನು ವಿನಯದೊಪ್ಪದಲ್ಲಿಟ್ಟು ಸೂಚಿಸಿದ.

"ನಿಮ್ಮೆಲ್ಲರಿಗೂ ಹೃತ್ಪೂರ್ವಕವಾಗಿ, ಕೃತಜ್ಞತೆಯ, ಗೌರವದ, ವಾತ್ಸಲ್ಯ ಪೂರ್ಣ ವಂದನೆಗಳನ್ನರ್ಪಿಸಿ ಬೀಳ್ಕೊಂಡು ಈ ಪ್ರಜ್ವಲಿಸುವ ದೀಪ ಪ್ರಕಾಶದಿಂದ ಈಗ ಮತ್ತೆ ಎಂದೆಂದಿಗೂ ಮರೆಯಾಗುತ್ತೇನೆ."

ಆ ರಾತ್ರಿ ಇಂಗ್ಲಿಷ್ ಜನತೆಗೂ ಅವರ ಮೆಚ್ಚಿನ ಡಿಕನ್ಸ್‌ನಿಗೂ ಈ ಹದಿನೈದು ವರ್ಷಗಳಲ್ಲಿ ಬೆಳೆದ ಆತ್ಮೀಯ ಸಂಬಂಧವನ್ನು ಪೂರ್ಣಗೊಳಿಸಿತು.

ಡಿಕನ್ಸ್ ಲಂಡನ್ನಿನ ಗದ್ದಲದಿಂದ ತನ್ನ ಪ್ರಿಯ ಗ್ಯಾಡ್ಸ್‌ಹಿಲ್ ಬಂಗಲೆಯ ಶಾಂತವಾತಾವರಣ ಬಯಸಿ ಹಿಂತಿರುಗಿದ್ದ. ತುಂಬ ವಿಶ್ರಾಂತಿ ಅಗತ್ಯವಿತ್ತು. ಆದರೆ ಅವನ ಗಮನವೆಲ್ಲ ತನ್ನ ಅರೆಮುಗಿದ "ಮಿಸ್ಟರಿ ಆಫ್ ಎಡ್ವಿನ್ ಡ್ರೂಡ್" ಹೊಸ ಕಾದಂಬರಿಯನ್ನು ಬೇಗ ಮುಗಿಸುವ ಕಾರ್ಯದ ಕಡೆಗೇ ಇತ್ತು. ಅದು ತನ್ನ ಮಹಾಕೃತಿಯೆನಿಸಿಕೊಳ್ಳುವುದೆಂಬ ಆಶಯ. ಜೂನ್ 9 ನೇ ತಾರೀಖು ಹಗಲೆಲ್ಲ ಆ ಕಾದಂಬರಿಯ ಕೆಲವು ಹೊಸ ಅಧ್ಯಾಯಗಳನ್ನು ಬರೆಯುವುದರಲ್ಲೇ ಕಳೆದ. ಸಂಜೆ ಆರು ಗಂಟೆಗೆ ಇದ್ದಕ್ಕಿದ್ದಂತೆ ಅವನ ದೇಹಸ್ಥಿತಿ ಹದಗೆಟ್ಟಿತು. ನೆಲದ ಮೇಲೆ ಬಿದ್ದಿದ್ದ ಆತನನ್ನು ಸೋಫಾದ ಮೇಲೆ ಎತ್ತಿ ಮಲಗಿಸಲು ಪಟ್ಟ ಪ್ರಯತ್ನ ಗಳೆಲ್ಲ ನಿಷ್ಫಲವಾದವು. 'ನೆಲದಮೇಲೆ' ಎಂದು ಗೊಣಗಿದ—ಕೆಲವು ನಿಮಿಷ ಗಳಲ್ಲಿಯೇ ಪ್ರಜ್ಞೆ ಬರುವ ಮುಂಚೆಯೇ ಕೀರ್ತಿ ವೈಭವಗಳಿಗಿಂತ ಹೆಚ್ಚಿನ ಘನತೆ

ಯನ್ನು ಪಡೆಯಲು ಅವನ ಆತ್ಮ ಮುಕ್ತವಾಯಿತು. ಸಹಸ್ರಾರು ಮನೆಗಳಲ್ಲಿ ಯಾರೋ ಪ್ರಿಯ ಬಂಧುವೇ ತೀರಿಹೋದಷ್ಟು ದುಃಖ ತುಂಬಿತು. ಸಾಧಾರಣ ಜನ, ಬಡವರು, ಭಿಕ್ಷುಕರು, ಮಕ್ಕಳು, ಅನಾಥರು, ಖೈದಿಗಳು ತಾರತಮ್ಯವಿಲ್ಲದೆ ಎಲ್ಲರೂ ಕಣ್ಣೀರ್ಗರೆದರು. ಇಡೀ ರಾಷ್ಟ್ರ—ಸಾಹಿತ್ಯಪ್ರಪಂಚ ಈ ದೊಡ್ಡ ನಷ್ಟಕ್ಕಾಗಿ ಶೋಕಿಸಿತು.

ರಾಷ್ಟ್ರಕವಿಗೆ ಯೋಗ್ಯವಾದೆಲ್ಲ ಗೌರವ ಸನ್ಮಾನಗಳಿಂದ ಆ ಮಹಾವ್ಯಕ್ತಿಯ ಕಳೇಬರವನ್ನು ನಿರಾಡಂಬರ ಶಾಂತಯಾತ್ರೆಯಲ್ಲಿ ಒಯ್ದು ವೆಸ್ಟ್‌ಮಿನ್‌ಸ್ಟರ್ ಅಬ್ಬೆಯಲ್ಲಿ ಸಮಾಧಿ ಮಾಡಿದರು.

"No death since 1866" wrote Carlyle referring to that of his wife, "has fallen on me with such a stroke. The good, the gentle, high gifted, ever friendly and noble Dickens—every inch of him an honest man."

ಅತಿ ಗಂಭೀರನೂ ಭಾವಸಂಯಮಿಯೂ, ವಿಚಾರಶೀಲನೂ ಆದ ಕಾರ್ಲೈಲ್‌ನ ದುಃಖದಿಂದುಮ್ಮಳಿಸಿ ಬಂದ ಮಾತುಗಳಿವು !

ಮಾನವಸ್ವಭಾವ ಎಷ್ಟೇ ರೂಕ್ಷವಾಗಿ ಕಂಡರೂ ಅದರಲ್ಲಿ ಮೆಚ್ಚುವಂತಹ ಅನೇಕ ಮೃದುಗುಣಗಳಿವೆ; ನಮ್ಮಲ್ಲಿ ಅನೇಕ ಬಗೆಯ ದೋಷಗಳಿವೆ; ಅವನ್ನು ನಗುತ್ತಲೇ ನಿವಾರಿಸಿಕೊಳ್ಳಬೇಕು; ಮಾನವಹೃದಯದ ಅಮೂಲ್ಯ ಭಾವಗಳಾದ ಪ್ರೀತಿ, ಕರುಣೆ, ಔದಾರ್ಯ ಇವನ್ನು ಬೆಳೆಸಿಕೊಳ್ಳುವುದೇ ಜೀವಸಂಸ್ಕಾರ; ಇವು ಡಿಕನ್ಸನ ಸಾಹಿತ್ಯನಂದನದ ಕೆಲವು ಮಂದಾರಹೂಗಳು. ಅವನ ಜೀವನಗೀತೆಯ ಮುಖ್ಯ ಪಲ್ಲವಿ. ಆ ಕಂಪು, ಆ ಇಂಪು ಇಂದಿಗೂ ಅವನ ಕೃತಿಗಳಲ್ಲಿ ಉಳಿದು ಬಂದು ಜನಮನದ ಪ್ರಿಯ ಕತೆಗಾರನೆನ್ನಿಸಿ ಡಿಕನ್ಸನನ್ನು ಬದುಕಿಸಿವೆ.

—ಪ್ರಭುಪ್ರಸಾದ.

ಕಾವ್ಯಾವಲೋಕನ

ಜೋಸೆಫ್ ಸ್ಟ್ಯಾಲಿನ್—ಲೇ|| ಶ್ರೀಮತಿ ಇಂದಿರಾ ಶ್ರೀಕಂಠಯ್ಯ, ಎಂ.ಎ. ; ಪೀಪಲ್ಸ್ ಬುಕ್ ಹೌಸ್, ಜಗನ್ಮೋಹನ ಅರಮನೆ ಎದುರು, ಮೈಸೂರು ; ಬೆಲೆ, ರೂ. ೧.

ಪ್ರಪಂಚದ ರಾಜಕೀಯ ಮುಂದಾಳುಗಳ ಪಂಕ್ತಿಯಲ್ಲಿ ಸ್ಟ್ಯಾಲಿನ್ನನ ಹೆಸರು ಅಗ್ರಮಾನ್ಯವಾದುದು. ಈಗ್ಗೆ ೩೫ ವರ್ಷಗಳ ಹಿಂದೆ 'ಹೊಲಗೇರಿ' ಯಂತಿದ್ದ ಪ್ರಜಾಸಮುದಾಯವನ್ನು ಚೇತನಗೊಳಿಸಿ ಅವರ ಆರ್ಥಿಕ ಮತ್ತು ಸಾಂಸ್ಕೃತಿಕ ಮಟ್ಟವನ್ನು ಸುಧಾರಿಸಿ ಸ್ಟ್ಯಾಲಿನ್ ರಷ್ಯಾದೇಶದ ರಾಷ್ಟ್ರಪಿತನೆಂದು ಅಮರ ಕೀರ್ತಿ ಗಳಿಸಿದನು. ೧೯೧೭ರ ರಾಜ್ಯ ಕ್ರಾಂತಿಯ ಮುನ್ನ ಆ ದೇಶದ ಸ್ಥಿತಿ ತುಂಬ ಹದ ಗೆಟ್ಟಿತ್ತು. ಅಂತಹ ಪ್ರತಿಗಾಮಿ ಸಮಾಜ ವ್ಯವಸ್ಥೆಯ ವಿರುದ್ಧ ಹೋರಾಡಿ ದೇಶ ವನ್ನು ಹೊಸ ಆರ್ಥಿಕ ತಳಹದಿಯ ಮೇಲೆ ನಿಲ್ಲುವಂತೆ ಮಾಡಿದ ಸ್ಟ್ಯಾಲಿನ್ನನ ಸಾಹಸ ಅಪ್ರತಿಮವಾದುದು. ರಾಷ್ಟ್ರದ ಒಳಹೋರಾಟಗಳನ್ನು ಹತ್ತಿಕ್ಕಿ ತನ್ನ ಮುಖಂಡತ್ವ ವನ್ನು ಪ್ರಸ್ಥಾಪಿಸಲು ಸ್ಟ್ಯಾಲಿನ್ ರಕ್ತದ ಹೊಳೆಗಳನ್ನು ದಾಟಬೇಕಾಯ್ತು. ತಾನು ಅಧಿಕಾರಕ್ಕೆ ಬಂದ ತರುವಾಯ ರಾಷ್ಟ್ರೋದ್ಧಾರ ಕಾರ್ಯಗಳನ್ನು ಕೈಗೊಂಡು ಒಕ್ಕಲುತನ, ಶಿಕ್ಷಣ, ಉದ್ದಿಮೆ ಮುಂತಾದ ವಿವಿಧ ರಂಗಗಳಲ್ಲಿ ಅನುಪಮವಾದ ಪ್ರಗತಿಯನ್ನು ಸಾಧಿಸಲು ನೆರವಾದನು. ಸಾಮ್ಯವಾದದ ಸಮಾಜರಚನೆಗೆ ದುಡಿದನು. ಮಿಂಚಿನ ವೇಗದಲ್ಲಿ (ಸ್ಟ್ಯಾಲಿನ್ ನಾಯಕತ್ವದಲ್ಲಿ) ರಷ್ಯ ಸಾಧಿಸಿದ ಅಭ್ಯುದಯವನ್ನು ಕಂಡು ಪಾಶ್ಚಾತ್ಯ ಪ್ರಜಾಸತ್ತಾತ್ಮಕ ದೇಶಗಳು ಕಣ್ತೆರದವು ; ರಷ್ಯಾದ ಸಾಧನೆ ಗಳನ್ನು ವೀಕ್ಷಿಸಿ ಬೆರಗುಗೊಂಡವು. ರಾಜಕೀಯ ಟೀಕಾಕಾರರು ಸ್ಟ್ಯಾಲಿನ್ನನ ಆರ್ಥಿಕ ಪ್ರಯೋಗವು ಪ್ರಜಾಸತ್ತೆಯ ಮೇಲೆ ಹಾಕಿದ ಸವಾಲ್ ಎಂದು ಭಾಷ್ಯ ಬರೆಯಲಾರಂಭಿಸಿದರು.

ಇಂತಹ ಅದ್ಭುತವಾದ ಪ್ರಗತಿಯ ಕಾರ್ಯದಲ್ಲಿ ಮಗ್ನವಾಗಿ ಮುನ್ನಡೆಯಿಡು ತ್ತಿದ್ದ ತರುಣರಾಷ್ಟ್ರಕ್ಕೆ ಹಿಟ್ಲರನ ಮುತ್ತಿಗೆಯಿಂದ ಮಹಾ ವಿಪತ್ತೇ ಸಂಭವಿಸಿತು. ರಷ್ಯಾವು ಅಳಿವು-ಉಳಿವಿನ ನಿರ್ಣಾಯಕವಾದ ಈ ಕದನದಲ್ಲಿ ಬದುಕುವುದು ಶಕ್ಯ ವಿಲ್ಲ ಎಂಬುವ ಪರಿಸ್ಥಿತಿಯಲ್ಲಿ ಸ್ಟ್ಯಾಲಿನ್ನನ ದಿಟ್ಟ ಮಾರ್ಗದರ್ಶನದಲ್ಲಿ ಅಜೇಯ ವಾಗಿದ್ದ ಹಿಟ್ಲರನ ಸೈನ್ಯ ಹಿಮ್ಮೆಟ್ಟಬೇಕಾಯ್ತು ; ಮಹಾ ಗಂಡಾಂತರದಿಂದ ಸ್ಟ್ಯಾಲಿನ್ ಸ್ವದೇಶವನ್ನು ಕಾಪಾಡಿದನು. ಜರ್ಮನಿ ಮತ್ತು ಜಪಾನುಗಳ ಪರಾಭವದ

ತರುವಾಯ ಪ್ರಪಂಚದ ರಾಜಕೀಯ ಘಟನಾವಳಿಗಳಲ್ಲಿ ಸ್ಟಾಲಿನ್ನನು ಮಹತ್ತರವಾದ ಪಾತ್ರವಹಿಸಿ, ೭೪ ನೆಯ ತುಂಬುವಯಸ್ಸಿನಲ್ಲಿ ೫ ನೆಯ ಮಾರ್ಚ್ ೧೯೫೩ ರಲ್ಲಿ ಕಾಲವಾದನು. ಪ್ರಪಂಚದ ಅನೇಕ ನಾಯಕರು ತಮ್ಮ ತಮ್ಮ ಶ್ರದ್ಧಾಂಜಲಿಗಳನ್ನು ಅರ್ಪಿಸಿದರು.

ಪ್ರತಿಭಾಶಾಲಿ ಯುಗಪುರುಷನೂ ರಷ್ಯಾ ರಾಷ್ಟ್ರೋದ್ಧಾರಕನೂ ಆದ ಸ್ಟಾಲಿನ್ನನ ಜೀವನವನ್ನು ಲೇಖಕಿಯರು ಈ ಪುಸ್ತಕದಲ್ಲಿ ಚೆನ್ನಾಗಿ ಚಿತ್ರಿಸಿದ್ದಾರೆ. ಇದು ಕೇವಲ ಸ್ಟಾಲಿನ್ನನ ಜೀವನಕತೆಯಾಗಿರದೆ ಸಾಮ್ಯವಾದ ತತ್ವ ನಿರೂಪಣಾಗ್ರಂಥವಾಗಿದೆ. ಪುಸ್ತಕದಲ್ಲಿ ಸ್ಟಾಲಿನ್ನನ ಜೀವನದ ಅನೇಕ ಮುಖ್ಯ ಘಟ್ಟಗಳನ್ನು ಸೂಚಿಸುವ ಚಿತ್ರಗಳನ್ನು ಪ್ರಕಟಿಸಿರುವುದು ಪುಸ್ತಕದ ಉಪಯುಕ್ತತೆಯನ್ನು ಹೆಚ್ಚಿಸಿದೆ. ಇಷ್ಟಾದರೂ ಪುಸ್ತಕದ ಬೆಲೆ ಒಂದು ರೂಪಾಯಿ ಮಾತ್ರ. ಪುಸ್ತಕದ ಕೊನೆಯಲ್ಲಿ ಕೆಲವು ಪಾರಿಭಾಷಿಕ ಪದಗಳ ಅರ್ಥವಿವರಣೆಯ ಪಟ್ಟಿಯನ್ನು ಕೊಟ್ಟಿದ್ದರೆ ಇನ್ನೂ ಚೆನ್ನಾಗಿರುತ್ತಿತ್ತು. ಒಟ್ಟಿನಲ್ಲಿ ಶ್ರೀಮತಿ ಇಂದಿರಾ ಶ್ರೀಕಂಠಯ್ಯನವರ ಈ ಕೃತಿ ಕನ್ನಡ ರಾಜಕೀಯ ಸಾಹಿತ್ಯಕ್ಕೆ ಅಪೂರ್ವ ಮತ್ತು ವಿನೂತನ ಕಾಣಿಕೆ. ಲೇಖಕಿಯರ ಪ್ರಥಮ ಕೃತಿಗಾಗಿ ಅವರನ್ನು ಅಭಿನಂದಿಸಿ ಅವರು ಇನ್ನೂ ಅನೇಕ ಕೃತಿ ಮಾಲೆಗಳನ್ನು ಕಟ್ಟಿ ಕನ್ನಡ ರಾಜಕೀಯ ಸಾಹಿತ್ಯವನ್ನು ಬೆಳಸಲೆಂದು ಹಾರೈಸುತ್ತೇವೆ.

—ಗ. ಸ. ಹಾಲಪ್ಪ.

***

ಹೊಸ ಬೆಳಕು (ಕಥಾಸಂಗ್ರಹ)—ಲೇಖಕರು : ಶ್ರೀ ವೆಂ. ಮು. ಜೋಶಿ ; ಪ್ರಕಾಶಕರು: ಪ್ರತಿಭಾ ಗ್ರಂಥಮಾಲೆ, ಧಾರವಾಡ.

ಇಂದಿನ ಸಾಹಿತ್ಯಲೋಕದಲ್ಲಿ ಸಣ್ಣ ಕಥೆಗಳು ಜಾತ್ರೆಗಳಲ್ಲಿ ಕಾಣುವ ಮಕ್ಕಳುಗಳಂತೆ, ಬಣ್ಣಬಣ್ಣವಾಗಿ, ಬಹುಸಂಖ್ಯಾತವಾಗಿ ಮೂಡಿಬರುತ್ತಿವೆ. 'ಚಿನ್ನದ ಪದಕ'ದ ಮೂಲಕ ಕನ್ನಡ ಕಥಾಲೋಕಕ್ಕೆ ಪರಿಚಿತರಾದ ಶ್ರೀ ವೆಂ. ಮು. ಜೋಶಿಯವರ ಇನ್ನೊಂದು ಕಥಾಸಂಕಲನ ಈ 'ಹೊಸ ಬೆಳಕು'. ಸೈನ್ಯದಲ್ಲಿ ಸೇರಿ, ವಿದೇಶ ಪರ್ಯಟನಮಾಡಿ, ಅಲ್ಲಿ ಪಡೆದ ಅನುಭವಗಳನ್ನು, ಕಂಡ ದೃಶ್ಯಗಳನ್ನು, ಕೇಳಿದ ಸಂಗತಿಗಳನ್ನು ಸ್ವಾಭಾವಿಕ ಸಾಹಿತ್ಯಪ್ರಿಯರಾದ ಶ್ರೀ ಜೋಶಿಯವರು ತಮ್ಮ ಮೊದಲನೇ ಸಂಗ್ರಹದಲ್ಲಿ ಕೊಟ್ಟಂತೆ, ಇಲ್ಲಿಯೂ ಕೆಲವು ಕಥೆಗಳಲ್ಲಿ ಆ ಅನುಭವಗಳನ್ನು ನಿರೂಪಿಸಿದ್ದಾರೆ. ಇಲ್ಲಿನ ಒಂಬತ್ತು ಕಥೆಗಳಲ್ಲಿ ಪ್ರೇಮ, ದೀನ-ದಲಿತ, ದಾಸ-

ಈಶ ಸಂಬಂಧಗಳ ಸಾಮ್ಯ, ವೈಷಮ್ಯಗಳ ಚಿತ್ರಣವೇ ಇದೆ. ಸಾಮಾನ್ಯರು ಕಾಣಲಾರದ ಸೊಗಸನ್ನು, ಆದರ್ಶವನ್ನು ಸಾಮಾನ್ಯ ವಸ್ತು, ಘಟನೆಗಳಲ್ಲಿಯೇ ಕವಿಹೃದಯ ಕಾಣುವಂತೆ, ಎಲ್ಲರಿಗೂ ಪರಿಚಿತವಾದ ಸಮಸ್ಯೆಗಳನ್ನು ಎತ್ತಿಕೊಂಡರೂ, ತಮ್ಮ ಕಥನಕೌಶಲದಿಂದ, ನಿರೂಪಣಾಚಾತುರ್ಯದಿಂದ, ತಂತ್ರನಾವೀನ್ಯತೆಯಿಂದ ಅವಕ್ಕೆ ಒಂದು ಹೊಸ ಮೆರಗನ್ನು ತಂದಿದ್ದಾರೆ. ಹೊರದೇಶಗಳ ಸನ್ನಿವೇಶ, ಪಾತ್ರಗಳನ್ನು ಅಳವಡಿಸಿರುವುದು ಹಾಗೂ ಹೇಳುವ ವಿಷಯಗಳು ಮನದಟ್ಟಾಗುವಂತಹ ವರ್ಣನಾತ್ಮಕ ಶೈಲಿಯನ್ನು ಹೊಂದಿರುವುದು ಈ ಕಥೆಗಾರರ ವಿಶಿಷ್ಟ ಗುಣಗಳು. ಆದರೆ ಭಾಷಾಸ್ವಾಮ್ಯ ಹಾಗೂ ಪ್ರಸಾದಗುಣ ಸಾಲದೆನಿಸುತ್ತದೆ. ಉದಯೋನ್ಮುಖ ಕಥೆಗಾರರಾದ ಶ್ರೀ ಜೋಶಿಯವರ ಭವಿಷ್ಯಕ್ಕೆ ತ್ತಿದ ಕೈದೀವಿಗೆಗಳಂತಿವೆ ಈಗ ಬಂದಿರುವ ಕಥಾಸಂಗ್ರಹಗಳು.

ವಸ್ತು, ಪಾತ್ರ, ತಂತ್ರ, ಜೀವನದೃಷ್ಟಿ, ಈ ಎಲ್ಲ ಮುಖಗಳಿಂದ ವೀಕ್ಷಿಸಿದಾಗ ಈ ಸಂಕಲನದ 'ಹೊಸ ಬೆಳಕು' ಮತ್ತು 'ನಡುವಿನ ಪರದೆ' ಎಂಬ ಕಥೆಗಳು ಉತ್ತಮ ಮಟ್ಟದವು. ಇವೆರಡರಲ್ಲಿ ಪ್ರೇಮದ ಸಮಸ್ಯೆಯನ್ನು ಎತ್ತಿಕೊಂಡು, ಅದರ ಆದರ್ಶವೇನೆಂಬುದನ್ನು ಓದುಗರ ಹೃದಯಗೋಚರವಾಗುವಂತೆ ಚಿತ್ರಿಸಿದ್ದಾರೆ. 'ತುಂಬುಗೆನ್ನೆ, ಮಾಟವಾದ ಹಣೆ, ಹಣೆಯ ಸುತ್ತ ಇಳಿಬಿದ್ದ ರೇಶಿಮೆಯಂತಿರುವ ಉಂಗುರಗೂದಲು, ಪುಷ್ಟವಾಗಿ ಬೆಳೆದಿರುವ ಎದೆ, ಆಕರ್ಷಕವಾದ ಕಣ್ಣುಗಳು, ಪುಟಗೊಟ್ಟ ಚಿನ್ನದಂತಿರುವ ಮೈಬಣ್ಣ' ಮುಂತಾದ ರೂಪಮೋಹವೇ ಜೀವನದ ಸಾರಸರ್ವಸ್ವವೆಂಬ ನಂಬಿಕೆಯ ಕಾವಳದಲ್ಲಿದ್ದ ಲೀಲಾಬಾಯಿ, ಒಮ್ಮೆ ತಾನೇ ಒಪ್ಪಿ ಕೈಹಿಡಿದ ದೇಶಪಾಂಡೇ ಮಾಸ್ತರಿಗೆ ಬಸ್ಸಿನ ಅಪಘಾತವಾಗಿ, ಒಂದು ಕೈ, ಒಂದು ಕಾಲು ಮುರಿದು ವಿಕಾರವಾದನಂತರ, ಅವರು ಕೂಡಿಸಿಟ್ಟ ಹಣದಿಂದಲೇ ಅಭ್ಯಾಸ ಮಾಡಿ, ಗರ್ಲ್ಸ್ ಹೈಸ್ಕೂಲಿನ ಅಧ್ಯಾಪಕಿಯಾಗಿದ್ದರೂ ಪ್ರೇಮದ ಹಸಿವಿನ ತೃಪ್ತಿಗಾಗಿ ಎಲ್ಲೆಲ್ಲಿಯೋ ಅಲೆಯುತ್ತಿರುತ್ತಾರೆ. ಅದೇ ಶಾಲೆಯಲ್ಲಿ ಅಧ್ಯಾಪಕರಾಗಿದ್ದ ಮುಜುಮದಾರರ ಮೇಲೆ ಮನಸ್ಸು ಮೂಡಿತು. ಆದರೆ, ಅವರು ಕುರುಡಿಯೂ, ಕುರೂಪಿಯೂ ಆಗಿದ್ದ ತಮ್ಮ ಧರ್ಮಪತ್ನಿಯಲ್ಲಿಯೇ ನಿಶ್ಚಲಪ್ರೇಮಭರಿತರಾಗಿರುವುದನ್ನು ಕಂಡು, ಜಾರಲಿದ್ದ ಲೀಲಾಬಾಯಿ 'ಈ ಪ್ರೇಮವೆಂಬುದು ಬರಿಯ ರೂಪಮೋಹವಲ್ಲ. ಅದೊಂದು ಹೃದಯ ವೃತ್ತಿ' ಎಂಬ ಹೊಸ ಬೆಳಕನ್ನು ಕಂಡಾಗ, ಅವರ ವಿರಸ ಸಂಸಾರದಲ್ಲಿ ಕವಿದಿದ್ದ ಕತ್ತಲೆ ಮಾಯವಾಯಿತು. ಯೌವನದ ರೂಪಮೋಹ, ಮನೋಚಾಂಚಲ್ಯ, ಕೊನೆಗೆ ಆದರ್ಶ—ಇವುಗಳನ್ನು ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. 'ಹೃದಯ ಮೆಚ್ಚಿದ ವಸ್ತುಗಳೆಲ್ಲಾ ಸುಂದರವಾಗಿರುತ್ತವೆ'

ಎಂಬ ಟರ್ಕಿದೇಶದ ಕಥೆಯಲ್ಲಿ ಬರುವ ನಾಣ್ಣುಡಿಯ ಸುತ್ತ ಬೆಳೆದಿದೆ ಈ ಕಥೆ. ಅಲ್ಲದೆ, ಕಥೆಯನ್ನು ವಿವರಿಸುವುದಕ್ಕೆ ಅಳವಡಿಸಿಕೊಂಡ ತಂತ್ರ ಹಾಗೂ ಕಲ್ಪಿಸಿಕೊಂಡ ಸನ್ನಿವೇಶಗಳು, ಕಥೆ ಮನೋಜ್ಞವಾಗಲು ಸಹಾಯಮಾಡಿವೆ.

'ನಡುವಿನ ಪರದೆ' ಎಂಬ ಕಥೆಯಲ್ಲಿಯೂ ಇಂಥದೇ ಚಿತ್ರ. ಆದರೆ ಇಲ್ಲಿ ಪ್ರೇಮದ ಶಾಶ್ವತದರ್ಶನವನ್ನು ಪಡೆಯುವವರು ಕ್ಯಾಪ್ಟನ್ ನಾಯರ್. ಅವನು ಸುಂದರಿಯಾದ ನರ್ಸ್ ಜಾನಕಿಯನ್ನು ಮೋಹಿಸುತ್ತಾನೆ. ತನ್ನ ಪ್ರೇಮದ ಕರೆಗೆ ಹೂಗುಡದಿದ್ದ ಅವಳನ್ನು 'ನಿನ್ನ ದಾರಿ ನಿನಗೆ, ನನ್ನ ದಾರಿ ನನಗೆ' ಎಂದು ನಿರಾಕರಿಸುತ್ತಾನೆ. ಜಾನಕಿಯಾದರೋ ಇವನ ಪ್ರೇಮವನ್ನು ಪರೀಕ್ಷಿಸುತ್ತಿರುತ್ತಾಳೆ. ಹಿಂದೆ, ಬಡತನದ ಕಾರಣವಾಗಿ ದುರ್ಮಾರ್ಗಕ್ಕೆ ಎಳೆಯಲ್ಪಟ್ಟು ನರ್ಸ್ ವೃತ್ತಿಯನ್ನಾಶ್ರಯಿಸಿರುತ್ತಾಳೆ ಜಾನಕಿ. ಕ್ಯಾಪ್ಟನ್ ನಾಯರ್, ಕಾಲಕ್ರಮೇಣ ಮೇಜರ್ ಆದರು. ಅವರು ಯುದ್ಧಕೈದಿಗಳಾಗಿ ಸಿಕ್ಕಿದ್ದ ಜಪಾನಿನ ಒಸಾಕ ದಂಪತಿಗಳ ವಿಚಾರಣೆಯ ನ್ಯಾಯಾಧೀಶರಲ್ಲೊಬ್ಬರಾದರು. ಶ್ರೀಮತಿ ಒಸಾಕಾ ತನ್ನ ಉತ್ಕಟ ದೇಶಭಕ್ತಿಗಾಗಿ, ಸ್ವೈರವೃತ್ತಿಯನ್ನೂ ಕೈಕೊಂಡಳು. ಈ ವೃತ್ತಿಯಲ್ಲಿ ಇಂಗ್ಲಿಷ್ ಅಧಿಕಾರಿಗಳಿಂದ ಹುಟ್ಟಿದ ಕೂಸನ್ನೂ ಕೊಂದುಹಾಕಿದಳು. ಇದೆಲ್ಲವೂ ಅವಳ ಗಂಡನಿಗೆ ತಿಳಿದೇ ಇತ್ತು. ಅವನ ದೇಶಪ್ರೇಮ ಇವೆಲ್ಲದಕ್ಕೂ ಒಪ್ಪಿಗೆ ಇತ್ತಿದ್ದಿತು. ಅಂತ್ಯದಲ್ಲಿ, ಗಲ್ಲಿಗೆ ಹೋಗಲಿದ್ದ ಮೇಜರ್ ಒಸಾಕ ತನ್ನ ಕೊನೆಯ ಬಯಕೆಯಾಗಿ ಕೇಳಿಕೊಂಡದ್ದು ತನ್ನ ಪ್ರಿಯ ಪತ್ನಿಯ ದರ್ಶನವನ್ನು! ಅಂದು, ಅಲ್ಲಿ, ಆ ನಿಮಿಷದಲ್ಲಿ ಅವರಿಬ್ಬರು ಅಮರ ಪ್ರೇಮದ ಮೂರ್ತಸ್ವರೂಪರಾಗಿ ಕಾಣಿಸಿದರು. ಇದನ್ನೆಲ್ಲಾ ಕಂಡ ನಾಯರ್‌ಗೆ ಹೊಸ ಬೆಳಕು ಮೂಡಿತು. ಪತಿತಳೆಂದು ನಿರಾಕರಿಸಿದ್ದ ನರ್ಸ್ ಜಾನಕಿಯನ್ನು ತಮ್ಮಿಂದ ದೂರವಿರಿಸಿದ್ದ 'ನಡುವಿನ ಪರದೆ' ಸರಿದುಹೋಯಿತು. ಅವರಿಬ್ಬರೂ ಮತ್ತೆ ಪ್ರಣಯಿಗಳಾದರು. ಇಲ್ಲಿ ಮಧ್ಯೆ ಬರುವ ಒಸಾಕಾ ದಂಪತಿಗಳ ಕಥೆ ಮೊದಮೊದಲು ಸಂಬಂಧವಿಲ್ಲದಂತೆ ಕಂಡರೂ ಕುತೂಹಲವನ್ನು ಕೆರಳಿಸುತ್ತಾ ನಡೆದು ಕೊನೆಯ ಚೇತೋಹಾರಿ ದೃಶ್ಯ ನಮ್ಮನ್ನು ಸೆರೆಹಿಡಿದು ಮುಖ್ಯಕಥೆಗೆ ಸಂಬಂಧ ಕಲ್ಪಿಸುತ್ತದೆ. ಕಥೆಯೊಳಗೆ ಕಥೆ, ಪತ್ರ, ಸಂಭಾಷಣೆ, ನಿರೂಪಣೆಯ ಮೂಲಕ ಕಥೆಯನ್ನು ಕಟ್ಟಿರುವುದು ಮೆಚ್ಚುವಂತಿದೆ. ಆಸ್ಪತ್ರೆಯಲ್ಲಿ ನರ್ಸ್ ಜಾನಕಿಯನ್ನು ಕ್ಯಾಪ್ಟನ್ ನಾಯರ್ ಬರಸೆಳೆದು ಬಿಗಿದಪ್ಪಿ ಮುದ್ದಿಸಿದ್ದು ಅಸ್ವಾಭಾವಿಕ ಹಾಗೂ ಶುಚಿರುಚಿಗೆ ಒಪ್ಪದಿದ್ದರೂ, ಕ್ಯಾಪ್ಟನ್ ಹಾಗೂ ಸೈನಿಕರ ವಿಷಯ ತಿಳಿದವರಿಗೆ ಅಸ್ವಾಭಾವಿಕವೆನಿಸದು.

'ವಿಜ್ಞಾನದ ವಿಷ'ದಲ್ಲಿ ಮೊದಲಿನಿಂದ ಕೊನೆಯವರೆವಿಗೂ ಕೃತಕತೆಯ ಛಾಯೆ ಬಿದ್ದೇ ಇದೆ. 'ಕಾಲಮಹಿಮೆ'ಯಲ್ಲಿ ಸಾಮಾಜಿಕ ಸಮಸ್ಯೆಯನ್ನು ಎತ್ತಿಕೊಂಡಿ

ದ್ದರೂ, ಕಥೆಯನ್ನು ಮುಗಿಸುವಾಗ ಬಂದ ಕೃತಕಕಾಲಿನ ಮಹಿಮೆ ಒಂದು ಚಾತುರ್ಯ, ಅಷ್ಟೆ. ತಂದೆ ಮಾಡಿದ ಸಾಲಕ್ಕಾಗಿ, ಮುದ್ದು ಮಗಳು ಚಿನ್ನ ಸಾಹುಕಾರನ ಕಾಮದ ತೊತ್ತಾಗಿ, 'ಸಾಲ ಪರಿಹಾರ 'ಮಾಡಿ, ತಂದೆಯ ಪ್ರಾಣ ಉಳಿಸಿದಳು. ಇದರ ಜೊತೆಯಲ್ಲಿ ಸಾಹುಕಾರ ರಾಮರಾಯರ ಸಾಂಸಾರಿಕ ಜೀವನ, ಹಾಗೂ ಧನಾರ್ಜನೆಯ ಮಾರ್ಗಗಳಲ್ಲಿ ಕೃತಕತೆ ಅಲ್ಲಲ್ಲಿ ಸುಳಿಯುತ್ತದೆ.

'ಹೊಗೆಯಿಂದ ಹೊರಗೆ' ಎಂಬ ಕಥೆಯು ವಸ್ತು ರೆಫ್ಯೂಜಿಗಳಿಗೆ ಸಂಬಂಧಿಸಿದ್ದು. ನೆಲೆತಪ್ಪಿ ದೂರವಾದ ಅಣ್ಣ ತಂಗಿಯರು, ಅದೃಷ್ಟವಶಾತ್ ಮತ್ತೆ ಕೂಡುವರು. ಸಿಖ್ ಜನರಲ್ಲಿ ಮದುವೆಗೆ ಮೊದಲು ವಧೂವರರಿಗೆ ಪರಸ್ಪರ ದರ್ಶನವಿಲ್ಲ ಎಂಬ ಒಂದು ಸಂಪ್ರದಾಯವೇ ಈ ಕಥೆಯ ಕೀಲು. ಇಲ್ಲಿನ ತಂತ್ರ ಅತಂತ್ರವಾಗಿ ಕಥೆಯ ಮೈ ಮೂಡಿಬಂದ ಹಸುರು ಹಾಸಿನಂತಿಲ್ಲದೆ, ಮಾಡಿದ ಕೌದಿಯಂತಾಗಿದೆ.

'ಮತಾಂತರ' ಎಂಬ ಕಥೆಯ ತಂತ್ರ ಮೋಹಕವಾಗಿದೆ. ಪರಿಣಾಮದಲ್ಲಿ ಸಾರ್ಥಕತೆ ತೋರುತ್ತಿಲ್ಲ. 'ವೈರಾಗ್ಯ-ವೈಯ್ಯಾರ' ಒಂದು ಸಾಮಾನ್ಯ ಕಥೆ. ಆದರೂ 'ಸಣ್ಣ ಕಥೆ ಅಲ್ಪಜೀವಿಗಳ ಮಹಾ ಕಾವ್ಯ' (ಬೇಂದ್ರೆ) ಎಂಬುದಕ್ಕೆ ಈ ಕಥೆ ನಿದರ್ಶನ. ಅಗಸ ಗುಡದಪ್ಪನೆಂಬ ಸಾಮಾನ್ಯ ವ್ಯಕ್ತಿಯ ವೈರಾಗ್ಯ ಜೀವನ ವನ್ನೂ, ಅವನ ಹೆಂಡತಿಯಾಗಿದ್ದು, ಅವನಿಂದ ದೂರವಾಗಿ, ಸ್ವೈರವೃತ್ತಿ ವಹಿಸಿದ ಎಲ್ಲವ್ವನ ವೈಯ್ಯಾರಗಳಿಗಿರುವ ಸಾಮ್ಯ ವೈಷಮ್ಯಗಳನ್ನೂ ಅಂತ್ಯದಲ್ಲಿ ಲಗತ್ತಿಸಿರು ವುದು ಒಪ್ಪುವಂತಿದೆ. ಆದರೆ ಅಲ್ಲಲ್ಲಿ ತುಂಬಾ ವಾಚ್ಯವಾಗಿ ಮುಖ ಮುರಿದುಕೊಳ್ಳು ವಂತಿದೆ.

'ಕೆಳಗಿನ ನೆರಳು' ಎಂಬ ಕಥೆಯಲ್ಲಿ ಸಾಮಾಜಿಕ ಸಮಸ್ಯೆಯೊಂದನ್ನು ಎತ್ತಿ ತೋರಿಸಿದ್ದಾರೆ. ಆದರೆ, ದಾರಿಯ ಪಕ್ಕದಲ್ಲಿ ಬೆಳೆದಿರುವ ಪಾಪಾಸುಕಳ್ಳಿಯಂತೆ ಕೃತಕತೆ, ಅಸಹಜತೆ, ಅಸಭ್ಯತೆ ಕಥೆಯುದ್ದಕ್ಕೂ ಹಬ್ಬಿದೆ. ಚನ್ನಪಟ್ಟಣದಲ್ಲಿ ವನಜಾಕ್ಷಿ ಕಮಲದ ಹೂಗಳನ್ನು (!) ಹಿಡಿದು ಬರುವುದು, ಜಾರವೃತ್ತಿಯಲ್ಲಿ ಅವಳು ಮುಟ್ಟಿದ ತುರೀಯ, ಯುವಕನ ಸಾಹಸ, ಸುಬ್ಬನ ಕಂಗಾಲಚಿತ್ರ, ಇವು ಮೇಲಿನ ಟೀಕೆಗೆ ಸಾಕ್ಷಿ ಕೊಡುತ್ತವೆ. ಆದರೂ, ಏನೇನೋ, ಹೇಗೇಗೋ ನಡೆಯುವ ಈ ಕಾಲದ, ಈ ಸಮಾಜದಲ್ಲಿ ಅದೂ ಇದ್ದರೂ ಇರಬಹುದು ಎನಿಸುತ್ತದೆ. ಈ ಕಥೆಯು ಸ್ಥಲ, ಕಾಲ, ಕ್ರಿಯೆಗಳ ಐಕ್ಯತೆ ಸಾಲದೆ ಅಸಹಜತೆಗೆ ಎಡೆಕೊಟ್ಟಿದೆ. ಆದರೂ ಸಮಾಜದ ರುದ್ರಗಭೀರ ಚಿತ್ರವನ್ನು ಈ ಕಥೆ ಕೊಡುತ್ತಿದೆ.

ಶ್ರೀ ಜೋಶಿಯವರ ಶೈಲಿಗೆ ಒಂದು ಮೋಹಕತೆ ಇದೆ. ಅವರ ಜೀವನದ ಬಹು ಮುಖದ ಅನುಭವದಿಂದ ಬಂದ, ನಾನಾ ಉಪಮಾನಗಳು ಕಥೆಯ ಶೈಲಿಗೆ ಮೆರಗು

ಕೊಟ್ಟಿವೆ. ಥಿಯೇಟರಿನಲ್ಲಿ ದೀಪವಾರಿಸಿದಂತೆ ಕಣ್ಣು ಮುಚ್ಚಿದಾಗ ಚಿತ್ರಪಟ ಶುರುವಾಯಿತು (ಪು. ೫). ವಿಧವೆಯಾದವಳು ತನ್ನ ತುರುಬಿದ್ದಾಗಿನ ದಿನಗಳನ್ನು ಜ್ಞಾಪಿಸಿಕೊಂಡಂತೆ (ಪು. ೧೦). ನೀಲಿ ಕಾಗದದ ಮೇಲಿನ ನಕ್ಷೆ, ಹೆಣದ ಮೇಲಿನ ಶುಭ್ರವಸ್ತ್ರ, ಮಹಾ ಯುದ್ಧದ ಮೋಡಗಳ ನಡುವಿನ ಸುಂದರ ಸೌದಾಮಿನಿ—ಮುಂತಾದುವುಗಳನ್ನು ಉದಾಹರಿಸಬಹುದು. ಆದರೂ ಕಾರಕೂನ ಸುಬ್ಬ ಆಫೀಸಿಗೆ ಬರುವಾಗ, ರಾಜದರ್ಬಾರಿನಲ್ಲಿ ಅರಸು ಬರುವಾಗ, ಭಟ್ಟಂಗಿಗಳ ಹೊಗಳಿಕೆಯಂತೆ, ಉಳಿದ ಕಾರಕೂನರು ಹೊಗಳಿದರು (ಪು. ೨೨). ಶಾಲೆಯ ಹುಡುಗಿಯರು ಲೀಲಾಬಾಯಿಯ ಕೈಯಲ್ಲಿ, ಸಿಂಗದ ಕೈಗೆ ಬಿದ್ದ ಹರಿಣಾಂಗನೆಯರು (ಪು. ೧), ಸಾಲಗಾರ ಸೋಮ ಧನಿಯ ಮುಂದೆ ಝುಂಕಿತನಾದಾಗ 'ಅವನ ಯೋಚನೆಯ **ಕಡಲೊಳಗೆ** ಮದಗಜ ಹೊಕ್ಕು **ಸರೋವರದ** ಸ್ತಬ್ಧನೀರನ್ನು ಕದಡಿಸಿತ್ತು' ಎಂಬ ಕೆಲವು ಉಪಮಾನಗಳಲ್ಲಿ ಹಳೆತನ ತಲೆಹಾಕಿದೆ. ಹಾಗೆಯೇ ಮಾತಿನ ಭಾಷೆ, ಬರವಣಿಗೆಯಲ್ಲಿ ಬರಬೇಕಾದರೂ ಔಚಿತ್ಯವರಿತು ಬಂದರೆ ಮೇಲು. ಶಬ್ದಗಳ ಉಪಯೋಗದಲ್ಲಿ ಬರವಣಿಗೆ ಸಾಧ್ಯವಾದಷ್ಟು ಶುದ್ಧವಾಗಿದ್ದರೆ ಮೇಲು. ಊಟ ಉಣ್ಣುವವನ (ಪು. ೮) ಬಲಿ ಹೋಗಿದ್ದಾನೆ (ಪು. ೩೮), ಸಿಂಹರಿದ್ದಂಥ ತಾವು (ಪು. ४೦), ಕಾದಕೆಂಡ, ಬೀಸು (=ಅಡಿಗೆ, ದುಡಿತ) (ಪು. ४೨), ಉಸುದಿಸಿದ, ಅಧೇಗೆ (ಪು. ४೦-४೫) ಮುಂತಾದ ಕೆಲವು ದೋಷಗಳನ್ನು ತಿದ್ದಬಹುದಾಗಿತ್ತು. 'ಉತ್ತಮ ಕಥೆ ಒಂದು ಗದ್ಯಭಾವಗೀತೆ'ಯಂತಿರಬೇಕೆನ್ನುವರು. ಕಾರಣ ಅಲ್ಲಿ ಒಂದು ಪದವೂ ನಿರರ್ಥಕವಾಗಿರಕೂಡದು. ಸಂಗ್ರಹವಿದ್ದಷ್ಟೂ ಉತ್ತಮ. ಹೀಗೆ ನಿರರ್ಥಕ ಪದಪ್ರಯೋಗಕ್ಕೆ ದಯಾಲಸಿಂಗನ ಸಿಟ್ಟು, ಹುಕುಂ ಮುಂತಾದುವನ್ನು ವರ್ಣಿಸುವ ಭಾಗಗಳನ್ನು (ಪು. ೩೮) ಉದಾಹರಿಸಬಹುದು.

ಆದರೂ ಕತೆಗಾರ ಜೋಶಿಯವರಿಗೆ ಲೋಕವನ್ನು ವೀಕ್ಷಿಸುವ ತೆರೆದ ಕಣ್ಣಿದೆ, ಕಥಾತಂತ್ರವಿದೆ, ಸಹೃದಯತೆ ಇದೆ. ಇವರಿಂದ ಕಥಾಲೋಕ ಇನ್ನೂ ಉತ್ತಮ ಕೃತಿಗಳನ್ನು ಹಾರೈಸುತ್ತಿದೆ. ಹೊಸ ಕಥೆಗಾರರನ್ನು ನಿರ್ಲಕ್ಷಿಸುವ ಪ್ರಕಾಶಕರಿರುವಾಗ, ಇವುಗಳನ್ನು ಪ್ರಕಟಿಸಿದ ಪ್ರತಿಭಾ ಗ್ರಂಥಮಾಲೆಯ ಶ್ರೀ ಘಾಣೇಕರರು ವಂದನಾರ್ಹರು. ಮರಾಠಿ ರೀತಿಯ ಮುಖಚಿತ್ರ ಪುಸ್ತಕಕ್ಕೆ ಮೆರಗು ಕೊಟ್ಟಿದೆ.

ವೃಷಭೇಂದ್ರಸ್ವಾಮಿ, ಬಳ್ಳಾರಿ.

*
* *

ನಾಲ್ಕು ನಾಡಪದಗಳು—ಸಂಕಲನಕಾರರು : ಶ್ರೀ ಬಿ. ಎಸ್. ಗದ್ದಗಿಮಠ; ಪ್ರಕಾಶಕರು: ಬಿ. ಎಸ್. ಗದ್ದಗಿಮಠ, ಫೂಲಭಾಗ ಗಲ್ಲಿ ೨೪೪|೬೦, ಬೆಳಗಾವಿ; ಪುಟ XXII+೬೮; ಬೆಲೆ, ೧-೦-೦.

ಜಾನಪದಗೀತೆಗಳ ಸಂಗ್ರಹಕಾರ್ಯ ಸುಮಾರು ಇಪ್ಪತ್ತೈದು ವರ್ಷಗಳಿಂದ ನಡೆಯುತ್ತಿದೆ. ಈಗಾಗಲೆ ನಾಲ್ಕಾರು ಸಂಕಲನ ಗ್ರಂಥಗಳೂ, ಅವುಗಳನ್ನು ಕುರಿತ ವಿಮರ್ಶಾತ್ಮಕ ಲೇಖನಗಳೂ ಬಂದಿವೆ. ಆದರೂ ನಾಡಿನ ಎಲ್ಲ ಮೂಲೆಗಳಲ್ಲಿ ಸಿಕ್ಕುವ ಎಲ್ಲ ಗೀತಗಳೂ ಲಭ್ಯವಾಗಿವೆಯೆಂದು ಹೇಳುವಂತಿಲ್ಲ. ಸಿನಿಮಾ, ನಾಟಕ, ಗ್ರಾಮಾಫೋನ್ ಮೊದಲಾದ ಆಧುನಿಕ ಮನೋರಂಜಕವಾದ ವ್ಯವಸ್ಥೆಗಳಿಂದ ಜನರ—ಹಳ್ಳಿಗಾಡಿನ ಜನರ—ಅಭಿರುಚಿ ಮಾರ್ಪಾಡಾಗುತ್ತಿರುವುದು ಜನಜೀವನದ ಪ್ರತಿಯೊಂದು ವ್ಯವಹಾರದಿಂದಲೂ ವ್ಯಕ್ತವಾಗುತ್ತಿದೆ. ವಿವಾಹಕಾಲದಲ್ಲಿ, ಹಬ್ಬ ಹರಿದಿನಗಳಲ್ಲಿ, ಇತರ ಶುಭಸಂದರ್ಭಗಳಲ್ಲಿ ಗರತಿಯರು ಹಾಡುತ್ತಿದ್ದ ಪದ್ಧತಿ ಮರೆಯಾಗುತ್ತಿದೆ. ಆ ಪದ್ಧತಿ ಅನಾಗರಿಕವೆಂಬ ಭಾವನೆಯೂ ಮೊಳೆದೋರುತ್ತಿದೆ. ಗಂಡಸರ ಬಾಯಿಯಲ್ಲಿ ಹಳ್ಳಿಯ ಹಾಡುಗಳಿಗೆ ಬದಲಾಗಿ ಸಿನಿಮಾ ಹಾಡುಗಳು ಕೇಳಬರುತ್ತಿವೆ. ಒಟ್ಟಿನಲ್ಲಿ ಜಾನಪದ ಕಲೆಗಳು ವಿದ್ಯಾವಂತರೆನಿಸಿಕೊಂಡಿರುವವರ ಮತ್ತು ಪಂಡಿತರ ತಾತ್ಸಾರಕ್ಕೂ ತಿರಸ್ಕಾರಕ್ಕೂ ಅವಹೇಳನೆಗೂ ಗುರಿಯಾಗಿ, ನಾಚಿಕೆಯಿಂದ ಮೂಲೆಪಾಲಾಗುತ್ತಿವೆ.

ಸಾಮಾನ್ಯ ಜನತೆಯ ಸಂಸ್ಕೃತಿಯನ್ನು ತಿಳಿದುಕೊಳ್ಳಲು ಜಾನಪದಗೀತೆಗಳಂಥ ಸಾಧನ ಮತ್ತೊಂದಿಲ್ಲ. ಅವರ ಬಾಳನ್ನು ಪೋಷಿಸಿರುವ, ರೂಪಿಸಿರುವ, ಬೆಳಗಿರುವ ಮನೋಭಾವನೆಗಳೇನು? ಅಭಿರುಚಿಯೇನು? ಚಿತ್ತಪ್ರವೃತ್ತಿಗಳೇನು? ಆಚಾರವಿಚಾರಗಳೇನು? ಎಂಬುದು ಈ ಗೀತೆಗಳಿಂದ ಗೊತ್ತಾಗುತ್ತದೆ. ಅವುಗಳನ್ನು ಓದುವುದರಿಂದ ಅವರಿಗೆ ಸಂಬಂಧಿಸಿದ ಸಮಾಜವಿಜ್ಞಾನ, ಮನೋವಿಜ್ಞಾನಗಳ ಪರಿಚಯವೂ ಲಭಿಸುತ್ತದೆ. 'ಸಾಮಾನ್ಯ ಜನತೆಯ ಸಂಸ್ಕೃತಿ' ಎಂದ ಕೂಡಲೆ ಅದು 'ಸಾಮಾನ್ಯ'ವಾದುದಲ್ಲ. ಮಂಜು ಮುಸುಕಿದ ರವಿಯಂತೆ ಅನಾಗರಿಕತೆ ಮುಸುಕಿದ ಅವರ ಸಂಸ್ಕೃತಿ. ಅಷ್ಟೇ ಅಲ್ಲ, ನಾಗರಿಕ ಸಂಸ್ಕೃತಿಯ ವೃಕ್ಷಕ್ಕೆ ಅವರ ಆ ಸಂಸ್ಕೃತಿಯೆ ತಾಯಿಬೇರು. ನಮ್ಮ ಸಂಸ್ಕೃತಿಗೆ ಮಾತೃಶಕ್ತಿಯಾಗಿ ಪ್ರಚೋದಕಶಕ್ತಿಯಾಗಿ ಸದಾ ಪೋಷಿಸುತ್ತಿರುವ ರಾಮಾಯಣ ಮಹಾಭಾರತಾದಿಗಳ ಬೆಳವಣಿಗೆಗೆ ಈ ಜಾನಪದ ಗೀತೆಗಳು ಎಷ್ಟೋಮಟ್ಟಿಗೆ ಸಹಾಯಕವಾಗಿವೆ. ರಾಮಾಯಣ ಭಾರತದ ಕಥೆಗಳು, ಹರಿಭಕ್ತರ ಕಥೆಗಳು, ಶಿವಶರಣರ ಕಥೆಗಳು, ಮತ್ತೆ ಜನಮನಸ್ಸನ್ನು ಪ್ರವೇಶಿಸಿ, ಅಲ್ಲಿಯ ರಸಕ್ರಿಯೆಯಿಂದ ರೂಪಾಂತರಹೊಂದಿ ನವ

ನವೀನವಾಗಿ ಹೊರಗೆ ಬರುವುದು ಉಂಟು. ಬಹುಶಃ ಜೈನ ಮತ್ತು ಬೌದ್ಧ ಸಂಪ್ರದಾಯಗಳ ರಾಮಾಯಣಗಳಲ್ಲಿ ಕಾಣಬರುವ ಕೆಲವು ವ್ಯತ್ಯಾಸಗಳಿಗೆ ಜನಸಾಮಾನ್ಯರು ಕಾರಣರಾಗಿದ್ದಾರೆಂದು ಊಹಿಸುವುದು ತಪ್ಪಾಗಲಾರದು.

ಈಗ ಶ್ರೀ ಬಿ. ಎಸ್. ಗದ್ದಗಿಮಠರವರು ಸಂಪಾದಿಸಿರುವ 'ನಾಲ್ಕು ನಾಡಪದಗಳು' ಬಿಜ್ಜಮಹಾದೇವಿ, ಬೇಡರ ಕನ್ನಯ್ಯ, ಕೋಳೂರ ಕೊಡಗೂಸು ಮತ್ತು ಗೊಲ್ಲಾಳ ಈ ನಾಲ್ವರು ಶರಣ ಶರಣೆಯರ ಕತೆಗಳಿಗೆ ಸಂಬಂಧಪಟ್ಟುವು. ಈ ಕತೆಗಳು ಹೊಸವೇನಲ್ಲ. ಒಂದೊಂದರಲ್ಲಿಯೂ ಒಂದೊಂದು ವಿಧದ ಭಕ್ತಿಯ ನಿರೂಪಣೆ ಇದೆ. ಆ ಭಕ್ತರ ಕಥೆಗಳು ಸಾಮಾನ್ಯರ ಜೀವನದಲ್ಲಿ ಹಾಸುಹೊಕ್ಕಾಗಿ ಹೆಣೆದುಕೊಂಡಿವೆ. ಅವರ—ಭಕ್ತರ—ಬಾಳನ್ನು ಜನರು ತಮ್ಮ ಜೀವನದಲ್ಲಿ ಕಾಣಲು ಸಾಧನಾನಿರತರಾಗುತ್ತಾರೆ. ಅವರ ಜೀವನವನ್ನು ಸಾಕ್ಷಾತ್ಕಾರ ಮಾಡಿಕೊಳ್ಳಬೇಕೆಂಬ ಆ ಹಂಬಲವೆ, ಆ ನಿರಂತರ ಸಾಧನೆಯೇ ಈ ಗೀತಗಳ ರೂಪವನ್ನು ಪಡೆದಿದೆ.

ಶಿವನನ್ನು ಮಗನೆಂದು ಭಾವಿಸಿ; ಅವನ ಕಷ್ಟಸಂಕಷ್ಟಗಳನ್ನು ನೆನೆದು ನೊಂದು, ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗುವನ್ನು ಶಿವನೆಂದೇ ನಂಬಿ ಅವನಿಗಾಗಿ ಪ್ರಾಣಾರ್ಪಣೆಮಾಡಿದ ಬಿಜ್ಜಮಹಾದೇವಿ ಮಾತೃವಾತ್ಸಲ್ಯ ಪ್ರಕಾರದ ಭಕ್ತಿಗೆ ಪ್ರತಿಮೆಯಂತಿದ್ದಾಳೆ. ಈ ಕಥೆಯಲ್ಲಿ ಅಲ್ಲಲ್ಲಿ ಹಾಸ್ಯರಸದ ಬುಗ್ಗೆ ಕಂಡರೂ, ಶಾಂತರಸವೇ 'ಸ್ಥಾಯಿ'ರಸ. ಈ ಶಿವಶರಣೆ ಶಿವನ ಕರುಣಾಜನಕವಾದ ಕತೆಯನ್ನು ಕೇಳಿ ತುಂಬ ಸಂಕಟಪಡುತ್ತಾಳೆ:

ಹೆಂಡರಿಬ್ಬರು ಕೇಳಿ, ಮಂಡೇರು ಕದನಿಗಳು
ಭಂಡಾಗಿ ಶಿವನು ಮನೆಬಿಟ್ಟು | ಸೇರಿದನು
ರುಂಡಧಾರ್‍ಯಾಗಿ ಸುಡಗಾಡ.

ಮಕ್ಕಳವನಿಗೆ ಮೂರು, ಮಿಕ್ಕ ಊಳಿಗ ಉಂಟು
ಕಕ್ಕಸವ ಬಿಡುವ ಸುಖವಿಲ್ಲ | ತಾಯಿಮನೆ
ಮಿಕ್ಕುವರು ಉಂಟೆ ಜಗದೊಳಗೆ.

ತಾನಿದ್ದು ಶಿವನಿಗೆ ಇಂಥ ಸಂಕಟ ಪ್ರಾಪ್ತವಾಯಿತೆ ಎಂದು ಅವಳು ಬಹಳ ಚಿಂತಿಸಿದಳು; 'ಸಲಹುವೆನು ತಾಯಾಗಿ' ಎಂದು ನಿರ್ಣಯಿಸಿದಳು.

ಡೋಗಿ ಬಟ್ಟಲ ಹಿಡಿದು, ಹೋಗಿ ಜಗದೊಳು ತಿರಿದು
ಜೋಗಾಗಿ ಬೂದಿ ಮೈತುಂಬ | ಬಡಕೊಂಡು
ಹೀಗಿದ್ದರೆ ನಾನು ಸಹಿಸುವೆನೆ.

* * * *

ಹಾವಿನಾಭರಣಗಳು, ಯಾವ ತಾಣದಲುಂಟು
ಸಾವ ಬಗೆಸುವರೆ ಹೆಡೆಹಿಡಿದು | ತರವಲ್ಲ
ಹಾವ ಗೂಡೇಕೆ ಹುಡುಗಾಟ

* * * *

ತಾಯಿ ಇಲ್ಲದ ನಿನ್ನ, ಕಾಯ ಬಾಡಿದೆ ಶಿವನೆ
ನ್ಯಾಯವೇ ಸಾರಿ ಹೇಳುವುದು | ಶಿವಲಿಂಗ
ತಾಯಿ ಕಳಕೊಂಡ ಪರದೇಶಿ.

ನೀಸು ನನಗೆ ಭಾರವಾಗುವುದಿಲ್ಲ, ನನಗೆ ಮಗುವಾಗು, ತಾಯಾಗಿ ನಗುನಗುತ್ತ ಸಾಕುತ್ತೇನೆ ಎಂದು ಹಂಬಲಿಸುತ್ತಾಳೆ ಅವಳು. ಅವಳ ಈ ಮಾತುಗಳಲ್ಲಿ ಕಾಣುವುದು ಹಾಸ್ಯವಲ್ಲ, ಅನುಕಂಪೆ; ಇದನ್ನು ಓದಿದಾಗ ಸಹೃದಯರ ಚಿತ್ತ ಕಲಕದಿರದು.

ಸರಿ, ಶಿವ ಶಿಶುವಾದನು. ತಾಯಿಯ ಸಂಭ್ರಮ ಹೇಳತೀರದು. ಎಲ್ಲ ಕರ್ಮಗಳೂ ಸಾಂಗವಾಗಿ ಸಾಗಿದುವು. ಬಿಜ್ಜಮಹಾದೇವಿ ತನ್ನ ತಾಯಿತನವನ್ನೆಲ್ಲ ಸೂರೆಗೊಟ್ಟು ಸಾಕಿದಳು. ಆರು ತಿಂಗಳಾಯಿತು. ಮಗುವಿಗೆ ಏನೋ ಬೇನೆ ಪ್ರಾಪ್ತವಾಯಿತು. ಮಂತ್ರೌಷಧಿಯನ್ನೆಲ್ಲ ಮಾಡಿಸಿಯಾಯಿತು. ಆದರೆ ಫಲಕಾರಿಯಾಗಲಿಲ್ಲ. ಮಗುವಿನೊಡನೆ ತಾನೂ ಸಾಯಬೇಕೆಂದು ನಿಶ್ಚಯಿಸಿ, ಹರನನ್ನು ಪ್ರಾರ್ಥಿಸಿದಳು. ಕಡೆಗೆ ಹರಪಾದವನ್ನು ಸೇರಿದಳು.

ಹೀಗೆಯೇ ಉಳಿದ ಕತೆಗಳೂ ಮನೋಜ್ಞವಾಗಿವೆ. ಜಾನಪದ ಗೀತೆಗಳ ವಿಶಿಷ್ಟಗುಣವಾದ 'ಭಾವಾವೇಶ' ಈ ಎಲ್ಲ ಕತೆಗಳಲ್ಲಿಯೂ ಪ್ರವಹಿಸುತ್ತಿದೆ.

ಮುನ್ನುಡಿಕಾರರಾದ ಶ್ರೀ ವ್ಹಿ. ಜಿ. ಕುಲಕರ್ಣಿಯವರು "ಜನಪದ ಸಾಹಿತ್ಯವೆಲ್ಲವೂ ಉಚ್ಚವರ್ಗದ ಸಾಹಿತ್ಯಕ್ಕೆ ಸೇರಿದುದೆಂಬ ಅತಿರೇಕದ ಅಭಿಪ್ರಾಯವನ್ನು ನಾವಾರೂ ಇಟ್ಟುಕೊಳ್ಳುವುದು ಬೇಡ" ಎಂದು ಹೇಳಿರುವ ಮಾತು ಈ ಗೀತೆಗಳಿಗೂ ಸಲ್ಲುತ್ತದೆ. ಅಂದರೆ ಪ್ರಕೃತ ಗೀತೆಗಳಲ್ಲಿ ಕಾವ್ಯಗುಣಗಳು ಇಲ್ಲವೆಂದಲ್ಲ; ಇದ್ದೇ ಇವೆ; ಆದರೆ ಮೊದಲಿಂದ ಕೊನೆಯತನಕ ಒಂದೇ ಸಮನಾಗಿ ನಿರೀಕ್ಷಿಸುವಂತಿಲ್ಲ. ಇಲ್ಲಿ ಕೆಲವು "ಪದ್ಯಗಳಲ್ಲಿ ಭಾಷೆಯೆಲ್ಲವೂ ವ್ಯಾಕರಣ ದೃಷ್ಟಿಯಿಂದ ಪರಿಶುದ್ಧವಾಗಿದೆ. ಗ್ರಂಥಸ್ಥ ಸಾಹಿತ್ಯದ ಯಾವ ಕವಿಯಾದರೂ ಈ ರೀತಿ ಬರೆಯಬಹುದಾಗಿತ್ತು." ಕೆಲವು ತ್ರಿಪದಿಗಳು ಅಂಶಗಣದ ಧಾಟಿಗೆ ಬಾರದೆ ಮಾತ್ರಾಗಣದ ಧಾಟಿಯಲ್ಲಿ ಹರಿಯುತ್ತವೆ.

ಒಟ್ಟಿನಲ್ಲಿ ಶ್ರೀ ಗದ್ದಗಿಮಠರವರ ಕಾರ್ಯ ಶ್ಲಾಘನೀಯವಾದುದು. ಅವರ

ಮುಂದಿನ ಪ್ರಕಟಣೆಗಳಿಗೆ ನೆರವಾಗುವಂತಹ ಪ್ರೋತ್ಸಾಹವನ್ನು ನೀಡುವುದು ಕನ್ನಡಿಗರ ಕರ್ತವ್ಯ.

* * *

ಬಾಲಸರಸ್ವತಿ—ಬರೆದವರು : ಕರ್ಣಾಟಕ ಸಂಘದ ಸದಸ್ಯರು ; ಸಂಪಾದಕರು : ಶ್ರೀ ಜಿ. ಪಿ. ರಾಜರತ್ನಂ ಅವರು ; ಪ್ರಕಾಶಕರು : ಕರ್ಣಾಟಕ ಸಂಘ, ಸೆಂಟ್ರಲ್ ಕಾಲೇಜು, ಬೆಂಗಳೂರು ; ಪುಟಗಳು : ೬+೧೯೪ ; ಬೆಲೆ, ರೂ. ೨-೮-೦.

"ಕಾಲೇಜಿನ ಡಿಗ್ರಿ ತರಗತಿಗಳಲ್ಲಿ ಓದುವವರು ಬರೆಹಕ್ಕೆ ಕೈಯಿಟ್ಟರೆ, ಎಂತಹ ವಿಷಯಗಳನ್ನು ಬರೆಯಬಹುದು, ಬರೆಯಬೇಕು, ಬರೆಯಬಲ್ಲರು" ಎಂಬುದೂ, ಪ್ರೋತ್ಸಾಹ ಪ್ರಚೋದನೆಗಳಿಂದ ಸಾಮಾನ್ಯರಲ್ಲಿಯೂ ಸಾಹಸದ ಮಹಿಮೆಯನ್ನು ಕಾಣಬಹುದೆಂಬುದೂ ಈ ಸಂಕಲನದಿಂದ ವ್ಯಕ್ತವಾಗುತ್ತವೆ.

"ಈ ಬರಹಗಳಲ್ಲಿ ಪ್ರಬಂಧ, ಹರಟೆ, ಕತೆ, ಜನಪದದ ಕತೆ, ಸಾಹಿತ್ಯವಿಮರ್ಶೆ, ಸಂವಾದಕಲ್ಪನೆ, ಒಂದೆರಡು ಕವನ—ಹೀಗೆ ಬೇರೆ ಬೇರೆ ವಿಧದ ರಚನೆಯುಂಟು." ಈ ಬರಹಗಳ ವಿಷಯದಲ್ಲಿ ವೈವಿಧ್ಯತೆಯಿರುವಂತೆ ವಿಧಾನದಲ್ಲಿಯೂ ವೈವಿಧ್ಯತೆಯಿದೆ. ಹಾಗೆಂದರೆ ಇಲ್ಲಿರುವ ಎಲ್ಲ ಬರಹಗಳೂ ಅತ್ಯುತ್ತಮವಾದುವೆಂದು ಹೇಳುವಂತಿಲ್ಲ. ಏಕೆಂದರೆ ಇವುಗಳನ್ನು ಬರೆದಿರುವ ಕೈ ನುರಿತವಲ್ಲವೆಂಬುದನ್ನು ಅರಿತಿರಬೇಕು. "ಒಂದು ಪ್ರಬಂಧ ಬರೆಯಬೇಕಂತೆ. ಐದು ಪುಟವಿರಬೇಕಂತೆ, ಅದು ಸ್ವಾರಸ್ಯವಾಗಿರಬೇಕಂತೆ. ಯಾರಿಗೆ ಬೇಕು ಈ ಎಲ್ಲ ಕಗ್ಗ?" ಹೀಗೆ ಕೆಲವರಾದರೂ ವಿದ್ಯಾರ್ಥಿಗಳು ಗೊಣಗುಟ್ಟಿಕೊಂಡು ಬೇಕಾಬಿಟ್ಟಿಯಾಗಿ ಬರೆಯಲು ಪ್ರಯತ್ನಿಸಿರಬೇಕು, ಉಪಾಧ್ಯಾಯರು ಬರೆಯಬೇಕೆಂದು 'ಆಜ್ಞಾಪಿಸಿ'ದಾಗ. "ಮೇಷ್ಟ್ರು ಸುಖ ಸಾಕಪ್ಪ. ಎಲ್ಲಾದರೂ ಹೋಗಲಿ; ನಾಲ್ಕಕ್ಷರ ಗೀಚಿ ಅವರ ಕಾಟ ತಪ್ಪಿಸಿಕೊಳ್ಳೋಣ" ಎಂದು ಕೆಲವರು ನಿಶ್ಚಯಿಸಿಕೊಂಡಿರಬೇಕು. "ರಂಗನ ಮುಂದೆ ಸಿಂಗನೆ. ಎಂಥೆಂಥಾವರೊ ಘಟಾನುಘಟಿಗಳು ಕತೆಗಾರರು ಇರುವಾಗ ನಾನೇನು ಬರೆದೇನು" ಎಂಬ ವಿನಯಪೂರ್ವಕವಾದ ಮನೋಭಾವನೆಯಿಂದ ಕೆಲವರು ಕೈಗೆ ಲೇಖಣಿ ತೆಗೆದುಕೊಂಡಿರಬೇಕು. 'ಪ್ರತಿಭೆ'ಯ ಮಾತಿರಲಿ, 'ಸತತಾಭ್ಯಾಸ'ವಾದರೂ ಎಷ್ಟುಮಂದಿಗಿದೆ? ಆದುದರಿಂದ ಈ ಬರಹಗಳಲ್ಲಿ ಅತ್ಯುತ್ತಮವಾದ ತಂತ್ರವಿಧಾನಗಳನ್ನರಸುವುದು ಅನುಚಿತವಾದೀತು.

ಆದರೂ ಕೆಲವು ಬರಹಗಳಲ್ಲಿ ಸ್ವಾರಸ್ಯವಾದ ಕತೆಯನ್ನು ಉತ್ತಮವಾದ ತಂತ್ರವನ್ನು ಕಾಣುತ್ತೇವೆ. ಆ ಬರಹಗಾರರು ಸಾಧನಾನಿರತರಾದರೆ ಒಳ್ಳೆಯ ಬರಹಗಾರರಾಗಬಲ್ಲರೆಂಬ ಆಶೆಯೂ ಅಂಕುರಿಸುತ್ತದೆ. 'ಮಲ್ಲಯ್ಯನ ಬಸವ' ಎಂಬ

ಪ್ರಬಂಧವನ್ನು ಸರಿಯಾಗಿ ಬೆಳೆಸಿದ್ದರೆ ಅದೊಂದು ಉತ್ತಮವಾದ ಭಾವಪ್ರಬಂಧವಾಗುತ್ತಿತ್ತು. ಆದರೂ ಅದು ಈಗಿರುವಂತೆಯೆ ಹೃದಯಂಗಮವಾಗಿದೆಯೆಂದು ಹೇಳಲಡ್ಡಿಯಿಲ್ಲ. ಹಿಂದೀ ಕಥೆಯೊಂದರ ಆಧಾರದ ಮೇಲೆ ರಚಿತವಾಗಿರುವ 'ಇತ್ಯಾದಿ'ಯ ಆತ್ಮಕಥೆ ಸೊಗಸಾಗಿದೆ: ಕಲ್ಪನೆ ಮನೋಜ್ಞವಾಗಿದೆ, ಹಾಸ್ಯದ ಸಕ್ಕರೆ ಪಾಕದಲ್ಲದ್ದಿದ ವಿಡಂಬನೆಯ ಗುಳಿಗೆಗಳೂ ಅಲ್ಲಲ್ಲಿ ಕಾಣ ಸಿಗುತ್ತವೆ. 'ಇತ್ಯಾದಿ' ಕೊನೆಯಲ್ಲಿ ಹೇಳುವ ಮಾತುಗಳಿವು; "ನನ್ನದು ಕೊನೆಯಿಲ್ಲದ ಕಥೆ. ನಾನು ಮೂರ್ಖನನ್ನು ಪಂಡಿತನನ್ನಾಗಿ ಮಾಡಿದ್ದೇನೆ. ಉಪಾಯ ಹೊಳೆಯದವರಿಗೆ ಉಪಾಯವನ್ನು ಸೂಚಿಸಿದ್ದೇನೆ . . . ಒಟ್ಟಿನ ಮೇಲೆ, ಅಪೂರ್ಣವಾಗಿ ನಿಲ್ಲುವ ಕೆಲಸಗಳನ್ನೆಲ್ಲ ಪೂರ್ಣಮಾಡಬಲ್ಲ ಶಕ್ತಿ ನನಗಿದೆ."

"ಪ್ರಯಾಣದ ಅಸೌಕರ್ಯಗಳು" ಎಂಬುದೊಂದು ಅನುಭವಪೂರ್ಣವಾದ ಹರಟೆ. ಅದರಲ್ಲೇನು ಕಲ್ಪನೆಯಿಲ್ಲ, ಅತಿಶಯೋಕ್ತಿಯಿಲ್ಲ, ಅಲಂಕಾರವಿಲ್ಲ. ಎಲ್ಲ ಪ್ರಯಾಣಿಕರು ನಿತ್ಯವೂ ಅನುಭವಿಸುತ್ತಿರುವುದನ್ನೆ ಇಲ್ಲಿ ಸರಳವಾಗಿ ಹೇಳಿದೆ: 'ಅಷ್ಟರಲ್ಲೆ ಜೋಡಿಲ್ಲದ ಕಾಲಿಗೆ ಏನೋ "ಚುರ್" ಎಂದಿತು. ಏನೆಂದು ನೋಡಿದರೆ, ನನ್ನ ಕಾಲಮೇಲೆ ಕುಳಿತ್ತಿದ್ದ ಮಹನೀಯ ಬೀಡಿಯನ್ನು ಸೇದಿ, ಬಸ್ಸಿನ ಹಲಗೆ ಎಂದು ತಿಳಿದು ಅದನ್ನು ನನ್ನ ಕಾಲಿಗೆ ಉಜ್ಜಿ ಆರಿಸುತ್ತಿದ್ದ. "ಜ್ಞಾನವಿದೆಯೇನಯ್ಯಾ ?" ಎಂದು ಕೇಳಿದೆ. "ಇಲ್ಲ ಸ್ವಾಮಿ" ಎಂದ. ಏನು ಮಾಡುವುದು ?. . .' ಇಂಥ ಅನುಭವ ಎಷ್ಟೋ ಜನಗಳಿಗೆ ಆಗಿರುತ್ತದೆಯಲ್ಲವೆ ?

ಹೀಗೆಯೇ ಇನ್ನೂ ಕೆಲವು ಹರಟೆಗಳು, ಪ್ರಬಂಧಗಳು, ಸಂವಾದಗಳು ಚೆನ್ನಾಗಿವೆ. ಪ್ರೋತ್ಸಾಹ ಕೊಟ್ಟರೆ ಕೆಲವರಾದರೂ ಉತ್ತಮ ಬರಹಗಾರರಾಗಬಲ್ಲರೆಂಬ ಆಶೆ ಈ ಬರಹಗಳಿಂದ ಮೂಡುತ್ತದೆಂದು ಮತ್ತೆ ಹೇಳಬೇಕಾಗಿಲ್ಲ. ಇಂಥ ಪ್ರಯೋಗಪರೀಕ್ಷೆ ಶಾಲಾ ಕಾಲೇಜುಗಳಲ್ಲಿ ಅತ್ಯವಶ್ಯವಾಗಿ ನಡೆಯಬೇಕು. ಪ್ರೋತ್ಸಾಹದ ಮಾತು ಮಾತ್ರವೇ ಅಲ್ಲ; ಯಾವ ಯಾವ ವರ್ಷ ಎಂಥೆಂಥ ವಿದ್ಯಾರ್ಥಿಗಳಿದ್ದರು, ಹಿಂದಿನ ಸಾಲಿನ ವಿದ್ಯಾರ್ಥಿಗಳಿಗೂ ಚಾಲ್ತಿ ಸಾಲಿನ ವಿದ್ಯಾರ್ಥಿಗಳಿಗೂ ಇರುವ ವ್ಯತ್ಯಾಸವೇನೆಂಬುದು ಗೊತ್ತಾಗುವುದಲ್ಲದೆ, ಮುಂಬರುವ ಪೀಳಿಗೆಗೆ ಆ ಲೇಖನಗಳು ಮಾರ್ಗದರ್ಶಕವಾಗುತ್ತವೆ, ಪ್ರೇರಕಶಕ್ತಿಗಳಾಗುತ್ತವೆ. ವಿಶ್ವವಿದ್ಯಾನಿಲಯದಲ್ಲಿ ಇಂಥ ಪ್ರಯೋಗವನ್ನು ಆರಂಭಿಸಿ, ಮುಂದುವರಿಸುತ್ತಿರುವ ಶ್ರೀ ರಾಜರತ್ನಂ ಅವರು ಅಭಿನಂದನಾರ್ಹರು.

—ದೇ. ಜ. ಗೌ.

* * *

ದೀಪದಾನ (ಸಂಪುಟ ೨. ದೀಪಾವಳಿ—೧೯೫೩)—ಸಂಪಾದಕರು : ಪ್ರೊ|| ಬಿ. ಆರ್. ಕುಲಕರ್ಣಿ ಎಂ.ಎ., ಶ್ರೀ ದತ್ತಾತ್ರೇಯ ಕುಲಕರ್ಣಿ, ಮತ್ತು ಪ್ರೊ|| ಸಿ. ಎಂ. ಕುಲಕರ್ಣಿ ಎಂ.ಎ.; ಪ್ರಕಾಶಕರು : ಎಸ್. ಬಿ. ಕುಲಕರ್ಣಿ, ದೀಪದಾನ ಪ್ರಕಾಶನ, ಧಾರವಾಡ; ಪುಟಗಳು ೧೯೬; ಬೆಲೆ, ರೂ. ೧-೮-೦.

ದೀಪದಾನ ಪ್ರಕಾಶನ ಸಂಸ್ಥೆಯವರು ಕಳೆದ ವರ್ಷದಂತೆ ಈಸಾರಿಯೂ ದೀಪಾವಳಿಯ ಹೊತ್ತಿಗೆ 'ದೀಪದಾನ' ದ್ವಿತೀಯ ವಾರ್ಷಿಕೆಯನ್ನು ಪ್ರಕಟಿಸಿದ್ದಾರೆ. ಇದರಲ್ಲಿ ಪ್ರಬಂಧ, ಏಕಾಂಕ, ಹರಟೆ, ಸಣ್ಣ ಕತೆ, ಕಾದಂಬರಿ, ಕವನ—ಜೊತೆಗೆ ಸಮಾಜವಿಜ್ಞಾನ—ಈ ಎಲ್ಲ ಬರಹಗಳು ಒಟ್ಟು ಸುಮಾರು ಮೂವತ್ತೇಳಿವೆ. ಪ್ರಸಿದ್ಧ ಕವಿಗಳಾದ ಶ್ರೀ ಪು. ತಿ. ನ. ರವರ 'ಜಗ ಚೆಲುವೆನ್ನುವ ಬಗೆಯನುರಣನೆ' ಎಂಬ ಸುಂದರ ಕವನದಿಂದ ಈ ವಾರ್ಷಿಕೆ ಆರಂಭವಾಗಿ ದಿವಂಗತ ಶಿವೇಶ್ವರ ದೊಡ್ಡಮನೀಯವರು ಸಂಗ್ರಹಿಸಿದ 'ಅಣ್ಣನ ಮದುವೆಗೆ ಹೊರಟು ನಿಂತಾಗ' ಎಂಬ 'ಜಾನಪದ ಸಂಭಾಷಣೆ'ಯೊಡನೆ ಮುಕ್ತಾಯಗೊಳ್ಳುತ್ತದೆ. ಶ್ರೀ ಗೊರೂರು ರಾಮಸ್ವಾಮಯ್ಯಂಗಾರ್ ಅವರ 'ಕಾಮಧೇನುವಿನ ಕೃಪೆ' ಎಂಬ ಕಥೆ ಮನೋಜ್ಞವಾಗಿದೆ, ಭಾವಪೂರ್ಣವಾಗಿದೆ, ಆಸ್ತಿಯೆಲ್ಲ ಸಾಲಕೊಟ್ಟವರ ಪಾಲಾಗಿ, ಬೀದಿಯ ಭಿಕಾರಿಯಾಗಬೇಕಾಗಿದ್ದ ಜನ್ನಪ್ಪ ಕೇವಲ ಒಂದು ಹಸುವಿನಿಂದ ಹೇಗೆ ಒಬ್ಬ ಮನುಷ್ಯನಾದ, ಗೃಹಸ್ಥನಾದ, ಋಣಮುಕ್ತನಾದನೆಂಬ ಸಂಗತಿಯೇ ಈ ಕಥೆಯ ವಸ್ತು. ಪ್ರೊ|| ಬಿ. ಆರ್. ಕುಲಕರ್ಣಿಯವರ 'ಕನ್ನಡ-ಮರಾಠಿ ಸಂತ ಸಾಹಿತ್ಯಗಳಲ್ಲಿ ಸಾಮ್ಯ' ಎಂಬ ಲೇಖನ ಸಂಶೋಧನಾತ್ಮಕವಾಗಿದೆ, ಬೋಧಪ್ರದವಾಗಿದೆ. ಪ್ರೊ|| ಕೆ. ಟಿ. ಪಾಂಡುರಂಗಿಯವರ 'ವಿಜಯಾಂಬಿಕೆ' ಎಲ್ಲರೂ ಓದಬಹುದಾದ್ದು. ಶ್ರೀ ನೆಗಳೂರ ರಂಗನಾಥರ 'ಕುಟುಂಬಯೋಜನೆ', ಶ್ರೀಮತಿ ಸುಶೀಲಾಕೊಪ್ಪರ ಅವರ 'ಕುಟುಂಬಸೌಖ್ಯ', ಶ್ರೀಮತಿ ಸರೋಜಿನಿಮಹಿಷಿಯವರ 'ಇಂದಿನ ಮಧ್ಯಮವರ್ಗದ ಮಹಿಳೆಯರ ಕೆಲ ಸಮಸ್ಯೆಗಳು' ಮತ್ತು ಶ್ರೀಮತಿ ಶಾಂತಾದೇವಿ ಮಾಳವಾಡರ 'ಮಧ್ಯಮವರ್ಗದ ಮಹಿಳೆಯ ಇಂದಿನ ಸಮಸ್ಯೆಗಳು' ಒಳ್ಳೆಯ ವಿಚಾರಪರವಾದ ಲೇಖನಗಳು. ಶ್ರೀಮತಿ ವ್ಯಾಸರಾಯಬಲ್ಲಾಳರ 'ಕನ್ನಡ ಸಣ್ಣಕತೆಗಳ ಗತಿ ಮತ್ತು ಪ್ರಗತಿ' ತಕ್ಕಮಟ್ಟಿಗಿದೆ. ಕನ್ನಡ ಸಣ್ಣ ಕತೆಗಳ ಸಮಗ್ರವೂ ಸರ್ವಾಂಗೀಣವೂ ಆದ ಪ್ರಗತಿಯನ್ನು ಇದು ತೋರಿಸುತ್ತದೆ ಎಂದು ಹೇಳುವಂತಿಲ್ಲ. ಕವಿವರ್ಯ ಶ್ರೀ ಅಂಬಿಕಾತನಯದತ್ತರ 'ಪಡೆದಪ್ಪನಾಗು' ಎಂಬ ಕವನ ಹಳೆಯದಾದರೂ ಸುಂದರವಾಗಿದೆ. ಶ್ರೀ ಈಶ್ವರ ಸಣಕಲ್ಲರ 'ಕಾಮನ ಬಿಲ್ಲು' ಉತ್ತಮವಾದೊಂದು ಭಾವಗೀತೆ. ಇಷ್ಟೇ ಅಲ್ಲದೆ ಶ್ರೀಗಳಾದ ಹಿರೇಮಲ್ಲೂರ

ಈಶ್ವರನ್, ವಸಂತಕವಲಿ, ಬಿ. ಎಚ್. ಶ್ರೀಧರ, ನಾ. ಕಸ್ತೂರಿ, ಸು. ರಂ. ಎಕ್ಕುಂಡಿ, ಗೋಪಾಲಕೃಷ್ಣ ಅಡಿಗ ಮೊದಲಾದವರ ಹರಟೆಗಳು, ಕತೆಗಳು, ಕವನಗಳು, ಪ್ರಬಂಧಗಳೂ ಇವೆ. ಪ್ರೊ|| ವಿ. ಎಂ. ಇನಾಂದಾರರ 'ಮುಗಿಯದ ಕತೆ' ಎಂಬ ಕಾದಂಬರಿಯೂ ಇಲ್ಲಿ ಅಚ್ಚಾಗಿದೆ.

ಒಟ್ಟಿನಲ್ಲಿ 'ದೀಪದಾನ' ಚೆನ್ನಾಗಿದೆ; ಬೋಧಪ್ರದವಾಗಿದೆ; ಇನ್ನು ಮುಂದೆಯೂ ಇಂಥ ವಾರ್ಷಿಕೆಗಳು ಹಲವಾರು ಬರುವಂತೆ ಕನ್ನಡಿಗರು ಪ್ರಕಾಶಕರಿಗೆ ಅವಕಾಶ ಕಲ್ಪಿಸಲಿ!

ದೇ. ಜ. ಗೌ.

*
* *

ಜಾಕ್‌ಲಂಡನ್ [ಪರಿಚಯಾತ್ಮಕ ಗ್ರಂಥ]—ಸಂಪಾದಕರು: ಶ್ರೀ. ವೈ. ಎನ್. ಕೃಷ್ಣಮೂರ್ತಿ; ಪ್ರಕಾಶಕರು: ಪುರೋಗಾಮಿ ಪ್ರಕಾಶನ, ಬೆಂಗಳೂರು ೪; ಪುಟಗಳು ೯೨+೪; ಬೆಲೆ, ರೂ. ೧-೪-೦

ಜಗತ್ತಿನ ಸಾಹಿತ್ಯಕ್ಷೇತ್ರದಲ್ಲಿ ಪ್ರಸಿದ್ಧರಾದ ಲೇಖಕರನ್ನು, ಅವರ ಕೃತಿಗಳನ್ನು ಓದಿ ಅರಿಯುವುದು, ಆನಂದಿಸುವುದು ಎಲ್ಲರಿಗೂ ಸಾಧ್ಯವಾದುದಲ್ಲ. ಕಾಲವಿಲ್ಲದಿರುವುದೋ ಭಾಷೆ ತಿಳಿಯದಿರುವುದೋ ಇದಕ್ಕೆ ತಡೆಯಾಗುತ್ತದೆ. ಮೂಲ ಕೃತಿಗಳನ್ನು ಓದುವ ಅನುಕೂಲ, ತಾಳ್ಮೆ ಬಹುಜನರಿಗಿರುವುದಿಲ್ಲ. ಆದರೆ ಅಂಥ ಲೇಖಕರ ಬಗ್ಗೆ ತಿಳಿದುಕೊಳ್ಳುವ ಆಸೆ ಹಲವರಿಗಿರುತ್ತದೆ. ಈ ದೃಷ್ಟಿಯಲ್ಲಿ ಅದಕ್ಕನುಗುಣವಾದ ಪರಿಚಯಾತ್ಮಕ ಗ್ರಂಥಗಳ ಆವಶ್ಯಕತೆ ಎಲ್ಲ ಭಾಷೆ, ಸಾಹಿತ್ಯಗಳಲ್ಲೂ ಇದೆ. ಆದರೆ ನಮ್ಮಲ್ಲಂತೂ ಆ ಬಗೆಯ ಕೃತಿಗಳೇ ಇಲ್ಲ. ಕೆಲವು ವರ್ಷಗಳ ಕೆಳಗೆ ಶ್ರೀ ಅ. ನ. ಕೃಷ್ಣರಾಯರು, ರಷ್ಯಾದ ಮಹಾಲೇಖಕನಾದ ಮ್ಯಾಕ್ಸಿಂಗಾರ್ಕಿಯನ್ನು ಕುರಿತು ಇಂಥದೊಂದು ಬೃಹದ್ ಗ್ರಂಥವನ್ನು ಸಂಪಾದಿಸಿ ಪ್ರಕಟಿಸಿದರು. ಅವನ ಜೀವನದ ಸೂಕ್ಷ್ಮ ಪರಿಚಯ, ಹಲವಾರು ಕೃತಿಗಳ ಪರಿಚಯ, ಕೆಲವು ಕತೆಗಳು, ಚಿತ್ರಗಳು ಇವೆಲ್ಲದರಿಂದ ಕೂಡಿ ಆ ಕೃತಿ ಕನ್ನಡ ಜನತೆಗೆ ಪ್ರಿಯವಾದದ್ದು ಮಾತ್ರವಲ್ಲ, ಉಪಯುಕ್ತವೂ ಆಯಿತು.

ಅದೇ ಉದ್ದೇಶವನ್ನಿಟ್ಟುಕೊಂಡ ಆದರೆ ಅಷ್ಟು ಹಿರಿಯದಲ್ಲದ ಇನ್ನೊಂದು ಕೃತಿ—ಜಾಕ್‌ಲಂಡನ್—ಇಷ್ಟು ವರ್ಷಗಳ ಮೇಲೆ ಪ್ರಕಟವಾಗಿರುವುದು ಸಂತೋಷದ ಸಂಗತಿ. ಜಾಕ್‌ಲಂಡನ್ ಈ ಶತಮಾನದ ಲೇಖಕರಲ್ಲಿ ಹೆಸರಾದವನು; ಅಮೆರಿಕಾದ ಸಾಹಿತಿಗಳಲ್ಲಿ ಅಗ್ರಗಣ್ಯನಾದವನು. "ನಾನು ಬರೆದ ಲೇಖನವನ್ನು ನಾನು ಬರೆದಾದಮೇಲೆ ದ್ವೇಷಿಸುತ್ತೇನೆ. ನನಗೆ ಹಣಬೇಕು. ಅದಕ್ಕೇ ನಾನು

ಬರೆಯುವುದು. ಈ ರೀತಿ ಹಣಗಳಿಸುವುದೂ ಸುಲಭ. ಆದರೆ ನನಗೆ ಸಾಧ್ಯವಾಗುವುದಾದರೆ, ಎಂದರೆ ನನಗೆ 'ಸ್ವಾತಂತ್ರ್ಯ' ವಿದ್ದರೆ, ಈ ಶ್ರೀಮಂತ ಸಮಾಜವನ್ನು ಕಂಡರೆ ನನಗೆ ಎಷ್ಟು ಕೋಪ, ತಿರಸ್ಕಾರ ಎಂಬುದನ್ನು ತಿಳಿಸುವುದರ ಹೊರತಾಗಿ ನಾನು ಬೇರೆ ಏನನ್ನೂ ಬರೆಯುವುದೇ ಇಲ್ಲ" ಎಂದು ಜಾಕ್‌ಲಂಡನ್ ಹೇಳಿಕೊಂಡಿದ್ದರೂ, ಅವನ ಕೃತಿಗಳು ಕಲಾಕೃತಿಗಳು. ಏಕೆಂದರೆ ಅವನು ಪ್ರತಿಭಾವಂತ; ಕ್ರಿಯಾತ್ಮಕ ಕಲಾವಿದ. ಪ್ರತಿಭಾವಂತನಾದ ಕಲಾವಿದ ತನ್ನ ಕೃತಿಗಳ ಬಗ್ಗೆ ಯಾವ ಮಾತು ಹೇಳಿಕೊಂಡರೂ, ಅವನ ಸೃಷ್ಟಿ ಮಾತ್ರ ಉತ್ತಮವಾದ ಕಲೆ ಆಗುತ್ತದೆಂಬುದಕ್ಕೆ ಜಾಕ್‌ಲಂಡನ್ ಸಾಕ್ಷಿ!

ಬಡತನದ ಕುಟುಂಬದಲ್ಲಿ ಜಾಕ್‌ಲಂಡನ್ ೧೮೭೬ ರಲ್ಲಿ ಹುಟ್ಟಿದ. ತಂದೆ ತಾಯಿ ತಮ್ಮ ಮಗುವಿನ ಭವಿಷ್ಯವನ್ನು ಕುರಿತು ಬಹುವಾಗಿ ಚಿಂತಿಸಿದರೂ, ಅವನ ಬದುಕು ಸುಖಕರವಾಗಬೇಕೆಂದು ಆಶಿಸಿದರೂ ತಮ್ಮ ದಾರಿದ್ರ್ಯದ ದೆಸೆಯಿಂದ ಅವನನ್ನು ಪ್ರಾಥಮಿಕ ಶಾಲೆಗಿಂತ ಮುಂದೆ ಓದಿಸಲು ಸಮರ್ಥರಾಗಲಿಲ್ಲ. ಜಾಕ್‌ಲಂಡನ್ ತನ್ನಂತಹ ದೌರ್ಭಾಗ್ಯ ಜೊತೆಗಾರರನ್ನೇ ಕೂಡಿಕೊಂಡು ಕಳ್ಳತನ, ದರೋಡೆಗಳಲ್ಲಿ ಭಾಗವಹಿಸುತ್ತಿದ್ದ. ಸಮಾಜದ ಏರು ತಗ್ಗುಗಳು ಆಗ ಇಲ್ಲದಿರಲಿಲ್ಲ. ಪ್ರತಿಭಾಸಂಪನ್ನ ಜಾಕ್ ಸಮಾಜದ 'ಕೀಳುವರ್ಗ'ದಿಂದ ಮೂಡಿಬಂದ. ಹದಿನೈದನೆಯ ವರ್ಷದಲ್ಲಿ ಶಾಲೆಯಿಂದ ಹೊರಬಂದ ಅವನು ತನ್ನ ಸಂಗಾತಿಗಳೊಡನೆ ಸೇರಿಕೊಂಡು ಕಡಲುಗಳ್ಳನಾದ. ಅಲ್ಲಿಂದ ಮುಂದೆ ಅವನು ನಾವಿಕ ಕಾರ್ಖಾನೆಯ ಕೂಲಿಯಾಗಿ, ಬಟ್ಟೆ ಒಗೆಯುವ ಡೋಬಿಯಾಗಿ, ಹೊಲ ಉಳುವ ರೈತನಾಗಿ, ತೋಟದ ಕೆಲಸಗಾರನಾಗಿ, ಮೈತುಂಬ ದುಡಿದು, ಅರಹೊಟ್ಟೆ ಊಟ ಮಾಡಿ, ಅನೇಕ ವರ್ಷಗಳ ಕಾಲ ಈ ಶೋಷಣೆಗೆ ಒಳಗಾಗಿ, ಸಮಾಜದ ಅತ್ಯಂತ ಕೆಳಮಟ್ಟದ ಜನರೊಡನೆ ಬೆರೆತು ಅವರ ಜೀವನದ ರೀತಿ-ನೀತಿಗಳನ್ನು, ನೋವು-ನಲಿವುಗಳನ್ನು, ಆಸೆ-ಆಕಾಂಕ್ಷೆಗಳನ್ನು ಕುತೂಹಲ ವಿಷಾದಗಳಿಂದ ನೋಡಿ ವಿಚಾರಮಾಡಿದ. ಇಷ್ಟು ಕಾಲದ ಅವನ ದುಡಿಮೆಗೆ ಬಂದ ಪ್ರತಿಫಲವೆಂದರೆ, ಅಪಾರವಾದ ಅನುಭವ.

ಈ ಅವಧಿಯ ತನ್ನ ಜೀವನದಿಂದ ಅವನಿಗೆ ಬೇಸರ ಬಂದು ಜ್ಞಾನಾರ್ಜನೆಗಾಗಿ ಹಾತೊರೆದ. ಪ್ರೌಢಶಾಲೆಗೆ ಸೇರಿ, ಮುಂದೆ ೧೮೯೬ ರಲ್ಲಿ ಕ್ಯಾಲಿಪೋರ್ನಿಯಾ ವಿಶ್ವವಿದ್ಯಾನಿಲಯ ಸೇರಿ, ಅಭ್ಯಾಸ ಮುಂದುವರಿಸಲು ಸಾಧ್ಯವಾಗದೆ ಕಾಲೇಜಿಗೆ ಕೈಮುಗಿದ. ಕಾಲೇಜಿನ ವಿದ್ಯಾರ್ಥಿಯಾಗಿ ಅಭ್ಯಾಸಮಾಡುವ ಅವಕಾಶ ಅವನಿಗೆ ಇನ್ನೊಮ್ಮೆ ದೊರೆಯಲಿಲ್ಲ. ಆದರೆ ಜೀವಮಾನ ಪರ್ಯಂತ ತನ್ನ ಅಭ್ಯಾಸ ನಡೆಸಿದ.

ಅವನ ಅನುಭವ, ಅಭ್ಯಾಸಗಳು ಅವನ ಕಣ್ಣು ತೆರೆಸಿದವು. ಅವನೊಬ್ಬ ಸಮಾಜವಾದಿಯಾಗಿ ಸಂತೋಷಪಟ್ಟ. ಉತ್ತಮ ವಾಗ್ಮಿಯಾದ. ಸೆರೆಮನೆಗೆ ಹೋಗಿ ಬಂದ. ಕೊನೆಗೆ ತನ್ನ ಬದುಕಿನ ಆರಂಭದಷ್ಟೇ ವಿಚಿತ್ರವಾಗಿ, ಲೇಖನ ಕಾರ್ಯವನ್ನೂ ಆರಂಭಿಸಿದ. ಆದರೆ ಕೆಲವು ಕಾಲದಲ್ಲೇ ಅದರಲ್ಲಿ ಅವನು ಯಶಸ್ವಿಯಾದ. ಐದು ಕಾದಂಬರಿ, ಮೂರು ಕಥಾಸಂಗ್ರಹ, ಮೂರು ಪ್ರಬಂಧಸಂಗ್ರಹ ಬರೆದ. ಅವೆಲ್ಲ ಅವನಿಗೆ ಹೆಸರು ತಂದವು ; ಅವೇ ಇವನ ಹೆಸರನ್ನು ಉಳಿಸುತ್ತವೆ.

ಕ್ಯಾಲಿಫೋರ್ನಿಯಾದ ತನ್ನ ಮನೆಯಲ್ಲಿ, ೧೯೧೬ ರಲ್ಲಿ ಜಾಕ್‌ಲಂಡನ್ ಆತ್ಮಹತ್ಯ ಮಾಡಿಕೊಂಡ! ನಾಗರಿಕತೆಯ ಆಡಂಬರದ ಈ ಲೋಕದಲ್ಲಿ ತೀರ ಅಸುಖಿಯಾಗಿದ್ದ ಲಂಡನ್ ಮುಕ್ತಿಪಡೆದ. ಬಾಳುವೆಯ ಬೇಗೆಯಲ್ಲಿ ಬೆಂದ ಲಂಡನ್ ಅವನ ಕೃತಿಗಳಲ್ಲೆಲ್ಲ ಅದನ್ನೇ ಚಿತ್ರಿಸಿದ. ವಾಸ್ತವಿಕತೆ-ಆದರ್ಶಗಳನ್ನು ಮೇಳವಿಸಿದ. "ಅಮೆರಿಕಾದ ಕಾರ್ಮಿಕ ವರ್ಗದ ಅತ್ಯಂತ ಜನಪ್ರಿಯ ಲೇಖಕನೆಂದರೆ ಜಾಕ್ ಲಂಡನ್," ಎಂದನ್ನಿಸಿಕೊಂಡ ಇವನು ಅದ್ಭುತ ವ್ಯಕ್ತಿ, ದೊಡ್ಡ ಲೇಖಕ.

ಪ್ರಕೃತ ಪುಟ್ಟ ಪುಸ್ತಕದಲ್ಲಿ ಈ ಹಿರಿಯ ಚೇತನದ ಸೂಕ್ಷ್ಮ ಪರಿಚಯವಿದೆ. 'ಬದುಕಿನ ನಿಯಮ,' 'ಗೋಲಯ್ಯ,' 'ಜೀವನದ ಪರಮಾರ್ಥವೇನು ?' ಎಂಬ ಮೂರು ಕೃತಿಗಳ ಅನುವಾದವಿದೆ. 'ಬರ್ನ್ಟ ಹೀಲ್' ಮತ್ತು 'ಸೀವುಲ್ಫ್' ಎಂಬೆರಡು ಕಾದಂಬರಿಗಳ ವಿಮರ್ಶೆಯಿದೆ. 'ಕ್ರಾಂತಿಕಾರಿ ಸಮಾಜವಾದಿ,' 'ನಾವೆಚ್ಚಿಕೊಂಡ ಜಾಕ್‌ಲಂಡನ್' ಎಂಬೆರಡು ಲೇಖನಗಳಲ್ಲಿ ಅವನ ವ್ಯಕ್ತಿತ್ವದ ಹಿರಿಮೆಯ ಪ್ರಶಂಸೆಯಿದೆ. ಈ ಲೇಖನಗಳನ್ನು ಕನ್ನಡಿಗರಿಗೆ ಪರಿಚಿತರಾದ ವೈ. ಎನ್. ಕೃಷ್ಣಮೂರ್ತಿ, ಸು. ರಂ. ಎಕ್ಕುಂಡಿ, ಎಚ್ಚೆಸ್ಕೆ, ಎಲ್. ಎಸ್. ಶೇಷಗಿರಿರಾವ್, ಕೆ. ಎಸ್. ಶ್ರೀನಾಥ, ಎನ್. ಎಸ್. ಸೀತಾರಾಮಶಾಸ್ತ್ರಿ ಇವರುಗಳು ಬರೆದಿದ್ದಾರೆ. ಮುಖಪತ್ರದ ಮೇಲೆ ಪ್ರಸಿದ್ಧ ಕಲಾವಿದ ಆರ್. ಎಸ್. ಎನ್. ಅವರು ಬರೆದ ಲಂಡನ್ನನ ಚಿತ್ರವಿದೆ. ಈ ಪುಸ್ತಕದ ಒಂದು ಕೊರತೆಯೆಂದರೆ, ಅದು ಸಾಕಷ್ಟು ಮೈತುಂಬಿಕೊಂಡು ಬರದಿರುವುದು. ಆದರೆ ಸಂಪಾದಕರು 'ಮುಂದೆ ಸಮರ್ಪಕವಾದ ಪ್ರಶಸ್ತಿಗ್ರಂಥವೊಂದನ್ನು ತರುವ ತೀವ್ರಾಭಿಲಾಷೆ ನಮಗಿದೆ' ಎಂದು ಹೇಳಿಕೊಂಡಿರುವುದು ಸಮಾಧಾನತರುತ್ತದೆ. ಆ ಗ್ರಂಥದ ಬಗ್ಗೆ ಆಸಕ್ತಿಯನ್ನು ಈ ಪುಸ್ತಕ ಪ್ರಚೋದಿಸುತ್ತದೆ. ಕನ್ನಡ ವಾಚಕರಿಗೆ ಜಾಕ್‌ಲಂಡನ್ನನ ಪರಿಚಯ ಮಾಡಿಸಿಕೊಟ್ಟ ಈ ಯತ್ನಕ್ಕಾಗಿ ಸಂಪಾದಕರಿಗೂ, ಪ್ರಕಾಶಕರಿಗೂ ಅಭಿನಂದನೆಗಳು ಸಲ್ಲಬೇಕು.

—ಹಾ. ಮಾ. ನಾಯಕ.

***

ಸಂತಾನ—ಲೇಖಕರು : ಸು. ರಂ. ಎಕ್ಕುಂಡಿ ; ಪ್ರಕಾಶಕರು : ಪ್ರೊ|| ರಂ. ಶ್ರೀ ಮುಗಳಿ, ಕಾವ್ಯಪ್ರಕಾಶನ ಸಮಿತಿ, ವಿಶ್ರಾಮಬಾಗ, ಸಾಂಗಲಿ ; ಬೆಲೆ, ರೂ. ೧-೪-೦.

ಕೆಲವು ವರ್ಷಗಳಿಂದ ನಮ್ಮ ನಾಡಿನ ಹಲವಾರು ಪತ್ರಿಕೆಗಳಲ್ಲಿ ತಮ್ಮ ಕವನ ಕಥೆ ಲೇಖನಗಳನ್ನು ಪ್ರಕಟಿಸಿ ಈ ತಲೆಮಾರಿನ ಆಶಾದಾಯಕ ಕವಿಗಳಲ್ಲಿ ಒಬ್ಬರಾಗಿರುವ ಶ್ರೀಯುತ ಸುಬ್ಬಣ್ಣ ರಂಗನಾಥ ಎಕ್ಕುಂಡಿ ಅವರ 'ಸಂತಾನ' ಎಂಬ ಕವನ ಸಂಕಲನವೂ 'ಆನಂದತೀರ್ಥರು' ಎಂಬ ನೀಳ್ಗವನವೂ ಇಷ್ಟು ತಡವಾಗಿಯಾದರೂ ಪ್ರಕಟವಾಗಿರುವುದು ಕನ್ನಡದ ರಸಿಕ ಓದುಗರಿಗೆ ಹೆಚ್ಚಿನ ಆನಂದವನ್ನುಂಟುಮಾಡಿದೆ. ಪ್ರಸ್ತುತ ಕವನಸಂಕಲನವನ್ನು ಪ್ರೊ|| ರಂ. ಶ್ರೀ ಮುಗಳಿ ಅವರು ಪ್ರಕಟಿಸಿದ್ದಾರೆ. ಪ್ರೊ|| ಗೋಕಾಕರು ಕವಿಯ ಮನೋಭಾವದ ದಿಗ್ದರ್ಶನಕ್ಕೆ ಬಹಳ ಉಪಕಾರಿಯಾಗುವಂತಹ ಉತ್ತಮ ಮುನ್ನುಡಿಯೊಂದನ್ನು ಬರೆದಿದ್ದಾರೆ.

ಭಾವಗೀತಗಳು, ಕಥನಕವನಗಳು, ಅನುವಾದಿತ ಕವನಗಳು ಹೀಗೆ—ಈ ಸಂಕಲನದಲ್ಲಿ ಮೂರು ಭಾಗಗಳಿವೆ. ಇದು ಸ್ಥೂಲವಾದ ವಿಭಜನೆ.

ಮೊದಲ ಭಾಗ 'ಪ್ರೀತಿ' ಎಂಬ ಒಳ್ಳೆಯ ಚಿಕ್ಕ ಕವನವೊಂದರಿಂದ ಮೊದಲಾಗುತ್ತದೆ. ಎರಡನೆಯ ಕವನವೇ 'ಸಂತಾನ'. ಬೆಳಕು ದೇವರ ಬಳಿ ಹೋಗಿ 'ಸಂತಾನ ಕರುಣಿಸೆಂದು' ಬೇಡಿಕೊಳ್ಳುತ್ತದೆ. ದೇವವಾಣಿ 'ತಥಾಸ್ತು' ಎಂದು ಮೊಳಗುತ್ತದೆ. ಅಂತೆಯೇ ಕತ್ತಲೆಯೂ ದೇವರ ಬಳಿ ಹೋಗಿ ಸಂತಾನವನ್ನು ಬೇಡಿ ಪಡೆದುಕೊಳ್ಳುತ್ತದೆ.

'ಅದಿತಿ ಬೆಳಕು ತೇಜಸ್ವಿನಿ, ಸಂತಾನವೆ ದೇವಕುಲ
ದಿತಿ ತಾಮಸಿ ನಿಶಾಚರಿಯು, ಸಂತಾನವೆ ದೈತ್ಯಕುಲ'
'ನೆಲ ಮುಗಿಲಿನ ಸಂತಾನವೆ ನೋಡ'

ಎಂಬ ವಿಲಕ್ಷಣ ಭಾವದಿಂದ ಚಕಿತಗೊಳಿಸಿ ಮೊದಲಾಗುತ್ತದೆ 'ಹಾಡು' ಎಂಬ ಒಂದು ಉತ್ತಮ ಕವನ.

'ನೀಲವ್ಯೋಮದ ನೀರಿನ ಹರಕೆ
ನೆಲದೊಳಗಿಳಿದಿದೆ ಬಳ್ಳಿಗೆ ಮರಕೆ'–

ಎನ್ನುವ ಸಮಗ್ರವೂ ಸುಂದರವೂ ಆದ 'ಕಾಣ್ಕೆ' ಈ ಕವನದ ಜೀವಾಳ. 'ಗಾಂಧೀಜಿ'ಯ ಬಗೆಗಿರುವ ಗೀತ 'ಉಸಿರೇ ಇರಲಿಲ್ಲ'ವಾದ ಈ ದೇಶದ ಸಂತಾನ ತಲೆಯೆತ್ತಿದ ಬಗೆಯನ್ನು ಸೂಚಿಸುತ್ತದೆ. ನಾಡಿನ ಜಾಗೃತಿ ಮತ್ತು ಗಾಂಧೀಜೀಯ ಚೇತನ ಇವೆರಡೂ ಅಭಿನ್ನ ಎನ್ನುವಂತೆ ಈ ಕವನ ರಚಿತವಾಗಿದೆ. ಅಂತೆಯೇ ಅದಕ್ಕೊಂದು ನೂತನವಾದ ಸೊಬಗಿದೆ.

'ಮುಗಿಲ ಗಂಗೆಗೂ ತೇಲಿಬಿಟ್ಟೆವೋ ನಮ್ಮ ಬಾಳ ದೋಣಿ'

ಎಂದು ಆರಂಭವಾಗುವ 'ಬೆಳಕು'

"ಬೆಳಕು ಮುಗಿಲ ಹೊರಹೊಮ್ಮಿ ಹರಿದು ಭೂಲೋಕದಲ್ಲಿ ಬಂದು
ತುಂಬಿ ತುಳುಕಿ ನಡೆದಾಗ ಕೇಳಿತಿಳೆ 'ಎಲ್ಲಿಗೆಲ್ಲಿಗೆಂದು
'ನನಗೆ ಸಂದಿತೆರಡಡಿಯದಾನ. ಮತ್ತುಳಿಯಿತಿನ್ನು ಒಂದು"

ಎಂದು ಮುಗಿದಾಗ ಓದುಗರ ಮೆಯ್ ರೋಮಾಂಚನಗೊಳ್ಳುತ್ತದೆ. ಮಾನವಕುಲ ನಿರ್ಮೂಲನಕ್ಕೆ ತಮ್ಮ ಶಕ್ತಿಯನ್ನು ಉಪಯೋಗಿಸುತ್ತಿರುವ ವಿಜ್ಞಾನಿಗಳು ಹಿರೋಷಿಮಾ ನಾಗಸಾಕಿಗಳ ಮೇಲೆ ಆಟಂಬಾಂಬ್ ಹಾಕಿದಾಗ:

'ತೊಟ್ಟಿಲಲ್ಲಿ ಸತ್ತಮಗು
ಬಾಡಲಿಲ್ಲ ನಕ್ಕನಗು. . . .
ಹೂಮಾಲೆಯ ಮುಗ್ಧವಧು
ಕುಡಿಯಲಿಲ್ಲ ಪ್ರಣಯಮಧು. . . .'

ಕವನದ ತೀವ್ರತೆಯನ್ನು ಈ ಕೆಲವು ಸಾಲುಗಳು ಒಮ್ಮಿಂದೊಮ್ಮೆಗೇ ಏರಿಸಿಬಿಡುತ್ತವೆ.

'ನೆಲದ ಹಾಲು ಕುಡಿದು ಜೀವ
ಮುಗಿಲನೇರಿ ನೆಲದ ಸಾವ
ಬಿತ್ತುತಿತ್ತು ಬೆಳೆಯುತಿತ್ತು. . . .'
'ನೆಲದ ತಲೆಗೆ ಭಸ್ಮಾಸುರ-
ಹಸ್ತ ಹರಕೆಯೆರೆದಿತ್ತು
ವಿಜ್ಞಾನ ಶಿವನ ಹಣೆಗಣ್ಣು ತೆರೆದಿತ್ತು'

'ವಿಜ್ಞಾನದ ಭಸ್ಮಾಸುರ'ನಿಗೆ ಕೊಟ್ಟ 'ಎಚ್ಚರಿಕೆ' ಈ ಭಾಗದ ಉತ್ತಮ ಕವನಗಳಲ್ಲೊಂದು.

'ಜನರು ನಿರಂಜನರಾಗಲಿ ಜ್ಯೋತಿ ಪರಂಜ್ಯೋತಿಯು'

ಎಂದು ಹಾರೈಸುವ 'ಸ್ವಸ್ತಿಸೂಕ್ತ'ದಲ್ಲಿ ಕವಿ ಋಷಿಯಾಗಿ ನಿಂತುದನ್ನು ನಾವು ಕಾಣುತ್ತೇವೆ.

ದ್ವೇಷ ಮತ್ತು ಮಮತೆಗಳು ಬೇರೆಬೇರೆಯಾಗಿ ಎರಡು ಮಹಲುಗಳನ್ನು ಕಟ್ಟಿದವು.

'ಮುಗಿಲಿನರುಣೋದಯಕೆ
ದೇವಕರುಣೋದಯಕೆ
ತಿಮಿರ ಶಿಲ್ಪವು ಕುಸಿದು ನೆಲದೊಳಿಳಿದಿತ್ತು'

'ಇಬ್ಬರು ಶಿಲ್ಪಿಗಳು' ಎಂಬ ಕವನದ ಭಾವ ಇದು. ಕನಸು ಕಣಸು ಕಾಣ್ಕೆ ಮತ್ತು ಬೇಡಿಕೆಗಳ ಪಾಕ 'ಪ್ರಾರ್ಥನೆ'.

'ಮನದ ಮಣ್ಣು ಹಣತೆಯಲ್ಲಿ ಮಿನುಗುತಿರಲಿ ಜ್ಯೋತಿಯು
ದೇವಕಣಗಿಲೆಗಳನರಳಿಸಿರಲಿ ಆದಿಮಾತೆಯು'

ಎಂಬ ಬೇಡಿಕೆ ಕವಿಯ ಕನಸು ಮನಸಿನಲ್ಲಿ ಬೆಳೆದು ಒಳಗಣ್ಣಿಗೆ ಕಂಡಾಗ ಹೊರ ಹೊಮ್ಮಿದುದು. 'ಕಲ್ಪನಾ ಕಲ್ಪವೃಕ್ಷ'ಕ್ಕೆ ಈ ಭಾಗದ ಅಗ್ರತಾಂಬೂಲ ಸಲ್ಲಬೇಕು.

'ಕಲ್ಪನಾ ಕಲ್ಪವೃಕ್ಷ-
ನೆಲದೊಳಿದರ ಮೂಲ ಬೇರು
ಕುಡಿವುದೇಳು ಕಡಲ ನೀರು
ಸೂರ್ಯಚಂದ್ರರಿದರ ಹಣ್ಣು. . . .'

ಸತ್ಯವೇ ಈ ಕಲ್ಪವೃಕ್ಷದ ತಾಯಿಬೇರಂತೆ. ಚೆಲುವು ರೆಂಬೆಗೊಂಚಲಂತೆ.

"ಬಳ್ಳಿಯೊಂದು ಹರಿದು ಬಂದು
ವೃಕ್ಷದಡಿಗೆ ನಿಂದಿತು
'ಏನು ಬಯಕೆ?' ಎಂದಿತು
'ನಿನ್ನೊಳರಳಿ ಹೂವ ತೆರೆದು ಹಬ್ಬಿಬಿಡುವೆನೆ'ಂದಿತು
'ಮಾತು ಹೂತು ಬಂದಿತು.'"

ಈ ರಮಣೀಯವೂ ವಿಸ್ತಾರವೂ ಆದ ಕಲ್ಪನೆ ಯಾರನ್ನೂ ಬೆರಗುಗೊಳಿಸುವಂಥದು. ಇದನ್ನೋದಿದಾಗ ಬೇಂದ್ರೆಯವರ 'ಭಾವಗೀತೆ'ಯ ನೆನಪು ಬರುತ್ತದೆ. 'ಅಖಿಲ ದೇಹಿನಾಂ ಅಂತರಾತ್ಮದೃಕ್' ಎಂಬ ಭಾಗವತದ 'ಗೋಪಿಕಾಗೀತೆ'ಯ ಸ್ಫೂರ್ತಿಯಿಂದ 'ಅವತಾರ' ಎಂಬ ಕವನ ಮೂಡಿಬಂದಿದೆ.

'ನಾದಲೋಲ ಗೋಪಾಲಕೃಷ್ಣ ಬಂದು
ಪ್ರಾಣ ಕಮಲದಲಿ ಕೊಳಲನೂದಿದಂದು
ಅಂತರಂಗ ಭಗವಂತರಂಗವಾಗಿ
ಉಕ್ಕೇರಿ ಬಂದಿತಾನಂದ-ಭೃಂಗವಾಗಿ'

ಕವಿಯ ತೀವ್ರಾನುಭವಕ್ಕೆ ಈ ಸುಂದರ ಅಭಿವ್ಯಕ್ತಿರೂಪವೇ ಸಾಕ್ಷಿ. 'ಮೀನು ಪೇಟೆ' ಈ ಭಾಗದ ಇನ್ನೊಂದು ಉತ್ತಮ ಕವನ.

'ವರುಷ ವರುಷ ಕಳೆದರೂ
ಹರೆಯ ಮುಪ್ಪು ತಳೆದರೂ
ತೆಂಗಿನ ಸಸಿ ಬೆಳೆದರೂ

ಎಂಬಲ್ಲಿಯ ಕೊನೆಯ ಸಾಲು ಫಕ್ಕನೆ ನಮ್ಮ ಚಿತ್ರವನ್ನು ಅ ತೆಂಗಿನ ತವರಿಗೆ ತೊನೆದೊಯ್ಯುತ್ತದೆ.

'ಕುಳಿತಳಿಲ್ಲಿ ಮತ್ಸ್ಯಗಂಧಿ
ಉಟ್ಟುಕೊಂಡು ಹರುಕು ಚಿಂದಿ
ನೊಂದ ಜೀವ ನೂಲುತ್ತಿತ್ತು
ಸುಖಸ್ವಪ್ನದರ್ಶನ'

ಹರುಕು ಚಿಂದಿಯನ್ನುಟ್ಟು ಸುಖಸ್ವಪ್ನಗಳನ್ನು ನೇಯುತ್ತಿದ್ದಾಳೆ!—ಈ ಸಾಲುಗಳ ಹಾಗೂ

'ಗಾಳಿ ಕಡಲ ನೀಸಿದಲ್ಲಿ
ದುಃಖಲಿಪಿಯ ಬರೆಯಿತು'

ಎಂಬೆರಡು ಸಾಲುಗಳ ಸವಿ ಹೇಳಿತೀರುವುದಲ್ಲ! ಅದು ಅನುಭವಕ್ಕೆ ಮಾತ್ರವೇ ವೇದ್ಯ. 'ದೋಣಿಯ ಹಾಡು' ಜನಪದವಾಣಿಯಲ್ಲಿ ಸೊಗಸು ಮೂಡಿಸಿಕೊಟ್ಟ ಒಂದು ಸೊಬಗಿನ ಚಿಂತಾಮಣಿ. 'ರೈತಸಭೆ' 'ಮದುವೆ' 'ಬ್ಯಾಂಕ್ ಕಾರಕೂನನ ವಿದ್ಯುತ್‌ಪ್ರಣಯ' ಇವು ಅಣಕ ಪ್ರಧಾನವಾದವು. ಉಳಿದ ಕವನಗಳೆದುರಿನಲ್ಲಿ ಇವು ತುಸು ಮಂಕಾಗಿ ತೋರುತ್ತವೆ.

ಇಲ್ಲಿನ ಕಥನಕವನಗಳು ಎಕ್ಕುಂಡಿಯವರ ಒಂದು ವೈಶಿಷ್ಟ್ಯವನ್ನು ಎತ್ತಿ ತೋರಿಸುತ್ತವೆ. ಭಾರತೀಯ ಪುರಾಣಗಳಲ್ಲಿನ ಕಥೆಗಳು ಇವರ ಮನಸ್ಸನ್ನು ಸೆಳೆದಿವೆ. ಜನರಿಂದ ಸೃಷ್ಟಿಯಾದ ಈ ಕಥೆಗಳ ಹಿಂದಿರುವ ಸಂಕೇತಗಳು, ತತ್ವಗಳು, ಮತ್ತು ಕಲ್ಪನಾಪ್ರತಿಭೆ ಅಂತಹ ಸಾಂಕೇತಿಕ ಕಥೆಗಳನ್ನು ವಿಸ್ತರಿಸಲು, ಬೇರೆಬೇರೆ ನೋಟಗಳಿಂದ ನೋಡಲು ಎಕ್ಕುಂಡಿಯವರಿಗೆ ಸ್ಫೂರ್ತಿಯನ್ನೊದಗಿಸಿಕೊಟ್ಟಿವೆ. ಆಯಾ ಕಥೆಗಳನ್ನು ಆಯಾ ಕಾಲದ ಜನಮನೋಭಾವದ ಬೆಳಕಿನಲ್ಲೆ ಪರಿಚಯಮಾಡಿಕೊಂಡು ಅವುಗಳಲ್ಲಡಗಿರುವ ಸಾರ್ವತ್ರಿಕ ತತ್ವಗಳನ್ನು ಹಿಂಡಿ ತೆಗೆದು ಆ ಸಾರವನ್ನು ಕಥಾಶರೀರದಲ್ಲೆ ಐಕ್ಯಗೊಳಿಸಿ ನೀಡಿದ್ದಾರೆ, ಈ ಕಥನಕವನಗಳಲ್ಲಿ. ಈ ತತ್ವಸಾರ ಕವನದ ಕೊನೆಯಲ್ಲೊ ಇಲ್ಲವೆ ಪ್ರತಿಪದ್ಯಗಳ ಕೊನೆಯಲ್ಲಿ ಮರುಕೊಳಿಸಿಯೋ ತನ್ನ ಅಭಿವ್ಯಕ್ತಿಯನ್ನು ಪಡೆದುಕೊಳ್ಳುತ್ತದೆ.

'ಅವಧೂತ' ಎಂಬ ಕವನ 'ಬಯಲದೇಹಿ'ಯಾದ ಶುಕಮುನಿಯ ನಿರ್ಲಿಪ್ತತೆಯನ್ನು ಸೂಚಿಸುತ್ತದೆ. 'ಹಕ್ಕಿಯಂತೆ ಕಿಲಿಕಿಲಿಸಿ ನಕ್ಕರೋ . . .' ಎಂಬ ಸಾಲು ಕವನದುದ್ದಕ್ಕೂ ಮತ್ತೆ ಮತ್ತೆ ಮರುಕೊಳಿಸಿ ಹೊಳಲಿಟ್ಟು ಒಂದು ನೂತನ ಸೊಬಗನ್ನು ತರುತ್ತದೆ. ಅಲೆಯಲೆಯಾಗಿ ಮೊರೆಯುವ ಈ ನಗು ಕೊನೆಯಲ್ಲಿ ಹೀಗೆ ಶಮಸ್ಥಿತಿಯನ್ನು ಪಡೆದು ಸೊಬಗು ಭವ್ಯತೆಗೇರುತ್ತದೆ:

'ಅವರು ನಕ್ಕ ನಗೆ ಮುಗಿಲ ತುಂಬಿತೋ ಮೇಘಮಾಲೆಯಾಗಿ'

'ಗುರುಹಸಾದವಿದು ಸಮೀರ' ಎಂಬಲ್ಲಿ ಗುರುಶಿಷ್ಯರಿಗೆ ದೇವಕರುಣೆಯನ್ನು ಕುರಿತು ಹಾಡಿದ ಹಾಡಿದೆ. ಅವರು ಹಾಡುತ್ತಿರಲು

'ಕಡಲತೆರೆಗಳೋಡಿ ಬಂದವೀಚಿ ಮಳಲತಡಿ'

ಪ್ರಕೃತಿಯ ಚೆಲುವು ಈ ಕವಿಯ ಕಣ್ಣಿಗೆ ಕಾಣುವ ಬಗೆಯನ್ನೇ ಮೇಲಿನ ಪದ್ಯದಲ್ಲಿ ನಾವು ಗುರುತಿಸಬಹುದು.

'ಅಮರಾವತಿಯೊಳಗಪ್ಸರ ಚೆಲುವಿನ ಮೊಗ್ಗೆಗಳಿನ್ನೂ ಅರಳಿಲ್ಲ
ತಪಸೌಂದರ್ಯದ ಹೂವಿನ ರಾಯಸ ನಂದನವನದೆಡೆ ತೆರಳಿಲ್ಲ'

'ಮರ್ತ್ಯಸೃಷ್ಟಿಯ ತಪಸೌಂದರ್ಯವ ದೇವಸೃಷ್ಟಿಗೆ ನೀಡಿದರು'

ಎಂಬ ಭಾವ ಕಥಾವಲಂಬನದ ಮೇಲೆ ಹಬ್ಬಿ ಹರಡಿದೆ 'ಊರ್ವಶಿ' ಎಂಬ ಕವನದಲ್ಲಿ. ಕನಕದಾಸರ ಭಕ್ತಿಗೆ ಮೆಚ್ಚಿ 'ಭಗವಂತನು ನೀರೆರೆದನು'. ಇದು ಮತ್ತೊಂದು ಕವನ.

'ಧ್ಯಾನಲೀನ ಕನಕದಾಸ ನಲಿದಿರೆ ಮನದಲ್ಲಿ
ಭಗವಂತನು ನೀರೆರೆದನು ತುಳಸೀವನದಲ್ಲಿ'

ಛಂದಸ್ಸಿನ ತಿರುವು ಈ ಎರಡು ಸಾಲುಗಳಿಗೆ ವಿಚಿತ್ರವಾದ ಚೆಲುವನ್ನಿತ್ತಿದೆ. ಕನಕದಾಸರ ಭಕ್ತಿಯನ್ನು ಕಂಡ ವಾದಿರಾಜರು ಹೀಗೆ ಹೇಳಿದರಂತೆ:

'ಗುಡಿಸಲದೊಳಗಿರುವ ಬೆಳಕು ಗುಡಿಯೊಳಿಲ್ಲ . . .'

'ನರನೊಳಗಿನ ನಾರಾಯಣನುದಯಿಸಿ ನರಕಾಸುರನನು ಮೆಟ್ಟಿರಲಿ
ಆತ್ಮಜ್ಯೋತಿಗಳಾರತಿಯೆತ್ತಲು ಪರಂಜ್ಯೋತಿಯದು ಹುಟ್ಟಿರಲಿ'

ಎಂದು ಹಾರೈಸುವ ಹರಸುವ ಭಾವ 'ಪಯಣ' ಎಂಬ ಕವನದಲ್ಲಿದೆ.

'ತೇಜಃಪುಂಜದ ಮಲರಿನ ಕುಂಜದ ದೀಪೋತ್ಸವ ಸಿರಿ ನಿಮಗಿರಲಿ
ಅಶ್ವಾರೋಹಿಕುಮಾರ ಸಮೀರನ ಸತಿಯಾಗುವ ಸುಖವೆಮಗಿರಲಿ'

ಎಂದು ಮದನಕುಮಾರನನ್ನು ಬೇಡಿ 'ಮಲಯಗಿರಿಯ ಮಧುಚಂದನ ವನವಧು' ಸಮೀರಕುಮಾರನೊಡನೆ 'ಮಿಲನ' ಪಡೆಯುವುದು, ಕಂಪು ಗಾಳಿಗಳ ಸಂಮಿಳನವನ್ನು ಕಲಾತ್ಮಕವಾಗಿ ಚಿತ್ರಿಸುತ್ತದೆ.

'ರಾಜಯೋಗಿ' ಪಾರ್ಥ ಕಾವಿಯುಟ್ಟು ರೈವತಕಗಿರಿಯ ಅಶ್ವತ್ಥಮರದಡಿಯಲ್ಲಿ ಕುಳಿತಿದ್ದಾನೆ. ದ್ವಾರಕೆಯಲ್ಲಿ ಸತ್ಯಭಾಮೆಯ ಸಂಗಡ ಚದುರಂಗವಾಡುತ್ತ ಕುಳಿತ ಕೃಷ್ಣ ನಕ್ಕು ಹೇಳುತ್ತಾನೆ:

'ರೈವತಕ ಗಿರಿಯೊಳಶ್ವತ್ಥ ಮರದಡಿಯಲ್ಲಿ
ನಡೆದಿಹುದು ಕಣ್ಣು ಮುಚ್ಚಾಟ'

ಅರ್ಜುನ ಸುಭದ್ರೆಯರ ಪ್ರಣಯಪ್ರೀತಿಕೆ ಅದೃಶ್ಯವಾಗಿ ವ್ಯಂಜಿತವಾಗಿರುವ ಈ ಕವನದ ಹೆಸರು 'ಸುಭದ್ರಾ'. 'ವೃಕ್ಷಕನ್ಯೆಮಾರಿಷಾ' ಅಪ್ಸರೆಯೊಬ್ಬಳ ಮೆಯ್ ಬೆವರಿನಿಂದ ಹುಟ್ಟಿ ವೃಕ್ಷಗಳಿಂದ ಪಾಲಿತಳಾದಳು. ತನ್ನ ತಾಯಿಗಾಡಿಗೆ ಕಿಚ್ಚಿಡಲು ಬಂದ ಪ್ರಾಚೇತಸರನ್ನು ತಡೆದಳು. ಅನಂತರ ಚಂದ್ರದೇವನ ಇಚ್ಛೆಯಂತೆ ಪ್ರಾಚೇತಸರ ಮಡದಿಯಾಗಿ

'ಬನದ ಕನ್ನೆ ತೆರಳಿದಳು ರಾಣಿಯಾಗಿ'

'ವೋಲಿ ಸಾ' 'ದ್ಯೂತಕ್ರೀಡೆ' 'ಸೂರ್ಯಾಸ್ತ' 'ಮಕ್ಕಳಿಲ್ಲ' 'ಶರದೃತು' 'ಪೋಲಿಸ' 'ಸಾವು' 'ನಿಶಾಕನ್ನೆ' 'ಆಂದಲೂಸಿಯದ ನಾವಿಕರ ಹಾಡು'—ಇವು ಅನುವಾದಿತ ಕವನಗಳು. ಎಲ್ಲವೂ ಪದಕ್ಕೆ ಪದ ಅನುವಾದವಲ್ಲ; ಭಾವಾನುವಾದ ಎನ್ನಬಹುದು. 'ದ್ಯೂತಕ್ರೀಡೆ' 'ಸೂರ್ಯಾಸ್ತ' 'ಮಕ್ಕಳಿಲ್ಲ' 'ಸಾವು'—ಈ ಭಾಗದ ಉತ್ತಮ ಕವನಗಳು.

ಈ ಸಂಕಲನವನ್ನು ಓದಿ ಮುಗಿಸಿದ ಮೇಲೆ ನಮ್ಮ ಮನಸ್ಸಿನಲ್ಲಿ ಕವಿಯ ಮನೋಭಾವವನ್ನು ಕುರಿತಾಗಿ ಮೂಡುವ ಕೆಲವು ಅಂಶಗಳನ್ನು ಗುರುತಿಸಬಹುದು. ಈ ಕವಿ ಅನುಭಾವಿಯೂ ಹೌದು; ಅನುಭವಿಯೂ ಹೌದು. ಅಂತರಂಗಧ್ಯಾನದಿಂದ ಉತ್ತಮ ಕವನಗಳನ್ನು ರಚಿಸಬಲ್ಲ ಈ ಕವಿ ಬಹಿರಂಗದರ್ಶನದಿಂದಲೂ ಸ್ಫೂರ್ತಿ ಪಡೆದು ಅಷ್ಟೇ ಉತ್ತಮವಾದ ಕವಿತೆಗಳನ್ನು ರಚಿಸಬಲ್ಲರು. ಇವರ ವೇದಾಂತಪ್ರಿಯತೆ ಪಲಾಯನವಾದವಾಗಿ ಮಾರ್ಪಡದೆ ಜೀವನಸ್ಫೂರ್ತಿಯಾಗಿ ಬೆಳಗುತ್ತದೆ. ಪ್ರೊ|| ಗೋಕಾಕರು ಹೇಳುವಂತೆ ಇವರಲ್ಲಿ ಒಂದು ನಿರ್ಲಿಪ್ತತೆಯ ಗುಣವನ್ನು ನಾವು ಕಾಣುತ್ತೇವೆ. ಈ ನಿರ್ಲಿಪ್ತತೆ ಎಲ್ಲಿಯೂ ಭಾವಶೂನ್ಯತೆಯಾಗಿ ಮಾರ್ಪಡುವುದಿಲ್ಲ. ಈ ಕವಿಯ ಮನಸ್ಸು ಸಮಸ್ತ ವ್ಯಾಪಾರಗಳನ್ನೂ ಸೂಕ್ಷ್ಮವಾಗಿ ಸಮಗ್ರವಾಗಿ ಕಾಣಬಲ್ಲದು, ಗ್ರಹಿಸಬಲ್ಲದು. ಒಂದು ದೃಷ್ಟಿಯಲ್ಲಿ ಈ ಕವಿಯ ಬಗೆ 'ನೆಲ ಮುಗಿಲಿನ ಸಂತಾನ'ವಾದ ಮೋಡದಂತೆ. ಆಕಾಶದಲ್ಲಿ ಚರಿಸಬಲ್ಲುದು; ಮಣ್ಣಿನ ಕಣಕಣವನ್ನೂ ಅಪ್ಪಿಕೊಳ್ಳಬಲ್ಲುದು. ಆದರೆ ಗಾಳಿಯೂ ಆಗದೆ ಮಣ್ಣೂ ಆಗದೆ ತಾನೇ ಆಗಿ ಬೇರೆಯಾಗಿ ನಿಲ್ಲಬಲ್ಲುದು. ಈ ವ್ಯಕ್ತಿವೈಚಿತ್ರ್ಯವೇ ಎಕ್ಕುಂಡಿಯವರ ಕಾವ್ಯ ವೈಚಿತ್ರ್ಯವೈಶಿಷ್ಟ್ಯ. ಭಾವಾತಿರೇಕಕ್ಕೆ ಎಡೆಗೊಡದ ಸಂಯಮ, ಚೆಲುವನ್ನು ಪವಿತ್ರವೆಂದು ಕಾಣುವ ಉಚಿತದೃಷ್ಟಿ, ತನ್ನತನವನ್ನು ಹೊರಸೂಸಬಲ್ಲ, ಭಾವ ಪ್ರವಾಹಕ್ಕೆ ಹೊಂದಿಕೊಂಡು ಓಡಬಲ್ಲ ಛಂದೋವಿಲಾಸ, ಪದಮಾಧುರ್ಯ ಇವುಗಳಲ್ಲಿಯೂ ಈ ಕವಿಯ ವೈಶಿಷ್ಟ್ಯವನ್ನು ಕಾಣಬಹುದು.

ಈ ಸಂಗ್ರಹ ಹೀಗೆ ಬೆಳಕಿಗೆ ಬರಲು ಕಾರಣರಾದ ಪ್ರೊ|| ಮುಗಳಿ ಮತ್ತು ಪ್ರೊ|| ಗೋಕಾಕರನ್ನು ನಾವು ಅಭಿನಂದಿಸಲೇಬೇಕು. ಎಕ್ಕುಂಡಿಯವರ ಕಾವ್ಯ ಕೃಷಿ ಆಸ್ಥೆಯಿಂದ ಮುಂದುವರಿಯುವುದೆಂದೂ ವಿಶೇಷ ಫಲಪ್ರದಾಯಿನಿಯಾಗು ವುದೆಂದೂ ಓದುಗರು ಹೆಚ್ಚಿನ ಆಸೆ ಭರವಸೆಗಳನ್ನಿಟ್ಟುಕೊಳ್ಳುವುದು ಸಹಜ.

—ಕೆ. ವಿ. ಸುಬ್ಬಣ್ಣ

***

ಮುಂಗಾರು ಮುಗಿಲು—ಸಂಪಾದಕರು: ಶ್ರೀ ಯಂ. ಬಿ. ಮರಕಿಣಿ, ಶ್ರೀ ಶಂ. ಪಾ. ದೈತೋಟ; ಪ್ರಕಾಶಕರು: ಜನಪ್ರಿಯ ಸಾಹಿತ್ಯ, ಪುತ್ತೂರು; ಕ್ರೌನ್ ೧೩೫+೨೦; ಬೆಲೆ, ೧-೮-೦.

ದಕ್ಷಿಣ ಕನ್ನಡಜಿಲ್ಲೆಯ ಹನ್ನೊಂದು ಮಂದಿ ಬರಹಗಾರರ ಹಾಗೂ ಒಬ್ಬ ಬರಹಗಾರ್ತಿಯ ಕಥೆಗಳನ್ನುಳ್ಳ ಕಥಾಸಂಕಲನವಿದು. ಸಂಪಾದಕರೇ ಅನ್ನುವಂತೆ 'ಪ್ರಕಟಣೆ ಪ್ರಸಿದ್ಧಿಗಳ ಮೂಸೆಯಲ್ಲಿ ಕರಗಿ ಅಪರಂಜಿ ಚಿನ್ನವಾದವರ ಕೃತಿಗಳಲ್ಲ; ಹೊಸ ಆಸೆ, ಹೊಸ ಹುಮ್ಮಸ್ಸಿನಿಂದ ಬರೆಯಲು ತೊಡಗಿದ ಎಳೆಯರದು. ಅನುಭವ, ಅಭ್ಯಾಸ, ಪರಿಶ್ರಮಗಳು ಸಾಕಷ್ಟಿರಲಿಕ್ಕಿಲ್ಲ, ಪಳಗಿದ ಕೈಗಳಲ್ಲ' ಎಂಬ ಮಾತು ಕಥಾಸಂಗ್ರಹವನ್ನೋದಿ ಮುಗಿಸಿದ ಮೇಲೆ ಹೌದೆನಿಸುತ್ತದೆ.

ಇಲ್ಲಿನ ಎಲ್ಲಾ ಕತೆಗಳಲ್ಲೂ ದಕ್ಷಿಣ ಕನ್ನಡಜಿಲ್ಲೆಯ ಶ್ರಮಜೀವನ, ನಿಸರ್ಗ ದೊಡನೆ ಅವರ ಹೋರಾಟ, ಅವರ ಕೆಲವು ಮೂಢಾಚಾರಗಳು, ಬಡತನ ಇವೆಲ್ಲಾ ಒಂದಲ್ಲ ಒಂದು ರೀತಿಯಲ್ಲಿ ಮೂಡಿಬಂದಿವೆ. ಸಂಗ್ರಹದಲ್ಲಿನ ಉತ್ತಮ ಕತೆಗಳೆಂದು ಹೇಳಬಹುದಾದವು ಜೀ. ಶಂಕರಭಟ್ಟರ 'ಬೀರಣ್ಣ', ಮುರಲೀಧರರ 'ಚಿವುಟಿದ ಚಿಗುರು' ಹಾಗೂ ಯರ್ಮುಂಜ ರಾಮಚಂದ್ರರ 'ಪ್ರೇತಾತ್ಮಗಳು'.

'ಕೊನೆಯ ಮಾತು', 'ಈರ' ಹಾಗೂ 'ಬೀರಣ್ಣ' ಈ ಮೂರು ಕತೆಗಳೂ ಹೊಲೆಯರ, ಬೆಸ್ತರ ಜೀವನವನ್ನು ಪ್ರತಿಬಿಂಬಿಸುತ್ತದೆ. 'ಬೀರಣ್ಣ' ಉತ್ತಮವಾಗಿ ಬಂದಿದೆ. ನೇತ್ರಾವತಿ ನದಿ ಪಡುಗಡಲಿನೊಡನೆ ಮಿಲನಗೊಳ್ಳುವ ಅಳಿವೆಯ ಬಳಿ ಬೀರಣ್ಣ ಮನೆ ಮಾಡಿಕೊಂಡು ಹೆಂಡತಿ, ಮಗುವಿನೊಡನೆ ಜೀವಿಸುತ್ತಿರುತ್ತಾನೆ. ಮಳೆಗಾಲದಲ್ಲಿ ನದಿಯ ಪ್ರವಾಹದಲ್ಲಿ ಕೊಚ್ಚಿಬರುವ ತೆಂಗಿನಕಾಯಿ, ಸೌದೆ, ಮತ್ತಿತರ ಸರಕುಗಳನ್ನೂ ಪ್ರವಾಹದೆದುರು ಈಜಿಹೋಗಿ ಹಿಡಿದುತಂದು ಕಲೆಹಾಕಿ ಅದನ್ನು ಮಾರಿ ಜೀವಿಸುತ್ತಿದ್ದ. ಜೊತೆಗೇ ಹೊಂಗನಸುಗಳನ್ನೂ ಕಾಣುತ್ತಿದ್ದ. ಒಮ್ಮೆ ಅವನಿಗೊಂದು ಮರದ ಪೆಟ್ಟಿಗೆ ದೊರೆಯಿತು. ಅದರಲ್ಲಿ ಚಿನ್ನದ ಎರಡು ಸರ, ನೂರು ರುಪಾಯಿಗಳು ಇದ್ದವು. ಬೀರಣ್ಣ ಮನೆಗೆ ಹೆಂಚು ಹೊದಿಸಿ, ಅಂಗಡಿ ಇಟ್ಟು ವ್ಯಾಪಾರಮಾಡತೊಡಗಿದ. ಪತ್ನಿಯ ಮಾತಿಗೆ ಕಿವಿಗೊಡಲಿಲ್ಲ. ನದಿಯನ್ನು

ಮರೆತ. ವ್ಯಾಪಾರದಲ್ಲಿ ನಷ್ಟವಾಗಿ ಎಲ್ಲ ಹಣವೂ ಹೋಗಿ ಬರಿಗೈಯಾದಮೇಲೆ ಮತ್ತೆ ನದಿಯ ಆಶ್ರಯ ಪಡೆಯಬಂದ. ಎದುರಾಳಿ ತಿಮ್ಮಣ್ಣನ ಕೈ ಮೇಲಾಗಿತ್ತು ಆಗ. ಇವನಿಗೆ ಅಭ್ಯಾಸವೂ ಮರೆತಂತಾಗಿತ್ತು. ತನ್ನನ್ನುಪೇಕ್ಷಿಸಿದ್ದರಿಂದಲೇ ಎನ್ನುವಂತೆ ನದಿ ಅವನನ್ನಾಹುತಿ ತೆಗೆದುಕೊಂಡಿತು. ಈ ದುರಂತ ಕಥೆಯನ್ನು ಕತೆಗಾರರು ಮನೋಹರವಾಗಿ ಚಿತ್ರಿಸಿದ್ದಾರೆ. ಕತೆಯನ್ನೋದುತ್ತಿದ್ದಂತೆ ನೇತ್ರಾವತಿ ನದಿಯ ಪ್ರವಾಹ, ಪ್ರವಾಹದೆದುರು ಈಜಿಹೋಗಿ ತೇಲಿಬರುವ ಸರಕುಗಳನ್ನೆಳೆದು ತರುವ ಬೀರಣ್ಣನ ವೀರಮೂರ್ತಿ, ಅವನ ಗುಡಿಸಲು, ಸಂಸಾರ, ಅವನೆದುರಾಳಿ ತಿಮ್ಮಣ್ಣ ಈ ಚಿತ್ರಗಳೆಲ್ಲಾ ಕಣ್ಣಮುಂದೆ ಬಂದು ನಿಂತು ಮರೆಯಲಾಗದ ಚಿತ್ರವನ್ನು ಮನಸ್ಸಿನ ಮೇಲೆ ಮೂಡಿಸುತ್ತದೆ. ಬಡವಿದ್ಯಾರ್ಥಿಯೊಬ್ಬನ ವಿದ್ಯಾಭ್ಯಾಸದ ಆಸೆಗೆ ಅವನ ಬಡತನ ಅಡ್ಡಬಂದು ಅವನ ಆಸೆಯ ಚಿಗುರನ್ನು ಚಿಗುಟುತ್ತದೆಂಬುದು ಚಿಗುಟಿದ ಚಿಗುರಿನ ಕಥೆ. ಆದರೆ ವಿವರ ಅತಿಯಾಗಿ ಕಲೆಗೆ ಕುಂದುಬಂದಿದೆ. ಸಮಾಜದಲ್ಲಿನ ಮೂಢನಂಬಿಕೆಯ ಚಿತ್ರ, ಹೆಂಗಸಿನ ಖಾಯಿಲೆಯನ್ನರ್ಥಮಾಡಿಕೊಳ್ಳದೆ ಅದು ಪ್ರೇತಾತ್ಮವೆಂದು ಬಗೆದು ಬರೆಕೊಡುವುದರ ಮೂಲಕ ಆ ಜೀವವನ್ನೇ ತೆಗೆದುಕೊಳ್ಳುವ ಸಮಾಜದ ಪ್ರೇತಾತ್ಮಗಳ ದುರ್ದಮ್ಯಚಿತ್ರವನ್ನು ಚಿಕ್ಕಹುಡುಗನೊಬ್ಬನ ಮುಗ್ಧನೋಟದಿಂದ ಚಿತ್ರಿಸಿರುವ ಕತೆ ಪ್ರೇತಾತ್ಮಗಳು, ತುಂಬಾ ಪರಿಣಾಮಕಾರಿಯಾಗಿದೆ. ಮುಳಿಯರ ಏಳು ಉರುಳುಗಳು ಕತೆಗಿಂತ ಬಳಸಿರುವ ಹೊಸ ತಂತ್ರಕ್ಕಾಗಿರಬಹುದು. ಕೈಗಡಿಯಾರ, ಲಂಗರು, ಮೂರನೆಯ ಜೀವ ಸಾಮಾನ್ಯ ಕತೆಗಳು. 'ಬಡತನದ ಮಡಿಲಲ್ಲಿ' ನಮ್ಮ ಕುತೂಹಲವನ್ನು ಕೆರಳಿಸಿದರೂ ಅರ್ಧ ಕತೆಯನಂತರ ಬೇರೆ ದಾರಿ ಹಿಡಿದು ಸಾಮಾನ್ಯ ಕತೆಯಾಗುಳಿದಿದೆ. ಚಂದ್ರನ ಮುಗ್ಧ ರೀತಿಯಿಂದಲೇ ಕತೆ ಮುಗಿದಿದ್ದಲ್ಲಿ ಇದೂ ಒಂದು ಉತ್ತಮ ಕೃತಿಯಾಗಬಹುದಿತ್ತು. ಲಕ್ಷ್ಮಿಪಾರೆಯವರ ಕೇಶವನ ಜೀವನದಂಥ ಕತೆಯನ್ನೂ ಸಂಕಲನದಲ್ಲಿ ಸೇರಿಸಿರುವುದು ಸಂಪಾದಕರ ಔಚಿತ್ಯಜ್ಞಾನದ ಕೊರತೆಯೋ, ಇಲ್ಲವೆ ಸಾಹಿತ್ಯ ಸಲಹೆಗಾರರ ತಪ್ಪೋ ತಿಳಿಯದು. ಕೊನೆಯದಾರಿ ಒಂದು ಕಮ್ಯುನಿಸ್ಟ್ ಪ್ರಚಾರ ಕತೆ. ಎಲ್ಲ ಕತೆಗಳಲ್ಲಿಯೂ ಭಾಷೆ ದಕ್ಷಿಣ ಕನ್ನಡದ ಕಡೆಯದೇ ಆಗಿದ್ದು, ಸಂಭಾಷಣೆಗಳಲ್ಲಿ ಬಳಸಿರುವ ಅದೇ ಮಾತುಗಳು ಹೆಚ್ಚು ಪರಿಣಾಮಕಾರಿಯಾಗಿವೆ.

ಈ ಕಥಾಸಂಗ್ರಹಕ್ಕೆ ಶ್ರೀ ಅ. ನ. ಕೃಷ್ಣರಾಯರು ಮುನ್ನುಡಿ ಬರೆದು ಒಮ್ಮೆ ಮಹಾಕವಿಗಳಿಗೆ ಜನ್ಮವಿತ್ತ ದಕ್ಷಿಣ ಕನ್ನಡಜಿಲ್ಲೆ ಈಚೆಗೆ ಸಾಕಷ್ಟು ಮಂದಿ ಕವಿಗಳನ್ನೇಕೆ ಕೊಡುತ್ತಿಲ್ಲವೆಂದು ಪ್ರಶ್ನಿಸಿ, ಈ ಉತ್ಸಾಹೀ ತರುಣರ ಬೆನ್ನುತಟ್ಟಿ ಪ್ರೋತ್ಸಾಹಿಸಿದ್ದಾರೆ. ಸಂಕಲನದ ಸಂಪಾದನೆಗೆ ಸಾಹಿತಿಗಳಾದ ಶ್ರೀಮಾನ್

ಚದುರಂಗ, ತರಾಸು, ಅಡಿಗ ಇವರು ಸಲಹೆಗಳನ್ನಿತ್ತಿದಾರೆ. ಸಂಕಲನ ಆ ಜಿಲ್ಲೆಯ ಪ್ರಸಿದ್ಧ ಸಾಹಿತಿಗಳಾದ ಶ್ರೀ ಶಿವರಾಮಕಾರಂತರಿಗೆ ಅರ್ಪಿತವಾಗಿದೆ.

ಪುಸ್ತಕದ ಮುಖ ಬೆಂಗಳೂರಿನ ಕಲಾವಿದ ಶ್ರೀ ಆರ್. ಎಸ್. ಎನ್. ರವರ ಆಕರ್ಷಣೀಯ ಹಾಗೂ ಅರ್ಥಪೂರ್ಣ ಚಿತ್ರದಿಂದ ಶೋಭಿಸಿದೆ. ಪುಸ್ತಕದ ಒಳಗೆ ಮೈಸೂರಿನ ಕಲಾವಿದರಾದ ಶ್ರೀ ತಿಪ್ಪೇಸ್ವಾಮಿಯವರ 'ಮುಂಗಾರುಮುಗಿಲು' ಚಿತ್ರವಿದೆ. ಪುಸ್ತಕದ ಕೊನೆಯಲ್ಲಿ ಕೊಟ್ಟಿರುವ ಕತೆಗಾರರ ಸೂಕ್ಷ್ಮವೂ ಹಾಸ್ಯ ಪೂರ್ಣವೂ, ಆದ ಪರಿಚಯ ಲಘುವಾಗಿದ್ದರೂ ಔಚಿತ್ಯದಿಂದೊಡಗೂಡಿದೆ. ಆದರೂ ಕೊನೆಯ ಪುಟಗಳಲ್ಲಿನ ಬಿಡಿ ಜಾಹಿರಾತು ಪುಸ್ತಕದ ಅಂದವನ್ನು ಕೆಡಿಸಿದೆ. ಇಂಥ ದೊಡ್ಡ ಕೆಲಸಮಾಡುವಾಗ ಸಂಪಾದಕರು ಈ ಕುಂದನ್ನು ಮಾಡದಿರಬಹುದಿತ್ತು.

ಒಟ್ಟಿನಲ್ಲಿ ಇಂಥದೊಂದು ಕಥಾಸಂಕಲವನ್ನು ಹೊರತಂದು, ಇಷ್ಟುಮಂದಿ ಲೇಖಕರನ್ನು ಬೆಳಕಿಗೆ ತರುವ ಸಾಹಸಮಾಡಿದ ಶ್ರೀ ಯಂ. ಬಿ. ಮರಕಿಣಿ ಹಾಗೂ ಶ್ರೀ ಶಂ. ಪಾ. ದೈತೋಟ ಇವರೂ ಪುತ್ತೂರಿನ ಜನಪ್ರಿಯಸಾಹಿತ್ಯ ಪ್ರಕಾಶಕರೂ ಅಭಿನಂದನಾರ್ಹರು. ಕಥೆಗಳನ್ನು ಸಂಪಾದಿಸುವಾಗ ಇನ್ನಷ್ಟು ಎಚ್ಚರಿಕೆವಹಿಸಿ, ಸಲಹೆಗಾರರ ಸಲಹೆಗಳನ್ನೂ ಪೂರ್ಣ ಬಳಿಸಿಕೊಂಡು, ಔಚಿತ್ಯವನ್ನರಿತು ಮಾಡಿದ್ದರೆ ಅವರ ಶ್ರಮ ಇನ್ನಷ್ಟು ಉತ್ತಮಫಲ ಕೊಡುತ್ತಿದ್ದಿತೆಂದು ಹೇಳುವುದರಲ್ಲಿ ಅತಿಶಯವಿಲ್ಲ.

—ಸೂ. ವೆಂ. ಆರಗ.

*
* *

ರೂಪರಾಶಿಗಳ ಸಂತೆ—ಲೇಖಕರು: ಶ್ರೀ ಯಂ. ಬಿ. ಮರಕಿಣಿ; ಪ್ರಕಾಶಕರು: ಜನಪ್ರಿಯ ಸಾಹಿತ್ಯ, ಪುತ್ತೂರು; ಕ್ರೌನ್ ೬೮ ಪುಟಗಳು; ಬೆಲೆ, ಹದಿನೈದಾಣೆ.

'ಮಂಗಾರು-ಮುಗಿಲು' ಕಥಾಸಂಗ್ರಹವನ್ನು ಸಂಪಾದಿಸಿ ಪ್ರಕಟಿಸಿರುವ ಶ್ರೀ ಯಂ. ಬಿ. ಮರಕಿಣಿಯವರ ಸ್ವಂತ ಸ್ವತಂತ್ರ 'ಹ್ಯೂಮರಸ' ಕೃತಿ, ಹರಟೆಗಳ ಸಂಗ್ರಹ ರೂಪರಾಶಿಗಳ ಸಂತೆ.

ಕನ್ನಡ ಸಾಹಿತ್ಯದಲ್ಲಿ ಹರಟೆಗಳಗೆ ಒಂದು ವಿಶಿಷ್ಟ ಸ್ಥಾನವಿದೆ. ಆ ಮಾರ್ಗದಲ್ಲಿಯೂ ಸಾಹಿತ್ಯ ಚೆನ್ನಾಗಿಯೇ ಬೆಳೆಯುತ್ತಿದೆ ಎಂಬುದಕ್ಕೆ ಈ ಪುಸ್ತಕವೂ ಒಂದು ನಿದರ್ಶನ. ಇದರಲ್ಲಿರುವ ಎಂಟು ಬರಹಗಳಲ್ಲಿ ಕೆಲವು ವಿಡಂಬನೆಗಳು, ಕೆಲವು ವ್ಯಕ್ತಿಚಿತ್ರಗಳು, ಉಳಿದವು ಹಾಸ್ಯ ಬರಹಗಳು. ಒಂದೊಂದೂ ಹಾಸ್ಯ, ವ್ಯಂಗ್ಯ, ಧ್ವನಿ ಪೂರಿತವಾಗಿ ಬಂದಿವೆ. ಇವುಗಳಲ್ಲಿ 'ಪಾರ್ತಿಸುಬ್ಬ' ವಿಶೇಷ ರೀತಿಯಿಂದ ಬರೆಯಲ್ಪಟ್ಟು ಸ್ವಾರಸ್ಯಪೂರ್ಣವೂ ಪರಿಣಾಮಕಾರಿಯೂ ಆಗಿದೆ. ಸಂಶೋಧಕರಿಗೆಲ್ಲಾ ಇದೊಂದು ಮುಸುಕಿನೊಳಗಣ ಗುದ್ದು. 'ನಂದಿದ ದೀಪ'ದಲ್ಲಿ ಇಂದಿನ ಕನ್ನಡ ವಿಮರ್ಶಕ

ರೀತಿಯ ವಿಡಂಬನೆ ಇದ್ದರೂ ಅದು ಅತಿಯಾಗಿ ವಿಕಾರರೂಪತಾಳುವ ವರೆಗೆ ಮುಂದು ವರಿದಿದೆ. 'ಹಳ್ಳಿಯ ಶಾಲೆ' ಒಂದು ಉತ್ತಮ ಹರಟೆ. 'ಜನಪ್ರಿಯ'ನ ವ್ಯಕ್ತಿತ್ವ ಚೆನ್ನಾಗಿ ರೂಪುಗೊಂಡು ನಿಂತಿದೆ. 'ಸಾಹಿತ್ಯ ಸುಗ್ಗಿ'ಯ ಅನುಭವಗಳನ್ನು ನಾವು ಇಂದು ಹೊಸದಾಗಿ ಬರೆಯಲು ತೊಡಗುವ ಅಸನುಭವೀ ಯುವಕರಲ್ಲಿ ಕಾಣ ಬಹುದು. 'ಹೊಸ ಮನೆ'ಯ ಅನುಭವ ಸ್ವಾರಸ್ಯವಾಗಿದೆ.

ಲೇಖಕರಿಗೆ ಹಾಸ್ಯಪೂರಿತ, ವ್ಯಂಗ್ಯಪೂರಿತ ಶೈಲಿ ಕರಗತವಾಗಿದೆ. ಪುಟಪುಟ ಗಳಲ್ಲಿಯೂ ಅದು ಕಂಡುಬರುತ್ತದೆ. ಉದಾಹರಣೆಗೆ ಅವರ ಕೆಲವು ಮಾತುಗಳನ್ನು ಗಮನಿಸಬಹುದು: ಮಂಡನೆ, ಖಂಡನೆ, ಪ್ರತಿಮಂಡನೆ, ಟೀಕೆ, ಪ್ರತಿಟೀಕೆ ಹೀಗೆ ಸಾಗಿ . . . ಅಲ್ಲಿಂದ ಬೇರೊಂದು ಪತ್ರಿಕೆಗೆ ಒಕ್ಕರಿಸಿ, ಪ್ರಶ್ನೋತ್ತರದಲ್ಲಿ ಅವತರಿಸಿ, ವಾಚಕರ ಪತ್ರದಲ್ಲಿ ಬೆಳೆದು, ವಾರದ ಬರಹದಲ್ಲಿ ವಿರಾಟರೂಪವಾಗಿ ಸಂಪಾದಕೀಯ ದಲ್ಲಿ ಸಮಾಪ್ತಿಹೊಂದುವ ನಿಯಮ; (ಪಾರ್ತಿಸುಬ್ಬ) 'ಶಾಲೆಯ ಸ್ಥಿರ ಅಸ್ತಿ ವಾರವೇ ಆ ಗಡಿಯಾರದ ಚಲಿಸುವ ಮುಳ್ಳುಗಳಲ್ಲಿದೆ'; 'ನಮ್ಮ ಶಾಲೆ . . . ಊರಿಗೆ ಭೇಟಿಕೊಡುವ ಭಿಕ್ಷುಕರಿಗೆಲ್ಲಾ ರಾತ್ರಿಠಾಣ್ಯ, ಹಟ್ಟಿಗೆ ಸೇರದ ದನಕರುಗಳಿಗೆಲ್ಲಾ ಕೇಂಪ, ಭಿಕ್ಷುಕರು ಅಡಿಗೆ ಮಾಡಲು ಕಿಟಿಕಿಯ ಸರಳುಗಳನ್ನೇ ಉಪಯೋಗಿಸು ವರು. ಎಂಜಲನ್ನಲ್ಲಿಯೇ ಚೆಲ್ಲುವರು, ದನಗಳು ಅವನ್ನು ತಮ್ಮ ಸೆಗಣಿಗಳಿಂದ ಶುದ್ಧ ಮಾಡುತ್ತವೆ. ಮರುದಿನ ಅವನ್ನು ಸರಿಪಡಿಸುವ ಸೌಭಾಗ್ಯ ನಮ್ಮದಾಗುತ್ತದೆ.' (ಹಳ್ಳಿ ಶಾಲೆ) ವಾಕ್ಯಗಳಂತೆಯೇ 'ಮೌಖಿಕಪರೀಕ್ಷ,' 'ಬಸ್‌ಬಲ,' 'ಹ್ಯೂಮರಸ,' ಮುಂತಾದ ಅನರ್ಥ ಪದಗಳೂ ಪುಸ್ತಕದ ನಡುನಡುವೆ ಸುಳಿದುಬರುತ್ತವೆ.

ಲೇಖಕರು ಹರಟೆಯನ್ನು ಲಘುವಾಗೆಣಿಸಿದಂತೆ ತೋರುತ್ತದೆ. ಅದರ ನಿರ್ಮಾ ಣಕ್ಕೂ ಸಾಕಷ್ಟು ಪರಿಜ್ಞಾನ, ಸಾಹಿತ್ಯಜ್ಞಾನ, ಭಾಷಾಜ್ಞಾನ, ಹಾಗೂ ಸತತ ಅಭ್ಯಾಸ ಇವು ಅತ್ಯವಶ್ಯಕವಾಗಿ ಬೇಕು.

೬೮ ಪುಟದ ಹೊತ್ತಿಗೆಗೆ ಹದಿನೈದಾಣೆ ಬಹಳ ಹೆಚ್ಚು. ಪುಸ್ತಕದ ರಕ್ಷಾಪುಟ ಶ್ರೀ ತಿಪ್ಪೇಸ್ವಾಮಿಯವರ ಚಿತ್ರದಿಂದಾಗಿ ಶೋಭಿಸಿದ್ದರೂ ಹೆಸರು ಪುಸ್ತಕಕ್ಕೆ ಹೇಗೆ ಹೊಂದುತ್ತದೆಂಬುದನ್ನು ಲೇಖಕರೇ ಹೇಳಬೇಕು. ಕನ್ನಡದಲ್ಲಿ ವಿಪುಲವಾಗಿ ಬೆಳೆಯ ಬೇಕಾಗಿರುವ ಲಘುಪ್ರಬಂಧಗಳ ಕ್ಷೇತ್ರದಲ್ಲಿ ಶ್ರೀ ಮರಕಿಣಿಯವರಂಥ ಉತ್ಸಾಹೀ ತರುಣಲೇಖಕರ ಕಾರ್ಯ ಬಹಳವಿದೆ.

—ಸೂ. ವೆಂ. ಅರಗ.

ಸಂಪಾದಕೀಯ

ಕನ್ನಡ ಕೂಡಲೆ ಶಿಕ್ಷಣ ಮಾಧ್ಯಮವಾಗಲಿ

ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್

೩೦-೯-೫೩ ರಲ್ಲಿ ನಡೆದ ವೃತ್ತಿಪರಿಣತರ (Academic Council) ಮಂಡಲಿಯಲ್ಲಿ ವೃತ್ತಿಪರಿಣತರು ನಡಸಿದ ಅಭಿಸಂಧಿಪೂರ್ವಕ ವಾದವನ್ನು ಕುರಿತು ಹಿಂದಿನ ಸಂಚಿಕೆಯಲ್ಲಿ ಯತ್ನವಿಲ್ಲದೆ ಆಗ್ರಹಪೂರ್ವಕವಾಗಿ ಖಂಡಿಸಿತ್ತು. ಆ ಖಂಡನೆ ಅಕ್ಷರಶಃ ನ್ಯಾಯವಾದುದೆಂಬ ಅಂಶ ೧೬-೧೧-೫೩ ರಲ್ಲಿ ನಡೆದ ವಿಶ್ವವಿದ್ಯಾನಿಲಯದ ಸೆನೆಟ್ ಸಭೆಯ ನಡೆವಳಿಯಿಂದ ಸುಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಶಿಕ್ಷಣ ಮಾಧ್ಯಮವಾಗಬೇಕೆಂಬ ವಿಚಾರದಲ್ಲಿ ಚರ್ಚೆ ನಡೆದು ಸಭೆ ಅವಿರೋಧವಾಗಿ ಒಪ್ಪಿಗೆ ನೀಡಿತೆಂದು ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಸುದ್ದಿ ನಿಜವಾಗಿಯೂ ಹರ್ಷದಾಯಕವಾಗಿದೆ. ಶುಭೋದಯದ ನಾಂದಿಯಾಗಿದೆ. ಶಿಕ್ಷಣ ಮಾಧ್ಯಮದ ಸಮಸ್ಯೆ ಸಮಸ್ಯೆಯೇ ಅಲ್ಲ, ಅದು ಕನ್ನಡದಂಥ ದೇಶಭಾಷೆಯ ಶಕ್ತಿಸಾಮರ್ಥ್ಯಗಳನ್ನರಿಯದ ಅರಿಯಲು ಪ್ರಯತ್ನಪಡದ ವೃತ್ತಿಪರಿಣತರ ತಿಳಿವಳಿಕೆಗೂ ಬರತಕ್ಕ ವಿಷಯವಲ್ಲ, ಇನ್ನು ಮುಂದೆ ಇಂಥ ವಿಷಯವನ್ನು ಚರ್ಚೆಮಾಡುವುದೇ ಅನಗತ್ಯ ಎಂಬೆಲ್ಲ ವಿಷಯಗಳು ಸೆನೆಟ್ ಸಭೆಯಲ್ಲಿ ನಡೆದ ಭಾಷಣಗಳ ಪತ್ರಿಕಾ ವರದಿಯನ್ನು ಓದಿದರೆ ಇತ್ಯರ್ಥವಾಗುತ್ತವೆ. ಆ ಭಾಷಣಗಳ ಪೈಕಿ ಕೆಲವನ್ನು ಮಾತ್ರ ಇಲ್ಲಿ ಉದ್ಧರಿಸಿದೆ:

ಶ್ರೀ ಭೀಮಪ್ಪನಾಯಕ್: "ನಮ್ಮ ಶಾಲಾ ಕಾಲೇಜುಗಳಲ್ಲಿ ಶಿಕ್ಷಣವು ಸಂಪೂರ್ಣವಾಗಿ ಕನ್ನಡದಲ್ಲಿಯೇ ಇದ್ದಿದ್ದರೆ ಇಪ್ಪತ್ತು ವರ್ಷಗಳಲ್ಲಿ ಈಗ ಅಭ್ಯಸಿಸಲಾಗುತ್ತಿರುವುದನ್ನು ಇನ್ನೂ ನಾಲ್ಕಾರು ವರ್ಷಗಳಷ್ಟು ಮುನ್ನವೇ ಕಲಿಯಬಹುದಾಗಿದ್ದಿತು. ಅಗತ್ಯವಾದ ಪಠ್ಯಪುಸ್ತಕಗಳಿಲ್ಲ, ಕನ್ನಡದಲ್ಲಿ ಸೂಕ್ತ ವೈಜ್ಞಾನಿಕ ಪದಗಳಿಲ್ಲ ಎಂಬ ನೆವಗಳನ್ನು ತೋರಿಸುವ ಬದಲು, ನಮ್ಮಲ್ಲಿರುವಷ್ಟು ಸರಕಿನಿಂದಲೇ ಕನ್ನಡ ಶಿಕ್ಷಣ ಮಾಧ್ಯಮವನ್ನು ಇಂಟರ್ ದರ್ಜೆಯಲ್ಲಿ ಆರಂಭಿಸುವುದು ಒಳ್ಳೆಯದು. **ಕನ್ನಡವನ್ನು ವಿರೋಧಿಸುವವರಿಗೆ ಮೈಸೂರಿನಲ್ಲಿ ಸ್ಥಳವಿಲ್ಲ.** ಹಿಂದೀಭಾಷೆಯು ರಾಷ್ಟ್ರಭಾಷೆಯಾದ ಮಾತ್ರಕ್ಕೆ ಪ್ರಾಂತೀಯ ಭಾಷೆಗಳನ್ನು ಮೂಲೆಗೊತ್ತರಿಸಬೇಕೆಂಬ ನಿಯಮವೇನಿಲ್ಲ. ಹಿಂದಿಯು ಕನ್ನಡದ ಸ್ಥಳವನ್ನು ಆಕ್ರಮಿಸಲಾರದು."

ಪ್ರೊ|| ವಿ. ಎಲ್. ಡಿಸೌಜಾರವರು : “ ಈವರೆಗೆ ಈ ಕ್ರಮದ ಬಗ್ಗೆ ಬಹಳವಾಗಿ ಚರ್ಚೆ ನಡೆಸಿ, ತೀರ್ಮಾನಗಳನ್ನು ಕೈಕೊಂಡಿದ್ದಾಗ್ಯೂ ಅದರಲ್ಲಿ ಸ್ವಲ್ಪಭಾಗ ವನ್ನಾದರೂ ಕಾರ್ಯಗತಮಾಡಿಲ್ಲ. ಈಗಲಾದರೂ ಸಂಬಂಧಪಟ್ಟ ಅಧಿಕಾರಿಗಳು ಜಾಗರೂಕರಾಗಿ ಅಗತ್ಯವಾದ ಪಠ್ಯಪುಸ್ತಕಗಳನ್ನು ಬರೆಸಿ, ಅವುಗಳನ್ನು ಮುದ್ರಿಸು ವುದಕ್ಕೆ ಬೇಕಾಗುವ ಹಣವನ್ನು ಒದಗಿಸುವ ವ್ಯವಸ್ಥೆಯನ್ನು ಮಾಡಬೇಕು. ೧೯೫೬ರ ವೇಳೆಗೆ ಈ ಕ್ರಮಗಳನ್ನೆಲ್ಲ ಕೈಕೊಂಡು, ಆ ವರ್ಷದ ಕಾಲೇಜುಗಳ ಪ್ರಾರಂಭದಿನದಂದು ‘ ಡಿ-ಡೇ ’ಯನ್ನು ಆರಂಭಿಸೋಣ.”

ಶ್ರೀ ಗೊರೂರು ರಾಮಸ್ವಾಮಯ್ಯಂಗಾರ್ ಅವರು : “ ಅಕೆಡೆಮಿಕ್ ಕೌನ್ಸಿಲ್ಲಿ ನಲ್ಲಿ ಪ್ರೌಢಪಾಂಡಿತ್ಯವುಳ್ಳ ಜನರು ಈ ಬಗೆಯ ನಿಶ್ಚಯ ಮಾಡಿರುವುದನ್ನು ನೋಡಿ ದರೆ ಆಶ್ಚರ್ಯವಾಗುತ್ತದೆ. ದೇಶವು ಈ ತಜ್ಞರಿಂದ ನಿರೀಕ್ಷಿಸುತ್ತಿರುವುದನ್ನು ಅವರು ಮಾಡುತ್ತಿಲ್ಲವೆಂಬುದು ಇದರಿಂದ ಅರ್ಥವಾಗುತ್ತದೆ.”

ಪ್ರೊ|| ಎಲ್. ಶ್ರೀಕಂಠಯ್ಯ : “ ಕನ್ನಡ ಶಿಕ್ಷಣ ಮಾಧ್ಯಮವನ್ನು ಕೂಡಲೇ ಜಾರಿಗೆ ತರಬೇಕು. ಭಾಷೆ ಜನಜೀವನಗಳಿಗೆ ನಿಕಟ ಸಂಬಂಧವಿದೆ. ಪ್ರಾದೇಶಿಕ ಭಾಷೆಯನ್ನೇ ಶಿಕ್ಷಣ ಮಾಧ್ಯಮ ಮಾಡುವುದರಿಂದ ವಿದ್ಯೆಯ ಮಟ್ಟವು ಹೆಚ್ಚುತ್ತದೆ.”

ಮೇಲೆ ಇಬ್ಬರು ಸಾರ್ವಜನಿಕ ನಾಯಕರ ಮತ್ತು ಇಬ್ಬರು ಪ್ರೊಫೆಸರುಗಳ ಭಾಷಣಭಾಗಗಳನ್ನು ಉದ್ಧರಿಸಿದೆ. ಆ ಇಬ್ಬರು ಪ್ರೊಫೆಸರುಗಳಲ್ಲಿ, ಪ್ರೊ|| ಡಿಸೌಜಾ ರವರಂತು ವಿಶ್ವವಿದ್ಯಾನಿಲಯದಲ್ಲಿ ಬೋಧಕರಾಗಿ ಮೂವತ್ತು ವರ್ಷಗಳ ದೀರ್ಘಾನು ಭವವುಳ್ಳವರು ; ದೇಶವಿದೇಶಗಳಲ್ಲಿ ಸುತ್ತಾಡಿ ಅಲ್ಲಿನ ವಿದ್ಯಾಭ್ಯಾಸಪದ್ಧತಿಯನ್ನು ಚೆನ್ನಾಗಿ ಗಮನಿಸಿರುವವರು ; ಈಗ ಸಂಸ್ಥಾನದ ಪ್ರಮುಖ ಕಾಲೇಜೊಂದರ ಪ್ರಿನ್ಸಿ ಪಾಲ್ ಆಗಿರುವರು. ಕೆಲವು ದಿನಗಳ ಹಿಂದೆ ಕನ್ನಡ ಶಿಕ್ಷಣ ಮಾಧ್ಯಮವನ್ನು ಜಾರಿಗೆ ತರುವ ನಿಮಿತ್ತ ಯೋಜನೆಯನ್ನು ತಯಾರಿಸಲು ಅವರ ಅಧ್ಯಕ್ಷತೆಯ ಲ್ಲೊಂದು ಸಮಿತಿ ವಿಶ್ವವಿದ್ಯಾಲಯದಿಂದ ನೇಮಕವಾಗಿ, ಆ ಸಮಿತಿಯ ಪ್ರಯೋ ಗಾರ್ಹವಾದ ವರದಿಯೂ ಸಿದ್ಧವಾಗಿದೆಯೆಂದು ಕೇಳುತ್ತೇವೆ. ಅಂತು ಶ್ರೀಗಳಾದ ಭೀಮಪ್ಪ ನಾಯಕ್, ಗೊರೂರು ರಾಮಸ್ವಾಮಯ್ಯಂಗಾರ್, ವಿ. ಎಲ್. ಡಿಸೌಜಾ, ಎಲ್. ಶ್ರೀಕಂಠಯ್ಯ ಇವರೇ ಮೊದಲಾದ ಎಲ್ಲ ಸೆನೆಟ್ ಸದಸ್ಯರೂ ಕನ್ನಡ ಜನದ ಚಿರಕೃತಜ್ಞತೆಗೆ ಪಾತ್ರರಾಗಿದ್ದಾರೆ.

ಇದೇ ಸಮಯದಲ್ಲಿ ಹಿಂದೊಮ್ಮೆ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಸಮಯ ದಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ೨೦-೩೦ ವರ್ಷಗಳು ಪ್ರಧಾನಸ್ಥಾನದಲ್ಲಿದ್ದು ಕೆಲಸಮಾಡಿ ನಿವೃತ್ತರಾಗಿ ದೂರ ಹೋಗಿರುವ ಮಹನೀಯರೊಬ್ಬರು ಮಾಡಿದ

ಭಾಷಣವನ್ನು ಕುರಿತು ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ಹೇಳಿದ ಮಾತುಗಳನ್ನು 'ಪಶ್ಚಿಮದ ಮಾನಸಪುತ್ರ'ರ ಎಚ್ಚರಿಕೆಗಾಗಿ ಈ ಕೆಳಗೆ ಉದ್ಧರಿಸಿದೆ:

"... (ಅವರು) ಕನ್ನಡ ಕಲಿಯಲಿಲ್ಲ; ದಿನ ಹಾಕಿ ಮುಗಿಸಿದರು. ಮೇಲೆ ಮೇಲೆ ಬಾಳು ನಡೆಸಿ ತಮ್ಮ ದಾರಿ ಹಿಡಿದು ಹೋದರು. ಈಗಲೂ ಎಲ್ಲಿಯೋ ಮೇಲೆ ಮೇಲೆ ಇರುತ್ತಾ, ಜನದ ಬಾಳುವೆಗೆ ಸಂಬಂಧಿಸದ ಒಂದು ರೀತಿಯಲ್ಲಿ ಸುಖ ಜೀವನ ನಡಸುತ್ತಿದ್ದಾರೆ. ಜನತೆ ಹೇಗೆ ಉದ್ಧಾರವಾದೀತು ಎನ್ನುವುದು ಇವರ ಮನಸ್ಸನ್ನು ಕಲಕಬಹುದು ಹೇಗೆ?

"ಇಂಗ್ಲೀಷನ್ನು ಬಿಟ್ಟರೆ ನಮಗೆ ಉನ್ನತ ಜ್ಞಾನ ಕೈತಪ್ಪಿಹೋಗುತ್ತದೆ ಎನ್ನುವುದು ಇವರ ವಾದ. ಇದರಲ್ಲಿ ಎರಡು ತಪ್ಪಿದೆ.

"ಮೊದಲಾಗಿ ದೇಶಭಾಷೆಗಳಲ್ಲಿ ಪಾಠ ನಡೆಯಬೇಕು ಎನ್ನುವವರು ಇಂಗ್ಲೀಷನ್ನು ಬಿಡಬೇಕು ಎನ್ನುತ್ತಿಲ್ಲ. ಇಂಗ್ಲೀಷು ಇರಲಿ, ಬೋಧಕ ಭಾಷೆಯಾಗಿರುವುದು ಬೇಡ, ಎನ್ನುತ್ತಾರೆ.

"ಎರಡನೆಯದಾಗಿ, ಭಾಷೆಯಲ್ಲಿ ದೊರೆಯುವ ಜ್ಞಾನ ಅದನ್ನಾಡುವ ಜನರ ಜ್ಞಾನವನ್ನವಲಂಬಿಸಿರುತ್ತದೆ. ವಿಶ್ವವಿದ್ಯಾನಿಲಯದ ಉಪಾಧ್ಯಾಯರುಗಳು ಕನ್ನಡದಲ್ಲಿ ಪಾಠ ಹೇಳಿದರೂ ಇಂಗ್ಲೀಷಿನ ಸಹಾಯದಿಂದ ಜ್ಞಾನವನ್ನು ಗಳಿಸುತ್ತಿರುತ್ತಾರೆ. ಹೀಗೆ ಕೆಲವು ಕಾಲ ನಡೆದರೆ ಇವರ ಜ್ಞಾನದ ಮಟ್ಟಕ್ಕೆ ಅನುಗುಣವಾದ ಗ್ರಂಥಗಳು ಕನ್ನಡದಲ್ಲಿ ನಿರ್ಮಾಣವಾಗುತ್ತವೆ.

"ಐವತ್ತು ವರ್ಷದ ಹಿಂದೆ ಸರ್ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ಜಪಾನಿಗೆ ಹೋದಾಗ ಅಲ್ಲಿಯ ವಿಶ್ವವಿದ್ಯಾನಿಲಯಗಳ ಅಧ್ಯಾಪಕರು ಇಂಗ್ಲೀಷ್ ಪುಸ್ತಕಗಳನ್ನು ಓದಿಕೊಂಡು ಜಪಾನಿಯಲ್ಲಿ ಪಾಠ ಹೇಳಿಕೊಡುತ್ತಿದ್ದರಂತೆ. ವಿದ್ಯಾರ್ಥಿಗಳೂ ಇಂಗ್ಲೀಷ್ ಪುಸ್ತಕಗಳನ್ನು ಓದಿ ಸಂಗತಿಗಳನ್ನು ಕಲಿಯುತ್ತಿದ್ದರು.

"ಹೀಗೆ ಮಾಡಿದ ಜಪಾನ್ ಹೊಸ ಕಾಲದ ವಿದ್ಯೆಯಲ್ಲಿ ಎಷ್ಟು ಮುಂದುವರಿಯಿತು ಎಂಬುದನ್ನು ... ಅಂಥ ಇಂಗ್ಲೀಷ್ ಭಕ್ತರು ನೆನೆಯಬೇಕು.

"ಮುಖ್ಯ ಇಂಗ್ಲೀಷ್ ಭಕ್ತರ ಈ ತಪ್ಪುಮಾತಿಗೆಲ್ಲಾ ಸಹಾಯ ದೊರೆಯುತ್ತಿರುವುದು ನಮ್ಮ ಜನತೆ ಇನ್ನೂ ನಿದ್ದೆಯಲ್ಲಿರುವುದರಿಂದ. ಜನತೆ ಎಚ್ಚತ್ತರೆ ಇಂಥ ತಪ್ಪುಮಾತು ತಾನೇ ನಿಲ್ಲುವುದು. ಆ ಎಚ್ಚರವನ್ನು ತರುವುದು ದೇಶಭಾಷೆಗಳಲ್ಲಿ ಶ್ರದ್ಧೆ ಇರುವ ಜನರ ಕರ್ತವ್ಯ."

ಈ ಮಾತು ಹೇಳುತ್ತಿರುವವರು ಆಂಗ್ಲಭಾಷೆ ಬರದ ಕನ್ನಡಿಗರಲ್ಲ; ಆಂಗ್ಲ ಭಾಷೆಯನ್ನು ಚೆನ್ನಾಗಿ ಬಲ್ಲ 'ತಮಿಳರು.' ತಮಿಳರಾದರೂ ಕನ್ನಡಿಗರು. ಶ್ರೀ ಮಾಸ್ತಿ

ಯವರ ಹಿರಿಯರ ಮತ್ತು ಮನೆಯವರ ಭಾಷೆ ತಮಿಳು; ಅವರು ವಿದ್ಯಾರ್ಜನೆ ಮಾಡಿದುದು ಆಂಗ್ಲ ಭಾಷೆಯ ಮೂಲಕ. ಅಷ್ಟೇ ಅಲ್ಲ, ಅವರು ಪ್ರಾವೀಣ್ಯ ಸಂಪಾದಿಸಿದುದು ಆಂಗ್ಲಭಾಷೆಯಲ್ಲಿ ಎಂದ ಮೇಲೆ ಆಂಗ್ಲಭಾಷೆಯನ್ನು ಚೆನ್ನಾಗಿ ಬಲ್ಲ ವಿದ್ವಾಂಸರು ಹೇಳುವುದೊಂದಾದರೆ, ಆಂಗ್ಲ ಭಾಷೆ ದೇಶಭಾಷೆಗಳಲ್ಲಿ ಒಂದೂ ಚೆನ್ನಾಗಿ ಬರದ ' ಪಶ್ಚಿಮ ಮಾನಸಪುತ್ರರು ' ಹೇಳುವುದು ಮತ್ತೊಂದಾಗಿದೆ. ಶ್ರೀ ಮಾಸ್ತಿಯವರಾಗಲೀ, ಶ್ರೀ ಭೀಮಪ್ಪನಾಯಕರಾಗಲೀ, ಪ್ರೊ|| ಡಿಸೌಜಾರವರಾಗಲೀ ಹೇಳುತ್ತಿರುವುದು ಸ್ವಾರ್ಥಾಭಿಲಾಷೆಯಿಂದಲ್ಲವೆಂಬುದನ್ನು ಇಲ್ಲಿ ಸ್ಪಷ್ಟಪಡಿಸಬೇಕಾಗಿದೆ. ಕನ್ನಡ ಮಾಧ್ಯಮವಾಗುವತನಕ ಸಾಮಾನ್ಯ ಜನತೆಯ ಜ್ಞಾನದ ಮಟ್ಟ ಏರಲಾರದು, ವಿದ್ಯಾರ್ಥಿಗಳ ಶ್ರಮ ಕಡಮೆಯಾಗದು, ಅವರ ಜ್ಞಾನಕೋಶ ವಿಕಾಸಗೊಳ್ಳದು, ಒಟ್ಟಿನಲ್ಲಿ ನಾಡು ಶೀಘ್ರವಾಗಿ ಅಭಿವೃದ್ಧಿ ಹೊಂದಲಾರದು ಎಂಬ ಅವರ ಜನ ಹಿತೈಕ ದೃಷ್ಟಿ ಅವರಿಂದ ಆ ಮಾತುಗಳನ್ನು ಆಡಿಸುತ್ತಿದೆ. ಆಂಗ್ಲಭಾಷೆಯ ಮೂಲಕ ತಮ್ಮ ಕೆಲಸ ಹೇಗೋ ಹಾಗೆ ಆಗಿಹೋಗುತ್ತಿತ್ತಲ್ಲ, ಕನ್ನಡ ಮಾಧ್ಯಮವಾದರೆ ತಮ್ಮ ' ಪರೀಕ್ಷೆ ' ನಡೆಯುತ್ತದಲ್ಲ ಎಂಬ ಸಂಕಟ ಕನ್ನಡ ವಿರೋಧಿಗಳದು. ಕನ್ನಡದ ಮೂಲಕ ಪಾಠ ಹೇಳುವುದು ಕಷ್ಟವೆನ್ನುವವರು ಕನ್ನಡ ಸಾಹಿತ್ಯ ಸೃಷ್ಟಿಯ ಆಳ ಅಗಲಗಳನ್ನು ಕಾಣಲು ಮನಸ್ಸು ಬಾರದ ಮಹನೀಯರು. ಅದನ್ನು ಜನ ಅರಿಯಬೇಕಾಗಿದೆ.

ದೇಶದ ಹಿತದೃಷ್ಟಿಯಿಂದ ಕನ್ನಡ ಮಾಧ್ಯಮವನ್ನು ಕೂಡಲೇ ಜಾರಿಗೆ ತರಬೇಕಾಗಿದೆ. ಇಂದಿನ ಮೈಸೂರು ಸರ್ಕಾರ ಈ ಅಂಶವನ್ನು ಸಂಪೂರ್ಣವಾಗಿ ಮನಗಂಡಿದೆಯೆಂಬುದು ಸುಧಾರಣಾಸಮಿತಿಯ ವರದಿಯಿಂದಲೇ ವ್ಯಕ್ತವಾಗುತ್ತದೆ. ಈ ವಿಷಯದಲ್ಲಂತು ಜನರ ಪ್ರತಿನಿಧಿಗಳೂ ಜನನಾಯಕರೂ ಏಕಾಭಿಪ್ರಾಯವುಳ್ಳವರಾಗಿರುವುದು ಪ್ರಗತಿಯ ಕುರುಹಾಗಿದೆ. ಕನ್ನಡ ಶಿಕ್ಷಣಮಾಧ್ಯಮವಾಗುವುದರಿಂದ ಇತರ ಭಾಷೆಗಳ ನ್ಯಾಯಬದ್ಧವಾದ ಸ್ಥಾನಮಾನಗಳಿಗೆ ಧಕ್ಕೆ ತಗುಲುವುದಿಲ್ಲ. ಕರ್ಣಾಟಕ—ಅದರಲ್ಲಿಯೂ ಮೈಸೂರು—ಹಿಂದಿನಿಂದ ಅನೇಕ ಮತಗಳಿಗೆ, ಅನೇಕ ಭಾಷೆಯ ಜನರಿಗೆ ಆಶ್ರಯಸ್ಥಾನವಾಗಿದೆಯೆನ್ನುವುದನ್ನು ಯಾರೂ ಮರೆಯಬಾರದು. ಇಲ್ಲಿ ಎಲ್ಲ ಭಾಷೆಯ ಜನರೂ ಅನ್ಯೋನ್ಯವಾಗಿ ಸೌಹಾರ್ದತೆಯಿಂದ ಜೀವನವನ್ನು ನಡಸುತ್ತಿದ್ದಾರೆ. ಕನ್ನಡ ಮಾಧ್ಯಮದಿಂದ ಅವರ ವ್ಯವಹಾರಗಳಿಗೆ ಎಂದೂ ಅಡ್ಡಿಯೊದಗುವುದಿಲ್ಲ.

ಮೇಲಣ ಅಂಶಗಳನ್ನು ನಿಷ್ಪಕ್ಷಪಾತಮನೋಭಾವದಿಂದ ಪರಿಶೀಲಿಸಿದರೆ ಕನ್ನಡ ಕೂಡಲೆ ಶಿಕ್ಷಣ ಮಾಧ್ಯಮವಾಗಬೇಕೆನ್ನುವ ವಿಷಯ ದೃಢವಾಗುತ್ತದೆ.

ಕೇವಲ ಹಿಡಿ ಮಂದಿಗೆ ಅದು ಬೇಡವಾಗಿದೆ. ಕನ್ನಡ ಮಾಧ್ಯಮದಿಂದ ಜ್ಞಾನದ ಮಟ್ಟ ಕಡಮೆಯಾಗುತ್ತದೆಂಬ ಅವರ ವಾದದಲ್ಲಿ ಸ್ವಲ್ಪವೂ ತಿರುಳಿಲ್ಲವೆಂಬುದು ಈಗಾಗಲೆ ಪ್ರಯೋಗ ಪರೀಕ್ಷೆಗಳಿಂದ ನಿರ್ಣಯವಾಗಿದೆ. ಅವರು ಬೇಕಾಗಿ ಆ ವಾದವನ್ನು ಘೋಷಿಸುತ್ತಿದ್ದಾರೆಂಬುದೂ ಸರ್ವವಿದಿತವಾಗಿದೆ.

ಭರತಖಂಡದ ಇತರ ಕೆಲವು ಪ್ರಾಂತಗಳಲ್ಲಿ ಈಗಾಗಲೆ ದೇಶಭಾಷಾ ಮಾಧ್ಯಮವನ್ನು ಜಾರಿಗೆ ತರಲು ಎಲ್ಲ ಪೂರ್ವಸಿದ್ಧತೆಗಳನ್ನೂ ಮಾಡಿಕೊಂಡಿದ್ದಾರೆ. ಆದುದರಿಂದ ಅತಿ ಮುಖ್ಯವೂ ಆದರೆ ಅತಿ ಸರಳವೂ ಆದ ಈ ವಿಷಯವನ್ನು ಇನ್ನು ಮುಂದೆ ಚರ್ಚೆಗೆ ತಾರದೆ ಮುಂದಿನ ಕಾರ್ಯವನ್ನು ಕೈಗೊಳ್ಳಬೇಕಾಗಿದೆ. ವಿರೋಧಿಗಳು ಸಹ ಕಾಲಗತಿಗೆ ತಕ್ಕಂತೆ ನಡೆದುಕೊಳ್ಳಬೇಕೆಂದು ಈ ಮೂಲಕ ಪ್ರಾರ್ಥಿಸಿಕೊಳ್ಳುತ್ತೇವೆ.

***

ಅಭಿನಂದನ

ಇದೇ ಡಿಸೆಂಬರ್ ತಿಂಗಳಿನ ಕೊನೆಯ ವಾರದಲ್ಲಿ ಉತ್ತರ ಕರ್ಣಾಟಕದ ಕಾರವಾರ ಜಿಲ್ಲೆಯ ಕುಮಟದಲ್ಲಿ ಮೂವತ್ತಾರನೆಯ ಕನ್ನಡ ಸಾಹಿತ್ಯ ಸಮ್ಮೇಳನ ಸೇರಲಿದೆ. ವಿ. ಸೀ. ಎಂಬ ಕಾವ್ಯನಾಮದಿಂದ ಕನ್ನಡ ಲೋಕಕ್ಕೆ ಚಿರಪರಿಚಿತರಾಗಿರುವ ಶ್ರೀಮಾನ್ ವಿ. ಸೀತಾರಾಮಯ್ಯ, ಎಂ.ಎ. ಅವರು ಈ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಗೊಂಡಿರುವುದು ನಮಗೆ ತುಂಬ ಸಂತೋಷದ ಸಂಗತಿ. ಈ ಸಂದರ್ಭದಲ್ಲಿ ವಿ. ಸೀ. ಅವರಿಗೆ ನಮ್ಮ ಹೃತ್ಪೂರ್ವಕವಾದ ಅಭಿನಂದನಗಳನ್ನು ನಾವು ಸಲ್ಲಿಸುತ್ತೇವೆ. ವಿ. ಸೀ. ಅವರು ಹೆಸರಾಂತ ಕವಿಗಳು, ಶ್ರೇಷ್ಠ ವಿಮರ್ಶಕರು, ಉತ್ತಮ ವಾಗ್ಮಿಗಳು, ಒಳ್ಳೆಯ ರಸಾಭಿಜ್ಞರು. 'ಗೀತಗಳು' 'ದೀಪಗಳು' 'ನೆಳಲು-ಬೆಳಕು' 'ದ್ರಾಕ್ಷಿ ದಾಳಿಂಬೆ' ಎಂಬ ಕವನ ಸಂಕಲನಗಳೂ 'ಸೊಹ್ರಾಬ್-ರುಸ್ತುಂ' 'ಆಗ್ರಹ' ಎಂಬ ನಾಟಕಗಳೂ 'ಕರ್ಣಾಟಕ ಕಾದಂಬರಿ' 'ಅಶ್ವತ್ಥಾಮನ್' 'ಅಭಿಜ್ಞಾನ ಶಾಕುಂತಲ' ಎಂಬ ಕವಿಕಾವ್ಯ ಪರಿಚಯಾತ್ಮಕವಾದ ವಿಮರ್ಶೆಯ ಗ್ರಂಥಗಳೂ 'ಪಂಪಾಯಾತ್ರೆ' ಎಂಬ ಪ್ರವಾಸ ಕಥನವೂ 'ಈಗಿನ ಕವಿಕಾವ್ಯ ದೃಷ್ಟಿ' ಎಂಬ ಭಾಷಣವೂ 'ಹಣ ಪ್ರಪಂಚ' ಎಂಬ ಅರ್ಥಶಾಸ್ತ್ರವನ್ನು ಕುರಿತು ಬರೆದ ಹೆಬ್ಬೊತ್ತಗೆಯೂ ಇವರ ಪ್ರಮುಖ ಕೃತಿಗಳಾಗಿವೆ. ಶ್ರೀಯುತರ ಬಹುಮುಖವಾದ ಪ್ರತಿಭೆಯನ್ನೂ ಆಳವಾದ ಪಾಂಡಿತ್ಯವನ್ನೂ ವಿಶಾಲವಾದ ಲೋಕಾನುಭವವನ್ನೂ ಶುಚಿಯಾದ ಕಲಾಭಿರುಚಿಯನ್ನೂ ಈ ಕೃತಿಗಳ ಮೂಲಕ ನಾವು ಪರಿಚಯ ಮಾಡಿಕೊಳ್ಳಬಹುದಾಗಿದೆ. ತಮ್ಮ ಈ

ಬಹುತೆರನಾದ ಸಾಹಿತ್ಯಸೇವೆಯಿಂದ ಮಾತ್ರವಲ್ಲದೆ ನಾಡಿನ ಹತ್ತೂಕಡೆ ಸುತ್ತಿ ಊರೂರುಗಳ ಸಂಘ ಸಂಸ್ಥೆಗಳಿಗೆ ಆಹ್ವಾನಿತರಾಗಿ ಹೋಗಿ ಸಾಹಿತ್ಯ ಸಂಸ್ಕೃತಿ ಕಲೆ ಮತಧರ್ಮ ಮುಂತಾದವುಗಳನ್ನು ಕುರಿತು ಭಾಷಣಮಾಡಿ ಶ್ರೀಯುತರು ಜನ ಜಾಗೃತಿಯನ್ನು ಸಾಧಿಸುವುದರಲ್ಲಿ ನೆರವಾಗಿದ್ದಾರೆ. ಹೋದ ಹೋದ ಕಡೆಯಲ್ಲಿ ಕನ್ನಡನಾಡು ನುಡಿಗಳ ಅಭಿಮಾನ ಉಕ್ಕೇರುವಂತಹ ರೀತಿಯಲ್ಲಿ ಉಪನ್ಯಾಸಮಾಡಿ ಎಲ್ಲೆಡೆಯಲ್ಲಿಯೂ ಮಿತ್ರವರ್ಗವನ್ನು ಕಟ್ಟಿ ಕನ್ನಡಕ್ಕಾಗಿ ದುಡಿಯುವ ಒಂದು ವೀರ ಪಡೆ ಸಿದ್ಧವಾಗುವಂತೆ ಅಣಿಗೈದ ನಮ್ಮ ನಾಡಿನ ಹಿರಿಯರಲ್ಲಿ ವಿ. ಸೀ. ಅವರೂ ಒಬ್ಬರು. ವಿ. ಸೀ. ಅವರು ತುಂಬ ರಸಿಕರು ತುಂಬ ಸ್ನೇಹಪರರು. ಜನಜಂಗುಳಿಯ ನಿಕಟಸಂಪರ್ಕಕ್ಕಾಗಿ ಆಶಿಸುವವರು. ಕನ್ನಡಕ್ಕಾಗಿ ಕೆಲಸಮಾಡುವ ಕಿರಿಯರನ್ನು ಕಂಡರಂತೂ ಅವರಿಗೆ ತೀರ ಅಕ್ಕರೆ. ಕಿರಿಯರ ಕಾರ್ಯಕಲಾಪ ನೋಡಿ ಸಂತೋಷ ಪಡುತ್ತ ಅವರ ಕಥೆ ಕವನಗಳನ್ನು ಓದಿ ಬೆನ್ನುತಟ್ಟುತ್ತ ಕಿರಿಯರಲ್ಲಿ ದೇಶಭಕ್ತಿಯೂ ಭಾಷಾಪ್ರೇಮವೂ ಉಜ್ವಲವಾಗಿ ಬೆಳಗುವಂತೆ ವಿ. ಸೀ. ಅವರು ಅವರಿಗೆ ಪ್ರೋತ್ಸಾಹ ವಿತ್ತಿದ್ದಾರೆ.

ಹೀಗೆ ತಮ್ಮ ಕಥೆ ಕವನ ನಾಟಕ ಪ್ರಬಂಧಾದಿ ಸಾಹಿತ್ಯ ವ್ಯವಸಾಯದ ಮೂಲಕ ಹೇಗೋ ಹಾಗೆ ಪ್ರವಾಸ, ಭೇಟಿ, ಸಭೆಸಮ್ಮೇಳನಗಳಲ್ಲಿ ಉಪನ್ಯಾಸ, ವಾಚನ, ವ್ಯಾಖ್ಯಾನ ಈ ಮುಂತಾದ ಕಾರ್ಯಕ್ರಮಗಳ ಮೂಲಕವಾಗಿಯೂ ವಿ. ಸೀ. ಅವರು ನಾಡು ನುಡಿಗಳ ಮೇಲ್ಮೆಗಾಗಿ ದುಡಿದಿದ್ದಾರೆ. ಇದರ ಜೊತೆಗೆ ಸಾಹಿತ್ಯ ಪರಿಷತ್ತಿನ ನಿಕಟ ಸಂಪರ್ಕ ಉಳ್ಳವರು ವಿ. ಸೀ. ಅವರು. ಈ ಹಿಂದೆ ಪರಿಷತ್ ಪತ್ರಿಕೆಯ ಮತ್ತು ಪ್ರಬುದ್ಧ ಕರ್ಣಾಟಕದ ಸನ್ಮಾನ್ಯ ಸಂಪಾದಕರಾಗಿ ವಿ. ಸೀ. ಅತ್ಯುತ್ತಮವಾದ ಸೇವೆ ಸಲ್ಲಿಸಿದ್ದಾರೆ. ಪರಿಷತ್ತಿನ ಕಾರ್ಯನಿರ್ವಾಹಕ ಸಮಿತಿಯಲ್ಲಿದ್ದು ಬಹಳ ಕಾಲ ನಾನಾತೆರನಾದ ಬಹು ಜವಾಬ್ದಾರಿಯ ಕಾರ್ಯಭಾರವನ್ನು ಹೊತ್ತು ತುಂಬ ವಿಚಕ್ಷಣೆಯಿಂದ ನಿರ್ವಹಿಸಿ ಕನ್ನಡಿಗರೆಲ್ಲರ ಪ್ರೀತ್ಯಾದರಗಳಿಗೆ ಪಾತ್ರ ರಾಗಿದ್ದಾರೆ. ಪ್ರಬುದ್ಧ ಕರ್ಣಾಟಕದ ಸಂಪಾದಕರಾಗಿದ್ದಾಗ ಈ ಪತ್ರಿಕೆಯ ಘನತೆ ಗೌರವಗಳಿಗೆ ತಕ್ಕಂತೆ ಇದನ್ನು ನಡಸಿಕೊಂಡು ಬಂದರೆಂಬ ಸಂಗತಿಯನ್ನು ಇಲ್ಲಿ ಹೆಮ್ಮೆಯಿಂದ ನೆನೆಯುತ್ತೇವೆ. ಪ್ರಬುದ್ಧ ಕರ್ಣಾಟಕದ ಬೆಳ್ಳಿಯ ಸಂಚಿಕೆಯೊಂದೇ ಸಾಕು ವಿ. ಸೀ. ಅವರ ಸಂಪಾದಕತ್ವದ ಅಗ್ಗಳಿಕೆಯನ್ನು ಸಾರುವುದಕ್ಕೆ! ಒಳ್ಳೆಯ ಲೇಖನಗಳನ್ನು ಒದಗಿಸಿ ಉತ್ತಮವಾದ ಸಂಪಾದಕೀಯಗಳನ್ನು ಬರೆದು ತಮ್ಮ ಕೈಗೆ ಬಂದಂಥ ಪರಿಷತ್ ಪತ್ರಿಕೆ, ಪ್ರಬುದ್ಧ ಕರ್ಣಾಟಕ ಎಂಬ ಈ ಪತ್ರಿಕೆ ಗಳನ್ನು ಸೊಗಸಾಗಿ ನಡಸಿಕೊಂಡು ಬಂದು ಈ ಒಂದು ಪತ್ರಿಕಾ ವ್ಯವಸಾಯದ ಮೂಲಕವಾಗಿಯೂ ವಿ. ಸೀ. ಅವರು ನಾಡಿನ ಪ್ರಗತಿಯನ್ನು ಸಾಧಿಸಿದ್ದಾರೆ.

ಇವೆಲ್ಲದರ ಜೊತೆಗೆ ಕಳೆದ ಮೂರು ದಶಕಗಳಿಂದ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡದ ಆಚಾರ್ಯರಾಗಿ ವರ್ಷವರ್ಷವೂ ಬರುವ ಸಾವಿರಾರು ವಿದ್ಯಾರ್ಥಿಗಳಿಗೆ ಜ್ಞಾನದಾನ ಮಾಡುವ ಪವಿತ್ರ ಕಾರ್ಯದಲ್ಲಿ ನಿರತರಾಗಿ ಆ ವಿದ್ಯಾರ್ಥಿಗಳಲ್ಲಿ ಸಾಹಿತ್ಯ ಪ್ರೇಮವೂ ಕಲಾಸಕ್ತಿಯೂ ಬೆಳೆಯುವುದಕ್ಕೆ ಕಾರಣಕರ್ತರಾಗಿದ್ದಾರೆ. ಈಗ್ಗೆ ೨೨ ವರ್ಷಗಳ ಹಿಂದೆ ಕಾರವಾರದಲ್ಲಿ ಸಾಹಿತ್ಯ ಸಮ್ಮೇಳನದ ಅಂಗವಾಗಿ ನಡೆದ ಕವಿ ಸಮ್ಮೇಳನಕ್ಕೆ ವಿ. ಸೀ. ಅವರು ಅಧ್ಯಕ್ಷರಾಗಿ ಹೋಗಿದ್ದರು. ಆಗ್ಗೆ 'ಈಗಿನ ಕವಿ ಕಾವ್ಯದೃಷ್ಟಿ' ಎಂಬ ವಿಷಯವಾಗಿ ಮಾಡಿದ ಉಜ್ವಲವಾದ ಆ ಆಶುಭಾಷಣವನ್ನು ಕೇಳಿದ ಜನ ಈಗಲೂ ನೆನೆದು ಹೊಂಪುಳಿ ಹೋಗುತ್ತಾರೆ. ಅದೇ ಜಿಲ್ಲೆಯ ಕುಮಟದಲ್ಲಿ ಈಗ ಮತ್ತೆ ೨೨ ವರ್ಷಗಳು ಉರುಳಿದ ತರುವಾಯ ವಿ. ಸೀ. ಯವರು ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾಗಿರುವುದು ನಿಜವಾಗಿಯೂ ಒಂದು ಯೋಗಾಯೋಗ.

ಇಂತಹ ಮಹನೀಯರ ನೇತೃತ್ವದಲ್ಲಿ ಕುಮಟದ ಸಾಹಿತ್ಯದ ಸಮ್ಮೇಳನ ಯಶಸ್ವಿಯಾಗಿ ನಡೆಯಲಿ ಎಂದೂ ಕನ್ನಡದ ಮೂಲೆಮೂಲೆಗಳಿಂದಲೂ ವಾಗ್ದೇವಿಯ ಭಕ್ತರು ಅಲ್ಲಿಗೆ ಧಾವಿಸಿಹೋಗಿ ಮೂರು ದಿವಸಗಳ ಆ ಮಹಾಸಾರಸ್ವತಯಜ್ಞದಲ್ಲಿ ಭಾಗಿಗಳಾಗಿ ಆನಂದಾಮೃತದ ಆಸ್ವಾದದಿಂದ ಪರಮತುಷ್ಟಿಯನ್ನು ತಾಳಲಿ ಎಂದೂ ವಿದ್ಯಾಭ್ಯಾಸದ ಸುಧಾರಣೆ, ಸಂಸ್ಕೃತಿ ಪ್ರಚಾರ, ಕರ್ಣಾಟಕ ಏಕೀಕರಣ, ಶಿಕ್ಷಣ ಮಾಧ್ಯಮ, ಸಾಹಿತ್ಯದ ಹೊಸ ಹೊಸ ಪ್ರಕಾರಗಳು, ಲೇಖಕ ಪ್ರಕಾಶಕ ಮಾರಾಟಗಾರ ವಾಚಕರ ಬಹುಮುಖವಾದ ಸಮಸ್ಯೆಗಳು ಈ ಮುಂತಾದ ಮಹತ್ವಪೂರ್ಣವಾದ ವಿಷಯಗಳ ಬಗ್ಗೆ ಸೌಹಾರ್ದಮಯವಾದ ವಿಚಾರ ವಿನಿಮಯ ನಡೆಯಲಿ ಎಂದೂ ನಾವು ಮನಃಪೂರ್ವಕವಾಗಿ ಆಶಿಸುತ್ತೇವೆ. ಇದೇ ತಿಂಗಳು ೨೬, ೨೭, ೨೮. ಈ ಮೂರುದಿನ ಪರ್ಯಂತ ನಡೆಯುವ ಈ ಸಾಹಿತ್ಯ ಸಮ್ಮೇಲನದ ಅಂಗವಾಗಿ ಪತ್ರಿಕಾ ಗೋಷ್ಠಿಯು ಶ್ರೀ ವಿ. ಬಿ. ನಾಯಕ್ ಅವರ ಅಧ್ಯಕ್ಷತೆಯಲ್ಲಿಯೂ ವಿಜ್ಞಾನಗೋಷ್ಠಿಯು ಶ್ರೀ ಪಿ. ರಮಾನಂದ ಅವರ ಅಧ್ಯಕ್ಷತೆಯಲ್ಲಿಯೂ ಯಕ್ಷನಾಟಕ ಗೋಷ್ಠಿಯು ಶ್ರೀ ಕೆ. ಪಿ. ವೆಂಕಪ್ಪಶೆಟ್ಟಿ ಅವರ ಅಧ್ಯಕ್ಷತೆಯಲ್ಲಿಯೂ ನಡೆಯುವುದಾಗಿ ತಿಳಿದುಬಂದಿದೆ. ಆಯಾ ವಿಷಯದಲ್ಲಿ ತಜ್ಞರಾದ ವಿದ್ವಾಂಸರ ನೇತೃತ್ವದಲ್ಲಿ ನಡೆಯುವ ಈ ಒಂದೊಂದು ಗೋಷ್ಠಿಯೂ ಕುಮಟದಲ್ಲಿ ಯಶಸ್ವಿಯಾಗಿ ಜರುಗುವುದರಲ್ಲಿ ಸಂದೇಹವಿಲ್ಲ. ಇದರ ಜೊತೆಗೆ ಕಲಾಪ್ರದರ್ಶನ ಗ್ರಂಥಪ್ರದರ್ಶನ ಮನೋರಂಜನ ಕಾರ್ಯಕ್ರಮ ಮುಂತಾದವುಗಳು ನಡೆಯುವುದಿದ್ದು ನಿಜವಾಗಿಯೂ ಈ ಸಮ್ಮೇಲನ ಕಣ್ಮನಗಳಿಗೆ ಹಬ್ಬವಾಗಿ ಪರಿಣಮಿಸುವುದಾಗಿದೆ. ಇಂತಹ ಸಮ್ಮೇಲನಕ್ಕೆ ಕನ್ನಡ ಪ್ರೇಮಿಗಳೆಲ್ಲರೂ ಹೆಚ್ಚು ಹೆಚ್ಚಾಗಿ ಹೋಗಿ ಲಾಭ ಪಡೆಯಬೇಕೆಂದು ಕೋರುತ್ತೇವೆ.

ಪ್ರಾಚ್ಯಲೇಖನಮಾಲೆ

ಕನ್ನಡನುಡಿ—ಸೆಪ್ಟೆಂಬರ್ ೧೯೫೩.

೧. ಶಾಂಕರ ಸಿದ್ಧಾಂತ: ಶ್ರೀ ದೇವುಡು ನರಸಿಂಹಶಾಸ್ತ್ರಿಗಳು.

೨. ಪಿಂಬೇರ ಮೈಲಿಗೆ ಮೇಳವಾಡುತ್ತಿದ್ದ: ಶ್ರೀ ದೇಸಾಯಿ ಪಾಂಡುರಂಗ ರಾಯರು.

೩. ರತ್ನಾಕರನೂ ವಿಜಯನಗರವೂ: ಶ್ರೀ ಟಿ. ಎನ್. ಮಹದೇವಯ್ಯನವರು.

ಕನ್ನಡನುಡಿ—ನವೆಂಬರ್ ೧೯೫೩.

೧. ಕಾಳಿದಾಸ ಮಹಾ ಕವಿಯ ಜೀವಿತ ಸಮಸ್ಯೆಗಳು: ಶ್ರೀ ಟಿ. ವಿ. ವೆಂಕಟಾಚಲ ಶಾಸ್ತ್ರಿ.

೨. ರತ್ನಾಕರನೂ ವಿಜಯನಗರವೂ: ಶ್ರೀ ಟಿ. ಎನ್. ಮಹದೇವಯ್ಯನವರು.

ಜೀವನ—ಸೆಪ್ಟೆಂಬರ್ ೧೯೫೩.

ಕನ್ನಡನಾಡಿನ ಸೀಮಾರೇಖೆಗಳು: ಶ್ರೀ ತಿರುಮಲೆ ತಾತಾಚಾರ್ಯ ಶರ್ಮ.

ಜೀವನ—ಅಕ್ಟೋಬರ್ ೧೯೫೩.

ಗೂಢಲೇಖನ ಅಥವಾ ಗುಪ್ತಲೇಖನ ವಿಧಾನ: ಶ್ರೀ ಟಿ. ವಿ. ವೆಂಕಟಾಚಲಶಾಸ್ತ್ರಿ.

ಯುಗಪುರುಷ—ಸೆಪ್ಟೆಂಬರ್ ೧೯೫೩.

ಕಪೋತ ವ್ಯಾಖ್ಯಾನ (ಶಬ್ದಾರ್ಥ ವಿಚಾರ): ಶ್ರೀ ಕೆ. ವೆಂಕಟರಾಮಾಚಾರ್ಯ.

ಜಯಕರ್ಣಾಟಕ—ನವೆಂಬರ್ ೧೯೫೩.

ಪ್ರಾಚೀನ ಭಾರತದ ಗುರುಕುಲ ಶಿಕ್ಷಣ: ಶ್ರೀ ಟಾ. ವ. ಉಮ್ಮರ್ಜಿ.

ಸುಬೋಧ—ನವೆಂಬರ್ ೧೯೫೩.

೧. ಕೆಲವು ನುಡಿ ಮುತ್ತುಗಳು: ಶ್ರೀ ವಿದ್ವಾನ್ ವೆಂಕಟರಾಯಾಚಾರ್ಯ ಸುರತ್ಕಲ್.

೨. ಶ್ರೀ ವೇಟೂರಿ ಪ್ರಭಾಕರಶಾಸ್ತ್ರಿಗಳು: (ಆಂಧ್ರ ಕವಿ ಪುಂಗವರು) ಶ್ರೀ ಜಾನಮದ್ದಿ ಹನುಮಂತಶಾಸ್ತ್ರಿ ರಾಮದುರ್ಗ.

೩. ಕವಿಕಪ್ಪಣ್ಣವಿರಚಿತ ಶ್ರೀ ಕೃಷ್ಣಚರಿತಾಮೃತ: ಶ್ರೀ ಎಂ. ಶೇಷಗಿರಿರಾವ್.

೪. ಕನ್ನಡದಲ್ಲಿನ ಆದರ್ಶಸಾಹಿತ್ಯ: ಶ್ರೀ ಹಾ. ಸು. ಸೀತಾರಾಮಯ್ಯರ್.

೫. ವಿಕ್ರಮಾದಿತ್ಯರು: ಶ್ರೀ ಹುಲ್ಲೂರು ಶ್ರೀನಿವಾಸ ಜೋಯಿಸರು.

ವಿವೇಕಾಭ್ಯುದಯ—ಅಕ್ಟೋಬರ್ ೧೯೫೩.

ಕವಿಚಕ್ರವರ್ತಿರನ್ನ (ಶ್ರೀ ಜಿ. ಬ್ರಹ್ಮಪ್ಪ,)

ಭಾರತೀಯ ಸಿದ್ಧಾಂತ—ನವಂಬರ್ ೧೯೫೩.

೧. ಆರ್ಯ ದ್ರಾವಿಡವಾದ ಭಾರತಕ್ಕೊಂದು ಅಭಿಶಾಪ, ಮೂಲಲೇಖಕ ಪಂ. ಸಿ. ಶಿವಾಚಾರ್ಯ, ಅನುವಾದಕ ಬಿ. ಎಂ. ವೀರೇಶ್ವರಶಾಸ್ತ್ರಿ.

೨. ಲಿಂಗಾಂಗಿ ಧರ್ಮ. ಶ್ರೀ ಕುಂದರಿಗಿಶಾಸ್ತ್ರಿಗಳು.

ಭಾರತೀಯ ಸಿದ್ಧಾಂತ—ಸೆಪ್ಟಂಬರ್ ೧೯೫೩.

೧. ಪರಶಿವಲಿಂಗ ಮತ್ತು ಆದರ ಸಾಕ್ಷಾತ್ಕಾರ: ಗಂಗಾಧರ ಶಿವಾಚಾರ್ಯ ಮಹಾಸ್ವಾಮಿಗಳವರು.

೨. ಹೈದರಾಬಾದ್ ಕರ್ಣಾಟಕ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಭಾಷಣ ಶ್ರೀ ಕಲ್ಲಿನಾಥಶಾಸ್ತ್ರಿ ಪುರಾಣಿಕ.

ಸುಕುಮಾರ—ಸೆಪ್ಟೆಂಬರ್ ೧೯೫೩.

೧. ಪುರಂದರದಾಸನು ಹರಭಕ್ತನಾದುದು: ಶ್ರೀರಾಮಲಿಂಗಯ್ಯ ಚನ್ನಬಸವಯ್ಯ.

ವಿವೇಕಾಭ್ಯುದಯ—ಆಗಸ್ಟ ೫೩.

೧. ಪಾರ್ಶ್ವನಾಥ, ಶ್ರೀ ಜಿ. ಬ್ರಹ್ಮಪ್ಪನವರು.

ಸುಬೋಧ—ಅಕ್ಟೋಬರ್ ೧೯೫೩.

೧. ವೇದಗಳು: ವಿ. ಎಸ್. ರಾಮಕೃಷ್ಣ.

೨. ಕವಿಕಪ್ಪಣ ವಿರಚಿತ ಶ್ರೀ ಕೃಷ್ಣ ಚರಿತಾಮೃತ: ಎಂ. ಶೇಷಗಿರಿರಾವ್.

೩. ಕಾಲಕಾಚಾರ್ಯಕಥೆ: ಹುಲ್ಲೂರು ಶ್ರೀನಿವಾಸಜೋಯಿಸ್.

೪. ಕರ್ಣಾಟಕಾಂಧ್ರ ಸಂಸ್ಕೃತಿಯ ಕೇಂದ್ರ ವಿಜಯನಗರ ಎಚ್. ಎಸ್. ಸಚ್ಚಿದಾನಂದ.

ಶಿವಾನುಭವ—ಸೆಪ್ಟೆಂಬರ್ ೧೯೫೩.

೧. ಕರ್ಣಾಟಕದ ಕಲಚುರಿಗಳು: ದೇಸಾಯಿ ಪಾಂಡುರಂಗರಾವ್.

೨. ಶಿವಶರಣರ ಚರಿತ್ರಗಳು ಭಾಗ ೪ ರಾ. ಬ. ಫ. ಹಳಕಟ್ಟಿ.

೩. ಸಟೀಕ ಬಸವೇಶ್ವರನ ವಚನಗಳು ರಾ. ಬ. ಫ. ಹಳಕಟ್ಟಿ.

ಶಿವಾನುಭವ—ಅಕ್ಟೋಬರ್ ೧೯೫೩.

೧. ಕರ್ಣಾಟಕದ ಕಲಚುರಿಗಳು.

The Jaina Antiquary—Dec. 1952.

'The date of Durvinitha the royal patron of Pujyapada'—Pro. JYOTI PRASAD JAIN, M.A., LL.B.

The Adyar Library Bulletin—Oct. 1953.

'Bhakti and Mukti, in Svetāśvataropaniṣad.'—A. G. KRISHNA WARIER.

Annals of the Bhandarkar Oriental Research Institute—Volume XXXIII.

(1) 'The study of Śamkarācārya'—by DANIEL H. H. INGALLS.
(2) 'On the use of Prakrit dialects in Sanskrit Dramas'—by P. L. VAIDYA.
(3) Etymology of place names Patti-Hatti: Some observations on the History of Mahārāṣṭra and Karṇāṭaka.

Miscellanea—

(1) 'The term Karmadhāraya'—by K. V. ABHAYANKAR.
(2) 'A note on Amarusataka'—by S. N. TADPATIKAR.
(3) 'Portrait-painting during Rāṣṭrakūṭa times'—by O. C. GANGOLY.

The Advent—Nov. 53.

(1) Editorials—(I) music—its original and nature. (II) Indian and European Music.
(2) Poetic Inspiration—Late JAGADIS, SARAN.

Prabuddha Bharata—Nov. 53.

'Ancient Indian literature and world literature'—by AJAYGOPAL RAY.

Journal of the Maharaja Sayaji Rao University of Baroda.—

The "Gaṇadarpana" A work on Sanskrit grammar Ascribed to King Kumārapāla (1143-1174 A. D.) of Gujarat. Dr. B. J. SANDESARA, Ph.D. (Bombay).

The Poona Orientalist—Jan., April, July and Oct. 51.

(1) Sanskrit as Lingua Franca.
(2) The Doctrine of Lakshana and a peep into its chequered history. Prof. SIVAPRASAD BHATTACHARYA.
(3) Ascetic attitude towards women in the Ramayana—
Dr. S. N. VYAS.

(4) On the Name "One Act Nāṭak"—Dr. V. RAGHAVAN.
(5) Women in Banās works. (B. N. SHARMA).

Annals of Oriental Research University of Madras—

(1) Date of Palkurci Somanatha—S. RAMAKRISHNA SASTRY.
(2) Tulu calendar.
(3) Krishnavatarakatha Sangraha (Continued from previous number)—Prof. M. MARIYAPPA BHAT.

ಭಾರತಿ—ನವೆಂಬರ್ ೧೯೫೩.

(೧) ಕಾವ್ಯಾಲಂಕಾರಾಲು: ಶ್ರೀ ಮುಟ್ನೂರಿ ಸಂಗಮೇಶಂ.
(೨) ಆಧುನಿಕಾಂಧ್ರ ಕವಿತ್ವಂಮೀದ ಆಂಗ್ಲಸಾಹಿತ್ಯ ಪ್ರಭಾವಮು: ಶ್ರೀ ಕೊತ್ತಪಲ್ಲಿ ವೀರಭದ್ರರಾವು.

ಸಾದರ ಸ್ವೀಕಾರ

(೧) ಶ್ರೀ ರಾಮಕೃಷ್ಣರ ಜೀವನ ಚರಿತೆ—ಅನುವಾದಕರು: ಶ್ರೀ ಶಿವರಾಮ ಕಾರಂತರು; ಪ್ರಕಾಶಕರು: ಶ್ರೀ ರಾಮಕೃಷ್ಣಾಶ್ರಮ, ಮಂಗಳಾದೇವಿ ರಸ್ತೆ, ಮಂಗಳೂರು ೧; ಪುಟಗಳು ೬೬೮; ಬೆಲೆ, ೬ ರೂಪಾಯಿ.

(೨) ಒಲುಮೆ (ಕವನ)—ಗ್ರಂಥಕರ್ತರು: ಶ್ರೀ ತೀ. ನಂ. ಶ್ರೀಕಂಠಯ್ಯನವರು; ಪ್ರಕಾಶಕರು: ಶಾರದಾಮಂದಿರ, ೫೭೮; ಕೃಷ್ಣರಾಜವನಂ, ಮೈಸೂರು; ಪುಟಗಳು xii + ೫೦; ಬೆಲೆ, ರೂ. ೧-೮-೦.

(೩) ಚೆಲುವು ಒಲವು (ಕವನ)—ಗ್ರಂಥಕರ್ತರು: ಶ್ರೀ ಜಿ. ಎಸ್. ಶಿವರುದ್ರಪ್ಪನವರು; ಪ್ರಕಾಶಕರು: ತಳುಕಿನ ವೆಂಕಣ್ಣಯ್ಯನವರ ಸ್ಮಾರಕ ಗ್ರಂಥಮಾಲೆ, ಮೈಸೂರು; ಪುಟಗಳು: ೬೬; ಬೆಲೆ, ರೂ. ೧-೦-೦.

(೪) ಕನ್ನಡ ಸಾಹಿತ್ಯ ಚರಿತ್ರೆ—ಗ್ರಂಥಕರ್ತರು: ಶ್ರೀ ರಂ. ಶ್ರೀ ಮುಗಳಿಯವರು; ಪ್ರಕಾಶಕರು: ಶ್ರೀ ಆರ್. ಎನ್. ಹಬ್ಬು ಅವರು; ಉಷಾ ಪ್ರೆಸ್, ಓಲ್ಡ್ ಪೋಸ್ಟ್ ಆಫೀಸ್ ರೋಡ್, ಮೈಸೂರು, ಪುಟಗಳು: vii + ೪೬೨; ಬೆಲೆ, ರೂ. ೮-೦-೦.

(೫) ದಿಬ್ಬದಾಚೆ (ಕವನ)—ಗ್ರಂಥಕರ್ತರು: ಶ್ರೀ ಜಿ. ಶಂ. ಪರಮಶಿವಯ್ಯನವರು; ಪ್ರಕಾಶಕರು: ಕಲಾಕ್ಷೇತ್ರ, ೧೭೧; ರಮಾವಿಲಾಸ ಅಗ್ರಹಾರ, ಮೈಸೂರು; ಪುಟಗಳು; ix + ೬೪; ಬೆಲೆ, ರೂ. ೦-೬-೦.

(೬) ಈಶೋಪನಿಷತ್ತು (ಕನ್ನಡ ತಾತ್ಪರ್ಯಸಂಗ್ರಹ ಛಾಯಾಪದ್ಯ ಟಿಪ್ಪಣಿಗಳೊಡನೆ)—ಅನುವಾದಕರು: ಶ್ರೀ ಡಿ.ವಿ.ಜಿ. ಯವರು; ಪ್ರಕಾಶಕರು: ಕಾವ್ಯಾಲಯ, ಮೈಸೂರು; ಪುಟಗಳು ೪೭; ಬೆಲೆ, ರೂ. ೦-೧೨-೦.

(೭) ಪುರುಷಸೂಕ್ತ—(ಸಂಸ್ಕೃತಮೂಲ, ಕನ್ನಡ ಛಾಯಾಪದ್ಯ ಪೀಠಿಕೆ ತಾತ್ಪರ್ಯ ಟಿಪ್ಪಣಿಗಳೊಡನೆ)—ಅನುವಾದಕರು: ಶ್ರೀ ಡಿ.ವಿ.ಜಿ. ಯವರು; ಪ್ರಕಾಶಕರು: ಕಾವ್ಯಾಲಯ, ಮೈಸೂರು; ಪುಟಗಳು ೮೦; ಬೆಲೆ, ರೂ. ೧-೪-೦.

(೮) ಪ್ರತ್ಯಭಿಜ್ಞಾನ ಹೃದಯ (ಕಾಶ್ಮೀರ ಶಿವಾದ್ವೈತ ಸಿದ್ಧಾಂತ: ಮೂಲ; ಕ್ಷೇಮರಾಜ) (ಭಾವಾನುವಾದ)—ಶ್ರೀ ಜಿ. ರುದ್ರಪ್ಪ, ಎಂ.ಎ, ಎಲ್.ಎಲ್.ಬಿ., ಅವರು; ವಿಶ್ರಾಂತ ಜಿಲ್ಲಾ ನ್ಯಾಯಾಧೀಶರು, ನಂ ೧೧೨; ೪ ನೇ ಕ್ರಾಸ್ ರೋಡ್, ಗಾಂಧಿ ನಗರ, ಬೆಂಗಳೂರು-೨; ಪುಟಗಳು ೭೫ + ೭೯ + ೧೭; ಬೆಲೆ, ರೂ. ೨-೮-೦.

(೯) ಪಾಂಪೆಯ ಕೊನೆಯ ದಿನಗಳು—ಶ್ರೀ ಎ. ಕೃಷ್ಣಮೂರ್ತಿ ಬಿ.ಎ., ಬಿ.ಟಿ., ಅವರು; ಪ್ರಕಾಶಕರು: ಶಾರದಾ ಮಂದಿರ, ೫೭೮, ಕೃಷ್ಣರಾಜವನಂ, ಮೈಸೂರು; ಪುಟಗಳು: ೧೩೬; ಬೆಲೆ, ರೂ. ೧-೮-೦.

(೧೦) ನಿಟ್ಟುಸಿರು—ಕತೆಗಾರರು: ಶ್ರೀ ಸೂ. ವೆಂ. ಆರಗ; ಪ್ರಕಾಶಕರು: ಕನ್ನಡಕುಲ, ವಾಣೀವಿಲಾಸ ರಸ್ತೆ, ಮೈಸೂರು; ಪುಟಗಳು: ೧೦೨; ಬೆಲೆ, ರೂ. ೦-೮-೦.

(೧೧) ಆಯ್ದ ಕುಸುಮಗಳು—ಸಂಪಾದಕರು: ಶ್ರೀ ಡಿ. ಪುಟ್ಟಸ್ವಾಮಿ, ಬಿ.ಎ., ಬಿ.ಎಲ್., ಅವರು; ಪ್ರಕಾಶಕರು: ವಿವೇಕಾಭ್ಯುದಯ ಕಾರ್ಯಾಲಯ, ಮಂಗಳೂರು-೩, ದ. ಕನ್ನಡ; ಪುಟಗಳು: ೯೬; ಬೆಲೆ, ರೂ. ೧-೮-೦.

(೧೨) ಭಾರತದ ಜಾನಪದ ನೃತ್ಯಗಳು—ಲೇಖಕರು: ಶ್ರೀ ಕುಮಾರ ವೆಂಕಣ್ಣ ಅವರು; ಪ್ರಕಾಶಕರು: ಅರುಣೋದಯ ಲೈಬ್ರರಿ, ಅರಳೇಪೇಟೆ, ಬೆಂಗಳೂರು-೨; ಪುಟಗಳು: ೧೩೬; ಬೆಲೆ, ರೂ. ೧-೦-೦.

(೧೩) ಕೊನೆಯ ಗಿರಾಕಿ (ಕತೆಗಳು)—ಕತೆಗಾರರು: ಶ್ರೀ ನಿರಂಜನ ಅವರು; ಪ್ರಕಾಶಕರು: ಶ್ರೀ ಡಿ. ವಿ. ಕೆ. ಮೂರ್ತಿ, ಕೃಷ್ಣಮೂರ್ತಿಪುರಂ, ಮೈಸೂರು; ಪುಟಗಳು: ೧೨೭; ಬೆಲೆ, ರೂ. ೧-೪-೦.

(೧೪) ರೂಪರಾಶಿಗಳ ಸಂತೆ—ಲೇಖಕರು: ಶ್ರೀ ಯಂ. ಬಿ. ಮರಕಿಣಿ ಅವರು; ಪ್ರಕಾಶಕರು: ಜನಪ್ರಿಯ ಸಾಹಿತ್ಯ, ಸ್ವರಸ್ವತೀ ನಿಲಯ, ಪುತ್ತೂರು, ದ. ಕ.; ಪುಟಗಳು: ೬೨; ಬೆಲೆ, ರೂ. ೦-೧೫-೦.

(೧೫) ಸಾಧನಾ—ಶ್ರೀ ನಿರಂಜನ ಅವರು; ಪ್ರಕಾಶಕರು: ಪುರೋಗಾಮಿ ಪ್ರಕಾಶನ, ಬೆಂಗಳೂರು-೪; ಮಾರಾಟಗಾರರು: ಶಾರದಾ ಪ್ರಕಟನಾಲಯ, ಅರಳೇಪೇಟೆ, ಬೆಂಗಳೂರು-೨; ಪುಟಗಳು: ೧೬೦; ಬೆಲೆ, ರೂ. ೧-೮-೦.

(೧೬) ಐದು ನಿಮಿಷ—ಶ್ರೀ ನಿರಂಜನ ಅವರು; ಪ್ರಕಾಶಕರು: ಪುರೋಗಾಮಿ ಪ್ರಕಾಶನ, ಬೆಂಗಳೂರು-೪; ಮಾರಾಟಗಾರರು: ಶಾರದಾ ಪ್ರಕಟನಾಲಯ, ಅರಳೇಪೇಟೆ, ಬೆಂಗಳೂರು-೨; ಬೆಲೆ, ರೂ. ೧-೦-೦.

(೧೭) ಮಂಗರಾಜನ ಅಭಿನವಾಭಿಧಾನಂ—ಪ್ರಧಾನ ಸಂಪಾದಕ: ಶ್ರೀ ಎಂ. ಮರಿಯಪ್ಪ ಭಟ್, ಎಂ.ಎ., ಎಲ್.ಟಿ., ಅವರು; ಪ್ರಕಾಶಕರು: ಮದರಾಸು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಮಾಲೆ; ಪುಟಗಳು xi+೧೫೭+೧೫೫+iv; ಬೆಲೆ, ೯-೦-೦.

(೧೮) ಚಂದ್ರಗುಪ್ತ ವಿಜಯ (ಐದನೆಯ ಮುದ್ರಣ)—ಲೇಖಕರು: ಶ್ರೀ ಎಚ್. ಎಂ. ಶಂಕರನಾರಾಯಣರಾವ್, ಎಂ.ಎ., ಪ್ರಕಾಶಕರು: ಶ್ರೀ ರಾಮಚಂದ್ರ ಬುಕ್ ಡಿಪೋ, ದೇವರಾಜ ಮಾರ್ಕೆಟ್, ಮೈಸೂರು; ಪುಟಗಳು: ೧೫೪; ಬೆಲೆ, ರೂ. ೧-೮-೦.

(೧೯) ಪ್ರೇಮ ಚಂದ (ಪ್ರೇಮ ಚಂದ ಸಾಹಿತ್ಯದರ್ಶನ) ಭಾಗ ೧—ಸಂಪಾದಕ: ಶ್ರೀ ಬುರ್ಲಿ ಬಿಂದುಮಾಧವ; ಪ್ರಕಾಶಕರು: ಮಿಂಚಿನಬಳ್ಳಿಯ ಕಾರ್ಯಾಲಯ, ಧಾರವಾಡ; ಪುಟಗಳು ೨+೧೨೦; ಬೆಲೆ, ರೂ. ೨-೦-೦.

(೨೦) ಸುಗುಣಾ (ಕಾದಂಬರಿ)—ಕಾದಂಬರಿಕಾರರು: ಶ್ರೀ ಡಿ. ಆರ್. ವೆಂಕೋಬರಾವ್ ಅವರು; ಮಾರಾಟಗಾರರು: ಉಷಾ ಸಾಹಿತ್ಯಮಾಲೆ, ಮೈಸೂರು; ಪುಟಗಳು: ೧೫೫; ಬೆಲೆ, ರೂ. ೧-೦-೦.

(೨೧) ಉದಯ (ಪತ್ರಿಕೆ)—ಸಂಪಾದಕರು: ಶ್ರೀ ಆಚಾರ್ಯ ವ್ಯಾಸ ಮತ್ತು ಶ್ರೀ ಹೆ. ಗೋ. ರಾಮಕೃಷ್ಣ ಅಡಿಗ; ಪ್ರಕಾಶಕರು: ಭದ್ರಾವತಿಯ ವಿದ್ಯಾರ್ಥಿಗೋಷ್ಠಿಯವರು; ಪುಟಗಳು: ಕ್ರೌನ್. ಅ. ಪ, ೮೪; ಬೆಲೆ, ನಾಲ್ಕು ಆಣೆ.

ಪ್ರಬುದ್ಧ ಕರ್ಣಾಟಕ

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಪತ್ರಿಕೆ

'ಪ್ರಬುದ್ಧ ಕರ್ಣಾಟಕ'ವು ಚೈತ್ರ, ಆಷಾಢ, ಆಶ್ವಯುಜ, ಪುಷ್ಯ ಮಾಸಗಳಲ್ಲಿ ಆಯಾ ತಿಂಗಳ ಹುಣ್ಣಿಮೆಯ ಹೊತ್ತಿಗೆ ವರ್ಷಕ್ಕೆ ನಾಲ್ಕುಸಲ ಹೊರಡುತ್ತದೆ.

ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) :

ಸಾಮಾನ್ಯ ಚಂದಾದಾರರಿಗೆ	ರೂ.	೩	೮	೦
ವಾಚನಾಲಯ ಮುಂತಾದ ಸಂಸ್ಥೆಗಳಿಗೆ	ರೂ.	೪	೮	೦
ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಮಾತ್ರ	ರೂ.	೨	೮	೦

ಸಂಚಿಕೆಗಳನ್ನು ರಿಜಿಸ್ಟರ್ ಮೂಲಕ ತರಿಸಿಕೊಳ್ಳಬೇಕೆನ್ನುವವರು ಚಂದಾ ಹಣದ ಜೊತೆಗೆ ರೂ. ೧-೨-೦ ಕಳುಹಿಸಬೇಕು.

ಚಂದಾಹಣವನ್ನೂ ಅದರ ವಿಚಾರವಾಗಿ ಪತ್ರಗಳನ್ನೂ ಕಾರ್ಯದರ್ಶಿ, ಪ್ರಚಾರ ಮತ್ತು ಪ್ರಕಾಶನ ಕಾರ್ಯ, ಯೂನಿವರ್ಸಿಟಿ ಆಫೀಸು, ಮೈಸೂರು, ಎಂಬ ವಿಳಾಸಕ್ಕೆ ಕಳಿಸಬೇಕು. ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರವರಿಗಾಗಲಿ, ಪ್ರಬುದ್ಧ ಕರ್ಣಾಟಕದ ಸಂಪಾದಕರಿಗಾಗಲಿ ಕಳಿಸಬಾರದು. ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಚಂದಾಹಣವನ್ನು ತಮ್ಮ ತಮ್ಮ ಕಾಲೇಜಿನ ಅಕೌಂಟ್ಸ್ ಅಧಿಕಾರಿಗಳಿಗೆ ಮುಂಗಡವಾಗಿ ಸಲ್ಲಿಸಿ, ಪಡೆದ ರಸೀತಿಯನ್ನು ತಮ್ಮ ವಿಳಾಸದೊಂದಿಗೆ ಕಳಿಸಿಕೊಡಬೇಕು. ಕಾಲೇಜುಗಳ ಅಧ್ಯಾಪಕ ವರ್ಗದವರೂ ಇದೇ ರೀತಿ ಮಾಡಬಹುದು. ವಿದ್ಯಾರ್ಥಿಗಳು ತಾವು ವಿದ್ಯಾರ್ಥಿಗಳೆಂಬ ಬಗ್ಗೆ ತಮ್ಮ ಪಾಠಶಾಲೆಯ ಮುಖ್ಯೋಪಾಧ್ಯಾಯರಿಂದ ಒಂದು ಪ್ರಮಾಣಪತ್ರವನ್ನು ಪಡೆದು ಅದನ್ನು ಚಂದಾ ಹಣದೊಡನೆ ಕಳಿಸಬೇಕು. ಚಂದಾದಾರರು ತಮ್ಮ ಚಂದಾ ಹಣವನ್ನು (ಸರ್ಕಾರಿ ಖಜಾನೆಯಲ್ಲಿ 'ಯೂನಿವರ್ಸಿಟಿ ಫಂಡ್'ಗೆ ಕಟ್ಟಿ ಖಜಾನೆ ರಸೀತಿಯನ್ನು ತಮ್ಮ ವಿಳಾಸದೊಡನೆ ಪ್ರಬುದ್ಧ ಕರ್ಣಾಟಕದ ಆಫೀಸಿಗೆ ಕಳುಹಿಸಬಹುದು.)

ಪ್ರಬುದ್ಧ ಕರ್ಣಾಟಕದ ೨೮, ೨೯, ೩೦, ೩೧, ೩೨ ನೆಯ ಸಂಪುಟಗಳನ್ನು ಸಂಪುಟ ಒಂದಕ್ಕೆ ಒಂದು ರೂಪಾಯಿನಂತೆ ಪಡೆಯಬಹುದು. ಸಾಮಾನ್ಯ ಸಂಚಿಕೆಯ ಬೆಲೆ ನಾಲ್ಕಾಣೆ, ಎರಡು ಸಂಚಿಕೆಗಳ ಬೆಲೆ ಎಂಟಾಣೆ. ಅಂಚೆಯ ಮೂಲಕ ತರಿಸಿಕೊಳ್ಳುವವರು ಸಂಪುಟ ಒಂದಕ್ಕೆ ಹದಿಮೂರು ಆಣೆ, ಸಾಮಾನ್ಯ ಸಂಚಿಕೆ ಒಂದಕ್ಕೆ ಏಳು ಆಣೆ, ಎರಡು ಸಂಚಿಕೆಗಳನ್ನು ಒಳಗೊಂಡ ಸಂಚಿಕೆಗೆ ಒಂಬತ್ತು ಆಣೆಯಂತೆ ಅಂಚೆ ವೆಚ್ಚವನ್ನು ಕಳುಹಿಸಬೇಕು.

'ಪ್ರಬುದ್ಧ ಕರ್ಣಾಟಕ'ದಲ್ಲಿ ಪ್ರಕಟನೆಗೆ ಲೇಖನಗಳನ್ನೂ ವಿಮರ್ಶೆಗೆ ಗ್ರಂಥಗಳನ್ನೂ ವಿನಿಮಯಕ್ಕೆ ಪತ್ರಿಕೆಗಳನ್ನೂ ಪ್ರಬುದ್ಧ ಕರ್ಣಾಟಕದ ಸಂಪಾದಕ (ಮಹಾರಾಜರವರ ಕಾಲೇಜು, ಮೈಸೂರು) ರಿಗೆ ಕಳಿಸಬೇಕು.

ಕಾರ್ಯದರ್ಶಿ,
ವಿಶ್ವವಿದ್ಯಾನಿಲಯದ ಪ್ರಕಟನ ಮತ್ತು
ಪ್ರಚಾರೋಪನ್ಯಾಸ ಶಾಖೆ, ಮೈಸೂರು.

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಮಾಲೆ

ಪ್ರಧಾನಸಂಪಾದಕರು : ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್., ೧೯೪೨ ರ ವರೆಗೆ
ಎ. ಆರ್. ಕೃಷ್ಣ ಶಾಸ್ತ್ರೀ, ಎಂ.ಎ., ೧೯೪೨ರಿಂದ ೧೯೪೭ರ ವರೆಗೆ
ಕೆ. ವಿ. ಪುಟ್ಟಪ್ಪ, ಎಂ.ಎ., ೧೯೪೭ ರಿಂದ

೧. **ಹರಿಶ್ಚಂದ್ರಕಾವ್ಯ ಸಂಗ್ರಹ** (ಐದನೆಯ ಮುದ್ರಣ)—ಸಂಪಾದಕರು : ಟಿ. ಎಸ್. ವೆಂಕಣ್ಣಯ್ಯ, ಎಂ.ಎ. ಮತ್ತು ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.

೨. **ಕರ್ಣಾಟಕ ಕಾದಂಬರೀ ಸಂಗ್ರಹ**—ಸಂಪಾದಕರು : ಟಿ. ಎಸ್. ವೆಂಕಣ್ಣಯ್ಯ, ಎಂ.ಎ.

೩. ***ಪ್ರಭುಲಿಂಗಲೀಲೆಯ ಸಂಗ್ರಹ** (ಸಚಿತ್ರ)—ಸಂಪಾದಕರು : ಎಂ. ಎಸ್. ಬಸವಲಿಂಗಯ್ಯ, ಎಂ.ಎ., ಬಿ.ಎಲ್. ಮತ್ತು ಎಂ. ಆರ್. ಶ್ರೀನಿವಾಸ ಮೂರ್ತಿ, ಬಿ.ಎ.

೪. ***ಸಾಕ್ರೆಟೀಸನ ಕೊನೆಯ ದಿನಗಳು** (ಸಚಿತ್ರ)—ಅನುವಾದಕರು : ಎ. ಎನ್. ಮೂರ್ತಿರಾವ್, ಎಂ.ಎ.

೫. ***ಶ್ರೀರಾಮಕೃಷ್ಣ ಪರಮಹಂಸ**—ಲೇಖಕರು : ಕೆ. ವಿ. ಪುಟ್ಟಪ್ಪ, ಎಂ.ಎ.

೬. ***ರವೀಂದ್ರನಾಥ ಠಾಕೂರರು** (ಸಚಿತ್ರ)—ಲೇಖಕರು : ಮಾಸ್ತಿ ವೆಂಕಟೇಶ ಅಯ್ಯಂಗಾರ್, ಎಂ.ಎ.

೭. **ಆರೋಗ್ಯ, ಅದರ ಜ್ಞಾನ ಮತ್ತು ಸಾಧನ** (ಸಚಿತ್ರ)—ಲೇಖಕರು : ಜಿ. ಎ. ಈಶ್ವರ ಮೂರ್ತಿ, ಬಿ.ಎ., ಎಲ್.ಎಂ.ಎಸ್., ಬಿ.ಎಸ್‌ಸಿ.

೮. **ಪಂಪರಾಮಾಯಣ ಸಂಗ್ರಹ**—ಸಂಪಾದಕರು : ಆಸ್ಥಾನ ಮಹಾವಿದ್ವಾನ್ ತಿರುವಳ್ಳೂರ್ ಶ್ರೀನಿವಾಸರಾಘವಾಚಾರ್ ಮತ್ತು ಡಿ. ಎಲ್. ನರಸಿಂಹಾಚಾರ್, ಎಂ.ಎ. ; ಸಾದಾ ರೂ. ೧-೨-೦ ; ಕ್ಯಾಲಿಕೊ ೨-೨-೦.

೯. **ಹಣ ಪ್ರಪಂಚ**—ಲೇಖಕರು : ವಿ. ಸೀತಾರಾಮಯ್ಯ, ಎಂ.ಎ.

೧೦. ***ಸಂಸ್ಕೃತ ನಾಟಕ**—ಲೇಖಕರು : ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.

೧೧. **ಜೀವವಿಜ್ಞಾನ**—ಲೇಖಕರು : ಬಿ. ವೆಂಕಟನಾರಾಯಣಪ್ಪ, ಎಂ.ಎ.

೧೨. **ಹಿಂದೂದರ್ಶನಸಾರ**—ಲೇಖಕರು : ಮಹಾಮಹೋಪಾಧ್ಯಾಯ ಪಂಡಿತರತ್ನಂ ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯ.

೧೩. **ರಾಜನೀತಿ**—ಲೇಖಕರು : ಎಚ್. ಕೃಷ್ಣರಾವ್, ಎಂ.ಎ.

೧೪. **ಹದಿಬದೆಯ ಧರ್ಮ**—ಸಂಪಾದಕೀಯರು: ಡಿ. ಚಂಪಾಬಾಯಿ, ಎಂ.ಎ.

೧೫. ***ಪುರಾಣನಾಮಚೂಡಾಮಣಿ**—ಲೇಖಕರು : ಬೆನಗಲ್ ರಾಮರಾವ್, ಎಂ.ಎ., ಎಲ್‌ಎಲ್.ಬಿ. ಮತ್ತು ಪಾನ್ಯಂ ಸುಂದರಶಾಸ್ತ್ರಿ; ಬೆಲೆ, ರೂ.೩-೪-೦.

೧೬. **ಯಶೋಧರ ಚರಿತೆಯ ಸಂಗ್ರಹ**—ಸಂಪಾದಕರು: ಕೆ. ವಿ. ರಾಘವಾಚಾರ್, ಎಂ.ಎ., ಬಿ.ಟಿ.

೧೭.***ಗ್ರೀಕರ ತತ್ವಶಾಸ್ತ್ರಸಾರ ಸಂಗ್ರಹ**—ಲೇಖಕರು: ಕೆ. ಆರ್. ಶ್ರೀನಿವಾಸ ಅಯ್ಯಂಗಾರ್, ಎಂ.ಎ.; ಬೆಲೆ, ಸಾದಾ ರೂ. ೧-೦-೦.

೧೮. **ಹಿಂದೂ ದೇಶದ ಭೂಚರಿತ್ರೆ**—ಲೇಖಕರು: ವೈ. ನಾಗಪ್ಪ, ಎಂ.ಎಸ್‌ಸಿ.

೧೯. **ವಚನಧರ್ಮಸಾರ**—ಲೇಖಕರು: ಎಂ. ಆರ್. ಶ್ರೀನಿವಾಸಮೂರ್ತಿ, ಬಿ.ಎ.

೨೦. **ಪ್ರಾಣಿಶಾಸ್ತ್ರ**—ಡಾ|| ಎ. ಸುಬ್ಬರಾವ್, ಬಿ.ಎ., ಡಿ.ಎಸ್‌ಸಿ., ಮತ್ತು ಎ. ನಾರಾಯಣರಾವ್, ಎಂ.ಎಸ್‌ಸಿ.; ಬೆಲೆ, ಸಾದಾ ರೂ. ೧-೪-೦; ಕ್ಯಾಲಿಕೊ ರೂ. ೧-೮-೦.

೨೧.***ಆಧುನಿಕ ತತ್ವಶಾಸ್ತ್ರ ಸಮಸ್ಯೆಗಳು**—ಜಿ. ಹನುಮಂತರಾವ್, ಎಂ.ಎ.; ಬೆಲೆ, ಸಾದಾ ರೂ. ೧-೦-೦.

೨೨. **ಕನ್ನಡ ಕೈಪಿಡಿ** (ಭಾಗ ೫, ಸಾಹಿತ್ಯ ಚರಿತ್ರೆ)—ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.; ಬೆಲೆ, ಸಾದಾ ರೂ. ೧-೪-೦; ಕ್ಯಾಲಿಕೊ ರೂ. ೨-೪-೦.

೨೩. **ಇಸ್ಲಾಂ ಸಂಸ್ಕೃತಿ**—ಮೂಲಲೇಖಕರು: ಪ್ರೊ|| ಮಹಮದ್ ಅಬ್ಬಾಸ್ ಷೂಸ್ತ್ರಿ; ಅನುವಾದಕರು: ರಾಜಸೇವಾಸಕ್ತ ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.; ಬೆಲೆ, ರೂ. ೨-೦-೦.

೨೪. **ತಮಿಳು ಪಾಠಗಳು**—ಲೇಖಕರು: ಎಸ್. ರುದ್ರಪತಿ, ಎಂ.ಎ.; ಬೆಲೆ, ಸಾದಾ ರೂ. ೩-೪-೦.

೨೫. **ಅಶೋಕ**—ಲೇಖಕರು: ಎನ್. ಕಸ್ತೂರಿ, ಎಂ.ಎ., ಬಿ.ಎಲ್.; ಬೆಲೆ, ಸಾದಾ ರೂ. ೧-೨-೦.

೨೬. **ಭಾರತೀಯ ಕಾವ್ಯಮೀಮಾಂಸೆ**—ಲೇಖಕರು: ಪ್ರೊ|| ತೀ. ನಂ. ಶ್ರೀಕಂಠಯ್ಯ, ಎಂ.ಎ.; ಬೆಲೆ, ಸಾದಾ ರೂ. ೩-೮-೦; ಉತ್ತಮ ರೂ. ೪-೦-೦.

ಈ ಗ್ರಂಥಮಾಲೆಯ ಪುಸ್ತಕಗಳನ್ನು ತರಿಸಿಕೊಳ್ಳಲಿಚ್ಛಿಸುವವರು ಈ ಕೆಳಗಿನ ವಿಳಾಸಕ್ಕೆ ಬರೆಯಬೇಕು.

ಸೂಪರಿಂಟೆಂಡೆಂಟ್,
ಓರಿಯೆಂಟಲ್ ರಿಸರ್ಚ್ ಇನಸ್ಟಿಟ್ಯೂಟ್, ಮೈಸೂರು.

ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರ ಪುಸ್ತಕಮಾಲೆ

೧. *ಖಗೋಳಶಾಸ್ತ್ರಪ್ರವೇಶ—ಸಿ. ಎನ್. ಶ್ರೀನಿವಾಸ ಅಯ್ಯಂಗಾರ್, ಡಿ.ಎಸ್‌ಸಿ.
೨. ಸಮಾಜದ ರೋಗರುಜಿನಗಳು—ಜಿ. ಹನುಮಂತರಾವ್, ಎಂ.ಎ.
೩. ತೆರಿಗೆ—ಬಿ. ಆರ್. ಸುಬ್ಬರಾವ್, ಎಂ.ಎ.
೪. *ನವರತ್ನಗಳು—ಎಚ್. ಸುಬ್ಬಾಜೋಯಿಸ್, ಎಂ.ಎಸ್‌ಸಿ.
೫. *ನಮ್ಮ ಹಳ್ಳಿಗಳು—ಜಿ. ಎನ್. ಕೃಷ್ಣಮೂರ್ತಿ, ಎಂ.ಎ.
೬. ಕುಮಾರವ್ಯಾಸ—ಎಸ್. ವಿ. ರಂಗಣ್ಣ, ಎಂ.ಎ.
೭. ಹಂಪೆಯ ಹರಿಹರ—ಡಿ. ಎಲ್. ನರಸಿಂಹಾಚಾರ್, ಎಂ.ಎ.
೮. ಕನ್ನಡ ಸಾಹಿತ್ಯ—ಕೆ. ವೆಂಕಟರಾಮಪ್ಪ, ಎಂ.ಎ.
೯. *ವಿದ್ಯುಚ್ಛಕ್ತಿಯ ವೈಭವ—ಬಿ. ಎ. ಕೃಷ್ಣಸ್ವಾಮಿರಾವ್, ಎಂ.ಎಸ್‌ಸಿ.
೧೦. ಪಂಪ—ಟಿ. ಎನ್. ಶ್ರೀಕಂಠಯ್ಯ, ಎಂ.ಎ.
೧೧. ಪ್ರಾಣಿಜೀವನ—ಎ. ನಾರಾಯಣರಾವ್, ಎಂ.ಎಸ್‌ಸಿ.
೧೨. *ಕನಸುಗಳು—ಎನ್. ಎಸ್. ನಾರಾಯಣಶಾಸ್ತ್ರೀ, ಎಂ.ಎ.
೧೩. ಮದುವೆ—ಎನ್. ಕಸ್ತೂರಿ, ಎಂ.ಎ., ಬಿ.ಎಲ್.
೧೪. ವಾಯುಗುಣ—ಕೆ. ಶೇಷಾದ್ರಿ ಅಯ್ಯಂಗಾರ್, ಎಂ.ಎಸ್‌ಸಿ., ಎಲ್‌ಎಲ್.ಬಿ.
೧೫. ಬೆಳಕು—ಟಿ. ಎಸ್. ಸುಬ್ಬರಾಯ, ಎಂ.ಎಸ್‌ಸಿ.
೧೬. ಕರ್ಣಾಟಕ ಕಾದಂಬರಿ—ವಿ. ಸೀತಾರಾಮಯ್ಯ, ಎಂ.ಎ.
೧೭. ಕಾಳಿದಾಸನ ಕಾವ್ಯಗಳು—ಎಸ್. ರಾಮಚಂದ್ರರಾವ್, ಎಂ.ಎ.
೧೮. ಇಂಗ್ಲೆಂಡಿನ ರಾಜಕೀಯ ಬೆಳವಣಿಗೆ—ಪಿ. ಜಿ. ಸತ್ಯಗಿರಿನಾಥನ್, ಎಂ.ಎ.
೧೯. ಕಣ್ಣು ಮತ್ತು ಅದರ ರಕ್ಷಣೆ—ಡಿ. ಶಾಮಣ್ಣ, ಬಿ.ಎ., ಎಂ.ಬಿ., ಬಿ.ಎಸ್.
೨೦. *ಸಾರ್ವಜನಿಕ ವೆಚ್ಚ—ಎಂ. ಎಚ್. ಗೋಪಾಲ್, ಎಂ.ಎ., ಪಿಎಚ್.ಡಿ.
೨೧. ಶಿಶುವಿಹಾರಗಳು—ಸಿ. ರಂಗಾಚಾರ್, ಬಿ.ಎಸ್‌ಸಿ., ಎಂ.ಎಡ್.
೨೨. ಸಂಖ್ಯೋದ್ಯಾನ—ಬಿ. ಸೀತಾರಾಮಶಾಸ್ತ್ರೀ, ಎಂ.ಎ.
೨೩. ವಿಡಂಬನ—ಎಸ್. ವಿ. ರಂಗಣ್ಣ, ಎಂ.ಎ.
೨೪. *ಎಲ್ಲೋರ ಮತ್ತು ಅಜಂತಾ—ಎಂ. ಎಚ್. ಕೃಷ್ಣ, ಎಂ.ಎ., ಡಿ.ಲಿಟ್.
೨೫. ಸಾರಜನಕದ ಮಹತ್ವ—ಎಚ್. ಸುಬ್ಬಾಜೋಯಿಸ್, ಎಂ.ಎಸ್‌ಸಿ.
೨೬. ಭಾಸ—ಎಚ್. ಎಲ್. ಹರಿಯಪ್ಪ, ಎಂ.ಎ.
೨೭. ಪಾಶ್ಚಾತ್ಯ ರಾಜಕೀಯ ತತ್ವಗಳು—ಎಂ. ಯಾಮುನಾಚಾರ್ಯ, ಎಂ.ಎ.
೨೮. ಸರ್ವಜ್ಞಕವಿ—ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.
೨೯. ಇಂಗ್ಲಿಷ್ ಪ್ರಬಂಧಗಳು—ಎಸ್. ಮಂಜನಾಥ್, ಎಂ.ಎ.
೩೦. ಅಕ್ಕಮಹಾದೇವಿ—ಎಸ್. ವಿ. ಪರಮೇಶ್ವರಭಟ್ಟ, ಎಂ.ಎ.
೩೧. ಗಣಿತಶಾಸ್ತ್ರದ ಸ್ವರೂಪ—ಸಿ. ಎನ್. ಶ್ರೀನಿವಾಸ ಅಯ್ಯಂಗಾರ್, ಡಿ.ಎಸ್‌ಸಿ.
೩೨. *ಋಗ್ವೇದ—ಎಂ. ಎ. ಕೃಷ್ಣಸ್ವಾಮಿ, ಎಂ.ಎ.
೩೩. ಕುಮಾರವ್ಯಾಸ ವಾಣಿ—ಎಸ್. ವಿ. ರಂಗಣ್ಣ, ಎಂ.ಎ.
೩೪. ಆಳ್ವಾರುಗಳು—ಎಂ. ಯಾಮುನಾಚಾರ್ಯ, ಎಂ.ಎ.

೩೭. ಹಿಂದು ಮುಸ್ಲಿಂ ಮೈತ್ರಿಯನ್ನು ಬೆಳಸಿದ ರಾಜರು—
ವಿ. ರಾಘವೇಂದ್ರರಾವ್, ಎಂ.ಎ., ಬಿ.ಟಿ.

೩೮. ಸುಭಾಷಿತ ಸಂಗ್ರಹಗಳು—ಎಂ. ಪಿ. ಲಕ್ಷ್ಮೀನರಸಿಂಹಶಾಸ್ತ್ರೀ, ಎಂ.ಎ.

೩೯. ಮಕ್ಕಳ ಭಾವಜೀವನ—ಬಿ. ಕುಪ್ಪುಸ್ವಾಮಿ ನಾಯಿಡು, ಎಂ.ಎ.

೪೦. ಸಹಕಾರ—ಎಸ್. ಗೋಪಾಲಸ್ವಾಮಿ, ಎಂ.ಎ.

೪೧. *ನಯಸೇನ—ಜಿ. ವೆಂಕಟಸುಬ್ಬಯ್ಯ, ಎಂ.ಎ., ಬಿ.ಟಿ.

೪೨. ಕೌಟಿಲ್ಯ—ಎಂ. ವಿ. ಕೃಷ್ಣರಾವ್, ಎಂ.ಎ., ಬಿ.ಟಿ.

೪೩. ತೆಲುಗು ಚಾಟುಪದ್ಯಗಳು—ಕೆ. ವೆಂಕಟರಾಮಪ್ಪ, ಎಂ.ಎ.

೪೪. ಮುನಿಸಿಪಾಲಿಟಿಗಳು—ಎಚ್. ಕೃಷ್ಣರಾವ್, ಎಂ.ಎ.

೪೫. *ಲಕ್ಷ್ಮೀಶ—ಎನ್. ಅನಂತರಂಗಾಚಾರ್, ಎಂ.ಎ., ಬಿ.ಟಿ.

೪೬. ರುಚಿ—ಎಸ್. ವಿ. ರಂಗಣ್ಣ, ಎಂ.ಎ.

೪೭. ಕೀಟಗಳು—ಡಿ. ಎಸ್. ವೀರಯ್ಯ, ಎಂ.ಎಸ್‌ಸಿ.

೪೮. ಅಲೆಗಳು—ಕೆ. ಶೇಷಾದ್ರಿ ಅಯ್ಯಂಗಾರ್, ಎಂ.ಎಸ್‌ಸಿ., ಎಲ್‌ಎಲ್.ಬಿ.

೪೯. ಮುದ್ದಣ—ತ. ಸು. ಶಾಮರಾವ್, ಎಂ.ಎ.

೫೦. *ಐವರು ಭೌತವೈಜ್ಞಾನಿಕರು—ಬಿ. ಎ. ಕೃಷ್ಣಸ್ವಾಮಿರಾವ್, ಎಂ.ಎಸ್‌ಸಿ.

೫೧. *ಕೃತಕ ರೇಷ್ಮೆ—ಎಂ. ಷಡಕ್ಷರಸ್ವಾಮಿ, ಎಂ.ಎಸ್‌ಸಿ.

೫೨. *ಚೀನರ ಇತಿಹಾಸ ಮತ್ತು ನಾಗರಿಕತೆ—ಎಸ್. ವೆಂಕಟದೇಶಿಕಾಚಾರ್, ಎಂ.ಎ

೫೩. *ಯುದ್ಧಕಾಲದ ಆರ್ಥಿಕ ಸಮಸ್ಯೆಗಳು—ಎಸ್. ಲಕ್ಷ್ಮೀನರಸಿಂಹನ್, ಎಂ.ಎ.

೫೪. *ಆಹಾರ—ಜೆ. ಆರ್. ಲಕ್ಷ್ಮಣರಾವ್, ಎಂ.ಎಸ್‌ಸಿ.

೫೫. *ಇಬ್ಸನ್ನಿನ ಕೆಲವು ನಾಟಕಗಳು—ಎಸ್. ಮಂಜನಾಥ್, ಎಂ.ಎ.

೫೬. ಶಬ್ದಪ್ರಪಂಚ—ಆರ್. ಎಲ್. ನರಸಿಂಹಯ್ಯ, ಎಂ.ಎಸ್‌ಸಿ.

೫೭. ಪ್ರಜಾಭಿಪ್ರಾಯ—ಟಿ. ಎಸ್. ರಾಜಗೋಪಾಲ ಅಯ್ಯಂಗಾರ್, ಎಂ.ಎ.,
ಎಲ್‌ಎಲ್. ಬಿ.

೫೮. ಕಲ್ಲಿದ್ದಲು—ಕೆ. ಎಸ್. ಲಕ್ಷ್ಮಣರಾವ್, ಎ.ಎಸ್.ಸಿ.

೫೯. ಜನಪದಮುಕ್ತಕಗಳು—ಎಚ್. ಎಂ. ಶಂಕರನಾರಾಯಣರಾವ್, ಎಂ.ಎ.

ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸದ ಪುಸ್ತಕಗಳನ್ನು ಮತ್ತು ಪುಟ್ಟಣ್ಣಚೆಟ್ಟರ ಪುದುವಟ್ಟನಮಾಲೆಯ ಪುಸ್ತಕಗಳನ್ನು ಕೊಳ್ಳುವವರಿಗೆ ಈ ಕೆಳಗೆ ಕಂಡಂತೆ ಕಮೀಷನ್ ಕೊಡಲಾಗುವುದು. ಅಂಚೆ ಮತ್ತು ಪುಸ್ತಕವನ್ನು ಕಳುಹಿಸುವ ಖರ್ಚು ಪ್ರತ್ಯೇಕ.

ಶೇಕಡ ೧೬ ೨/೩ ರಂತೆ ೨೦ ಪುಸ್ತಕಗಳನ್ನು ಕೊಳ್ಳುವವರಿಗೆ
ಶೇಕಡ ೨೦ ರಂತೆ ೨೦೦ ಪುಸ್ತಕಗಳನ್ನು ಕೊಳ್ಳುವವರಿಗೆ
ಶೇಕಡ ೨೫ ರಂತೆ ೫೦೦ ಪುಸ್ತಕಗಳನ್ನು ಕೊಳ್ಳುವವರಿಗೆ
ಶೇಕಡ ೩೩ ೧/೩ ರಂತೆ ೨೦೦೦ ಒಂದು ವರ್ಷದಲ್ಲಿ ಕೊಳ್ಳುವವರಿಗೆ

ಸಾಧಾರಣ ಪ್ರತಿ ೩ ಆಣೆ. ಉತ್ತಮ ಪ್ರತಿ ೪ ಆಣೆ.

ಕಾರ್ಯದರ್ಶಿ, ಪ್ರಚಾರ ಮತ್ತು ಪ್ರಕಾಶನಕಾರ್ಯ,
ಯೂನಿವರ್ಸಿಟಿ ಆಫೀಸ್ ಕಟ್ಟಡ, ಮೈಸೂರು.

---

* ಈ ಪುಸ್ತಕಗಳು ನಮ್ಮಲ್ಲಿ ಸಿಗುವುದಿಲ್ಲ.

ಸರ್ ಕೆ. ಪಿ. ಪುಟ್ಟಣ್ಣಚೆಟ್ಟರ ಪುದುವಟ್ಟಿನ ಪ್ರಕಟನಮಾಲೆ

೧. *ಟಪಾಲ್ ಸಂಸ್ಥೆಯ ವಿವರ—ಕೆ. ಲಕ್ಷ್ಮೀನರಸಿಂಹಯ್ಯ, ಬಿ.ಎ., ಎಲ್‌ಎಲ್.ಬಿ

೨. *ವಿಶ್ವವಿಸರಣ—ಜಿ. ಎಸ್. ಪರಮಶಿವಯ್ಯ, ಎಂ.ಎಸ್‌ಸಿ.

೩. *ಸರ್ಕಾರದ ಪದ್ಧತಿ ಮತ್ತು ರಚನಾಕ್ರಮ—ಎಚ್. ಕೃಷ್ಣರಾವ್, ಎಂ.ಎ.

೪. *ವ್ಯವಸಾಯದ ಮಣ್ಣುಗಳು—ಕೂರಪಾಡು ಗುಂಡಪ್ಪ, ಬಿ.ಎ.

೫. *ಆಕಾಶಯಾನ—ಬಿ. ಕೆ. ಎಲ್. ರಾವ್.

೬. *ವಿಶ್ವವಿದ್ಯಾನಿಲಯಗಳು—ಡಾ|| ಎಂ. ಸಿದ್ಧಲಿಂಗಯ್ಯ, ಎಂ.ಎ., ಬಿ.ಟಿ., ಪಿಎಚ್.ಡಿ., ಡಿಪ್.ಎಡ್. ಮತ್ತು ಸಿ. ರಂಗಾಚಾರ್, ಬಿ.ಎಸ್‌ಸಿ., ಎಂ.ಎಡ್

೭. *ಹೆರಿಗೆ ಮತ್ತು ಶಿಶುಪೋಷಣೆ—ಡಾ|| ರತ್ನಮ್ಮ ಐಸಾಕ್, ಎಲ್.ಎಂ.ಎಸ್., ಎಂ.ಆರ್.ಸಿ.ಎಸ್., ಎಲ್.ಆರ್.ಸಿ.ಪಿ

೮. *ಮಲೇರಿಯಾ ನಿರೋಧ—ಬಿ. ಅನಂತಸ್ವಾಮಿರಾವ್, ಬಿ.ಎಸ್‌ಸಿ., ಎಂ.ಬಿ.ಬಿ.ಎಸ್., ಎಂ.ಪಿ.ಎಚ್

೯. *ಗ್ರಾಮ ನೈರ್ಮಲ್ಯ—ಎಸ್. ಡಿ. ನಾರಾಯಣಗೌಡ, ಎಂ.ಬಿ.ಬಿ.ಎಸ್., ಡಿ.ಪಿ.ಎಚ್

೧೦. ಪಶುಪಾಲನೆ—ಎಂ. ಕೃಷ್ಣಶಾಸ್ತ್ರಿ, ಬಿ.ಎ., ಐ.ಡಿ.ಡಿ., ಅಸೋಸಿಯೇಟ್ ಐ.ಡಿ.ಆರ್.ಐ

೧೧. ಯೋಗಾಸನಗಳು—ವಿದ್ವಾನ್ ಟಿ. ಕೃಷ್ಣಮಾಚಾರ್ಯ.

೧೨. ಮೈಸೂರು ದೇಶದ ರಸಾಯನಿಕ ಕೈಗಾರಿಕೆಗಳು—ಕೆ. ಅಶ್ವತ್ಥನಾರಾಯಣ ರಾವ್, ಡಿ.ಎಸ್‌ಸಿ

೧೩. ವಿದ್ಯುಚ್ಛಕ್ತಿಯ ಉಪಯೋಗ—ಎಂ. ಛೀ. ತಿರುನಾರಾಯಣ, ಬಿ.ಎ., ಬಿ.ಎಸ್‌ಸಿ. (ಆನರ್ಸ್) ಸಿ.ಪಿ., ಇ.ಟಿ. (ಐ.ಐ.ಎಸ್)

೧೪. ಮಕ್ಕಳ ಬೆಳವಣಿಗೆ—ಡಾ|| ಬಿ. ಕುಪ್ಪುಸ್ವಾಮಿನಾಯಿಡು, ಎಂ.ಎ., ಡಿ.ಲಿಟ್

ಸಾಧಾರಣ ಪ್ರತಿ ೨ ಆಣೆ; ಉತ್ತಮ ಪ್ರತಿ ೩ ಆಣೆ.

ಕಾರ್ಯದರ್ಶಿ,

ಪ್ರಕಟನಶಾಖೆ ಮತ್ತು ವಿಶೇಷೋಪನ್ಯಾಸಗಳು
ಯೂನಿವರ್ಸಿಟಿ ಆಫೀಸ್, ಮೈಸೂರು.

ಪ್ರಬುದ್ಧ ಕರ್ಣಾಟಕಕ್ಕೆ ವಿನಿಮಯವಾಗಿ ಬರುವ ಪತ್ರಿಕೆಗಳು

ಇಂಗ್ಲಿಷ್ ಪತ್ರಿಕೆಗಳು

Annals of the Oriental Research Institute, University, Madras; *Bramhavidya*, Adyar, Madras; *Bulletin of the School of Oriental Studies*, London; *Journal of the Andhra Historical Research Society*, Rajahmundry; *Journal of the Karnataka Historical Research Society*, Dharwar; *Quarterly Journal of the Mythic Society*, Bangalore; *The Indian* P.E.N., Bombay; *Annals of the Venkateswara Oriental Institute*, Tirupati; *The Jaina Siddhanta Bhaskara* and *The Jaina Gazette*, Arrah; *Bulletin of the Deccan College Research Institute*, Poona; *Publication of the Kannada Research Office*, Dharwar; *The Journal of the Literary Committee of the L.E. Association*, Dharwar; *Annals of Bhandarkar Oriental Research Institute*, Poona.

ವಾರಪತ್ರಿಕೆಗಳು

'ಒಕ್ಕಲಿಗರ ಪತ್ರಿಕೆ', ಬೆಂಗಳೂರು; 'ಕಂಠೀರವ', ಮಂಗಳೂರು; 'ಚೇತನಾ', ಬೆಂಗಳೂರು; 'ಕರ್ಣಾಟಕ ವೈಭವ', ಬಿಜಾಪುರ; 'ಪ್ರಭಾತ', ಮಂಗಳೂರು.

ಮಾಸಪತ್ರಿಕೆಗಳು

'ಆಂಧ್ರ ಸಾಹಿತ್ಯ ಪರಿಷತ್ಪತ್ರಿಕೆ' (ತೆಲುಗು), ಕಾಕಿನಾಡ; 'ಕತೆಗಾರ', ಬೆಂಗಳೂರು; 'ಕನ್ನಡ ಸಹಕಾರಿ', ಮಂಗಳೂರು; 'ಜಯಕರ್ನಾಟಕ,' ಧಾರವಾಡ; 'ಜಯಂತಿ', ಧಾರವಾಡ; 'ಮೈಸೂರು ವ್ಯವಸಾಯ ಶೋಧಕ ಸಂಘದ ಪತ್ರಿಕೆ', ಬೆಂಗಳೂರು; 'ಮಕ್ಕಳ ಪುಸ್ತಕ', ಬೆಂಗಳೂರು; 'ಮೈಸೂರು ಸಹಕಾರ ಪತ್ರಿಕೆ', ಬೆಂಗಳೂರು; 'ವಿದ್ಯಾದಾಯಿನಿ', ಮೈಸೂರು; 'ವಿವೇಕಾಭ್ಯುದಯ', ಮೈಸೂರು; 'ಶರಣಸಾಹಿತ್ಯ', ಬೆಂಗಳೂರು; 'ಶಿವಾನುಭವ', ಬಿಜಾಪುರ; 'ಸದ್ಬೋಧಚಂದ್ರಿಕೆ', ಅಗಡಿ; 'ಸರಸ್ವತಿ', ಬೆಂಗಳೂರು; 'ಸುಬೋಧ', ಬೆಂಗಳೂರು; 'ಜೀವನ', ಬೆಂಗಳೂರು; 'ಕಥಾವಳಿ', ಬೆಂಗಳೂರು; 'ಪುಸ್ತಕ ಪ್ರಪಂಚ', ಮೈಸೂರು; 'ಕನ್ನಡ ನುಡಿ', ಬೆಂಗಳೂರು;

ತ್ರೈಮಾಸಿಕ ಪತ್ರಿಕೆಗಳು

'ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ', ಬೆಂಗಳೂರು; 'ಭಾರತ ಇತಿಹಾಸ ಸಂಶೋಧನ ಮಂಡಲದ ಪತ್ರಿಕೆ' (ಮರಾಠಿ), ಪೂನಾ.

ಗ್ರಂಥಮಾಲೆ

'ಮನೋಹರ ಗ್ರಂಥಮಾಲೆ,' ಧಾರವಾಡ; 'ಮಿಂಚಿನಬಳ್ಳಿ', ಧಾರವಾಡ.

ಮೈಸೂರು ಮಹಾರಾಜರವರ ಕಾಲೇಜಿನ

ಕರ್ಣಾಟಕ ಸಂಘದ ಪ್ರಕಟನೆಗಳು

೧. **ನಾಗಾನಂದನಾಟಕ** (ಶ್ರೀ ಅನಂತನಾರಾಯಣ ಶಾಸ್ತ್ರಿಗಳವರಿಂದ)—ಬೆಲೆ, ರೂ. ೧–೦–೦; ಮಾರಾಟಗಾರರು: ಪ್ರೋಗ್ರೆಸ್ ಬುಕ್ ಸ್ಟಾಲ್, ಮೈಸೂರು.

೨. **ಕರ್ಣಾಟಕ ಮೃಚ್ಛಕಟಿಕಪ್ರಕರಣಂ** (ಆಸ್ಥಾನ ಕವಿ ನಂಜನಗೂಡು ಸುಬ್ಬಾಶಾಸ್ತ್ರಿಗಳವರಿಂದ) ರೂ. ೧-೧೨-೦; ಮಾರಾಟಗಾರು: ಶ್ರೀ ರಾಮಚಂದ್ರ ಬುಕ್ ಡಿಪೊ, ಮೈಸೂರು.

ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದ ಪ್ರಕಟಣೆಗಳು

೧. **ಶ್ರೀ ಕೈಲಾಸಂ ಅವರ ಸ್ಮರಣೆ**—ಶ್ರೀ ಕೆ. ವಿ. ಅಯ್ಯರ್ ಅವರಿಂದ; ಬೆಲೆ, ಸಾದಾ ಪ್ರತಿ, ರೂ. ೨-೪-೦; ಕ್ಯಾಲಿಕೊ ಪ್ರತಿ, ರೂ. ೩-೪-೦.

೨. **ಕರ್ಣಾಟಕ ಮಾಲವಿಕಾಗ್ನಿಮಿತ್ರ ನಾಟಕಂ**—ಶ್ರೀ ಮೋಟಗಾನಹಳ್ಳಿ ಶಂ. ಸುಬ್ರಹ್ಮಣ್ಯಶಾಸ್ತ್ರೀ ಅವರಿಂದ; ಸಾದಾ ಪ್ರತಿ, ರೂ. ೧-೧೨-೦; ಕ್ಯಾಲಿಕೊ ಪ್ರತಿ, ರೂ. ೨-೧೨-೦.

೩. **ಮೊನ್ನ ವನ್ನ**—ಶ್ರೀ ಎಸ್. ಜಿ. ಶಾಸ್ತ್ರಿಗಳವರಿಂದ; ಸಾದಾ ಪ್ರತಿ, ರೂ. ೨-೦-೦; ಕ್ಯಾಲಿಕೊ ಪ್ರತಿ, ರೂ. ೩-೦-೦.

೪. **ನಾಗನ ಪದಗಳು**—ಶ್ರೀ ರಾಜರತ್ನಂ ಅವರಿಂದ; ಸಾದಾ ಪ್ರತಿ, ರೂ. ೧-೪-೦; ಕ್ಯಾಲಿಕೊ ಪ್ರತಿ, ರೂ. ೨-೪-೦.

೫. **ಬಾಲಸರಸ್ವತಿ** (೩೬ ಬೇರೆ ಬೇರೆ ಕೃತಿಗಳು); ರೂ. ೨-೮-೦.

೬. **ನಮ್ಮ ನಮ್ಮವರು** (೬೬ ಬೇರೆ ಬೇರೆ ಕೃತಿಗಳು); ರೂ. ೨-೮-೦.

೭. **ಚಿನ್ನದ ದೋಸೆ ಮತ್ತು ಇತರ ಕಥೆಗಳು**; ೧೨ ಆಣೆ.

೮. **ಶಕ್ತಿ** (ಸಚಿತ್ರ)—ಶ್ರೀ ಆರ್. ಎಲ್. ನರಸಿಂಹಯ್ಯ; ರೂ. ೩-೦-೦.

Edited by Sri S. V. Parameswara Bhatta, M.A. and Sri D. Javare Gowda, M.A.,
. Published by The University of Mysore, Mysore.
Printed by Hugh Warren at the Wesley Press and Publishing House, Mysore City